START

MICRO FILMED
BY

KARNATAKA STATE
ARCHIVES

1991

ARS 15 APP 1990

ಜೀವನ ಶಿಕ್ಷಣ · ಕನ್ನಡ

ಕಾಲಪತ್ರಿಕೆ

ಜುಲೈ 1986 ರಿಂದ

ಮುಂದುವರಿಸಲಾಗಿದೆ.

| | | | | | |
|---|---|---|---|---|---|
| ಸಕ್ಕ | ... | ಸೊಲ್ಲು | ತೊಲು | ಸವುಂಡಿ | ... |
| ಸಾದರ | ಉಚಾರಯು | ಸೆಲ್ಲಿಸಿಕೆ | ಹೊಳಿಗೆ | | ... |
| ಕಾಪಣ | ಸಲ್ಲಿಸಲಾಯಿತೋ | ಸದಿರಾಸ್ಥಿ | ಸೆಲೆಯು | | |
| ಸಾಲಿ | ಬೇಸರು | | ಹಿ | | |
| | | ಹಸ್ಕ | ಹರುಸ | ಬಸಂಡ | |
| ತಾಣಂಡಿಗೆ | ... | ಹಂಸ | ಬಂಚಿ | ಬಂಯುತರು ಪಕ್ಕ | |
| | | ಹಂಸಮಂಡ | ಅಂಚುಂಡು | | ... |
| ತಿ | ಇರುವಿಕೆ | ಹೃದಯ | ಹಿಡುಯು | ಬಿಡಿ | |
| ಹಿಕ್ಕ | ... | ಹಿಂಗು | ಇಂಗು | | ... |
| ಸಂಪುರ | ಹುಂಜುಮು | ಸಂಗ್ರಹಿಕ | ಇಂಗಳಕಾಯಿ | | |
| ಸಿಂಗ | ... | ಮಿಸು | ಸುಂಜು | | |
| ಸೊಗ | ಬಸಂಡ | ಮಿಂ | ನಾಲಿಕೆ | | |
| ಸೊಗಾಸಿ | ... | ಹಿಗ್ಗಿ | | | |
| ಸೊಡಿ | ಸೆಣ್ಣಿ | ಹಿಗ್ಗು | ನಾವಲಿಗ | | |
| ಸೊಪ್ಪಗ | ಸುಸೆಲೋಹರಕ್ಕು | ಹಿಡಣ | ಹಾರ | | ... |
| ಸೈತಿ | ಹೊಂಗಳಿಕೆ | ಹಿಲ್ಲ | ಹೀರ | | |
| ಸುರಪೊಲ್ಲಿ | ... | ಹಿಲು | ಹೀರು | ಹಾಲು | |
| ಸೂಡಿ | ... | ಹೀಂಕಾರ | ಕೀರಾರ | ಹಾಲಿನಸುನೆ, | |
| ಸೂತ್ರಿಕೆ | ... | ಹೀಂಗು | ಸೀನು | ಹಲ್ಲಾಣಿ | |
| ಸೂಚನು | ನಾಯಕಕ್ | ಹಿಡಣ | ಹೀಪಣ | ಬಗೆಯೋಣ | |
| ಸೈಂಡಿ | ಉಪ್ಪು | | | | |

ಹಂಗ್ರಹಕರ್ತ

ಕನ್ನಡ

# ಶಾಲಾಪತ್ರಿಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಪುಟ ೬೩ } ಜುಲೈ ೧೯೨೬. } ಸಂ. ೪

## ಇತಿಹಾಸವೂ ಶಾಂತತೆಯೂ.

ಪ್ರಾಚೀನ ಕಾಲದ ರೋಮನ ಇತಿಹಾಸ ಕರ್ತರಾದ ಲಿವ್ಯಿ, ಟ್ಯಾಸಿಟಸ್ ಎಂಬ ಸಿದ್ಧ ಇತಿಹಾಸ ಕರ್ತರು ಜನರಲ್ಲಿ ನೈತಿಕ ಭಾವನೆಗಳೂ ಸ್ವದೇಶಾಭಿಮಾನದ ವಿಚಾ ರೂ ಉಂಟಾಗಬೇಕೆಂಬ ಉದ್ದೇಶದಿಂದ ಇತಿಹಾಸವನ್ನು ಬರೆದರು. ಅವರ ಅನುಕ ರಣವನ್ನೇ ಮುಂದಿನ ಲೇಖಕರು ಅನುಸರಿಸಿದ್ದರಿಂದ ಇತಿಹಾಸದಲ್ಲಿ ಸತ್ಯಾಂಶಕ್ಕೆ ಮಹ ತ್ವ ಕಡಿಮೆಯಾಗುತ್ತ ಬಂತು. ಇದಲ್ಲದೆ ಇತಿಹಾಸದ ಪುಸ್ತಕಗಳಲ್ಲಿ ಬೇರೆ ಬೇರೆ ದೇಶಗಳ ಮೂಲ ವೃತ್ತಾಂತ, ಅವುಗಳ ಬದಲಾವಣೆ, ಯುದ್ಧಗಳು, ರಾಜ್ಯತಂತ್ರದೊ ಳಗಿನ ಕುಟಿಲ ನೀತಿಗಳು, ವ್ಯಕ್ತಿಗಳ ಚರಿತ್ರೆಗಳು ಮುಂತಾದ ಅಷ್ಟು ಮಹತ್ವವಲ್ಲದ ವಿಷಯಗಳೇ ಹೆಚ್ಚಾಗಿ ವಿವರಿಸಲ್ಪಟ್ಟಿವೆ. ಆದರೆ ಈಗ ಅಸ್ತಿತ್ವದಲ್ಲಿ ಬಂದ ಸಂಸ್ಥೆ ಯೂ, ಸಂಸ್ಥೆಗಳೂ ಹೇಗೆ ಉಂಟಾದವೆಂಬವನ್ನೂ ಅವುಗಳಲ್ಲಿರುವ ಗುಣಾವಗುಣ ಗಳನ್ನೂ ವಿವೇಚಿಸುವದು ಇತಿಹಾಸಕರ್ತರ ಮುಖ್ಯ ಕರ್ತವ್ಯವೆಂಬದನ್ನು ಬಹು ಜನ ಲೇಖಕರು ಮರೆತು ಬಿಟ್ಟಂತೆ ತೋರುತ್ತದೆ. ಆದರೆ ಮೊದಲಿಗಿಂತ ಹೆಚ್ಚು ಉತ್ತಮ ಸ್ಥಿತಿಯನ್ನು ಪಡೆಯಲಿಕ್ಕೆ ಸಾಧನವಾಗುವಂತೆ ಇತಿಹಾಸ ಪುಸ್ತಕಗಳು ಮಾರ್ಗದರ್ಶ ಕಗಳಾಗಿರಬೇಕೆಂಬದನ್ನು ಮರೆಯಕೂಡದು. ರಸಾಯನಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರ ಮುಂತಾದ ಶಾಸ್ತ್ರೀಯ ವಿಷಯಗಳಲ್ಲಿ ಪ್ರತ್ಯಕ್ಷ ಪ್ರಯೋಗ ಮಾಡಿ ಕಂಡು ಕಂಡಂಥ ಸಂಗತಿಗೆ ಮಹತ್ವ ಕೊಡುವಂತೆ ಇತಿಹಾಸದಲ್ಲಿ ಸತ್ಯಕ್ಕೆ ಹೆಚ್ಚು ಮಹತ್ವ ವನ್ನು ಕೊಡುವದು ಅವಶ್ಯವದೆ. ಆದದರಿಂದ ಇತಿಹಾಸ ಲೇಖಕರು ಚನ್ನಾಗಿ ಶೋ

ಧಿಸಿ ಸಮಬುದ್ಧಿಯಿಂದ ಸಂಗತಿಗಳ ನಿಜತ್ವವನ್ನು ಪರೀಕ್ಷಿಸಿ ಸ್ವಪಕ್ಷ, ಪರಪಕ್ಷಗಳನ್ನು ಮರೆತು ನಿಷ್ಪಕ್ಷಪಾತಬುದ್ಧಿಯಿಂದ ಇತಿಹಾಸದ ಪುಸ್ತಕಗಳನ್ನು ಬರೆಯುವದು ಅವ ವದೆ. ಇನ್ನು ಜನರಲ್ಲಿ ಹಿಂದಿನ ಕಾಲದ ಮತ್ತು ಪ್ರಸಿದ್ಧ ಜನರ ಬಗ್ಗೆ ತಪ್ಪು ತಿಳಿ ಳಿಕೆಯಾಗುವದು ಶಾಲೆಯಲ್ಲಿ ಉಪಯೋಗಿಸುವ ಇತಿಹಾಸ ಪುಸ್ತಕಗಳಿಂದಲೇ ಎಂ ಹೇಳಬಹುದು. ಈ ಪಠ್ಯಪುಸ್ತಕಗಳ ಲೇಖಕರು ತಮ್ಮ ದೇಶದ ಬಗ್ಗೆ ಸದಭಿಪ್ರಾ ಹುಟ್ಟಬೇಕೆಂದೂ ಅನ್ಯದೇಶಗಳ ಮತ್ತು ಅನ್ಯದೇಶೀಯರ ಬಗ್ಗೆ ದುರಭಿಪ್ರಾ ಹುಟ್ಟಬೇಕೆಂದೂ ಅನೇಕ ನಿಜವಾದ ಸಂಗತಿಗಳನ್ನು ಬಚ್ಚಿಟ್ಟು ಅನುಕೂಲವಾ ಕ್ಷುಲ್ಲಕ ಸಂಗತಿಗಳನ್ನು ವಿಸ್ತಾರವಾಗಿ ವರ್ಣಿಸಿ ಜನರಲ್ಲಿ ತಪ್ಪು ತಿಳುವಳಿಕೆಯನ್ನು ಬಹು ವಿಧವಾಗಿ ಹರಡಿರುವರು. ಆದದರಿಂದ ಈ ಇತಿಹಾಸ ಪುಸ್ತಕಗಳೆಂದರೆ ಒಂ ಪ್ರಕಾರದ ಕಟ್ಟುಕಥೆಗಳೆಂದು ಹೇಳಬಹುದು. ಉದಾಹರಣಾರ್ಥ ಸಂಯುಕ್ತ ಸಂಸ್ಥಾ ನದ ಇತಿಹಾಸವನ್ನು ನೋಡಿದರೆ ಅಮೇರಿಕದ ಲೇಖಕರು ತಮ್ಮ ದೇಶವು ಯಾವಾಗಲೂ ಜಾಣತನದ ಧೋರಣವನ್ನು ಅನುಸರಿಸಿ ಶಾಂತತೆಯು ಭಂಗವಾಗದಂತೆ ನಿರ್ದುಷ್ಟವಾ ಪ್ರವರ್ತಿಸಿತೆಂದೂ ಗ್ರೇಟಬ್ರಿಟನ್ನವು ತಮ್ಮ ಸಂಗಡ ನಡೆಯುವಾಗ ಯಾವಾಗಲೂ ಕುಯುಕ್ತಿ, ಗರ್ವ, ಅಪಹರಣ ಮಾಡುವ ಬುದ್ಧಿ ಇವುಗಳಿಂದ ಪ್ರೇರಿತವಾಗಿ ಪ್ರವರ್ತಿ ತೆಂದೂ ಬರದಿದ್ದಾರೆ, ಈಚೆಗೆ ಜರ್ಮನ ದೇಶದ ವಿರುದ್ಧವಾಗಿಯೂ ಇದೇ ತರದ ದ್ವೇ ವನ್ನು ಹುಟ್ಟಿಸುವಂಥ ಸಂಗತಿಗಳನ್ನು ಇತಿಹಾಸ ಪುಸ್ತಕಗಳಲ್ಲಿ ಸೇರಿಸಿದ್ದಾರೆ.

ಈ ಪ್ರಕಾರದ ದೋಷವು ಇತಿಹಾಸ ಪುಸ್ತಕಗಳಲ್ಲಿ ಕಂಡು ಬರುವ ಮುಖ್ಯ ರಣವೇನೆಂದರೆ—ಲೇಖಕರಲ್ಲಿ ಕಂಡು ಬರುವ ನಿಷ್ಪಕ್ಷಪಾತ ಬುದ್ಧಿಯು ಹಾಗೂ ಸತ್ಯ ಅನುಸರಿಸಿ ಇತಿಹಾಸವನ್ನು ಬರೆಯಬೇಕೆಂಬ ಉದಾತ್ತ ದೃಷ್ಟಿಯ ಅಭಾವವು ಕಾರ ಗಳಾಗಿವೆ. ಆದದರಿಂದ ಈ ದೋಷಗಳನ್ನು ತೆಗೆದು ಹಾಕಲಿಕ್ಕೆ ಹೊಸ ಪುಸ್ತಕಗಳನ್ನು ನಿಷ್ಪಕ್ಷಪಾತದಿಂದ ಬರೆಯುವ ಲೇಖಕರು ಬೇಕು. ಮತ್ತು ದೇಶದ ಪ್ರಗತಿಗೆ ಅನುಕೂ ಲವಾದಂಥ ಪ್ರಾಮುಖ್ಯವಾದ ಸಂಗತಿಗಳಿಗೂ ಸಂಸ್ಥೆಗಳಿಗೂ ಹೆಚ್ಚು ಮಹತ್ವಕೊಟ್ಟು ವಾದಗ್ರಸ್ತವಾದ ಸಂಗತಿಗಳಿಗೆ ಮಹತ್ವವನ್ನು ಕೊಡದೆ ಅವುಗಳಿಗೆ ಸಂಕ್ಷಿಪ್ತ ಸ್ವರೂ ಪವನ್ನು ಕೊಡುವದು ಅವಶ್ಯವಾಗಿದೆ. ಉದಾಹರಣಾರ್ಥವಾಗಿ—ಅಮೇರಿಕದ ಇ ಹಾಸದಲ್ಲಿ ಬರೇ ವಾಶಿಂಗ್ಟನ್, ಹ್ಯಾಮಿಲ್ಟನ್, ಜ್ಯಾಫರಸನ್, ಅಬ್ರಾಹಾಮನ ಲಿಂ ನ್, ಥಿಯೋಡರ ರೂಜವೆಲ್ಟ, ಮೊದಲಾದ ರಾಜಕಾರಣ ಪಟುಗಳಿಗಷ್ಟೇ ಮಹತ್ವವನ್ನು ಕೊಡದೆ ಅನೇಕ ಶಾಸ್ತ್ರೀಯ ಶೋಧಗಳಿಂದ ಜನರ ವಿಚಾರದಲ್ಲಿ ಉತ್ಕ್ರಾಂತಿಯನ್ನು ಮಾಡಿದ ಫ್ರಾಂಕಲಿನ್, ಗುಡಿಯರ, ಬೆಲ್, ಎಡಿಸನ್, ಫೋರ್ಡ ಇವರ ಚ ತ್ರೆಗಳನ್ನು ಆಯಾ ಸ್ಥಳಗಳಲ್ಲಿ ಸೇರಿಸುವದರಿಂದ ಸಮಾಜದ ಏಳ್ಗೆಯು ಯಾವ ಪ್ರ ರದಿಂದ ಆಯಿತೆಂಬದು ಜನರಿಗೆ ಗೊತ್ತಾಗುವದು. ಇತಿಹಾಸಪುಸ್ತಕಗಳಲ್ಲಿ ರಾ ಕಾರಣಕ್ಕೆ ಕೊಡುವಷ್ಟಕ್ಕಿಂತ ಹೆಚ್ಚು ಮಹತ್ವವನ್ನು ಸಾಮಾಜಿಕ, ಆರ್ಥಿಕ, ಅಭಿ

ಧ್ಧಿಯ ಸಂಗತಿಗಳ ಕಡೆಗೆ ಕೊಡುವದು ಅವಶ್ಯವದೆ. ಫ್ರಾನ್ಸದಲ್ಲುಂಟಾದ ರಾಜ್ಯಕ್ರಾಂತಿ ಯ ಕಾರಣಗಳನ್ನು ತಿಳಿಯಬೇಕಾದರೆ ಬರೀ ರಾಜಕೀಯ ಇತಿಹಾಸವನ್ನು ಓದುವದ ಂದ ಆ ಸಂಗತಿಯು ಎಂದೂ ಗೊತ್ತಾಗದು. ಯಾಕಂದರೆ ಆ ರಾಜ್ಯಕ್ರಾಂತಿಗೆ ಫ್ರಾನ್ಸದೇಶದ ಸಾಮಾಜಿಕ, ಆರ್ಥಿಕ ಅವನತಿಯೇ ಮುಖ್ಯ ಕಾರಣವಾಗಿತ್ತು. ಮೊನ್ನೆ ಮೊನ್ನೆ ಜರುಗಿ ಹೋದ ಪ್ರಚಂಡ ಜರ್ಮನಿಯ ಮಹಾಯುದ್ಧದ ಕಾರಣಗಳನ್ನು ವರ್ಣಿಸುವಾಗ ಫ್ರೆಂಚ ಪುಸ್ತಕಗಳಲ್ಲಿ ಬರೆದಿರುವದೇನಂದರೆ " ಜರ್ಮನ್ನರ ದೌಡಿ ಂದಲೇ ಯುದ್ಧವು ಪ್ರಾರಂಭವಾಯಿತು. ಆಯೋಗ್ಯರಾದ ಫ್ರೆಂಚ ಜನರನ್ನು ನಿರ್ಮೂಲ ಮಾಡುವ ಮುಖ್ಯ ಉದ್ದೇಶದಿಂದ ಜರ್ಮನ್ನರು ಬಹಳ ದಿವಸದಿಂದ ಸಿದ್ಧ ತೆಯನ್ನು ಮಾಡಿಟ್ಟುಕೊಂಡಿದ್ದರು." ಇದೇ ವಿಷಯವಾಗಿ ಜರ್ಮನ್ನ ಪುಸ್ತಕಗಳು ತ್ತವೆನ್ನುವದೇನಂದರೆ—" ಜರ್ಮನಿಯು ನಿರ್ದೋಷಿಯಾಗಿರುವದು. ಯುದ್ಧವು ಉಂಟಾ ಗಲಿಕ್ಕೆ ಇಂಗ್ಲಂಡದ ಹೊಟ್ಟೇಕಿಚ್ಚಿನ ಸ್ವಭಾವವೂ, ಸೇಡು ತೀರಿಸಿಕೊಳ್ಳುವ ಫ್ರಾನ್ಸ ದೇಶದ ಇಚ್ಛೆಯೂ ಮುಖ್ಯ ಕಾರಣಗಳು." ವಿಚಾರಮಾಡಿ ನೋಡಿದರೆ ಜರ್ಮನಿಯ ಯುದ್ಧವು ಉಂಟಾಗಲಿಕ್ಕೆ ಯುರೋಪದೊಳಗಿನ ಪ್ರತಿಯೊಂದು ದೇಶವು ತನ್ನು ತನ್ನ ಸೈನ್ಯ, ಹಡಗುಪಡೆ, ವಾತನಾವೆಗಳನ್ನು ಮಿತಿಮೀರಿ ಬೆಳಿಸಿ ಯುದ್ಧದ ಸನ್ನಾಹವನ್ನು ಮಾಡಿದುದೇ ಮುಖ್ಯ ಕಾರಣವು. ಆದದರಿಂದ ಜಗತ್ತಿನಲ್ಲಿ ಶಾಂತತೆಯು ನೆಲೆಗೊಳ್ಳ ಬೇಕಾದರೆ ಈ ಪ್ರಕಾರದ ಅಸತ್ಯಗಳನ್ನೂ ಅತಿಶಯೋಕ್ತಿಗಳನ್ನೂ ತೆಗೆದು ಹಾಕಿ ಎರ ಡನೇ ದೇಶಗಳ ಸಾಂಪತ್ತಿಕ ಸಾಮಾಜಿಕ ಸ್ಥಿತಿಯನ್ನೂ ಅವುಗಳಿಗುಂಟಾಗಿರುವ ತೊಂ ದರೆಗಳನ್ನೂ ವಿದ್ಯಾರ್ಥಿಗಳ ಮುಂದಿಡುವದು ಅವಶ್ಯವದೆ. ಯಾವದಾದರೂ ದೇಶವು ದುಷ್ಕೃತ್ಯಗಳನ್ನು ಮಾಡ ಲಿಕ್ಕಿಸುವದರ ಉದ್ದೇಶವೇನೆಂಬದನ್ನು ತಿಳಿದುಕೊಳ್ಳಬೇಕು. ಈ ಹೊಸದೃಷ್ಟಿಯಿಂದ ಇತಿಹಾಸ ಪುಸ್ತಕಗಳನ್ನು ಬರೆಯಿಸಬೇಕೆಂದು ರಾಷ್ಟ್ರ ಸಂಘ ದವರು ನಿಶ್ಚಯಿಸಿದ್ದಾರೆ.

---

## ಸಾತೇ ಪರಾಂಜಪೇ ಸ್ಕೀಲು ಮಂಜೂರಾಯಿತು.

### ಕೌನ್ಸಿಲದಲ್ಲಿ ವಾದ ವಿವಾದ.

ಮಿ. ದೇವ ಇವರು ತಂದ ಠರಾವು:— " ಪ್ರಾಥಮಿಕ ಶಿಕ್ಷಕರ ದೀನ ಸ್ಥಿತಿಯ ನ್ನು ಕಂಡು ಅವರಿಗೆ ಮಾರ್ಚ ೧೯೨೬ ರಿಂದ ಸಾತೆ ಪರಾಂಜಪೆ ಸ್ಕೀಮಿನಂತೆ ಪಗಾರ ಕೊಡಬೇಕೆಂದು ಈ ಠರಾವು ಸರಕಾರಕ್ಕೆ ಸಿಫಾರಸು ಮಾಡುತ್ತದೆ." ಇದನ್ನು ಮುಂದಿ ಡುವಾಗ ಮಿ. ದೇವ ಇವರು ಅಂದದ್ದೇನಂದರೆ—ಶಿಕ್ಷಕರಿಗೆ ತಿಂಗಳ ವೆಚ್ಚಕ್ಕೆ ಪೂರಾ ರವು ಸಾಲುವದಿಲ್ಲಾದ್ದರಿಂದ ಅವರು ಎರಡನೇ ಉದ್ಯೋಗಮಾಡಲಿಕ್ಕೆ ಬೇಕಾಗುತ್ತದೆ.

ತಮ್ಮ ಭಾಷಣವನ್ನು ಮುಗಿಸುವ ಮುಂದೆ ಅವರು ಕೌನ್ಸಿಲದ ಎಲ್ಲ ಸಭಾಸದರ ಇದಕ್ಕೆ ಬೆಂಬಲ ಕೊಡುವರೆಂದು ಆಶಿಸಿದರು.

ಮಿ. ಅದ್ವಾನಿ:— ಅಮೇರಿಕೆಯಲ್ಲಿ ಕೂಲಿಯವನಿಗೆ ಪ್ರತಿ ದಿನ ೩ ರೂ. ದೊ ಯುವದು. ಆದರೆ ನಮ್ಮಲ್ಲಿ ಪ್ರಾಥಮಿಕ ಶಿಕ್ಷಕರಿಗೆ ' ಸಾತೆ. ಪರಾಂಜಪೆ ' ಸ್ಕೀಮ ನಲ್ಲಿದ್ದ ಕನಿಷ್ಠಾವಧಿಯ ಪಗಾರವನ್ನು ಸಹ ಕೊಟ್ಟಿರುವದಿಲ್ಲ.

ಮಿ. ಸಿವದಾಸಾನಿ:— ಈ ಠರಾವನ್ನು ಪುಷ್ಟೀಕರಿಸುವಾಗ ತಾವು ಸೂಚಿಸಿ ಶಿಕ್ಷಕರ ಪಗಾರದ ಸ್ಕೇಲನ್ನು ಕೌನ್ಸಿಲದವರು ಲಕ್ಷಕ್ಕೆ ತರಬೇಕೆಂದು ಹೇಳಿದರು.

ಡಾಕ್ಟರ ಪರಾಂಜಪೆ:— ಹಿಂದಕ್ಕೆ ' ಮೊರ್ಲಿ-ಮಿಂಟೊ ' ಸುಧಾರಣೆಯಂ ರಚಿತವಾದ ಹಿಂದಿನ ಕೌನ್ಸಿಲಿನಲ್ಲಿ ಸರ್–ಇಬ್ರಾಹಿಮ ರಹಿಮತುಲ್ಲಾ ಇವರು ಶಿಕ್ಷಣ ಖಾತೆಯ ಕೌನ್ಸಿಲರರು ಇದ್ದಾಗ್ಗೆ ಪ್ರಾಥಮಿಕ ಶಿಕ್ಷಕರ ಪಗಾರದ ವಿಷಯಕ್ಕೆ ಹೇ ದಾಗ ಸಹಾನುಭೂತಿಪರವಾದ ಉತ್ತರವನ್ನು ನೆನಪಿಗೆ ತಂದು ಕೊಟ್ಟರು. ಆ ' ಸಾತೆ–ಪರಾಂಜಪೆ ' ಯವರ ಸ್ಕೀಮಿನಿಂದ ಸಹ ಶಿಕ್ಷಕರ ಸಮಾಧಾನವಾಗಿದ್ದಿಲ್ಲ ಯಾಕಂದರೆ ಯುದ್ಧದ ಮೂಲಕ ಪದಾರ್ಥಗಳೆಲ್ಲ ತುಟ್ಟಿಯಾಗಿದ್ದರಿಂದ ಜೀವ ಮಾಡುವದು ಬಹಳ ಕಷ್ಟವಾಗಿತ್ತು. ' ಸಾತೆ–ಪರಾಂಜಪೆ ' ಸ್ಕೀಮಿನ ಉತ್ಪತ್ತಿಯ ಕಾರಣಗಳನ್ನು ವಿವರಿಸಿ ಸುರ್ವೆ ಕಮಿಟಿಯವರಿಗೆ ನಿರ್ಣಯಿಸಲಿಕ್ಕೆ ಹೇಳಿದ ಸಂಗ ಗಳಲ್ಲಿ ದೋಷಗಳಿದ್ದದರಿಂದ ಶಿಕ್ಷಕರ ಪಗಾರದ ಕನಿಷ್ಠಾವಧಿ-ಪರಮಾವಧಿಗಳನ್ನು ಗೊತ್ತು ಮಾಡುವದು ಕಮಿಟಿಯವರಿಗೆ ಶಕ್ಯವಾಗಲಿಲ್ಲ. ಈಗ ಶಿಕ್ಷಕ ಜನರ ಯೋಗ ವಾದ ಬೇಡಿಕೆಯನ್ನು ಪೂರೈಸುವದು ಅವಶ್ಯವಡೆಯೆಂಬದನ್ನು ಪುಷ್ಟೀಕರಿಸಿದರು. ಈ ಪ್ರಶ್ನವನ್ನು ಶಿಕ್ಷಣ ಮಂತ್ರಿಗಳು ಸಹಾನುಭೂತಿಯಿಂದ ವಿಚಾರ ಮಾಡುವರೆಂದ ಕೋರಿದರು. ಸರಕಾರದಲ್ಲಿ ದುಡ್ಡಿರದಿದ್ದರೆ ಶಿಕ್ಷಣ ಮಂತ್ರಿಗಳು ಹೊಸ ಕರವನ್ನು ಎತ್ತುವ ಯೋಜನೆಯನ್ನು ಕೌನ್ಸಿಲ ಮುಂದೆ ಇಡಬೇಕು. ಇಲ್ಲವೆ ಬಡ ಶಿಕ್ಷಕರ ಯೋಗ್ಯ ಬೇಡಿಕೆಯನ್ನು ಪೂರೈಸಲಿಕ್ಕೆ ಹಣವೆತ್ತುವ ಹೊಸ ಯೋಜನೆಗಳನ್ನು ಶೋಧಿಸಬೇಕು, ಎಂದು ಹೇಳಿದರು. ಹಾಗೆ ಮಾಡಿದಲ್ಲಿ ಶಿಕ್ಷಣ ಮಂತ್ರಿಗಳಿಗೆ ಕೌನ್ಸಿ ಲಿನ ಒಪ್ಪಿಗೆಯು ದೊರೆಯುವದು.

ಸಿಂಧದ ಖಾನಬಹಾದ್ದೂರ ಭೂತೋ ಇವರು ಈ ಠರಾವನ್ನು ಪುಷ್ಟೀಕರಿಸಿದರು.

ಶಿಕ್ಷಣ ಖಾತೆಯ ಸೆಕ್ರೆಟರಿಗಳಾದ ಮಿ. ಟರ್ನರ ಎಂಬವರು ಅಂಕಿಗಳನ್ನು (ವೆಚ್ಚದ ಸಂಬಂಧದ) ಓದಿ ತೋರಿಸಿ ಈ ಠರಾವನ್ನು ಅಮಲಿನಲ್ಲಿ ತರುವದರಿಂದ ಸರ ಕಾರದ ಸಾಂಪತ್ತಿಕ ಸ್ಥಿತಿಯ ಮೇಲೆ ಅನಿಷ್ಟಕರವಾದ ಪರಿಣಾಮವಾಗುವದೆಂದು ಹೇಳಿದರು. ಹಿಂದುಸ್ತಾನದ ಮಿಕ್ಕ ಎಲ್ಲ ಪ್ರಾಂತಗಳಿಗಿಂತ ಮುಂಬಯಿ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಹೆಚ್ಚು ವೆಚ್ಚವಾಗುತ್ತಿರುವದು. ಕಂದಾಯದಲ್ಲಿ ೧೦೦ ಕ್ಕೆ

ಗ ರಂತೆ ಪ್ರಾಥಮಿಕ ಶಿಕ್ಷಣದ ಮೇಲೆ ವೆಚ್ಚವಾಗುತ್ತಿರುವದು. ಇನ್ನು ಪ್ರಾಥಮಿಕ
ಕ್ಷಕರ ಒಂದೇ ಒಂದು ಸ್ಕೀಲನ್ನು ಸ್ವೀಕರಿಸುವದು ಅಶಕ್ಯವದೆ. ಯಾಕಂದರೆ ಬೇರೆ
ೇರೆ ಜಿಲ್ಲೆಯ ಬೋರ್ಡುಗಳ ಸಾಂಪತ್ತಿಕ ಸ್ಥಿತಿಯು ಬೇರೆ ಬೇರೆಯಾಗಿರುವದು. ಆಯಾ
ೋರ್ಡಿನವರಿಗೆ ಇಷ್ಟವಾದ ಸ್ಕೀಲನ್ನು ಅಮಲಿನಲ್ಲಿ ತರಲಿಕ್ಕೆ ಯಾರದೇನೂಅಡ್ಡಿಯಿಲ್ಲ.

ಮಿ. ಆರ್. ಜಿ. ಪ್ರಧಾನ:— 'ಸಾತೆ–ಪರಾಂಜಪೆ' ಸ್ಕೀಮಿನಂತೆ ಪಗಾರ
ೂಡುವವರಿಂದ ಬಡ ಪಾಪಿಗಳಾದ ಶಿಕ್ಷಕರಿಗೆ ನಿಶ್ಚಯವಾಗಿ ಕೊಟ್ಟಂತೆ ಆದರೆ
ದನ್ನು ಸ್ವೀಕರಿಸುವದು ನಮ್ಮೆಲ್ಲರ ಕರ್ತವ್ಯವಾಗಿರುವದು.

ಮೌಲವಿ ರಫಿಯುದ್ದೀನ ಅಹಮ್ಮದ:— ಇಂಗ್ಲಿಷಿನಲ್ಲಿ ಒಲವಿಪ್ಪಲ್ಲಿ ಮಾರ್ಗ
ರುವದು ಎಂಬ ನಾಣ್ನುಡಿಯಿರುವದು. ಸರಕಾರದವರು ಈ ಠರಾವನ್ನು ಸ್ವೀಕರಿಸುವ
ಶ್ಚಿತವಾದ ಪ್ರಯತ್ನ ಮಾಡಿದರೆ ಇದಕ್ಕೆ ಅವಶ್ಯವಾದ ಹಣವನ್ನು ದೊರಕಿಸಬಹುದು.

ಮಿ. ಪೆಹಲಜಾಹನಿ ( ಸಿಂಧದ ಹಿಂದು ಮೆಂಬರ ):— ಇದಕ್ಕೆ ಅವಶ್ಯವಾದ
ಣವನ್ನು ಒಂದು ಕರಾರಿನಿಂದ ಮಂಜೂರ ಮಾಡಲಿಕ್ಕೆ ಕೌನ್ಸಿಲದವರು ಸಿದ್ಧರಿರು
ರು. ಅದೇನಂದರೆ— ಈ ಉದ್ದೇಶಕ್ಕಾಗಿ ತೆಗೆದಿಟ್ಟ ಹಣವನ್ನು ಎರಡನೇ ಕೆಲಸಕ್ಕೆ
ಚ್ಚ ಮಾಡಕೂಡದು.

ಮಿ. ಸಿಂಧೆ— ಈ ಠರಾವಿಗೆ ತಮ್ಮ ವಿರುದ್ಧ ಅಭಿಪ್ರಾಯವನ್ನು ವ್ಯಕ್ತಪಡಿಸಿ
ರು. ಶಿಕ್ಷಕರಿಗೆ ಹೆಚ್ಚಿನ ಪಗಾರವನ್ನು ಕೊಟ್ಟರೆ ಹೊಸ ಶಾಲೆಗಳನ್ನು ಪ್ರಾರಂಭಿ
ುವದಕ್ಕೆ ಸರಕಾರದ ಹತ್ತರ ಹಣವು ಉಳಿಯಲಿಕ್ಕಿಲ್ಲ.

ಮಿ. ನೂರಮಹಮ್ಮದ:— ಭಾವೀನಾಗರಿಕರ ಶೀಲವ ಮೇಲೆ ಹಳ್ಳಿಗಳಲ್ಲಿ ಪ್ರಾಥ
ಕ ಶಿಕ್ಷಕರಿಂದ ಪರಿಣಾಮವಾಗುವದರಿಂದ ಅವರು ಮಹತ್ವದ ಅಂಗವಾಗಿರುವರು.
ದರಿಂದ ಸರಕಾರದವರು ಪೋಲೀಸ ಖಾತೆಯ (ಸಿ. ಆಯ್. ಡಿ.) ವೆಚ್ಚವನ್ನು
ತಿನೆ ಮಾಡಿ ಈ ಠರಾವನ್ನು ಅಮಲಿನಲ್ಲಿ ತರಲಿಕ್ಕೆ ಹಣದ ವ್ಯವಸ್ಥೆಯನ್ನು ಮಾಡ
ೇಕು.

ಮಿ. ಸಪ್ತಋಷಿ—ಪ್ರಾಥಮಿಕ ಶಿಕ್ಷಕರ ಅಡಚಣಿಯನ್ನು ದೂರಮಾಡಲಿಕ್ಕೆ
ುದಾಯದ ಮಂತ್ರಿಗಳಾದ ಸರ್ ಚುನಿಲಾಲ್ ಮೇಥಾ ಇವರಿಗೆ ವಿನಂತಿ ಮಾಡಿ
ಿಂಡರು.

ಸರ ದೇಸಾಯಿ:—ಶಿಕ್ಷಕರಿಗೆ ಹೆಚ್ಚು ಪಗಾರ ಕೊಡುವದರಿಂದ ಅವರಲ್ಲಿ ಸಮಾ
ಾನವುಂಟಾಗಿ ಶಿಕ್ಷಣ ಕೆಲಸವು ಹೆಚ್ಚು ನೆಟ್ಟಗಾಗುವದು. ಎರಡನೇ ಪ್ರಾಂತಗಳಲ್ಲಿ
ದ್ದ ಸ್ಕೀಲಿನ ವಿಷಯಕ್ಕೆ ಈಗ ವಿಚಾರ ಮಾಡುವ ಕಾರಣವಿಲ್ಲ. ಯಾಕಂದರೆ
ುಂಬಯಿ ಇಲಾಖೆ ರು ಸ್ಥಿತಿಯು ತೀರ ಭಿನ್ನವಾಗಿರುವದು. ವಾಧ್ಯಮಿಕ ಉಚ್ಚ

ಶಿಕ್ಷಣದ ವೆಚ್ಚವನ್ನು ಕಡಿಮೆ ಮಾಡಿ ಪ್ರಾಥಮಿಕ ಶಿಕ್ಷಕರ ಪಗಾರವನ್ನು ಹೆಚ್ಚಿಸುವದು ಸಾಧ್ಯವದೆ. ಜಪಾನ-ಅಮೇರಿಕೆಗಳಲ್ಲಿ ಪ್ರಚಲಿತವಾದ 'ಸಿಫ್ಟ್' ಪದ್ಧತಿಯನ್ನು ಇಲ್ಲಿ ಅಮಲಿನಲ್ಲಿ ತರುವದರಿಂದ ಬಹಳ ವೆಚ್ಚವಾಡಿ ಹೊಸ ಇಮಾರತುಗಳನ್ನು ಕಟ್ಟುವದು ಅವಶ್ಯವಿಲ್ಲ. ಡಾ. ಪರಾಂಜಪೆಯವರು ಸೂಚಿಸಿದಂತೆ ಪ್ರಾಥಮಿಕಶಿಕ್ಷಕರ ಪಗಾರದ ಕನಿಷ್ಠಾವಧಿ-ಪರಮಾವಧಿಗಳ ಬಗ್ಗೆ ಸ್ಥಾನಿಕ ಸಂಘಗಳ ಅಭಿಪ್ರಾಯವನ್ನು ತರಿಸಿಕೊಳ್ಳಬಹುದು. ಈ ಪ್ರಶ್ನೆದಲ್ಲಿ ಜಾತಿಯ ವಿಚಾರವೇನೂ ಇಲ್ಲ. ಯಾಕಂದರೆ ಬ್ರಾಹ್ಮಣೇತರ ಶಿಕ್ಷಕರ ಸಂಖ್ಯೆಯು ಹೆಚ್ಚಿರುವದು. ಆದದರಿಂದ ಕಂದಾಯದ ಮಂತ್ರಿಗಳ ಸಾತೆ ಪರಾಂಜಪೆಯವರ ಸ್ಕೀಲಿನಂತೆ ಪಗಾರವನ್ನು ಕೊಡಬೇಕೆಂದು ನಾನು ಅಪೇಕ್ಷಿಸುತ್ತೇನೆ.

ಮಾರನೆಯ ದಿನ (ತಾ॥ ೫-೮-೧೯೨೬) ಪುನಃ ಇದೇ ಪ್ರಶ್ನೆಯು ಹೊರಟಾಗ ಶಿಕ್ಷಣ ಮಂತ್ರಿಗಳು ಹಣದ ಅನಾನುಕೂಲತೆಯನ್ನು ತೋರಿಸಿದ್ದಲ್ಲದೆ ಕೌನ್ಸಿಲಿನೊಗಿನ ಎಲ್ಲ ಕೆಲಸಗಳು ಬಹುಮತವನ್ನು ಅವಲಂಬಿಸಿಯೇ ನಡೆಯುವವಲ್ಲದೆ ಯಾವದೊಂದು ಜಾತಿಯ ಮಂತ್ರಿಗಳ ಧೋರಣವನ್ನು ಅವಲಂಬಿಸಿ ನಡೆಯುವದಿಲ್ಲವೆಂದೂ ತಾವು ಮಂತ್ರಿಗಳಾದಾಗಿನಿಂದ ಎಲ್ಲ ಜಾತಿ ಮತಗಳ ಹಾಗು ಎಲ್ಲ ಯೋಗ್ಯತೆಯ ಜನರನ್ನು ಸಮದೃಷ್ಟಿಯಿಂದ ನೋಡುತ್ತ ಬಂದಿರುವೆವೆಂದೂ ಮಾತಾಡಿದರು. ಮತ್ತು ಎಲ್ಲ ಸಭಾಸದರು ನಿಜವಾಗಿ ಈ ವಿಷಯದಲ್ಲಿ ಒಸ್ಕೆಯುಳ್ಳವರಿದ್ದಾರೆ. ಈ ಸ್ಕೀಲನ್ನು ಅಮಲಿನಲ್ಲಿ ತರುವದಕ್ಕೆ ಬೇಕಾಗುವ ಹಣದ ಅನುಕೂಲತೆಯನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಂಡರು. ಆಮೇಲೆ ಸರಕಾರೀ ಸಭಾಸದರು ವಿರೋಧಿಸದೆ ಇದ್ದದರಿಂದ ಮಿ. ದೇವ ಇವರ ಠರಾವು ಪಾಸಾಯಿತೆಂದು ಅಧ್ಯಕ್ಷರು ತಿಳಿಸಿದರು.

---

## ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ
## ಶ್ರೀಮದ್ವಿದ್ಯಾರಣ್ಯರು.

— (೦) —

ಸಕ್ತಾಃ ಕರ್ಮಣ್ಯ ವಿದ್ವಾಂಸೋ ಯಥಾ ಕುರ್ವಂತಿ ಭಾರತ ।
ಕುರ್ಯಾದ್ವಿದ್ವಾಂಸ್ತಥಾಸಕ್ತಃ ಚಿಕೀರ್ಷುರ್ಲೋಕ ಸಂಗ್ರಹಂ ॥

(ಭಗವದ್ಗೀತೆ)

ವಿದ್ವಾಂಸರಲ್ಲದವರು (ತಿಳುವಳಿಕೆ ಇಲ್ಲದವರು) ಸ್ವಸುಖಕ್ಕಾಗಿ ಸಂಸಾರದ ಆಸಕ್ತರಾಗುವರು. ವಿದ್ವಾಂಸರು ಸರ್ವಸಂಗ ಪರಿತ್ಯಾಗ ಮಾಡಿದಾಗ್ಯೂ ಲೋಕೋದ್ಧಾರದ ದೆಶೆಯಿಂದ ಲೋಕವ್ಯವಹಾರದಲ್ಲಿ ತೊಡಗುವರು. ಅಂಥ ದಿವ್ಯ ಜ್ಯೋತಿಗಳ ವಿದ್ಯಾರಣ್ಯರು ಒಬ್ಬರು. ಮಹಾರಾಷ್ಟ್ರರಾಜ್ಯಸ್ಥಾಪನೆಗೆ ಮೂಲಭೂತರಾದ ಶ್ರೀ

ಸಮರ್ಥ ರಾಮದಾಸರ ಹೆಸರನ್ನರಿಯದ ಮಹಾರಾಷ್ಟ್ರೀಯನನ್ನು ಕಾಣುವದು ಅಪರೂಪ. ಆದರೆ ಕರ್ನಾಟಕ ಸಿಂಹಾಸನಸ್ಥಾಪನಾಚಾರ್ಯರಾದ ಶ್ರೀಮದ್ವಿದ್ಯಾರಣ್ಯರನ್ನರಿತ ಕರ್ನಾಟಕಸ್ಥರನ್ನು ಕಾಣುವದು ಅಪರೂಪ. ಇತ್ತಲಾಗಿ ಕೆಲಕೆಲವು ಅಭಿಮಾನಿಗಳು ಆ ಪುಣ್ಯಶ್ಲೋಕನ ಜಯಂತ್ಯುತ್ಸವವನ್ನು ಅಲ್ಲಲ್ಲಿಗೆ ಮಾಡಲಾರಂಭಿಸಿಕನ್ನಡಿಗರನ್ನು ಜಾಗ್ರತೆಗೊಳಿಸ ಹತ್ತಿರುವರು. ೪ ಮಹಾತ್ಮನ ಕಳಿವ ಪುಣ್ಯದಿನದ ಸ್ಮರಣಾರ್ಥವಾಗಿ ಆತನ ಅಲ್ಪ ಪರಿಚಯವನ್ನು ಸಾಮಾನ್ಯವಾಚಕವರ್ಗಕ್ಕೆ ಮಾಡಿಕೊಡುವದೇ ಈ ಚಿಕ್ಕ ಲೇಖದ ಉದ್ದೇಶವು.

ಶ್ರೇಷ್ಠ ವಿಭೂತಿಗಳು ಸತ್ಕುಲದಲ್ಲಿಯೇ ಜನ್ಮತಾಳುವದು ವಾಡಿಕೆಯಾಗಿದೆ. ಶ್ರೀ ಶಂಕರಾಚಾರ್ಯ, ಮಧ್ವಾಚಾರ್ಯ, ಬಸವೇಶ್ವರ, ರಾಮದಾಸ, ರಾಮಕೃಷ್ಣ ಪರಮಹಂಸ, ಸ್ವಾಮೀ ವಿವೇಕಾನಂದ ಈ ಎಲ್ಲರ ಜನ್ಮವೂ ಇಂತಹ ಸತ್ಕುಲದಲ್ಲಿಯೇ ಆಯಿತು. ಅದರಂತೆ ವಿದ್ಯಾರಣ್ಯರಾದರೂ ತುಂಗಭದ್ರೆಯ ದಂಡೆಯಲ್ಲಿದ್ದ ಹಂಪೀ ಕ್ಷೇತ್ರದ ಹತ್ತಿರಿರುವ ಆನೇಗುಂದಿಯಲ್ಲಿ ಹಿರ್ಣ ತೈತ್ತಿರೀಯ ಶಾಖೆಯ ತಪೋನಿಷ್ಠ ಬ್ರಾಹ್ಮಣ ಕುಲದಲ್ಲಿ ಜನಿಸಿದರು. ಮಾಯಣಭಟ್ಟರೆಂಬವರು ಇವರ ತಂದೆ. ಸಾಧ್ವಿಯಾದ ಶ್ರೀಮತಿಯೆಂಬವಳೇ ಇವರ ತಾಯಿ. ಬುದ್ಧಿವಂತರೆನಿಸಿಕೊಂಡ ಸಾಯಣ ಸೋಮನಾಥರೆಂಬೀರ್ವರು ಇವರ ಸೋದರರು. ಮಾಧವನೆಂಬುದೇ ಇವರ ಪೂರ್ವಾಶ್ರಮದ ಹೆಸರು. ಇವರ ಜನ್ಮದಿನವು ಇಂಥದೇ ಎಂದು ನಿಶ್ಚಿತವಾಗಿಲ್ಲ. ಆದರೂ ಶಾಲಿವಾಹನ ಶಕದ ೧೨೨೭ (ಇ. ಸ. ೧೩೦೫)ನೇ ವರ್ಷವು ಇವರ ಜಲ್ಮಕಾಲವೆಂದು ಸಾಮಾನ್ಯವಾಗಿ ತಿಳಿಯುತ್ತಾರೆ. ಮಾಧವನು ಅಸದೃಶ ಮೇಧಾಶಕ್ತಿಯುಳ್ಳವನಾದುದರಿಂದ ತೀವ್ರವಾಗಿಯೇ ಚತುರ್ವೇದ, ಷಟ್‌ಶಾಸ್ತ್ರಗಳಲ್ಲಿ ಪಾರಂಗತನಾದನು.

ಬಡತನವು ಬಹಳ ಕೆಟ್ಟದೆಂದು ಬಹು ಜನರ ಅಭಿಪ್ರಾಯವು. ಆದರೆ ಬಡಜನರೇ ಸಾಹಸದ ಕಾರ್ಯಗಳನ್ನು ಮಾಡುವದಕ್ಕೆ ಮುಂದುವರಿಯುವರು. ಈ ಅಸಾಧಾರಣ ನಿಯಮಕ್ಕನುಸಾರವಾಗಿ ಮಾಧವನು ಬಡತನದಿಂದ ಎದೆಗುಂದದೆ ದೇವರ ವರವನ್ನು ಪಡೆಯಬೇಕೆಂದು ತಪಸ್ಸಿದ್ಧಿಯನ್ನುಮಾಡುವದಕ್ಕಾಗಿ ಪಂಪಾಕ್ಷೇತ್ರಕ್ಕೆ ಬಂದನು. ಅಲ್ಲಿ ಕುಲಸ್ವಾಮಿನಿಯಾದ ಭುವನೇಶ್ವರಿಯ ಹಾಗು ಪಂಪಾಪತಿಯಾದ ವಿರೂಪಾಕ್ಷೇಶ್ವರನ ಆರಾಧನೆಯನ್ನು ಮಾಡತೊಡಗಿದನು. ಆವನ ನಿಶ್ಚಲ ಭಕ್ತಿಗೆ ಭುವನೇಶ್ವರಿಯು ಪ್ರಸನ್ನಳಾಗಿ ಏನು ವರಬೇಕೆಂದು ಕೇಳಲು ಮಾಧವನು—ತನ್ನ ಮೇಲೆ ಸುವರ್ಣವೃಷ್ಟಿಯಾಗುವಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡನೆಂದೂ ಅದಕ್ಕೆ ಭುವನೇಶ್ವರಿಯು ಹಾಗೇ ಆಗಲೆಂದು ಹೇಳಿ ಅಂತರ್ಧಾನವನ್ನು ಹೊಂದಿದಳೆಂದೂ ಅಂದಿನಿಂದ ಇತನು ಅನೇಕ ಸಿದ್ಧಿ-ಸಾಧನಗಳನ್ನು ಹೊಂದಿದನೆಂದೂ ಆಖ್ಯಾಯಿಕೆಯುಂಟು.

ಆ ಕಾಲಕ್ಕೆ ದಕ್ಷಿಣ ಹಿಂದುಸ್ತಾನದಲ್ಲಿ ಮುಸಲ್ಮಾನರ ಹಾವಳಿಯು ಅಳತೆಗೆ ಮೀತು. ಕರ್ನಾಟಕವೂ ಹಿಂದೂ ಸಮಾಜವೂ ದೀನ ದುರ್ಬಲವಾಗಿನ್ನವು. ಆರ್ಯ-

ಧರ್ಮವು ಹ್ರಾಸವನ್ನು ಹೊಂದಿತ್ತು. ಇಂಥ ವಿಪನ್ನಾವಸ್ಥೆಯಲ್ಲಿ ಸ್ವರಾಜ್ಯಸ್ಥಾಪನೆಯ ಹೊರತು ಸ್ವಧರ್ಮೋದ್ಧಾರಕ್ಕೆ ಬೇರೆ ಮಾರ್ಗವಿಲ್ಲೆಂದು ಮಾಧವಾಚಾರ್ಯರು ಚನ್ನಾಗಿ ತಿಳಿದು ತಮ್ಮ ಇಷ್ಟಾರ್ಥಸಿದ್ಧಿಗೆ ತಕ್ಕವೀರನನ್ನು ಹುಡುಕುತ್ತಿದ್ದರು. ಇಷ್ಟರಲ್ಲಿಯೇ ಮಲಿಕಕಾಫರನೆಂಬವನು ದೇವಗಿರಿಯನ್ನು ಹಾಳು ಮಾಡಿ ಓರಂಗಲ್ಲ ರಾಜಧಾನಿಯನ್ನು ಹಿಡಿದುಕೊಂಡನು. ಆ ಕಾಲಕ್ಕೆ ಅಸಹಾಯರಾದ ಸಂಗಮ ವಂಶದ ಹುಕ್ಕ–ಬುಕ್ಕರೆಂಬ ಸಹೋದರರು ಅಲ್ಲಿಂದ ಪಾರಾಗಿ ಬಂದು ತಪಸ್ವಿ ಮಾಧವಾಚಾರ್ಯರ ಆಶ್ರಯವನ್ನು ಹೊಂದಿದರು. ಆಗ ಆಚಾರ್ಯರಿಗಾದ ಸಂತೋಷವನ್ನು ಏನು ಹೇಳುವದು ! ಸಂಕಲ್ಪಸಿದ್ಧಿಯ ಕಾಲವು ಒದಗಿತೆಂದು ಮಾಧವಾಚಾರ್ಯರು ಅವರಿಬ್ಬರನ್ನು ಹುರಿದುಂಬಿಸಿ ಸ್ವರಾಜ್ಯ ಸ್ಥಾಪನೆಗೆ ಟೊಂಕ ಕಟ್ಟುವಂತೆ ಮಾಡಿದರು ಹುಕ್ಕ–ಬುಕ್ಕರ ಸಹಾಯದಿಂದ ಸೈನ್ಯವನ್ನು ಸಜ್ಜುಗೊಳಿಸಿ ಆನೆಗುಂದಿಯ ಸುತ್ತಲಿನ ರಾಜ್ಯವನ್ನು ಗೆದ್ದು ಅದಕ್ಕೆ ವಿಜಯನಗರವೆಂದು ಹೆಸರಿಟ್ಟರು. ಹಿರಿಯವನಾದ ಹುಕ್ಕನಿಗೆ ಹರಿಹರನೆಂದು ಹೆಸರಿಟ್ಟು ರಾಜ್ಯಾಭಿಷೇಕ ಮಾಡಿ ತಾವು ಮಂತ್ರಿಗಳಾದರು. (ಇ. ಸ. ೧೩೩೫) ಮುಂದೆ ಸ್ವಲ್ಪ ದಿವಸಗಳಲ್ಲಿಯೇ ವಿಜಯನಗರವು ಘನತೆಗೇರಿ ಸಾಮ್ರಾಜ್ಯಸ್ವರೂಪವನ್ನು ಹೊಂದಿ ೨೫೦ ವರ್ಷಗಳವರೆಗೆ ಬಾಳಿತು. ವಿಜಯನಗರದ ಸಾಮ್ರಾಜ್ಯದಿಂದ ಕರ್ನಾಟಕಕ್ಕೆ ಕಳೆಯೇರಿತು. ಆರ್ಯಧರ್ಮಕ್ಕೊದಗಿದ ಸಂಕಟವು ದೂರಾಯಿತು. ಈ ನಾಡು ವಿದ್ಯಾ–ಕಲಾ-ಕೌಶಲ್ಯಗಳ ತವರುಮನೆಯಾಯಿತು.

ವಿದ್ಯಾರಣ್ಯರು ಸ್ವಲ್ಪಕಾಲ ಮಾತ್ರ ಮಂತ್ರಿಪದದಲ್ಲಿದ್ದು ಮಾಡತಕ್ಕ ಅನೇಕ ಕಾರ್ಯಗಳನ್ನು ಮಾಡಿ ಬಳಿಕ ಅಮಾತ್ಯಪದವನ್ನು ಒಡಹುಟ್ಟಿದವರಾದ ಸಾಯಣಾಚಾರ್ಯರಿಗೆ ಕೊಟ್ಟು ಸನ್ಯಾಸವನ್ನು ಸ್ವೀಕರಿಸಿ ಶೃಂಗೇರಿಯ ಗುರುಪೀಠವನ್ನಲಂಕರಿಸಿದರು. ಈ ಆಶ್ರಮದಲ್ಲಿ ಇವರಿಗೆ ಶ್ರೀ ವಿದ್ಯಾರಣ್ಯರೆಂಬ ಹೆಸರು. ಇವರು ಪೂರ್ವಾಶ್ರಮದಲ್ಲಿ ಹೇಗೆ ರಾಜನೀತಿವಿಶಾರದತ್ವವನ್ನು ಪ್ರಕಟಗೊಳಿಸಿದರೋ ಹಾಗೆ ಚತುರ್ಥಾಶ್ರಮದಲ್ಲಿ ಧರ್ಮಸಾಮ್ರಾಜ್ಯದ ವ್ಯವಸ್ಥೆಯನ್ನು ಮಾಡಿದರು. ಕೆಲವು ಜಹಾಗೀರುಗಳನ್ನೂ ಶಾಸನಾಧಿಕಾರ (ಮ್ಯಾಜಿಸ್ಟ್ರೇಟಪಾವರ) ರಾಜಮರ್ಯಾದೆ ಮುಂತಾದ ಹಕ್ಕುಗಳನ್ನೂ ಸಂಪಾದಿಸಿ ಶೃಂಗೇರಿಯ ಸಂಸ್ಥಾನವನ್ನು ಸರ್ವಾಂಗ ಸುಂದರಗೊಳಿಸಿದರು. ರಾಜ್ಯಕಾರಭಾರವನ್ನು ಸಾಗಿಸುತ್ತ ಜೈಮಿನಿಯ ನ್ಯಾಯಮಾಲಾ, ಪಾರಾಶರ ಸ್ಮೃತಿಭಾಷ್ಯ ಮುಂತಾದ ಗ್ರಂಥಗಳನ್ನು ಬರೆದರು. ತಮ್ಮನಾದ ಸಾಯಣನು ಚತುರ್ವೇದಗಳಿಗೆ ಭಾಷ್ಯವನ್ನು ಬರೆದನು. ಮಾಧವನಿದಾನವೆಂಬ ಆಯುರ್ವೇದ ಗ್ರಂಥವಾದರೂ ಇವರದೇ ಎಂದು ಹೇಳುವರು. ಪಂಚದಶಿ, ದಶೋಪನಿಷದ್ದೀಪಿಕಾ, ಅನುಭೂತಿಪ್ರಕಾಶ, ಸರ್ವದರ್ಶನ ಸಂಗ್ರಹ, ಜೀವನ್ಮುಕ್ತಿ ವಿವೇಕ, ಶಂಕರದಿಗ್ವಿಜಯ ಮುಂತಾದ ಗ್ರಂಥಗಳು ಸಹ ಇವರಿಂದ ರಚಿತವಾದವು. ಆದರೂ ಅವರು ಸ್ವತಂತ್ರವಾಗಿಯೂ ಸಹೋದರರಾದ ಸಾಯಣಾಚಾರ್ಯ ಭಾರತೀ ತೀರ್ಥ (ಸೋಮನಾಥ)ರ ಸಹಾಯದಿಂದಲೂ

ವೇದ, ವೇದಾಂತ, ನ್ಯಾಯ, ವ್ಯಾಕರಣ, ವೈದ್ಯಕ, ಜ್ಯೋತಿಷ ವಿಷಯಗಳಿಗೆ ಸಂಬಂಧಿಸಿದ ಹಲವು ಗ್ರಂಥಗಳನ್ನೂ ಅನೇಕ ಸ್ತುತಿ ಸ್ತೋತ್ರಗಳನ್ನೂ ರಚಿಸಿದರೆಂದು ಹೇಳಲು ಬಾಧವಿಲ್ಲ. ಇವುಗಳಲ್ಲಿ ವೇದ ಭಾಷ್ಯವು, ಪಂಚದಶಿ ಮುಂತಾದ ಉದ್ಗ್ರಂಥಗಳು ಜಗತ್ತಿನ ವಾಙ್ಮಯಗಳಲ್ಲಿ ಅಸಾಮಾನ್ಯವಾದವುಗಳೆಂದು ಪಂಡಿತರು ಒಪ್ಪುತ್ತಿರುವರು.

ಇತಿಹಾಸದ ಪುನರಾವೃತ್ತಿಯು ಮೇಲೆ ಮೇಲೆ ಆಗುತ್ತಿರುವದೆಂಬ ಮಾತು ಸುಳ್ಳಲ್ಲ. ಕರ್ನಾಟಕದಲ್ಲಿ ಹರಿಹರ ವಿದ್ಯಾರಣ್ಯರು ಸ್ವರಾಜ್ಯವನ್ನು ಸ್ಥಾಪಿಸಿದಂತೆ ೨೦೦ ವರ್ಷಗಳಮೇಲೆ ಮಹಾರಾಷ್ಟ್ರದಲ್ಲಿ ಅವತರಿಸಿದ ಶಿವಾಜಿ ರಾಮದಾಸರು ಸ್ವಧರ್ಮ ಪರಿಪಾಲನೆಗೋಸ್ಕರ ಸ್ವರಾಜ್ಯವನ್ನು ಸ್ಥಾಪಿಸಿದರು. ಶಿವಾಜಿ ಹರಹರ ಕ್ಷಾತ್ರತೇಜ, ಸ್ವಧರ್ಮಾಭಿಮಾನ, ದೇಶಾಭಿಮಾನ, ರಾಜ್ಯಧೋರಣ ಇವುಗಳಿಗೆ ರಾಮದಾಸ ವಿದ್ಯಾರಣ್ಯರ ಬ್ರಹ್ಮತೇಜ, ತಪಃಸಾಮರ್ಥ್ಯ, ಪಾವಿತ್ರ್ಯ, ಸತ್ವಗುಣ ಇವುಗಳ ಸಮ್ಮೇಲನವಾದುದರಿಂದಲೇ ಸ್ವರಾಜ್ಯ ಸ್ಥಾಪನೆಯಾಯಿತು. ಇನ್ನು ರಾಮದಾಸರು ಸ್ವತಃ ರಾಜ್ಯಭಾರದ ಕಾರ್ಯದಲ್ಲಿ ಪ್ರವರ್ತಿಸಲಿಲ್ಲ. ಹಿಂದಕ್ಕೆ ವಸಿಷ್ಠರು ರಾಮಚಂದ್ರನಿಗೆ ಹೇಗೆ ಗುರುಗಳಾಗಿದ್ದರೋ ಹಾಗೆ ಶಿವಾಜಿಗೆ ರಾಮದಾಸರು ಗುರುಗಳಾಗಿದ್ದರು. ವಿದ್ಯಾರಣ್ಯರು ಸ್ವರಾಜ್ಯ ಸ್ಥಾಪನೆಗೆ ಪ್ರಮುಖ್ಯವಾಗಿ ಕಾರಣವಾಗಿದ್ದರಲ್ಲದೆ ಸ್ವತಃ ರಾಜ್ಯಸೂತ್ರಗಳನ್ನು ನಡಿಸಿದರು. ರಾಮದಾಸರು ಭಕ್ತಿಮಾರ್ಗವನ್ನು ಪ್ರಸಾರಗೊಳಿಸಿದರು; ವಿದ್ಯಾರಣ್ಯರು ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಿದರು.

ಇದನ್ನು ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಜಗತ್ತಿನ ಯಾವ ಮಹಾಪುರುಷರಲ್ಲಿ ವಿದ್ಯಾರಣ್ಯರಷ್ಟು ಸರ್ವಾಂಗ ಚಾತುರ್ಯವೂ ಬುದ್ಧಿ ಕೌಶಲ್ಯವೂ ಕಂಡು ಬಂದಿಲ್ಲ. ವಿದ್ವತ್ತೆ, ಕವಿತ್ವ, ಇವುಗಳಿಂದ ತಮ್ಮ ಕೀರ್ತಿಧ್ವಜವನ್ನು ಮೆರೆಯಿಸಿದವರು ಅನೇಕರು ದೊರೆಯಬಹುದು; ರಾಜಕಾರಣ ಪಟ್ಟುಗಳನಿಸಿಕೊಂಡು ಮೆರೆದ ಹಲವರನ್ನು ಕಾಣಬಹುದು; ಧರ್ಮಸಾಮ್ರಾಜ್ಯದ ಸಾರ್ವಭೌಮತ್ವವನ್ನು ಪಡೆದವರು ಹಲವರಾಗಿರಬಹುದು; ಆದರೆ ಈ ಎಲ್ಲ ಗುಣಗಳ ಸಮುಚ್ಚಯದಿಂದ ಪ್ರಕಾಶಿತರಾದವರೆಂದರೆ ಶ್ರೀ ವಿದ್ಯಾರಣ್ಯರೊಬ್ಬರೇ. ಇವರಲ್ಲಿದ್ದ ಪರಸ್ಪರ ವಿರುದ್ಧಗುಣಗಳ ಏಕೀಕರಣವಾದದ್ದು ಜಗತ್ತಿಗೆ ಸೋಜಿಗದ ವಿಷಯವಾಗಿದೆ. ವೇದಾಂತಿಗಳು ರಾಜತಂತ್ರವನ್ನು ನಡೆಯಿಸುವದು ಶಕ್ಯವಿರುವದೆಂಬದನ್ನು ಪ್ರತ್ಯಕ್ಷ ತೋರಿಸಿದವರು ಇವರೇ.

ವಿದ್ಯಾರಣ್ಯರು ಸ್ವಭಾವಸಿದ್ಧ ಧರ್ಮ ಮೂರ್ತಿಗಳಾಗಿದ್ದರೂ ಪರಿಸ್ಥಿತಿಗನುಸಾರವಾಗಿ ರಾಜ್ಯತಂತ್ರದಲ್ಲಿ ಪ್ರವೇಶಿಸಿ ಆ ರಾಜ್ಯತಂತ್ರ ನೈಪುಣ್ಯದಬಲದಿಂದ ತಮ್ಮ ಪರಮ ಧ್ಯೇಯವಾದ ಲೋಕೋದ್ಧಾರ ಕಾರ್ಯವನ್ನು ಮಾಡಿದರು. ಅನುಷ್ಠಾನ, ಉಪಾಸನೆ, ತಪಸ್ಸು, ಆಧ್ಯಾತ್ಮಸಾಧನೆ ಮುಂತಾದವುಗಳಿಂದ ಆತ್ಮೋದ್ಧಾರವನ್ನೂ ಮಾಡಿಕೊಂಡರು. ಈ ಪ್ರಕಾರ ತಮ್ಮ ಅವತಾರ ಕಾರ್ಯವನ್ನು ಮುಗಿಸಿ ಜ್ಯೇ. ಬ. ೧೩ ದಿವಸ ಸಮಾಧಿಸ್ಥರಾದರು. ಕರ್ನಾಟಕದಲ್ಲಿ ಈ ಮಹನೀಯರ ಸ್ಮಾರಕವನ್ನು ಮಾಡುವದೂ ಅವರ ಜಯಂತ್ಯುತ್ಸವವನ್ನು ಪ್ರತಿವರ್ಷ ನೆರೆಯಿಸುವದೂ ಅತ್ಯವಶ್ಯವಾದ ಸಂಗತಿಯು,

# ವ್ಹ. ಘಾ. ಪರೀಕ್ಷೆಯ ಪರಿಣಾಮವು.

## ೧೯೨೬

## ಧಾರವಾಡ ಸೆಂಟರ.

| ನಂ | ಹೆಸರು. | ಗುಣಗಳು |
|---|---|---|
| ೧ | ಕೃಷ್ಣಾಜಿ ಹರಿಪಂತ ಕುಲಕರ್ಣಿ | ೪೦೯ |
| ೨ | ರಾಮಚಂದ್ರ ಮಧ್ವ ನರೇಗಲ್ಲ | ೩೭೬ |
| ೩ | ಗಣಪತಿ ಗುರುನಾಥ ಭಂಡಾರಿ | ೩೭೧ |
| ೪ | ಚಿದಂಬರ ವೆಂಕಟೇಶ ಪಾಟೀಲ | ೩೬೬ |
| ೫ | ಬಸವಣ್ಣಿ ಚನಬಸಪ್ಪ ಬೇವಿನಮರ | ೩೫೯ |
| ೬ | ಭಾಲಾಕ್ಷಯ್ಯಾ ಗುರಲಿಂಗಯ್ಯಾ ಸಾಲೀಮಠ | ೩೫೬ |
| ೭ | ವೆಂಕಟೇಶ ಭೀಮಾಚಾರ್ಯ ಜೋಸಿ | ೩೪೯ |
| ೮ | ಬಸವಣ್ಣೆಯ್ಯಾ ಹೊಳೆಪ್ಪಯ್ಯಾ ಜಂಬೂರಮಠ | ೩೪೯ |
| ೯ | ಗಣೇಶ ಮಲ್ಹಾರ ಕಾಗಿನೆಲ್ಲಿ | ೩೪೯ |
| ೧೦ | ಕೇಶವ ಗೋಪಾಳರಾವ ದೇಶಪಾಂಡೆ | ೩೪೯ |
| ೧೧ | ಭೀಮನಗೌಡಾ ಹನುಮಂತಗೌಡಾ ಪಾಟೀಲ | ೩೪೭ |
| ೧೨ | ಲಿಂಗನಗೌಡಾ ನೀಲಪ್ಪಗೌಡಾ ಅಜಗುಂದಿ | ೩೪೬ |
| ೧೩ | ಲಿಂಗನಗೌಡಾ ಬಸನಗೌಡಾ ಹುಡೇದ | ೩೪೩ |
| ೧೪ | ಶಾಮಾಜಿ ರಾಮಚಂದ್ರ ಕೆರೂರ | ೩೪೨ |
| ೧೫ | ಮಹದೇವ ಕರಬಸಪ್ಪ ಹರದಗಟ್ಟಿ | ೩೪೦ |
| ೧೬ | ಶಂಕರ ಭೀಮಾಜಿ ಕುಲಕರ್ಣಿ | ೩೪೦ |
| ೧೭ | ಸಂಗನಬಸಪ್ಪ ಸಂಗಪ್ಪ ದಳವಾಯಿ | ೩೩೯ |
| ೧೮ | ಬಸವಣ್ಣೆಪ್ಪ ವೀರಪ್ಪ ಉಳ್ಳೇಗಡ್ಡಿ | ೩೩೩ |
| ೧೯ | ಮಲ್ಲಯ್ಯಾ ಶಿವಲಿಂಗಯ್ಯಾ ಹಿರೇಮಠ | ೩೩೦ |
| ೨೦ | ಮಲ್ಲಾ ಫಕ್ಕೀರಪ್ಪಾ ಬೆಂತೂರ | ೩೨೯ |
| ೨೧ | ಹನುಮಂತ ಹುಚ್ಚಪ್ಪಾ ಜಾಧವ | ೩೨೮ |
| ೨೨ | ಗದಿಗೆಪ್ಪಾ ಬಸಪ್ಪಾ ಪಟ್ಟಣದ | ೩೨೭ |
| ೨೩ | ಪ್ರಲ್ಹಾದ ಬಿಂದಾಚಾರ್ಯ ಮುಳಗುಂದ | ೩೨೫ |
| ೨೪ | ಹಸನಸಾಬ ಮಲಿಕಸಾಬ ಸುನ್ನೀಖಾನ | ೩೨೩ |
| ೨೫ | ಕೆಂಡಪ್ಪಾ ರಾಯಪ್ಪಾ ಹುನಗುಂಡಿ | ೩೨೩ |

ಕನ್ನಡ

# ಶಾಲಾಪತ್ರಿಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೩ | ಸಪ್ಟೆಂಬರ ೧೯೩೬. | ಸಂ. ೬

## ಸ್ಫುಟವಿಚಾರವು.

### ಇನಸ್ಪೆಕ್ಟಿಂಗ ಆಫೀಸರರು ಟ್ರೇನಿಂಗಸ್ಕೂಲ ಸಂಸ್ಥೆಯನ್ನು ನೋಡಲಿಕ್ಕೆ ಬಂದದ್ದು.

ಆಗಸ್ಟ ತಿಂಗಳಿನಂತೆ ಸಪಟೆಂಬರ ತಿಂಗಳ ಮೂರನೇ ವಾರದಲ್ಲಿ ಧಾರವಾಡ, ಬೆಳಗಾಂವ, ವಿಜಾಪುರ ಜಿಲ್ಹೆಗಳ ಎಂಟು ಮಂದಿ ಇನಸ್ಪೆಕ್ಟಿಂಗ ಅಮಲದಾರರು ಧಾರವಾಡ ಟ್ರೇ. ಸ್ಕೂ. ಸಂಸ್ಥೆಯನ್ನು ನೋಡಲಿಕ್ಕೆ ಬಂದರು. ಇವರು ೧೩, ೧೫, ೧೬ನೇ ತಾರೀಖುಗಳಲ್ಲಿ ಅಂದರೆ– ಮೂರು ದಿವಸ, ಸಂಸ್ಥೆಯ ಅವಲೋಕನವನ್ನು ಮಾಡಿದರು. ನಡುವೆ ೧೪ನೇ ತಾರೀಖು ರಜೆಯ ದಿವಸವಾಗಿತ್ತು.

**ಬಂದ ಅಮಲದಾರರು:—**

| | | |
|---|---|---|
| ೧. | ಮಿ. ಪ್ಹಿ. ಆರ್. ಪರ್ವತೀಕರ. | ಧಾರವಾಡ ಜಿಲ್ಹೆ. |
| ೨. | ,, ಬಿ. ಬಿ. ಅರಬಟ್ಟಿ. | |
| ೩. | ,, ಜೆ. ಆರ್. ಭಂಡಿವಾಡ. | |
| ೪. | ,, ಜಿ. ಕೆ. ಕಲಿವಾಳ. | |
| ೫. | ,, ಬಿ. ಎಸ್. ಪುರೋಹಿತ. | ಬೆಳಗಾಂವ ಜಿಲ್ಹೆ. |
| ೬. | ,, ಹಿಪ್ಪರಗಿ. | |
| ೭. | ,, ಕಾಸಾರ. | ಸುಪರವಾಯಜರ (ಬೆಳಗಾಂವ) |
| ೮. | ,, ಎಸ್. ಎ. ಶೆಟ್ಟಿ | ವಿಜಾಪುರ ಜಿಲ್ಹೆ. |

ಹಿಂದುಸ್ಥಾನದಲ್ಲಿ ಈ ಪದ್ಧತಿಯು ಒಂದಾದರೂ ಸಾಲೆಯು ಇದ್ದದ್ದು ನನ್ನ ಕೇಳಿಕೆಯ ಲ್ಲಿಲ್ಲ. ನಮ್ಮಲ್ಲಿಯ ಹಾಯಸ್ಕೂಲುಗಳು ಈ ಪದ್ಧತಿಯ ಪ್ರಯೋಗಕ್ಕಾಗಿ ಯತ್ನಿಸ ಬಹುದು.

೩. ಇನ್ನೊಂದು ಹೊಸ ಶೋಧವೆಂದರೆ—ಹುಡುಗರನ್ನು ಸಾಲೆಯಲ್ಲಿ ಸೇರಿಸಿ ಕೊಳ್ಳುವಾಗ ಮಾಡುವ ಅವರ ಬುದ್ಧಿಶಕ್ತಿಯ ಪರೀಕ್ಷೆಯು. ಇದರ ಯೋಗದಿಂದ ಅವ ರಲ್ಲಿ ಹಲವು ಗುಂಪುಗಳಾಗುವವು; ಮತ್ತು ಶಿಕ್ಷಕನ ಕೆಲಸದಲ್ಲಿ ಆಯಾಸವು ಕಡಿಮೆ ಯಾಗುವದು. ಹುಡುಗರನ್ನು ಪರೀಕ್ಷಿಸುವ ಈ ಕ್ರಮವು ಬಹಳ ಶ್ರಮದ್ದು ಆದಾಗ್ಯೂ ಬಹಳ ಹುಡುಗರನ್ನು ಪರೀಕ್ಷಿಸಿ ಅವರ ಬುದ್ಧಿಯ ಮಾನವನ್ನು ಗೊತ್ತುಹಿಡಿದ ಮೇಲೆ ಅವರು ಇಂತಿಷ್ಟು ಯೋಗ್ಯತೆಯವರು ಎಂದು ಹೇಳಬಹುದು. ಆ ಯೋಗ್ಯತೆಗೆ 'ನಾರ್ಮ' ಎಂದೆನ್ನುವರು. ಆದರೆ ಈ ಪದ್ಧತಿಯಿಂದ ಒಂದು ದೇಶದಲ್ಲಿ ಪರೀಕ್ಷೆ ಗೊತ್ತುಮಾಡಿದ ಇಯತ್ತೆಯು ಇನ್ನೊಂದು ದೇಶದ ವಿದ್ಯಾರ್ಥಿಗಳಿಗೆ ಸರಿಹೊಂದು ವದಿಲ್ಲ. ಯಾಕೆಂದರೆ ಬೇರೆ ಬೇರೆ ದೇಶಗಳ ಸ್ಥಿತಿಗತಿಗಳು ವಸ್ತುತಃ ಭಿನ್ನವಾಗಿರುತ್ತವೆ.

೪. ಪರೀಕ್ಷೆಯನ್ನು ತೆಗೆದುಕೊಳ್ಳುವ ಹೊಸ ಕ್ರಮವು ಈಗ ಪ್ರಚಾರದಲ್ಲಿ ಬರಹತ್ತಿದೆ. ಇದರಲ್ಲಿ, ಕೇಳಿದ ಅನೇಕ ಪ್ರಶ್ನಗಳಿಗೆ ಸಂಕ್ಷಿಪ್ತರೀತಿಯಿಂದ ಉತ್ತರ ವನ್ನು ಕೊಡುವದಿದ್ದದರಿಂದ, ಪರೀಕ್ಷೆಗಳಿಗೋಸ್ಕರ ವೆಚ್ಚವಾಗುವ ವೇಳೆಯ ಉಳಿ ತಾಯಸ ಬಹಳೇ ಆಗಹತ್ತಿದೆ. ಒಮ್ಮೊಮ್ಮೆ ೪೫ ಮಿನಿಟುಗಳಲ್ಲಿ ೧೦೦ ಪ್ರಶ್ನಗಳ ಉತ್ತರವನ್ನು ಕೊಡಬೇಕಾಗುವದು. ಪ್ರತಿಯೊಬ್ಬನಿಗೆ ಪ್ರಶ್ನದ ಕಾಗದವು ಕೊಡ ಲ್ಪಡುವದು. ಅದರಲ್ಲಿ ಪ್ರಶ್ನಗಳ ಕೂಡ ಕೆಲವು ಸರಿಯಾದ ಹಾಗು ತಪ್ಪು ಉತ್ತ ರಗಳು ಇರುವವು. ವಿದ್ಯಾರ್ಥಿಯು ಸರಿಯಾದ ಉತ್ತರವನ್ನು ಕಂಡುಹಿಡಿಯ ತಕ್ಕದ್ದು; ಮತ್ತು ಉತ್ತರದಲ್ಲಿ ಹೌದು ಇಲ್ಲವೆ ಅಲ್ಲ ಎಂಬದನ್ನಷ್ಟೇ ಹೇಳತಕ್ಕದ್ದು. ಈಗ ಪ್ರಚಲಿತವಾದ ಪದ್ಧತಿಯಲ್ಲಿ ಕಂಡುಬರುವ ದೋಷವೇನೆಂದರೆ—ವಿಷಯಜ್ಞಾನವ ಹೊರತಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಆ ವಿಷಯದ ಮೇಲೆ ನಿಬಂಧ ಬರೆದಂತಾಗು ವದು. ಭಾಷಾ ಜ್ಞಾನವು ಸಾಕಷ್ಟು ಅಚ್ಚುಕಟ್ಟಾಗಿರದಿದ್ದರೆ ವಿಷಯ ಜ್ಞಾನವಿದ್ದರೂ ಪ್ರಯೋಜನವಾಗಲಾರದು.

೫. ವಿನಾಶಕರವಾದ ಜರ್ಮನ ಯುದ್ಧವು ಆಗಿ ಹೋದಮೇಲೆ ಇನ್ನೊಂದು ಪ್ರವೃತ್ತಿಯು ಪಾಶ್ಚಾತ್ಯ ವಿದ್ಯಾಪ್ರವರ್ತಕರ ಮನಸ್ಸಿನಲ್ಲಿ ಬರಹತ್ತಿರುವದು. ಅವರ ಅನ್ನುವದೇನಂದರೆ—ಚಿಕ್ಕಮಕ್ಕಳಿಗೆ ಅಂತರರಾಷ್ಟ್ರೀಯ ಪ್ರೇಮದ ಕಲ್ಪನೆಯುಂಟಾಗು ವಂತೆ ಇತಿಹಾಸ ಮೊದಲಾದ ವಿಷಯಗಳನ್ನು ಕಲಿಸಬೇಕು. ಈಗ ಪ್ರಚಾರದಲ್ಲಿರು ಇತಿಹಾಸದ ಪುಸ್ತಕಗಳು ಸ್ವದೇಶದ ಬಗ್ಗೆ ಅಭಿಮಾನವನ್ನು ಜಾಗ್ರತಗೊಳಿಸುವಂಥವು ಪರದೇಶಗಳ ಬಗ್ಗೆ ದ್ವೇಷಬುದ್ಧಿಯನ್ನುಂಟುಮಾಡುವಂಥವೂ ಇರುತ್ತವೆ. ಜರ್ಮನ

ನೇಶದ ಮಟ್ಟಿಗಾದರೂ ಈ ಮಾತು ಸತ್ಯವಾಗಿರುತ್ತದೆ. ಅಸೋಲಿಕದವರು ಬರೆದ ಇಂಗ್ಲಂಡಿನ ಇತಿಹಾಸವು, ಇಂಗ್ಲಿಷ ಜನರು ಬರೆದ ಅದೇ ಇತಿಹಾಸದಿಂದ, ಅನೇಕ ಪಂಗತಿಗಳಲ್ಲಿ ಭಿನ್ನವಾಗಿರುತ್ತದೆ. ಆದದರಿಂದ ಬೇರೆ ಬೇರೆ ಜನಾಂಗದವರಲ್ಲಿ ಅನ್ಯರ ಬಗ್ಗೆ ಇರುವ ಮನಸ್ಸಿನ ತೀವ್ರತೆಯನ್ನು ಕಡಿಮೆ ಮಾಡಲಿಕ್ಕೂ, ಒಬ್ಬರೊಬ್ಬರನ್ನು ಕುರಿತು ಬರೆದ ಅಸಂತೋಷಕರವಾದ ಕಥಾನಕಗಳನ್ನು ಒರಿಸಿ ಹಾಕಲಿಕ್ಕೂ ಬೇರೆ ಬೇರೆ ದೇಶಗಳ ಇತಿಹಾಸದ ಹೊಸ ಪತ್ಯ ಪುಸ್ತಕಗಳನ್ನು ಕಾರ್ನೆಜಿಯವರ ನಿಧಿಯ ಸಹಾಯದಿಂದ ಬರೆಯಿಸಿ ಅಂತರ ರಾಷ್ಟ್ರೀಯ ಶಾಂತತೆಯನ್ನು ನೆಲೆಗೊಳಿಸುವದು ಶ್ರೇಯಸ್ಕರವೆಂದು ಕಂಡು ಬಂದದೆ. ಜಿನೀವಾದಲ್ಲಿ ನೆಲೆಗೊಂಡ ಲೀಗ ಆಫ್ ನೇಶನ್ಸದ ಕಳೆದ ೧೯೨೪ನೇ ಸಪ್ಟಂಬರದ ಅಧಿವೇಶನದಲ್ಲಿ ಪಾಸಾದ ತರಾವಿಗನುಸಾರವಾಗಿ ಆ ಸಭೆಯವರು ತಮ್ಮ ಅಂಗಭೂತಗಳಾದ ಬೇರೆ ಬೇರೆ ರಾಜ್ಯಗಳ ಸರಕಾರಗಳಿಗೆ ಒತ್ತಾಯದಿಂದ ಹೇಳಿದ್ದೇನಂದರೆ– ಅವರವರ ರಾಷ್ಟ್ರಗಳ ಚಿಕ್ಕ ಮಕ್ಕಳಿಗೂ ತರುಣರಿಗೂ ಲೀಗ ಆಫ ನೇಶನ್ಸದ ಕಾರ್ಯಗಳನ್ನು ತಿಳಿಸಿ ಹೇಳಿ ಬೇರೆ ರಾಷ್ಟ್ರಗಳ ವಿಷಯವಲ್ಲಿ ಪ್ರೇಮವುಂಟಾಗುವಂತೆ ಮಾಡಬೇಕು.

೬. ಕಟ್ಟಕಡೆಗೆ ಇಲ್ಲಿಯ ಪ್ರಾಯೋ. ಸ್ಕೂಲಿನಲ್ಲಿ ಏನೇನು ಮಾಡಿದ್ದೇವೆಂಬುದರ ಬಗ್ಗೆ ಸ್ವಲ್ಪ ಹೇಳುತ್ತೇನೆ. ಪ್ರಾಥಮಿಕ ಶಾಲೆಗಳಲ್ಲಿ ದೊರೆಯುವ ಸರ್ವ ಸಾಧಾರಣ ಅನುಭವವೇನಂದರೆ— ಬಿನ್ ಇಯತ್ತೆ ಅಥವಾ ಬಾಲಕರ ವರ್ಗದಲ್ಲಿದ್ದ ಚಿಕ್ಕ ಹುಡುಗರ ಕಡೆಗೆ ತಕ್ಕ ಲಕ್ಷ್ಯವನ್ನು ಕೊಡದೇ ಇರುವದರಿಂದ ಅವರು ಎಷ್ಟೋ ವರ್ಷ ಅದೇ ವರ್ಗದಲ್ಲಿಯೇ ಕೊಳೆಯುಬೇಕಾಗುತ್ತದೆ. ಹುಡುಗರನ್ನು ೧೧ ವರ್ಷದೊಳಗೆ ೧೧ನೇ ಇಯತ್ತೆಗೆ ತಕ್ಕವರನ್ನಾಗಿ ಮಾಡುವ ಶಾಲೆಗಳು ಮೇಲ್ತರದವೆಂದು ತಿಳಿಯಲ್ಪಡುತ್ತದೆ. ಈ ವಿಷಯದಲ್ಲಿ ನನ್ನ ನಿಶ್ಚಿತವಾದ ಅಭಿಪ್ರಾಯವೇನಂದರೆ— ಬಿನ್ ಇಯತ್ತೆ ನುತ್ತು ೧೧ನೇ ಇಯತ್ತೆ ಇವೆರಡನ್ನೂ ೧೧ ವರ್ಷದಲ್ಲಿ ಮುಗಿಸುವದು ಸಂಪೂರ್ಣ ಸಾಧ್ಯವದೆ. ಬಿನ್ ಇಯತ್ತೆಯ ಕಡೆಗೆ ವಿಶೇಷ ಲಕ್ಷ್ಯವನ್ನು ಪೂರ್ವೈಸಿ ೨ ವರ್ಷ ಅನುಭವ ಪಡೆದದರಿಂದ ಆ ಮಾತು ದೃಢವಾಯಿತು. ಎರಡು ವರ್ಷಗಳವರೆಗೆ ಬಾಲಕರ ವರ್ಗವನ್ನು ಒಬ್ಬ ಆಸ್ಥೆಯುಳ್ಳ ಶಿಕ್ಷಕನ ಕಡಿಗೆ ಕೊಟ್ಟದ್ದರಿಂದ ಆ ಬಾಲಕರು ೧೧ ವರ್ಷದಲ್ಲಿ ೩ನೇ ಇಯತ್ತೆಗೆ ಹೋಗಲಿಕ್ಕೆ ತಕ್ಕವರಾದರು. ಈ ವರ್ಷ ಅದೇ ವರ್ಗವು ಒಬ್ಬ ಸಾಮಾನ್ಯ ಶಿಕ್ಷಕನ ಕೈಯಲ್ಲಿ ಕೊಡಲ್ಪಟ್ಟದೆ. ಅವನು ಎಷ್ಟರ ಮಟ್ಟಿಗೆ ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗುವನೆಂದು ನೋಡತಕ್ಕದ್ದದೆ. ಆ ಮಕ್ಕಳ ಈಗಿನ ಶಿಕ್ಷಣದ ಮಾನದಿಂದ ನೋಡಿದರೆ ಅವರು ಒಂದೇ ವರ್ಷದಲ್ಲಿ ೩ನೇ ಇಯತ್ತೆಗೆ ಹೋಗಲಿಕ್ಕೆ ತಕ್ಕವರಾಗುವರೆಂಬ ಬಗ್ಗೆ ನನಗೆ ಪೂರ್ಣ ಆಶೆಯದೆ. ಯಾವ ಶಾಲೆಯಲ್ಲಿ ಬಿನ್ ಇಯತ್ತೆಯನ್ನು ಒಬ್ಬ ಸ್ವತಂತ್ರ ಶಿಕ್ಷಕನ ಕೈಯಲ್ಲಿ ಕೊಡಲಿಕ್ಕೆ ಬರುವದೋ ಅಲ್ಲಿಯಾದರೂ ಈ ಪದ್ಧತಿಯನ್ನು ರೂಢಿಯಲ್ಲಿ ತರತಕ್ಕದ್ದು. ಈಗ ವಿದ್ಯಾ ಪ್ರಪಂಚದಲ್ಲಿ ಕಂಡು ಬರುವ ಕೆಲವು

ಮಹತ್ವದ ವಿಚಾರ ಪ್ರವಾಹಗಳ ವರ್ಣನೆಯನ್ನೂ ನಮ್ಮ ಅಲ್ಪ ಪ್ರಯತ್ನದ ದಿ
ಯನ್ನೂ ಮೇಲೆ ಸ್ವಲ್ಪದರಲ್ಲಿ ವರ್ಣಿಸಿದೆ.

---

# ಭಾರತೀಯ ಚಿತ್ರಕಲೆ.



[ಬರಹಗಾರ: —ಶ್ರೀ. ಲಕ್ಷ್ಮಣ ವಿಶ್ವನಾಥ ಫಾಟಕ. ಅಣ್ಣಿಗೇರಿ ]

( ಕಳಿದ ಸಂಚಿಕೆಯಿಂದ ಮುಂದೆ ಸಾಗಿದ್ದು. )

ಬೌದ್ಧಕಾಲದ ಚಿತ್ರಗಳಲ್ಲಿ ಭವ್ಯತೆಯು ಒಡೆದು ಕಾಣುತ್ತಿರುತ್ತದೆ. ಈ ಭವ್ಯತೆಯನ್ನು ನೋಡಿದ ಕೂಡಲೇ ಇಷ್ಟು ದೊಡ್ಡ ಚಿತ್ರಗಳನ್ನು ಪ್ರಮಾಣ ಬದ್ಧವಾಗಿ ತೆಗೆಯುವ ಆಗಿನ ಚಿತ್ರಗಾರರ ವಿಶಾಲ ಕಲ್ಪನೆಗಳ ವಿಷಯಕ್ಕೆ ಆಶ್ಚರ್ಯವೆ ಆಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಗ್ರೀಕ ವೀರರ ಶಿಲಾಪ್ರತಿಮೆಗಳನ್ನು ದೊಡ್ಡ ಪ್ರಮಾಣದಿಂದ ತಯಾರಿಸುವದರಲ್ಲಿ ಗ್ರೀಕ ಶಿಲ್ಪಜ್ಞರು ಬಹಳ ಸಾಹಸಪಟ್ಟಿರುವರೆಂದ ಪಾಶ್ಚಾತ್ಯ ಲೇಖಕರು ಬಹು ಆಶ್ಚರ್ಯತೆಯಿಂದ ಬರೆಯುತ್ತಿರುತ್ತಾರೆ. ಆದರೆ ಅವರ ಒಮ್ಮೆ ಅಜಿಂಠಾ, ಗ್ವಾಲ್ಹೇರಗಳಲ್ಲಿ ಗುಡ್ಡದೊಳಗೆ ಕೊರೆದ ೨-೩ ಅಳು ಎತ್ತರವಿದ್ದ ಚಿತ್ರಗಳನ್ನು ನೋಡಿದರೆ ಏನನ್ನುವರೋ ಏನೋ? ಬೌದ್ಧಕಾಲದ ಚಿತ್ರಗಾರರ ಕುಶಲತೆಯನ್ನು ನೋಡಿ ಬೆರಗಾದ ಮಿ. ಪರ್ಸಿಬ್ರ್ಯಾಉನ್ ಸಾಹೇಬರವರು ತಮ್ಮದೊಂದು ಪುಸ್ತಕದಲ್ಲಿ ಉಲ್ಲೇಖಿಸಿರುವದೇನೆಂದರೆ– "ಬೌದ್ಧಕಾಲದ ಜನರ ಸೌಂದರ್ಯ ವಿಷಯದ ಕಲ್ಪನೆಯೇ ಬಹಳ ಉಚ್ಚಪ್ರತಿಯದಿತ್ತು. ಆಗಿನ ಚಿತ್ರಗಳಲ್ಲಿ ಕೃತ್ರಿಮತೆಯು ಎಳ್ಳಷ್ಟು ಸಹ ಇದ್ದಿಲ್ಲ ಕೇವಲ ಅಂತಃಸ್ಫೂರ್ತಿಯಿಂದಲೇ ಅವು ಪ್ರಕಟವಾಗಿವೆ ಪ್ರತಿಯೊಂದು ಚಿತ್ರವು ಪ್ರತ್ಯೇಕವಾಗಿ ನೋಡಿದರೆ ಎಷ್ಟು ಸುಂದರಕಾಣಿಸುತ್ತದೆಯೋ ಅಷ್ಟೇ ಸಮೂಹದಲ್ಲಿ ನೋಡಿದರೂ ಸಹ ಸುಂದರವಾಗಿಯೇ ಕಾಣಿಸುತ್ತದೆ. ಯಥೋಚಿತವಾದ ಸ್ಥಾನದಲ್ಲಿ ಯಥೋಚಿತವಾದ ಪ್ರಮಾಣದ ಮೇಲೆ ಯಥೋಚಿತವಾದ ರೀತಿಯಿಂದ ಸಮೂಹದೊಳಗಿನ ಎಲ್ಲ ಚಿತ್ರಗಳ ಸನ್ನಿವೇಶವಾಗಿದೆ. ಈ ಸನ್ನಿವೇಶವೇ ಆ ಚಿತ್ರಗಳಲ್ಲಿಯ ಸೌಂದರ್ಯದ ರಹಸ್ಯವಾಗಿದೆ."

ಪ್ರೇಕ್ಷಕರ ಮನಸ್ಸಿನ ಮೇಲೆ ನಾವು ಪ್ರತ್ಯಕ್ಷ ಸಜೀವ ಮೂರ್ತಿಯನ್ನು ನೋಡುತ್ತಿರುವೆವೋ ಏನೋ ಎಂಬ ಭಾಸವಾಗುವಂತೆ ಸಾದಾರೇಷೆಗಳ ಸಹಾಯದಿಂದ ಚಿತ್ರ ತೆಗೆಯುವ ಕಲೆಯಂತೂ ಬಹಳ ಕಠಿಣವಿದೆ. ಆದರೆ ಬೌದ್ಧಕಾಲದ ಚಿತ್ರಗಾರರು ಇದಕ್ಕೂ ಮುಂದೆ ಹೋಗಿದ್ದರು. ಸಾದಾ ರೂಪ– ರೇಷೆಗಳಿಂದ ಶಾರೀರಿಕ ಸೌಂದರ್ಯವನ್ನು ಪ್ರಕಟ ಮಾಡಿ ಅವರು ಅಷ್ಟಕ್ಕೇ ನಿಲ್ಲದೆ ಪ್ರತಿಯೊಂದು ಚಿತ್ರದ ಅಂತ

ರ್ಮವನ್ನು ಸಹ ಪ್ರಕಟಮಾಡುವ ಹವ್ಯಾಸವನ್ನು ತೋರಿಸಿದ್ದಾರೆ. ಸಜೀವತೆ, ದ್ದು ಕಾಣುವ ಗುಣ ಇವೆರಡೂ ಬೌದ್ಧಯುಗದ ಚಿತ್ರಗಳಲ್ಲಿ ಮುಖ್ಯವಾಗಿ ಕಂಡು ರುತ್ತವೆ.

ಬಣ್ಣದ ಯೋಜನೆಯ ವಿಷಯಕ್ಕೆ ಈ ಯುಗದ ಚಿತ್ರಗಾರರ ನೈಪುಣ್ಯವು ತ್ಯಂತ ಪ್ರಶಂಸನೀಯವಿದೆ. ಕಳೆದ ಎರಡುಸಾವಿರ ವರ್ಷಗಳ ಅವಧಿಯಲ್ಲಿ ಸರ್ವ ಸಂಹಾರಕನಾದ ಕಾಲನ ಅಸಂಖ್ಯ ದಾಳಿಗಳನ್ನು ಸಹನವಾಡಿ ಸಹ ಅಜಿಂಠಾದಲ್ಲಿಯ ಚಿತ್ರಗಳ ಬಣ್ಣದ ಉಜ್ವಲತೆಯು ಇನ್ನೂ ಅಚ್ಚಳಿಯದೆ ಉಳಿದದ್ದನ್ನು ನೋಡಿದರೆ ಯಾರಿಗೆ ತಾನೇ ಆಶ್ಚರ್ಯವೆನಿಸಲಿಕ್ಕಿಲ್ಲ ?

ಬೌದ್ಧಯುಗದ ನಂತರ ಎಷ್ಟೋ ಶತಮಾನಗಳ ಮೇಲೆ ಮೊಗಲ ರಜಪೂತ ಯುಗವು ಪ್ರಾಪ್ತವಾಯಿತು. ಆದರೆ ಮಧ್ಯದ ಸಂಧಿಕಾಲದಲ್ಲಿ ಭಾರತೀಯ ಚಿತ್ರ ಕಲೆಯ ಪ್ರಗತಿಯು ಕುಂಠಿತವಾಯಿತೆಂದು ಇದರ ಅರ್ಥವಲ್ಲ. ಬೌದ್ಧಯುಗದ ವರೆಗೆ ದೇವಾದಿಕರ ಹಾಗು ಸಾಧುಸಂತರ ಚಿತ್ರಗಳನ್ನಷ್ಟೇ ತೆಗೆಯುವ ಪರಿಪಾಠವಿತ್ತು. ಸಾಲಾಗಿ ಇವು ಬಹುತರ ಕಾಲ್ಪನೀಕವೇ ಇರುತ್ತಿದ್ದವು. ಆವರೆ ಬೌದ್ಧಯುಗದ ನಂತ ರದ ಕಾಲದಲ್ಲಿ ಪ್ರತ್ಯಕ್ಷ ವಸ್ತುದರ್ಶನದಿಂದಲೇ ಚಿತ್ರ ತೆಗೆಯುವ ಪ್ರಘಾತವುಂಟಾ ಯಿತು. ಈ ಪ್ರಘಾತವು ಎಂದು ಆರಂಭವಾಯಿತು ? ಯಾರು ಪ್ರಚಾರದಲ್ಲಿ ತಂದರು? ವಸ್ತುದರ್ಶನಕ್ಕೆ ಆಗ ಕಾಲಮರ್ಯಾದೆ ಎಷ್ಟು ಇರುತ್ತಿತ್ತು? ಇವೇ ಮುಂತಾದ ಅನೇಕ ಸಂಗತಿಗಳು ಆ ಕಾಲದ ಇತಿಹಾಸದ ಅಭಾವದಿಂದ ಅಜ್ಞಾತವಾಗಿ ಉಳಿದಿವೆ. ಇದೊಂದು ಅತ್ಯಂತ ಶೋಚನೀಯ ಸಂಗತಿಯೇ ಸರಿ! ಆದರೆ ಆ ಕಾಲದ ವಿಷಯಕ್ಕೆ ಉಪಲಬ್ಧವಿರುವ ಕೆಲವು ದಂಥ ಕಥೆಗಳ ಮೇಲಿಂದ ಯಥಾದರ್ಶನ ಚಿತ್ರಲೇಖನ ಕಲೆಯು ಅಸ್ತಿತ್ವದಲ್ಲಿತ್ತೆಂದು ಸಿದ್ಧವಾಗುತ್ತದೆ. ವಾಚಕರ ಅವಗಾಹನೆಗಾಗಿ ಒಂದು ಚಿಕ್ಕ ದಂತಕಥೆಯನ್ನು ಇಲ್ಲಿ ಇದ್ದಕ್ಕಿದ್ದಂತೆ ಬರೆಯುತ್ತೇವೆ—

ಬಹುಶ್ರುತನೆಂಬ ಒಬ್ಬ ರಾಜನು ಅತ್ಯಂತ ಸ್ತ್ರೀಲಂಪಟನಿದ್ದನು. ಅವನು ತನ್ನ ರಾಣಿಯಾದ ಭಾನುಮತಿಯನ್ನು ಬಿಟ್ಟು ಒಂದು ಅಂಘಳಿಗೆಯಾದರೂ ಅಗಲಿರುತ್ತಿದ್ದಿಲ್ಲ ಒಡ್ಡೋಲಗದಲ್ಲಿ ಕುಳಿತಾಗ ಸಹ ಭಾನುಮತಿಯು ಸಮೀಪದಲ್ಲಿಯೇ ಇರಬೇಕೆಂದು ಅವನು ತನ್ನ ಅರ್ಧ ಸಿಂಹಾಸನವನ್ನು ಯಾವಾಗಲೂ ಕಾದಿಡುತ್ತಿದ್ದನು. ಆದರೆ ಅವನ ವೃದ್ಧ ಪ್ರಧಾನಸಿಗೆ ಈ ಕೃತಿಯು ಸರಿಬರಲಿಲ್ಲ. ಅವನು ನಮ್ರತನದಿಂದ ಈ ಬಗ್ಗೆ ರಾಜನಿಗೆ ಚನ್ನಾಗಿ ತಿಳಿಹೇಳಿದನು. ಆಗ ರಾಜನು — "ಏನು ಮಾಡಲಿ ! ರಾಣಿಯು ಹೊರತು ನನಗೆ ಒಂದು ಅರಘಳಿಗೆ ಸಹ ಚೈನ ಬೀಳುವದಿಲ್ಲ. ಅವಳು ಸಮೀಪದಲ್ಲಿರ ದ್ದರೆ ಕೆಲಸದ ಕಡೆಗೆ ನನ್ನ ಲಕ್ಷ್ಯವೇ ಹೋಗುವದಿಲ್ಲ." ಎಂದು ನುಡಿಯಲು ಮಂತ್ರಿ ಯು ಅದಕ್ಕೆ ಪ್ರತ್ಯುತ್ತರವಾಗಿ— ತಮ್ಮ ಪದರಿನಲ್ಲಿ ಮಾಹುಷನೆಂಬ ಉತ್ತಮ ಚಿತ್ರ ಗಾರನಿದ್ದಾನೆ. ಅವನು ತಮ್ಮ ರಾಣೀಸಾಹೇಬರನ್ನು ಪ್ರತ್ಯಕ್ಷ ಕೆಲವು ಹೊತ್ತು ನೋಡಿ,

ಅನರ ಚಿತ್ರವನ್ನು ತನ್ನ ಸಿಂಹಾಸನದ ಎದುರಿನ ಗೋಡೆಯ ಮೇಲೆ ತೆಗೆದರೆ, ಅದು ತಾವು ದರಬಾರದಲ್ಲಿ ಕುಳಿತಾಗ ಎದುರಿಗೆ ಕಾಣುವ ಮೂಲಕ ಅದರಿಂದ ತಮಗೆ ಎಷ್ಟೋ ಸಮಾಧಾನವಾದೀತು, ಎಂದು ಹೇಳಿದನು. ಮಂತ್ರಿಯ ಈ ಆಲೋಚನೆಯು ರಾಜನಿಗೆ ಒಪ್ಪಿಗೆಯಾದ ಮೂಲಕ ಅವನು ರಾಣಿಯ ಯಥಾ ದರ್ಶನ ಚಿತ್ರವನ್ನು ಆ ಚಿತ್ರಗಾರನಿಂದ ತಯಾರಿಸಿದನು.

ಮೇಲಿನ ದಂತಕಥೆಯಿಂದ ಭಾರತೀಯ ಚಿತ್ರಕಲೆಯು ಒಂದು ಹೆಜ್ಜೆ ಮುಂದೆ ಹೋದದ್ದು ಕಂಡುಬರುತ್ತದೆ. ಅಂದರೆ ಕೇವಲ ಕಾಲ್ಪನಿಕ ಚಿತ್ರಗಳನ್ನು ತೆಗೆಯುವ ಮೊದಲಿನ ಪದ್ಧತಿಯಲ್ಲಿ ಸುಧಾರಣೆಯಾಗಿ ಸಜೀವ ಮನುಷ್ಯರ ಪೂರ್ಣ ಆಕಾರದ ಯಥಾದರ್ಶನ ಚಿತ್ರ ತೆಗೆಯಲಿಕ್ಕೆ ಆರಂಭವಾಯಿತು. ಕಲೆಯ ದೃಷ್ಟಿಯಿಂದ ಇದು ಬಹಳೇ ಮಹತ್ವದ ಸಂಗತಿಯಾಗಿದೆ. ಕಾಲ್ಪನಿಕ ಚಿತ್ರಗಳಲ್ಲಿ ಕೇವಲ ಚಿತ್ರದ ಅಂತರಂಗವನ್ನಷ್ಟೇ ಚಿತ್ರಿತ ಮಾಡುವ ಹೊಣೆಯು ಚಿತ್ರಗಾರನ ಮೇಲಿರುತ್ತದೆ. ಬಹಿರಂಗವನ್ನು ತನ್ನ ಕಲ್ಪನಾಶಕ್ತಿಯ ಪ್ರಕಾರ ಬೇಕಾದಹಾಗೆ ಚಿತ್ರಿತ ಮಾಡುವ ಸ್ವತಂತ್ರತೆ ನಿರುತ್ತದೆ. ಆದರೆ ಯಥಾದರ್ಶನ ಚಿತ್ರಕಲೆಯಲ್ಲಿ ಅಂತರಂಗದಂತೆ ಬಹಿರಂಗದ ಮೇಲೆಯೂ ಒಂದು ಪ್ರಕಾರದ ನಿಯಂತ್ರಣವಿರುತ್ತದೆ. ಆದುದರಿಂದ ಇಂಥ ಚಿತ್ರಗಳನ್ನು ತೆಗೆಯುವದರಲ್ಲಿ ಕುಶಲತೆ ನಿರೀಕ್ಷಣಶಕ್ತಿಗಳು ವಿಶೇಷವಿರಬೇಕಾಗುತ್ತವೆ. ಈ ನಿರೀಕ್ಷಣ ಶಕ್ತಿಯು ಎಲ್ಲ ಚಿತ್ರಗಾರರಲ್ಲಿ ಒಂದೇ ಸವನಾಗಿ ಇರದೆ ಇರುವ ಮೂಲಕ ಚಿತ್ರಕಲೆಯ ವಿಷಯಕ್ಕೆ ತಜ್ಞರಾದವರು ಕೆಲವು ನಿಯಮಗಳನ್ನು ಬರೆದಿಡಬೇಕಾಯಿತು. ಚಿತ್ರಕಲೆಯ ವಿಷಯಕ್ಕೆ ಅಷ್ಟಕ್ಕಷ್ಟೇ ಜ್ಞಾನವುಳ್ಳವರ ಪೈಸೆಯಿಂದಲೇ ವಸ್ತುತಃ ಈ ನಿಯಮಗಳಿದ್ದವಾದರೂ ಬೌದ್ಧಯುಗದಲ್ಲಿ ಪ್ರತಿಭಾವಾನ್ ಚಿತ್ರಗಾರರು ಸಹ ಈ ನಿಯಮಗಳನ್ನು ಶಕ್ಯವಾವಷ್ಟು ಪಾಲಿಸಿದ್ದಾರೆ. ಶಿಸ್ತಿನ ಮಹತ್ವವು ಪೂರ್ವದಲ್ಲಿ ಎಷ್ಟು ಇತ್ತೆಂಬುವದಕ್ಕೆ ಇದೊಂದೇ ಉದಾಹರಣೆ ಸಾಕು! ಬೌದ್ಧಯುಗದಲ್ಲಿ ಚಿತ್ರಗಳಲ್ಲಿ ಕಣ್ಣು, ಎದೆ, ನಡ, ಕೈ, ಕಾಲು ಮೊದಲಾದ ಅವಯವಗಳ ಪ್ರಮಾಣದಲ್ಲಿ ಕಂಡುಬರುವ ಏಕತಾನತೆಯ ಮೂಲವು ಇದರಲ್ಲಿಯೇ ಅಡಕವಾಗಿದೆ.

(೪) **ಮೊಗಲ-ರಜಪೂತ ಯುಗ**:—ಈ ಯುಗದಲ್ಲಿ ಚಿತ್ರಕಲೆಯಲ್ಲಿ ಬಹಳಿ ಪರಿವರ್ತನವಾಯಿತು. ಬೌದ್ಧಯುಗದಲ್ಲಿಯ ಚಿತ್ರದ ಭವ್ಯತೆಯು ಹೋಗಿ ಅದಕ್ಕೆ ಕೇವಲ ಕ್ಷುದ್ರ ಆಕಾರವುಂಟಾಯಿತು. ನಿಯಮಬದ್ಧ ನೈಸರ್ಗಿಕತೆಯು ಹೋಗಿ ಅದರ ಬದಲು ಅನಿಯಮಿತ ಕೋಮಲತ್ವವು ಪ್ರಾಪ್ತವಾಯಿತು. ಅಂತರಂಗ ವ್ಯಕ್ತ ಮಾಡುವ ಚಿತ್ರಕಲೆಯ ಮರ್ಮಕ್ಕೆ ಗಂಡಸ್ಥಾನವುಂಟಾಗಿ ಬಾಹ್ಯಡೌಲಿಗೆ ಚಿತ್ರಗಾರರು ವಿಶೇಷ ಲಕ್ಷ್ಯಕೊಡಹತ್ತಿದರು. ಚಿತ್ರಕಲೆಯ ವಿಷಯದ ಮೊದಲಿನ ನಿಸ್ವಾರ್ಥ ಪ್ರೀತಿಯು ಲುಪ್ತವಾಗಿ ಪ್ರಸ್ಯಲೋಭಕ್ಕೆ ಚಿತ್ರಗಾರರ ಮನಸ್ಸು ಎಳೆಯ ಹತ್ತಿತು. ಕಲೆಯ ಮರ್ಮಕ್ಕೆ ಯಾವ ಪ್ರಕಾರದಿಂದಲೂ ಆಘಾತ ಮಾಡದೆ ಸ್ವಂತದ ಉಲ್ಲಾಸದಿಂದ ಅದರಲ್ಲಿ ಪ್ರಗತಿಯ

ಸ್ಸುಂಟು ಮಾಡುವ ಮೊದಲಿನ ಸ್ಪೃಹಣೀಯ ಇಚ್ಛೆಯು ಲೋಪವಾಗಿ ಕೇವಲ ಸತ್ತಾ ಧಾರಿಗಳಾದ ಅರಸಾಳುಗಳನ್ನು ಸಂತುಷ್ಟ ಪಡಿಸಿ ದ್ರವ್ಯಾರ್ಜನ ಮಾಡಿಕೊಳ್ಳುವ ಉದ್ದೇಶದಿಂದಲೇ ಇಲ್ಲಿಯ ಚಿತ್ರಗಾರರು ಹೀನವಾದ ಪರಕೀಯ ಮೊಗಲ ಚಿತ್ರ ಕಲೆಯ ಅನುಕರಣ ಮಾಡಹತ್ತಿದರು. ಅದರಿಂದ ಭಾರತೀಯ ಚಿತ್ರಕಲೆಯ ಆಧ್ಯಾ ತ್ಮಿಕತೆಯು ಸಮೂಲ ಲಯವಾಗಿ ಐಹಿಕ ಐಶ್ವರ್ಯದ ಮಹತಿಯು ಆ ಕಲೆಯಲ್ಲಿ ಪ್ರೌರ್ಢಿಯಾಯಿತು ಗುಣಗಳನ್ನು ದೃಗ್ಗೋಚರ ಮಾಡುವ ಮೊದಲಿನ ಚಿತ್ರಕಲೆಯ ಪದ್ಧತಿಯು ಹೋಗಿ ಅದರ ಬದಲು ಕೇವಲ ಪ್ರತ್ಯಕ್ಷ ದರ್ಶನಕ್ಕೆ ಅನುಸರಿಸಿ ಚಿತ್ರ ತೆಗೆ ಯುವ ಹೊಸ ಪದ್ಧತಿಯು ಈ ಯುಗದಲ್ಲಿ ವಿಶೇಷ ಪ್ರಚಾರದಲ್ಲಿ ಬಂದಿತು.

ಮೊಗಲ ಚಿತ್ರಕಲೆಯ ಜನ್ಮಸ್ಥಾನವು ತಾರ್ತರೀ ದೇಶವು. ಮೊಗಲ ಚಿತ್ರಗಾ ರರಲ್ಲಿ ಬೆಹಜಾದ ಎಂಬವನು ಬಹು ಹೆಸರಾದವನು. ಇವನು ನಾಮಾಂಕಿತ ಪಾಶ್ಚಾತ್ಯ ಚಿತ್ರಗಾರನಾದ ರಾಫೆಲ್‌ನ ಯೋಗ್ಯತೆಗೆ ಸರಿಯಾದವನೆಂದು ವಿದ್ವಾಂಸರು ಪ್ರತಿಪಾದಿ ಸುತ್ತಾರೆ. ಮೊಗಲ ಚಿತ್ರಕಲೆಯಲ್ಲಿ ಇರಾಣೀ ಚಿತ್ರಕಲೆಯು ಮಿಶ್ರಣವಿದೆ. ಇಸ್ಲಾಮಿ ಧರ್ಮದಂತೆ ದೇವರ ಪ್ರತಿಮೆಗಳನ್ನೂ, ಚಿತ್ರಗಳನ್ನೂ ತಯಾರಿಸುವದು ಮಹತ್ಪಾಪ ವಾಗಿದೆ. ಆದರಿಂದ ಮೊಗಲ ಚಿತ್ರಕಲೆಯಲ್ಲಿ ಪ್ರಾಪಂಚಿಕ, ಐತಿಹಾಸಕ, ವೃಗಯಾ ವಿಹಾರ, ಸೃಷ್ಟಿಸೌಂದರ್ಯ ಇಂಥ ವಿಷಯಗಳೇ ಅಡಕವಾಗಿವೆ. ನಕ್ಷೆಯ ಕೆಲಸ, ಪ್ರಿಯ ಪಾತ್ರಗಳ ಪ್ರಣಯ ಪ್ರಸಂಗ ಇವುಗಳ ಚಿತ್ರಗಳನ್ನು ಮೊಗಲ ಚಿತ್ರಗಾರರು ಎಷ್ಟು ಪ್ರೀತಿಯಿಂದ ತೆಗೆಯುತ್ತಾರೆ. ಚಿತ್ರಗಳಲ್ಲಿ ಎದ್ದು ಕಾಣುವ ಬಣ್ಣಗಳನ್ನು ಉಪ ಯೋಗಿಸುವದು, ಮತ್ತು ಸೂರ್ಯ ಪ್ರಕಾಶಕ್ಕೆ ಸೋನೇರಿ ಬಣ್ಣವನ್ನು ಉಪಯೋಗಿ ಸುವದು ಇವೆಲ್ಲವೂ ಇರಾಣೀ ಚಿತ್ರಕಲೆಯ ನಿದರ್ಶಕಗಳಾಗಿವೆ.

ರಜಪೂತ ಚಿತ್ರಕಲೆಯು ಮೊಗಲಚಿತ್ರ ಚಿತ್ರಕಲೆಯ ಸಮಕಾಲೀನವಾಗಿದೆ. ಇದರಲ್ಲಿ ೧. ರಾಜಸ್ಥಾನಿ (ಕ್ಷತ್ರಿಯ) ೨. ಪಹಾಡಿ ಎಂಬ ಎರಡು ಪ್ರಕಾರಗಳಿವೆ. ಮೊದ ಲನೇ ಪ್ರಕಾರದಲ್ಲಿ ಕೃಷ್ಣಲೀಲೆಯು ಉತ್ಕಟ ಅಭಿರುಚಿ ಮತ್ತು ಭಕ್ತಿರಸ ಈ ಗುಣಗಳು ಮುಖ್ಯವಾಗಿ ಕಂಡು ಬರುತ್ತವೆ. ಎರಡನೇ ಪ್ರಕಾರದಲ್ಲಿ ಅಶಿಕ್ಷಿತ ಜನರ ಸಾದಾವೃತ್ತಿ ಮತ್ತು ನೀರ್ವ್ಯಾಜತೆ ಈ ಗುಣಗಳು ವಿಶೇಷತಃ ಕಂಡು ಬರುತ್ತವೆ. ಪಹಾಡಿಯ ಪದ್ಧತಿಯ ಚಿತ್ರಗಳು ಬಹಳ ಸಣ್ಣವಿದ್ದು ಉಂಗುರದ ಹರಳಿನಲ್ಲಿ ಸಹ ಕೂಡುವಷ್ಟು ಅಲ್ಪ ಪ್ರಮಾಣದಲ್ಲಿದ್ದವು.

ರಾಜಸ್ಥಾನಿ, ಪಹಾಡಿ ಈ ಎರಡೂ ಪದ್ಧತಿಗಳು ಕೇವಲ ಹಿಂದೂ ಜನರವೇ ! ಬೌದ್ಧರಾದರೂ ವಸ್ತುತಃ ಹಿಂದುಗಳೇ ! ಆದರೆ ಯಾಜ್ಞಿಕ ಹಿಂಸೆಯ ವಿರುದ್ಧವಾಗಿ ಇರು ಭಯಂಕರ ಚಳವಳಿ ಮಾಡಿದ ಮೂಲಕ ಅವರು ಅಹಿಂದುಗಳಲ್ಲಿ ಎಣಿಸಲ್ಪಡು

೫. **ಆಂಗ್ಲಯುಗ:**— ಈ ಯುಗದಲ್ಲಿ ಭಾರತೀಯ ಚಿತ್ರಕಲೆಗೆ ಮತ್ತೊಂ
ಕ್ರಾಂತಿಯುಂಟಾಯಿತು. ಹಿಂದುಸ್ತಾನದಲ್ಲಿ ಯುರೋಪಿಯರ ಪ್ರಾಬಲ್ಯವು ಆರ
ವಾದಂದಿನಿಂದ ಇಲ್ಲಿಯ ಧರ್ಮ, ಸಾಮಾಜಿಕ ರೀತಿ, ವಿದ್ಯಾ, ಕಲಾ, ಉದ್ಯೋಗ
ಪ್ರತಿಯೊಂದು ಬಾಬಿನಲ್ಲಿಯೂ ನಮ್ಮದೆಂಬ ಭಾವನೆಯೇ ನಷ್ಟವಾಗಿ ಕೇವಲ
ಕೀಯರ ಅಂಧಾನುಕರಣ ಮಾಡುವ ಪ್ರವೃತ್ತಿಯೇ ವಿಶೇಷವಾಗಿ ಹಬ್ಬುಗೊಂಡಿ
ಯಾವ ಭಾರತೀಯ ಚಿತ್ರಕಲೆಯನ್ನು ಮಿ. ಪರ್ಸಿಬ್ರಾವ್ನ್, ಮಿ. ಹವ್ಹೆಲ್
ಸಿಸ್ಟರ ನಿವೇದಿತಾ, ಡಾ. ಕೂಮಾರಸ್ವಾಮಿ ಪರಕೀಯ ವಿದ್ವಾಂಸರು ಮುಕ್ತ ಕ
ದಿಂದ ಸ್ತುತಿಸಿರುವರೋ, ಅಂಥ ಆ ಕಲೆಯ ಮರ್ಮವೇ ಈಗ ನಮಗೆ ತಿಳಿಯ
ತಾಗಿದೆ. ಇಷ್ಟೇ ಅಲ್ಲ; ಕಲಾದೃಷ್ಟಿ ಶೂನ್ಯರಾದ ನಮ್ಮ ಅಧುನಿಕ ಸುಶಿಕ್ಷಿತರು ಭಾ
ತೀಯ ಪ್ರಾಚೀನ ಚಿತ್ರಕಲೆಗೆ 'ಸೊಟ್ಟಪಟ್ಟ' 'ಅಡಾಣಿ' ಇಂಥ ವಿಶೇಷಣಗಳಿ
ಮನಬಲ್ಲಂತೆ ದೂಷಿಸುತ್ತಾರೆ. ಇದೊಂದು ದೈವ ದುರ್ವಿಪಾಕವೇ ಸರಿ ! ಕಲಕತ್ತೆ
"ಮಾಡರ್ನ್ ರಿವ್ಯೂ" ಎಂಬ ಮಾಸಿಕದಲ್ಲಿ ಕೆಲವು ಹಳೇ ಪ್ರತಿಯ ಚಿತ್ರಗ
ಆಗಾಗ್ಗೆ ಬರುತ್ತಿರುತ್ತವೆ. ಅವನ್ನು ನೋಡಿ ಪ್ರಾಚೀನ ಚಿತ್ರ ಕಲೆಯ ಜೀರ್ಣೋ
ದ್ಧಾರ ಮಾಡುವ ಕಾರ್ಯವನ್ನು ಬಾಬು ಅವನೀಂದ್ರನಾಥ ಟಾಗೊ?ರ, ಹಲ
ಪ್ರಭೃತಿ ಬಂಗಾಲಿ ಬಂಧುಗಳು ಕೈಕೊಂಡಿದ್ದಾರೆ. ಇವರ ಅಭಿನಂದನ ಮಾಡ
ದಂತೂ ಒತ್ತಟ್ಟಿಗೆಯೇ ಉಳಿಯಿತು. ಆದರೆ ನಮ್ಮ ಪೂರ್ವಿಕರ ಕಲೆಗೆ ಇಷ್ಟೊಂ
ಗೌರವ ದೊರೆಯುವದರ ಮರ್ಮವನ್ನು ಸಹ ಈ ವರೆಗೆ ಯಾರೂ ತಿಳುಕೊಳ್ಳ
ಗೋಜಿಗೆ ಹೋಗಿಲ್ಲ. ಕ್ರಿಯಾ ಶೂನ್ಯರೂ ಅಭಿಮಾನಶೂನ್ಯರೂ ಆದ ಅನೇ
ವಾಚಾಳ ಪಂಡಿತರು ದಿಗಂತ ಕೀರ್ತಿಯನ್ನು ಹೊಂದಿದ ನಮ್ಮ ಪೂರ್ವಜರ ಕ
ಕುಚೇಷ್ಟೆ ಮಾಡಿ ಪಾಶ್ಚಾತ್ಯ ಚಿತ್ರಕಲೆಯು "ಉದೋ ಉದೋ" ಮಾಡುವದರಲ್ಲಿಂ
ತಮ್ಮ ಧನ್ಯತೆಯುಂಟೆಂದು ತಿಳಿಯುತ್ತಲಿದ್ದಾರೆ. ಇಂಥ ಮೂರ್ಖತನಕ್ಕೆ ಏನೆನ್ನಬೇಕ
ಭಾರತೀಯ ಚಿತ್ರಕಲೆ ಹಾಗು ಪಾಶ್ಚಾತ್ಯ ಚಿತ್ರಕಲೆ ಇವೆರಡರ ಧ್ಯೇಯದಲ್ಲಿಂ
ಮೂಲತಃ ಭಿನ್ನತೆಯಿದೆ. ಮೊದಲನೇಯದರಲ್ಲಿ ಚಿತ್ರದ ಅಂತಸ್ಥಭಾವವು ಉತ್ಪ
ಯಿಂದ ಪ್ರಕಟವಾಗುತ್ತದೆ. ಆದರೆ ಎರಡನೇಯದರಲ್ಲಿ ಯಥಾದರ್ಶನ ಚಿತ್ರಲೇಖ
ವಿದೆ. ಈ ವಿರೋಧವನ್ನು ಸರಿಯಾಗಿ ತಿಳಿದುಕೊಂಡು ಆ ಮೇಲೆ ಭಾರತೀಯ ಚಿ
ಕಲೆಯನ್ನು ಸೂಕ್ಷ್ಮ ದೃಷ್ಟಿಯಿಂದ ಪರ್ಯಾಲೋಚಿಸುವದು ಯೋಗ್ಯವಾಗಿದೆ. ಆ
ಹೀಗೆ ಮಾತ್ರ ಯಾರೂ ಮಾಡದೆ ಸುಮ್ಮನೆ ತಮ್ಮ ಪೂರ್ವಿಕರಿಗೆ ಏನಾದರೊಂದು ಕ
ರಿಟ್ಟು ಸ್ವಂತದ ಅಜ್ಞಾನವನ್ನು ಮಾತ್ರ ಹೊರಗೆಡವಿಕೊಳ್ಳುತ್ತಾರೆ.

"ಭಾರತೀಯ ಚಿತ್ರಕಲೆಯು ಪೂರ್ಣ ನಿರ್ದೋಷವೂ ಪಾಶ್ಚಾತ್ಯ ಚಿತ್ರಕಲೆಂ
ಸರ್ವತೋಪರಿದೋಷಯುಕ್ತವೂ" ಎಂದು ನಮ್ಮ ಅಭಿಪ್ರಾಯವಿಲ್ಲ. ಕಲೆಯು ಕಾ
ಶ್ರಿತವಿರುತ್ತದೆ. ಅದರ ಸುಧಾರಣೆ ಮಾಡುವ ಕೆಲಸವು ಕಾಲಾಧೀನವಾಗಿದೆ. ಈ

ಾವಿರ ವರ್ಷಗಳಲ್ಲಿ ಭಾರತೀಯ ಚಿತ್ರಕಲೆಯಲ್ಲಿ ಬಹಳೇ ಸುಧಾರಣೆ ಯಾಗಬೇಕಾ ಿತ್ತು. ಆದರೆ ಅದೇನೂ ಆಗಲಿಲ್ಲ. ಈ ತಪ್ಪಿಗೆ ಹೊಣೆಗಾರರು ನಾವೇ? ನಾವು ಅದರ ಡೆಗೆ ದುರ್ಲಕ್ಷ ಮಾಡಿದ್ದರಿಂದ ನಮಗೆ ಅದರ ವಿಸ್ಮೃತಿಯಾಗಿಹೋಯಿತು. ನಮ್ಮ ಪೂರ್ವಜರ ಕಲಾರೂಪಿಯಾದ ಭವ್ಯ ಪ್ರಾಸಾದವು ಅರ್ಧಮರ್ಧ ಮುರಿದು ಹೋದರೂ ನಾವು ಅತ್ತ ಲಕ್ಷ್ಯಕೊಡಲಿಲ್ಲ. ಇಷ್ಟೇ ಅಲ್ಲ, ಅದರಲ್ಲಿ ಆಗಾಗ್ಗೆ ಕಸತೆಗೆಯುವ ಕೆಲಸ ನ್ನು ಸಹ ನಾವು ಮಾಡಲಿಲ್ಲ. ಕೊನೆಗೆ ಪರಕೀಯ ಜನಾಂಗದ ಹಾಗು ಪರಕೀಯ ರಕಾರದ ಕರಳು ಕರಗಿ ಅವರು ಅದರ ಜೀರ್ಣೋದ್ಧಾರ ಮಾಡುವ ಕೆಲಸವನ್ನು ೈಕೊಡರು. ಅದನ್ನು ನೋಡಿ ಈಗೀಗ ನಮ್ಮೊಳಗಿನ ಕೆಲವರು ಜಾಗೃತರಾಗಹತ್ತಿ ್ದಾರೆ. ನಮ್ಮ ಕರ್ನಾಟಕದಲ್ಲಿ ಬಾದಾಮಿ ಬೇಲೂರು ಹಳೇಬೀಡುಗಳಲ್ಲಿ ಅಪ್ರತಿಮ ಾಶಲ್ಯದ ಕಟ್ಟಡಗಳಿವೆ. ಅವುಗಳ ಚಿತ್ರಗಳ ನಕಲುಗಳನ್ನು ಮಾಡಿಕೊಳ್ಳಲಿಕ್ಕೆ ಪರ ಕೀಯ ಚಿತ್ರಗಾರರು ಧಾವಿಸಿ ಬರುತ್ತಾರೆ. ಆದರೆ ಈ ಕೆಲಸವನ್ನು ಕೈ ಕೊಳ್ಳಲಿಕ್ಕೆ ಒಬ್ಬ ಕರ್ನಾಟಕೀಯ ಚಿತ್ರಗಾರನಾದರೂ ಮುಂದೆ ಬಂದದ್ದು ನಮಗಂತೂ ಗೊತ್ತಿಲ್ಲ. ಪರಕೀಯರ ಕಲೆಯಿಂದುಂಟಾದ ಮೋಹ ನಿದ್ರೆಯು ಭಾರತೀಯರ ಮೇಲೆ ಅದರಲ್ಲಿ ವಿಶೇಷತಃ ಕನ್ನಡಿಗರ ಮೇಲೆ ತನ್ನ ಅಧಿಕಾರವನ್ನು ಬಹಳೇ ನಡೆಯಿಸುತ್ತಲಿವೆ. ನಾವು ಪಿತೃ ಋಣವನ್ನು ತೀರಿಸುವದಂತೂ ದೂರ ಉಳಿಯಿತು. ಆದರೆ ನಮ್ಮವರಲ್ಲಿಯೇ ಕೆಲವರು ಆ ಕೆಲಸಕ್ಕೆ ಮುಂದೆ ಬಂದರೆ ಅದು ಸಹ ನಮಗೆ ಸೇರುವದಿಲ್ಲ. ನಾವು ಅವರನ್ನು ನೋಡಿ ನಗುತ್ತೇವೆ. ಅವರಿಗೆ ವ್ಯರ್ಥವಾಗಿ ಬಿರು ನುಡಿಗಳನ್ನು ಆಡುತ್ತೇವೆ. ಅವರ ಉತ್ಸಾಹಭಂಗ ಮಾಡುತ್ತೇವೆ. ಭಾರತೀಯರ ಅದರಲ್ಲಿ ವಿಶೇಷತಃ ಕನ್ನಡಿಗರ ಕಲೆಯ ವಿಷಯದ ಅನುತ್ಸಾಹವು ಇದೊಂದೇ ಸಂಗತಿಯಿಂದ ಗೊತ್ತಾಗುವಂತಿದೆ. ಆದುದರಿಂದ ಭಾರತೀಯರೇ ! ತದಂತರ್ಗತವಾದ ಕನ್ನಡಿಗರೇ ! ಏಳಿರಿ. ಇನ್ನಾದರೂ ನಮ್ಮ ಚಿತ್ರಕಲೆಯ ಉದ್ಧಾರಕ್ಕೆ " ಶ್ರೀಕೃಷ್ಣಾರ್ಪಣಮಸ್ತು " ಎಂದು ಸನ್ನದ್ಧರಾಗಿರಿ.

---

## ವ್ಹ. ಘಾ. ಪರೀಕ್ಷೆಯ ಪರಿಣಾಮವು

(೧೯೨೬)

### ಬೆಳಗಾಂವ ಸೆಂಟರ

| ನಂ. | ಹೆಸರು. | ಗುಣಗಳು |
|---|---|---|
| ೧ | ಅದ್ರಿಶಯ್ಯಾ ಅಯ್ಯಪ್ಪಯ್ಯಾ ಕಡ್ಡದೇವರಮಠ | ೪೦೮ |
| ೨ | ಲಕ್ಷ್ಮಣ ಭಾವು ಹಂಬೀರೆ | ೪೦೩ |
| ೩ | ಹರಿ ಕೃಷ್ಣ ಪಟವರ್ಧನ | ೩೯೩ |

| | | |
|---|---|---|
| ೪ | ರುದ್ರಪ್ಪಾ ಭೀಮಪ್ಪಾ ಖಿಪ್ಪಾರಿ | ೩೯೦ |
| ೫ | ಗುಂಡೋ ವಾಮನ ಶಿರೋಳಕರ | ೩೮೯ |
| ೬ | ಕೃಷ್ಣಾಜಿ ವೆಂಕಟೇಶ ಬಾಗೇವಾಡಿ | ೩೮೬ |
| ೭ | ಜಿನ್ನಾನು ಬಾಪು ಘಟಕಂಬಲೆ | ೩೮೫ |
| ೮ | ಶಿವನಗೌಡಾ ಬಸವಂತಪ್ಪಾ ಪರಕಪಾಟೀಲ | ೩೮೪ |
| ೯ | ವೆಂಕಟೇಶ ನರಸಿಂಹರಾವ ಕುಲಕರ್ಣಿ | ೩೮೩ |
| ೧೦ | ಧೋಂಡೊ ಎಶವಂತ ಸಡೇಕರ | ೩೮೨ |
| ೧೧ | ಮುಂಗೇಶ ರಾಮಚಂದ್ರ ನಾಡಗೌಡ | ೩೮೧ |
| ೧೨ | ಶಂಕರ ಖಂಡೋ ಕುಲಕರ್ಣಿ | ೩೬೮ |
| ೧೩ | ಕಾಮುಪ್ಪಾ ಸಿದ್ರಾಮಪ್ಪಾ ಪೊಲೀಸಪಾಟೀಲ | ೩೬೭ |
| ೧೪ | ಮಹದೇವ ಬಸವಾರ್ಯ ಶಿರೂರ | ೩೬೬ |
| ೧೫ | ಮಲ್ಲಪ್ಪಾ ಶಿವಪ್ಪಾ ಖೋತ | ೩೬೫ |
| ೧೬ | ಶಿವಪುತ್ರ ದೇಮಪ್ಪಾ ಇಂಚಲ | ೩೬೪ |
| ೧೭ | ಜಯದೇವ ಗೋವಿಂದ ಕುಲಕರ್ಣಿ | ೩೬೩ |
| ೧೮ | ಬಾಬಾಭಟ್ಟ ಗುರುನಾಥಭಟ್ಟ ಜೋಶಿ | ೩೬೨ |
| ೧೯ | ಕೇಶವ ಭೀಮಾಜಿ ಕುಲಕರ್ಣಿ | ೩೬೧ |
| ೨೦ | ನಾರಾಯಣ ಚಿಂತಾಮಣ ಜಾಯದೆ | ೩೬೦ |
| ೨೦ | ನಾರಾಯಣ ಮಲ್ಲಪ್ಪಾ ಪತ್ತಾರ | ೩೫೯ |
| ೨೦ | ಕೃಷ್ಣಾ ಜಿನ್ನಿನೋಬಾ ಕೋಷ್ಟಿ | ೩೫೮ |
| ೨೦ | ಭೀಮಾ ಬಾಬಾಜಿ ಹುನ್ನರಗೆ | ೩೫೭ |
| ೨೪ | ನಾಗಪ್ಪಾ ಭದ್ರಪ್ಪಾ ಬಾಗೇವಾಡಿ | ೩೫೬ |
| ೨೪ | ಮುದ್ದಪ್ಪಾ ಫಕ್ಕೀರಪ್ಪಾ ಸುಂಕದ | ೩೫೫ |
| ೨೬ | ಬಸವಣ್ಣಿ ಶಿವಬಸಪ್ಪಾ ಜಮಖಂಡಿ | ೩೫೪ |
| ೨೭ | ಹಂಬೀರ ಬಾಳಾಸಾಹೇಬ ದೇಸಾಯಿ | ೩೫೩ |
| ೨೮ | ಶಂಕರ ಗೋಪಾಳ ನಾಟೇಕರ | ೩೫೨ |
| ೨೯ | ನಾಗೇಶ ದೇವಾಜಿ ಕುಲಕರ್ಣಿ | ೩೫೧ |
| ೩೦ | ತಾತೋಬಾ ಬಾಬು ಹಿರೇಕುಡಿ | ೩೫೦ |
| ೩೦ | ಜನಾರ್ದನ ಕೃಷ್ಣ ನಾಕಾಡಿ | ೩೪೯ |
| ೩೦ | ರಾಮಚಂದ್ರ ಗುರುನಾಥರಾವ ಕುಲಕರ್ಣಿ | ೩೪೮ |
| ೩೧ | ಶಿವಬಸಯ್ಯಾ ಶಿದ್ದಯ್ಯಾ ಬಾಳೇಕುಂದ್ರಿ | ೩೪೭ |

| | | |
|---|---|---|
| ೩ | ಸತ್ಯಪ್ಪಾ ಕಲ್ಲಪ್ಪಾ ಉಗರೆ | ೩೪೩ |
| ೫ | ಭಗವಂತ ದತ್ತಾತ್ರಯ ದಾನಿ | ೩೪೨ |
| ೫ | ಭೀಮಾಜಿ ಶಂಕರ ಕುಲಕರ್ಣಿ | ೩೪೨ |
| ೫ | ಫಕ್ಕೀರ ಕಲ್ಲಪ್ಪಾ ಹೊಂಗಲ | ೩೪೨ |
| ೮ | ತಾತೋಬಾ ಗೋವಿಂದ ಮಾನೆ | ೩೪೧ |
| ೯ | ರಂಗಪ್ಪಾ ರಾಮಪ್ಪಾ ಕಮಲದಿನ್ನಿ | ೩೪೦ |
| ೧೦ | ಅಣ್ಣಪ್ಪಾ ಕೇಶವ ಚೌಗುಲೆ | ೩೩೯ |
| ೧೧ | ಅಬ್ದುಲ ವಲ್ಲದ ಹುಶೇನ ಬಾಗವಾನ | ೩೩೮ |
| ೧೨ | ರಾಮಚಂದ್ರ ಪರಶುರಾಮ ಬಾಗಿ | ೩೩೭ |
| ೧೩ | ಗಂಗಾಧರ ಗೋಪಾಳ ಸಾಮಂತ | ೩೩೭ |
| ೧೪ | ರುದ್ರಪ್ಪಾ ಚನಬಸಪ್ಪಾ ಹುದ್ದಾರಶೆಟ್ಟಿ | ೩೩೬ |
| ೧೫ | ವೆಂಕಟೇಶ ಬೋಧಾಚಾರ್ಯ ಕಟ್ಟಿ | ೩೩೫ |
| ೧೬ | ಸೀತಾರಾಮ ತಾಯಿ ಗಂಗಾ ಜೋಗತಿ | ೩೩೪ |
| ೧೭ | ಮಾನಗೌಡಾ ಗೌಡಪ್ಪಾ ಪರಕಪಾಟೀಲ | ೩೩೪ |
| ೧೮ | ತಮ್ಮಣ್ಣಾ ಹಣಮಪ್ಪಾ ಚನ್ನಾಳ | ೩೩೪ |
| ೧೯ | ವೆಂಕಟೇಶ ಬಳವಂತ ಕುಲಕರ್ಣಿ | ೩೩೪ |
| ೨೦ | ರಾಯಗೌಡಾ ಶಿದಗೌಡಾ ಪಾಟೀಲ | ೩೩೪ |
| ೨೧ | ಅಣ್ಣಾಜಿ ದತ್ತೋ ಕುಲಕರ್ಣಿ | ೩೩೩ |
| ೨೧ | ಬಾಬಾಚಾರ್ಯ ಕೃಷ್ಣಾಚಾರ್ಯ ಗಲಗಲಿ | ೩೩೩ |
| ೨೩ | ಸತ್ಯಪ್ಪಾ ಯಲ್ಲಪ್ಪಾ ಲಚಿಮನಾಯಿಕ | ೩೩೨ |
| ೨೩ | ಕೃಷ್ಣಾಜಿ ಗುರುನಾಥ ನಾಡಗೌಡ | ೩೩೨ |
| ೨೩ | ಬಂಡು ಶಾಮರಾವ ಕುಲಕರ್ಣಿ | ೩೩೨ |
| ೨೬ | ನೇಮಗೌಡಾ ದಾದಾಗೌಡಾ ಯಂಡಗೌಡರ | ೩೩೧ |
| ೨೭ | ಮಲ್ಲಪ್ಪಾ ಶಿವಬಸಪ್ಪಾ ಧೂಪದಾಳ | ೩೩೦ |
| ೨೮ | ಬಸಯ್ಯಾ ದುಂಡಯ್ಯಾ ಚರಂತಿ | ೩೨೮ |
| ೨೮ | ಬಾಳಕೃಷ್ಣ ವಾಮನ ಕುಲಕರ್ಣಿ | ೩೨೮ |
| ೩೦ | ಅಣ್ಣಾಜಿ ಗೋವಿಂದಾಚಾರ್ಯ ಶೂರ್ಪಾಲಿ | ೩೨೭ |
| ೩೧ | ಧೋಂಡೋ ವಿಠ್ಠಲ ಕುಲಕರ್ಣಿ | ೩೨೪ |
| ೩೧ | ಬಸಲಿಂಗ ಬಸವಂತಪ್ಪಾ ಕುಂಬಾರ | ೩೨೪ |
| ೩೩ | ಮಾರುತಿ ಜಕಪ್ಪಾ ಕಾಂಬಳೆ | ೩೨೩ |

| | | |
|---|---|---|
| ೬೩ | ರುದ್ರಗೌಡಾ ಬಸಪ್ಪಾ ಗೌಡರ | ೩೨೩ |
| ೬೩ | ಕೃಷ್ಣಾಜಿ ಶಂಕರ ಕುಲಕರ್ಣಿ | ೩೨೩ |
| ೬೬ | ರಾಮಗೌಡಾ ಮಲಗೌಡಾ ಪಾಟೀಲ | ೩೨೨ |
| ೬೬ | ನರಶಿಂಗ ಲಕ್ಷ್ಮಣ ಮಾಳಿ | ೩೨೨ |
| ೬೬ | ಸತ್ವೀರಪ್ಪಾ ಶಿವರುದ್ರಪ್ಪಾ ನೀಲಿಶೆಟ್ಟಿ | ೩೨೨ |
| ೬೬ | ದತ್ತಾತ್ರಯ ನಾರಾಯಣ ಇನಾಮದಾರ | ೩೨೨ |
| ೭೦ | ರಾಮಚಂದ್ರ ಮಧ್ವಾಚಾರ್ಯ ಹುಕ್ಕೇರಿ | ೩೨೧ |
| ೭೦ | ಲಕ್ಷ್ಮಣ ರಾಮಚಂದ್ರ ಪಾಟೀಲ | ೩೨೧ |
| ೭೨ | ದೇವಪ್ಪಾ ಬಲಿಗೆಪ್ಪಾ ಕುರಬರ | ೩೨೦ |
| ೭೨ | ರಾಮು ಸತ್ಯವಾ ಭವಾನಿ | ೩೨೦ |
| ೭೪ | ಶಂಕರ ಸೀತಾರಾಮ ಚಾಂಬಾರ | ೩೨೦ |
| ೭೫ | ನಾರಾಯಣ ರಘುನಾಥ ಕುಲಕರ್ಣಿ | ೩೧೯ |
| ೭೫ | ಬಾಬು ದಿನಕರ ಖರಡೆ | ೩೧೯ |
| ೭೫ | ನಾಗಪ್ಪಾ ಗುರುಸಿದ್ದಪ್ಪಾ ಬದ್ರಿ | ೩೧೯ |
| ೭೮ | ಸಂತು ಅಂಬಾಜಿ ಸಮಗಾರ | ೩೧೮ |
| ೭೮ | ಮಹಿಪತ ಪಾಂಡುರಂಗ ಕುಲಕರ್ಣಿ | ೩೧೮ |
| ೭೮ | ಮಲ್ಹಾರ ಅಪ್ಪಾಜಿ ಮುಂಗಲೆ | ೩೧೮ |
| ೭೮ | ಶಟ್ಟಿ ಲಕ್ಷ್ಮಣ ಪಾಟೀಲ | ೩೧೮ |
| ೭೮ | ನಾರಾಯಣ ಕೃಷ್ಣಪ್ಪಾ ಕುದಳೆ | ೩೧೮ |
| ೮೩ | ಮಲ್ಲಪ್ಪಾ ಅಪ್ಪಣ್ಣಾ ಕಿಲೇದಾರ | ೩೧೬ |
| ೮೩ | ನಾರಾಯಣ ರಾಮಚಂದ್ರ ಕುಲಕರ್ಣಿ | ೩೧೬ |
| ೮೩ | ಬಾಳಪ್ಪಾ ಸತ್ಯಪ್ಪಾ ಬಸ್ತವಾಡ | ೩೧೬ |
| ೮೬ | ರಾಮಚಂದ್ರ ಶ್ರೀನಿವಾಸ ಸರಾಫ | ೩೧೫ |
| ೮೬ | ಧನಪಾಲ ದಾದಾ ಬಡಬಡೆ | ೩೧೫ |
| ೮೬ | ಸಂತು ಯಲ್ಲಪ್ಪಾ ಪೊವಾರ | ೩೧೫ |
| ೮೬ | ಕೃಷ ಪ್ಪಾ ವೆಂಕಪ್ಪಾ ಬಡಕಲ | ೩೧೫ |
| ೯೦ | ಅನಂತ ಹರಿ ನಾಡಗೌಡ | ೩೧೪ |
| ೯೦ | ಬಳವಂತ ಕೃಷ್ಣಾಜಿ ದೇಶಪಾಂಡೆ | ೩೧೪ |
| ೯೦ | ದತ್ತಾತ್ರಯ ವಿಷ್ಣುಪಂತ ಘಡನೀಸ | ೩೧೪ |
| ೯೦ | ರುದ್ರಪ್ಪಾ ಶಂಕರಪ್ಪಾ ಡೊಂಕಿ | ೩೧೪ |

| | | |
|---|---|---|
| ೯೪ | ರದ್ರುಪ್ಪಾ ಶಿವಪ್ಪಾ ಬಾನಿ | ೩೧೩ |
| ೯೫ | ಅಪ್ಪಾ ದಾಜಿ ಪಾಟೀಲ | ೩೧೨ |
| ೯೫ | ಸಾತಪ್ಪಾ ಲಕ್ಷ್ಮಣ ನಾಡಿಗ | ೩೧೨ |
| ೯೫ | ಬಾಪೂರಾವ ಭೀಮಾಜಿ ಘೋರಪಡೆ | ೩೧೨ |
| ೯೫ | ಮಹದೇವ ಶಾಮರಾವ ಕುಲಕರ್ಣಿ | ೩೧೨ |
| ೯೯ | ಮಲ್ಲಪ್ಪಾ ಭೀಮಪ್ಪಾ ಅನೂರೆ | ೩೧೧ |
| ೯೯ | ಮಲ್ಲಪ್ಪಾ ರಾಯಪ್ಪಾ ಕುರುಬ | ೩೧೧ |
| ೧೦೧ | ಅನಂತ ಲಕ್ಷ್ಮಣ ದೇಶಪಾಂಡೆ | ೩೧೦ |
| ೧೦೧ | ಬಳವಂತ ಯಶವಂತ ಪಾಟೀಲ | ೩೧೦ |
| ೧೦೧ | ಫಕ್ಕೀರಗೌಡಾ ಬಸನಗೌಡಾ ಹೂಲಿ | ೩೧೦ |
| ೧೦೧ | ಕೃಷ್ಣಾಜಿ ಗೋವಿಂದ ಕುಲಕರ್ಣಿ | ೩೧೦ |
| ೧೦೫ | ಚನಮಲ್ಲಪ್ಪಾ ಕಾಡಪ್ಪಾ ಪಾಟೀಲ | ೩೦೯ |
| ೧೦೫ | ಕಲ್ಲಪ್ಪಾ ರಾಮಾ ಖೋತ | ೩೦೯ |
| ೧೦೫ | ಸುಭಾನ ಚಾಳು ಪಾಟೀಲ | ೩೦೯ |
| ೧೦೮ | ನಾರಾಯಣ ಕೃಷ್ಣ ದೇಶಪಾಂಡೆ | ೩೦೮ |
| ೧೦೮ | ಗಣಪತಿ ಭರಮಗೌಡಾ ಪಾಟೀಲ | ೩೦೮ |
| ೧೧೦ | ವಿರಭದ್ರ ರಾಮಚಂದ್ರ ಸಾಬಣ್ಣವರ | ೩೦೭ |
| ೧೧೦ | ಭೂಪಾಲ ಕಲ್ಲಪ್ಪಾ ವಣಕುದ್ರಿ | ೩೦೭ |
| ೧೧೦ | ಭೀಮಪ್ಪಾ ನಿಂಗಪ್ಪಾ ಪಾಟೀಲ | ೩೦೭ |
| ೧೧೩ | ಕಲ್ಲು ರಾಮಾ ದಿಗಾರೆ | ೩೦೬ |
| ೧೧೩ | ಕೇದಾರಿ ಭಾಗಣ್ಣಾ ಗೋಡಶೆ | ೩೦೬ |
| ೧೧೩ | ಭೀಮಾಜಿ ವಿಠ್ಠಲ ಕುಲಕರ್ಣಿ | ೩೦೬ |
| ೧೧೩ | ಬಾಜು ರಾಮಚಂದ್ರ ಜೋಶಿ | ೩೦೬ |
| ೧೧೩ | ಶಿದ್ದಗೌಡಾ ಚನ್ನಗೌಡಾ ಕುಮಠಳ್ಳಿ | ೩೦೬ |
| ೧೧೫ | ಮೀರಾ ಹುಸೇನ ಅತ್ತಾರ | ೩೦೫ |
| ೧೧೫ | ಕಾಶೀನಾಥ ಹಣಮಂತರಾವ ಕಲಕೊಣ್ಣೂರ | ೩೦೫ |
| ೧೧೫ | ರಾಮಚಂದ್ರ ಸ್ವಾಮಿರಾವ ಕುಲಕರ್ಣಿ | ೩೦೫ |
| ೧೧೫ | ರಾಮಾ ಪರಶುರಾಮ ಚೌಗುಲೆ | ೩೦೫ |
| ೧೧೫ | ಅಡಿವೆಪ್ಪಾ ಶೆಟ್ಟೆಪ್ಪಾ ಕುಲ್ಲೂರ | ೩೦೫ |
| ೧೧೮ | ಸಯ್ಯದಸಾಹೇಬ ಹಸನಸಾಹೇಬ ಮುಲ್ಲಾ | ೩೦೫ |
| ೧೨೪ | ಮಾರುತಿ ಲೋಕಣ್ಣಾ ಬುಡಕೆ | ೩೦೪ |

| | | |
|---|---|---|
| ೧೨೪ | ಮಲ್ಲಯ್ಯಾ ಮಹರುದ್ರಯ್ಯಾ ಹಿರೇಮಠ | ೩೦೧ |
| ೧೨೪ | ಬಸಯ್ಯಾ ಸಿದ್ದಯ್ಯಾ ಪೂಜಾರಿ | ೩೦೧ |
| ೧೨೪ | ವೆಂಕಟೇಶ ರಾಮಚಂದ್ರ ಗುಡಿ | ೩೦೧ |
| ೧೨೮ | ರತ್ನಪ್ಪಾ ಗುಂಡಪ್ಪಾ ಮಾಣಕಾಪುರೆ | ೩೦೨ |
| ೧೨೮ | ನಾಗಪ್ಪಾ ಸಂಗಪ್ಪಾ ಮುಡಶಿ | ೩೦೨ |
| ೧೨೮ | ಪತ್ರೆಪ್ಪಾ ಸೋಮಲಿಂಗಪ್ಪಾ ಮಾಲದ | ೩೦೨ |
| ೧೨೮ | ಬಸಗೌಡಾ ಸಾತಗೌಡಾ ನರಪಗೌಡರ | ೩೦೩ |
| ೧೩೨ | ಕಾಸಿಮ ಇಬ್ರಾಹಿಮ ಪಠಾಣ | ೩೦೩ |
| ೧೩೩ | ವಿರಭದ್ರಯ್ಯಾ ಶಿವರುದ್ರಯ್ಯಾ ಕಬ್ಬೂರ | ೩೦೧ |
| ೧೩೩ | ರಾವಳನಾಥ ವಾಸುದೇವ ಹವಾಲದಾರ | ೩೦೧ |
| ೧೩೩ | ಕಲ್ಲಪ್ಪಾ ಸ್ವಾಮಿ ಗವಡಾ | ೩೦೧ |
| ೧೩೩ | ಗಣಪತಿ ಪುಂಡಲೀಕ ನ್ಯಾಪಸೇಕರ | ೩೦೧ |
| ೧೩೩ | ಕೃಷ್ಣಾಜಿ ನರಸಿಂಹ ಕುಲಕರ್ಣಿ | ೩೦೧ |
| ೧೩೮ | ರಾಜಾರಾಮ ಕಲ್ಲಪ್ಪಾ ಮಾಳವದೆ | ೩೦೦ |
| ೧೩೯ | ರಾಚಯ್ಯಾ ಗುರುಶಿದ್ದಯ್ಯಾ ಪಾರಶವಾಡ | ೨೯೯ |
| ೧೩೯ | ಬಾಳು ಶಿವರಾಯಿ ಕುರಬರ | ೨೯೯ |
| ೧೩೯ | ಬಾಬು ತೀರ್ಥಭಟ್ಟ್ರ ರಾಮತೀರ್ಥ | ೨೯೯ |
| ೧೪೨ | ಬಾಪು ಅನಂತ ಅಲ್ತೇಕರ | ೨೯೮ |
| ೧೪೨ | ಜನ್ನಾನು ಧೋಂಡೀಬಾ ಪಾಟೇಲ | ೨೯೮ |
| ೧೪೨ | ಭರಮಾ ತಾಯಿ ಸಿದ್ಪವ್ವಾ ಘಂಟೇಕಾರ | ೨೯೮ |
| ೧೪೫ | ಅಚ್ಚುತ ಕೃಷ್ಣಾಜಿ ಮರಾಠೆ | ೨೯೭ |
| ೧೪೫ | ದತ್ತಾತ್ರಯ ಸಾತಬಾ ಜಿಧವ | ೨೯೭ |
| ೧೪೭ | ಕೃಷ್ಣಾಜಿ ಲಕ್ಷ್ಮಣ ಜೋಶಿ | ೨೯೬ |
| ೧೪೭ | ಇರಸಂಗಪ್ಪಾ ಶಿವಲಿಂಗಪ್ಪಾ ಮಾಸ್ತೆ | ೨೯೬ |
| ೧೪೯ | ಭಗವಂತ ರಾಮರಾವ ಇನಾಮದಾರ | ೨೯೫ |
| ೧೪೯ | ಗಂಗಪ್ಪಾ ಬಾಳಪ್ಪಾ ಕುಂಬಾರ | ೨೯೫ |
| ೧೫೧ | ಆದಗೌಂಡಾ ಸಾತಗೌಂಡಾ ಪಾಟೇಲ | ೨೯೪ |
| ೧೫೧ | ಮಲ್ಲೇಶ ಮರೆಪ್ಪಾ ಉಂಡಿ | ೨೯೪ |
| ೧೫೩ | ಭಿಮಾ ಪರಸು ಮಾಂಗ | ೨೯೩ |
| ೧೫೩ | ರುದ್ರಪ್ಪಾ ಶಿವರುದ್ರಪ್ಪಾ ಕಿತ್ತೂರ | ೨೯೩ |

| | | |
|---|---|---|
| ೫೫ | ಭೀಮಾಚಾರ್ಯ ರಾಮಾಚಾರ್ಯ ಮಠದ | ೨೯೨ |
| ೫೫ | ಗಂಗಪ್ಪಾ ಫಕೀರಪ್ಪಾ ದಳವಾಯಿ | ೨೯೨ |
| ೫೫ | ಮಾರುತಿ ತುಕಾರಾಮ ಸದಾವರ್ತೆ | ೨೯೨ |
| ೫೫ | ರಾಮಚಂದ್ರ ಕೇಶವ ಪತ್ತಾರ | ೨೯೨ |
| ೫೫ | ದೀನಾನಾಥ ದತ್ತಾತ್ರಯ ಕೇಕರಿ | ೨೯೨ |
| ೬೦ | ಶ್ರೀಪಾದ ವಿನಾಯಕ ಕೋಟಭಾಸ್ಕರ | ೨೯೧ |
| ೬೦ | ರಮಜಾನ ಮಹಿಬೂಬ ನಾಲಬಂದ | ೨೯೧ |
| ೬೦ | ನರಹರ ಗುಂಡೋ ದೇಶಪಾಂಡೆ | ೨೯೧ |
| ೬೨ | ಭರಮಣ್ಣಾ ವೆಂಕಪ್ಪಾ ಪಾಟೀಲ | ೨೯೦ |
| ೬೪ | ಅಲ್ಲಯ್ಯಾ ಸಿದರಾಮಯ್ಯಾ ಭಂಡಾರಿ | ೨೮೯ |
| ೬೫ | ಆಬಾಜಿ ರಾವಜಿ ಕುಲಕರ್ಣಿ | ೨೮೮ |
| ೬೫ | ಸಂಗಪ್ಪಾ ಮಲ್ಲಪ್ಪಾ ಫಿವರಿ | ೨೮೮ |
| ೬೫ | ಬಾಬು ನಿಂಗಪ್ಪಾ ನಿಸಣಗೆ | ೨೮೮ |
| ೬೫ | ಕಲ್ಲಪ್ಪಾ ರಾಯಪ್ಪಾ ಜೈನರ | ೨೮೮ |
| ೬೬ | ರುದ್ರೋ ಬಾಬುರಾವ ನಾಯಿಕ | ೨೮೭ |
| ೬೬ | ವಸಂತ ಗಂಗಾಧರ ಬೋಂದ್ರೆ | ೨೮೭ |
| ೬೬ | ಪಾಂಡುರಂಗ ಶಿವರಾಮ ಕಾಜರೇಕರ | ೨೮೭ |
| ೬೭ | ಬಾಳಾಜಿ ರಾಮಚಂದ್ರ ಕುಲಕರ್ಣಿ | ೨೮೬ |
| ೬೭ | ಬಂಡು ನಾರಾಯಣ ಪುರಿಬೊವಾ | ೨೮೬ |
| ೬೮ | ಧರ್ಣೇಂದ್ರ ಮಲ್ಲಪ್ಪಾ ಕಬ್ಬಿಣ | ೨೮೫ |
| ೬೮ | ವೆಂಕಣಭಟ್ಟ ಬಾಳಂಭಟ್ಟ ಜೋಶಿ | ೨೮೫ |
| ೬೮ | ವಿರುಪಾಕ್ಷ ತಾತೇರಾವ ದೇಶಪಾಂಡೆ | ೨೮೫ |
| ೬೮ | ಶಂಕರ ಸಖಾರಾಮ ಭಿಡೆ | ೨೮೫ |
| ೬೮ | ವಿನಾಯಕ ಮಹದೇವ ಹೇರವಾಡಕರ | ೨೮೫ |
| ೬೯ | ಸೋಮಲಿಂಗ ವಿರಸಂಗಪ್ಪಾ ವಾಲಿ | ೨೮೪ |
| ೭೦ | ರಾಮಚಂದ್ರ ಗುರುನಾಥ ನಾಡಗೌಡ | ೨೮೩ |
| ೭೦ | ಅಬ್ದುಲ ಬಾಪು ಪಟಾಯಿತ | ೨೮೩ |
| ೭೨ | ಶಂಬಾಜಿ ವಿಷ್ಣುರಾವ ಜಾಂಬೋಟಕರ | ೨೮೨ |
| ೭೨ | ಸಿವಪ್ಪಾ ನಾಗಪ್ಪಾ ಕರಿಪಾಳೆ | ೨೮೨ |
| ೭೪ | ಗಜಾನನ ವಿಷ್ಣು ಆಜರೇಕರ | ೨೮೧ |
| ೭೫ | ಶಿವಲಿಂಗಪ್ಪಾ ಮಹರುದ್ರಪ್ಪಾ ಸುಳೇದಾರ | ೨೮೦ |

| | | |
|---|---|---|
| ೧೪೫ | ಅಪ್ಪಾಸಾಹೇಬ ಬಾಳಾಸಾಹೇಬ ಇನಾಮದಾರ | ೨ |
| ೧೪೫ | ಗುರುಲಿಂಗಯ್ಯಾ ಸಿದ್ರಾಮಯ್ಯಾ ಬೆಳ್ಳಂಕಿಮಠ | ೨ |
| ೧೪೪ | ಶಿವರಾಮ ಕೃಷ್ಣ ಕುಲಕರ್ಣಿ | ೨ |
| ೧೪೪ | ಜಯರಾಮ ರಾಣಾಜಿ ಪಾಟೀಲ | ೨ |
| ೧೪೪ | ತಾತ್ಯಾ ಅಪ್ಪಾ ಖೋತ | ೨ |
| ೧೪೪ | ಪಂಡಿತ ಭೀಮಾಜಿ ಕುಲಕರ್ಣಿ | ೨ |
| ೧೯೨ | ಗಣಪತಿ ಭರಮಣ್ಣಾ ಬಾಸ್ಕಲ | ೨ |
| ೧೯೨ | ಹಸನಸಾಹೇಬ ಲಾಲಸಾಹೇಬ ಕದರವಾಡಿ | ೨ |
| ೧೯೨ | ನಬಿ ಹಸನ ಮುಲ್ಲಾನಿ | ೨ |
| ೧೯೫ | ನಿಂಗಪ್ಪ ಚಿನ್ನಪ್ಪ ಪೂಜೇರಿ | ೨ |
| ೧೯೫ | ರಾಮಚಂದ್ರ ಆಬಾಜಿ ಸಾವಂತ | ೨ |
| ೧೯೫ | ಯಲ್ಲಪ್ಪ ವೆಂಕಪ್ಪ ತೊರಗಲ್ಲ | ೨ |

(ಅಪೂರ್ಣ)

---

# ಪ್ರಕಟನೆ.

## ಉರ್ದು ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು.
## ದಕ್ಷಿಣಭಾ

ನಂ 62-B-4833

ಸನ್ ೧೯೨೬ನೇ ಇಸವಿಯಲ್ಲಿ ಆಗತಕ್ಕ ಉರ್ದು ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ಸಲುವಾಗಿ ಕೆಳಗೆ ಬರೆದಂತೆ ಗದ್ಯ-ಪದ್ಯಪಾಠಗಳನ್ನು ನೇಮಿಸಿರುತ್ತದೆ.

೧ನೇ ಸದರ—ಉರ್ದು

(ಅ) ಗದ್ಯ:—ಸೈಯ್ಯದ ಅಹಮ್ಮದ ಅಶರಫ ಅಶರಫಿ ಕೃತ "ಸರವರಿಯಾ-ಎ-ಉರ್ದು" ಪುಸ್ತಕದೊಳಗಿನ (೧೯೨೩ನೇ ಇ-ಆವೃತ್ತಿ) ೧, ೨, ೩, ೪, ೫, ೬, ೭, ೧೦, ೧೪, ೧೫ನೇ ಪಾಠಗಳು.

(ಬ) ಪದ್ಯ:—ಸದರ ಪುಸ್ತಕದೊಳಗಿನ ೨೦, ೨೧, ೨೨, ೨೭, ೨೮, ೩೦ನೇ ಪಾಠಗಳು

Sd/. K. G. Pundlik
ಅಕ್ಟಿಂಗ ಎ-ಇ-ದ-ಭಾ-ಧಾರವಾಡ

---

# ಪತ್ರಗಳ ಸಾರಾಂಶ.

——o——

**ಅನಿಗೋಳ** ( ಜಿ. ಬೆಳಗಾಂವ ):— ಈ ಊರ ಶಾಲೆಯಲ್ಲಿ ಶ್ರೀ. ಬ್ರಹ್ಮ ನಾಯಿಕ ಪಾಟೀಲ ತಾ. ಲೋ. ಬೋ. ವ್ಹಾ. ಪ್ರೆಸಿಡೆಂಟ ಇವರ ಅಧ್ಯಕ್ಷತೆಯ ಕೆಳಗೆ ಇನಾಮಿನ ಸಮಾರಂಭವಾಯಿತು. ಆ ಕಾಲಕ್ಕೆ ಅಧ್ಯಕ್ಷರು ಸಾಲೆಗೆ ಹಂಚುಹೊಚ್ಚು ವದಕ್ಕಾಗಿ ೧೦ ರೂ ಗಳನ್ನೂ ಶಾಲಾಪಂಚರು ಮಿಠಾಯಿ ಹಂಚುವದಕ್ಕಾಗಿ ೨ ರೂ. ಗಳನ್ನೂ ಕೊಟ್ಟರೆಂದು ಹೆ. ಮಾ. ವಕ್ಕುಂದ ಇವರು ತಿಳಿಸುತ್ತಾರೆ.

**ಗುಂಡೂರ** (ತಾ॥ ಬಂಕಾಪೂರ):— ಮಲ್ಲೇಶಪ್ಪಾ ಕುಂಬಾರ ಎಂಬವರು ತಿಳಿಸುವದೇನಂದರೆ — ಈ ಊರ ಸಾಲೆಯು ಬಹಳ ಹೀನಸ್ಥಿತಿಯಲ್ಲಿತ್ತು. ಈ ಸಾಲೆಯನ್ನು ತೆಗೆಯಬೇಕೆಂದು ಸರಕಾರದವರು ವಿಚಾರಿಸಿದ್ದರು. ಇಂಥ ಸ್ಥಿತಿಯಲ್ಲಿ ಇಂಗಳಿಗಿ ಎಂಬ ಮಾಸ್ತರರು ಊರಜನರ ಸಹಾಯದಿಂದ ಹುಡುಗರ ಸಂಖ್ಯೆಯನ್ನು ಬೆಳಿಸಿ ಸಾಲೆಯನ್ನು ಉತ್ತಮಸ್ಥಿತಿಗೆ ತಂದರು. ಈ ಊರ ಸಭ್ಯಗೃಹಸ್ಥರು ಸಾಲೆಯ ಉಪಯೋಗಕ್ಕಾಗಿ ೧೮ ರೂ. ಬೆಲೆಯುಳ್ಳ ಒಂದು ಗಡಿಯಾರವನ್ನು ಕೊಟ್ಟಿರುವರು.

**ತಳಕವಾಡ** ( ತಾ॥ ಬದಾಮಿ ):—ಅಡಿವೆಪ್ಪಾ ಕುಂಬಾರ ಎಂಬ ಮಾಸ್ತರರು ಈ ಊರ ಸಾಲೆಗೆ ಬಂದಾಗಿನಿಂದ ಸಾಲೆಯು ಊರ್ಜಿತಸ್ಥಿತಿಯನ್ನು ಹೊಂದಹತ್ತಿದೆ. ೩೦ ಹುಡುಗರಿದ್ದ ಸಾಲೆಯಲ್ಲಿ ಈಗ ೬೪ ಹುಡುಗರಾಗಿ ಒಂದು ಅಸಿ. ಸ್ಥಳವು ಹೆಚ್ಚಾಗಿದೆ ಎಂಬದಾಗಿ ಭರಮಗೌಡಾ ಪೋಲೀಸ ಪಾಟೀಲ ಎಂಬ ಸ್ಕೂಲ ಪಂಚರು ಬರೆಯುತ್ತಾರೆ.

**ಗಳತಗಿ** (ತಾ॥ ಚಿಕ್ಕೋಡಿ):—ಇಲ್ಲಿಯ ಕ. ಗ. ಹು. ಶಾಲೆಯಲ್ಲಿ, ಶಾಲೆಗಿದ್ದ ಕೊರತೆಗಳನ್ನು ದೂರಮಾಡುವ ಉದ್ದೇಶದಿಂದ ಸಭೆಯು ನೆರೆದಿತ್ತು. ಆ ಕಾಲಕ್ಕೆ ಮಲಗೌಡಾ ಪೋಲೀಸ ಪಾಟೀಲ ಇವರು ಒಂದು ಜಾಗುಟಿಯನ್ನೂ ಶ್ರೀ. ಅಣ್ಣಪ್ಪಾ ಚೌಲಗೆ ಎಂಬವರು ಒಂದು ಗಡಿಯಾರವನ್ನೂ ಕೊಡಲು ಅಭಿವಚನ ಕೊಟ್ಟರು; ಮತ್ತು ವ್ಹ. ಫಾ. ಪರೀಕ್ಷೆಯನ್ನು ಪಾಸಾಗಿ ಈ ಊರ ಶಾಲೆಯಲ್ಲಿ ಮೊದಲನೇ ನಂಬರು ಪಡೆದ ವಿದ್ಯಾರ್ಥಿಗೆ ತಮ್ಮ ಹಯಾತಿಯವರೆಗೆ ೧೦ ರೂ. ಇನಾಮು ಕೊಡುತ್ತೇವೆಂದು ಬಾಳಾಜಿ ಗೋವಿಂದರಾವ ಖೋತ ಎಂಬವರು ಆಶ್ವಾಸನ ಕೊಟ್ಟರು. ಎಂಬದಾಗಿ ಗಿನೇ ಅಸಿ॥ ಬುರ್ಗೆ ಎಂಬವರು ತಿಳಿಸುತ್ತಾರೆ.

**ಕೋಟುಮಚಿಗಿ** (ತಾ॥ ಗದಗ):— ಇಲ್ಲಿಯ ಹೆ॥ ಮಾ॥ ಬ. ಕ. ಪಾಟೀಲ ಎಂಬವರು ಬರೆಯುವದೇನಂದರೆ— ಸ್ಕೂಲ ಪಂಚರಾದ ವೀರಪ್ಪಾ ಅಣ್ಣಾ ಸವದಿ ಇವರು ೨೨ ರೂ. ಹಾಗು ಉಳಿದ ಸ್ಕೂಲ ಪಂಚರೂ ಸಭ್ಯ ಗೃಹಸ್ಥರೂ ಕೂಡಿ ೩೩ ರೂ. ವರ್ಗಣೀ ಕೊಟ್ಟು ಸಾಲೆಯ ಉಪಯೋಗಕ್ಕಾಗಿ ಒಂದು ಗಡಿಯಾರವನು, ತರಿಸಿ

**ಖಾನಾಪೂರ ಗಂಗಾಪೂರ** (ಜಿ. ಧಾರವಾಡ):— ವಾರ, ಮಳೆಯ ನಕ್ಷತ್ರ ಮುಂತಾದವುಗಳಿಗೆ ಆಯಾ ಹೆಸರು ಬರಲಿಕ್ಕೆ ಜ್ಯೋತಿಷ ಶಾಸ್ತ್ರದಲ್ಲಿ ಹೇಗೆ ಕಾರಣಗಳುಂಟೋ ಹಾಗೆ ೬೦ ಸಂವತ್ಸರಗಳಿಗೆ ಆಯಾ ಹೆಸರುಗಳು ಬರಲಿಕ್ಕೆ ಏನಾದರೂ ಕಾರಣಗಳಿದ್ದರೆ ಸೋಪಪತ್ತಿಕವಾಗಿ ತಿಳಿಸಬೇಕೆಂದು ಹೆ॥ ಮೂ॥ ಉಗಲಾಟ ಇವರು ಬರೆಯುತ್ತಾರೆ.

**ಕಾಲವಾಡ** (ತಾ॥ ನವಲಗುಂದ):— ಕಲ್ಲಪ್ಪ ಸಾಸ್ವಿಹಳ್ಳಿ ಎಂಬವರು ತಿಳಿಸುವದೇನಂದರೆ— ಇಲ್ಲಿಗೆ ಚಂ. ಭ. ಆಡಕಾವ ಎಂಬ ಮೂಸ್ತರರು ಬಂದಾಗಿನಿಂದ ಹುಡುಗರ ಸಂಖ್ಯೆಯು ೬೨ ರಿಂದ ೧೦೦ ವರೆಗೆ ಬೆಳೆದದೆ. ಈ ವರ್ಷ ವ್ಹ. ಪಾ. ಪರೀಕ್ಷೆಗೆ ಹೋದ ೩ ವಿದ್ಯಾರ್ಥಿಗಳಲ್ಲಿ ಇಬ್ಬರು ಪಾಸಾಗಿರುವರು.

**ಚಾಕಲಬ್ಬಿ**:— (ತಾ॥ ಹುಬ್ಬಳ್ಳಿ):—ಈ ಊರ ಸಾಲೆಯ ಇನಾಮಿನ ಸಮಾರಂಭವು ಮೆ॥ ಹೆಗಡೆ ಮಾಮಲೇದಾರ ಸಾ॥ ರವರ ಅಧ್ಯಕ್ಷತೆಯ ಕೆಳಗೆ ನೆರವೇರಿತು. ಆ ಕಾಲಕ್ಕೆ ಹೆ. ಮೂ. ಬಡೆಪ್ಪನವರ ಇವರು ಓದಿದ ರಿಪೋರ್ಟಿನ ಅಭಿಪ್ರಾಯವೆನಂದರೆ— ನಾನು ಬಂದಾಗ ಈ ಸಾಲೆಯಲ್ಲಿ ೩೫ ಹುಡುಗರು ಇದ್ದರು. ಈಗ ೯೦ ಹು. ಆಗಿರುವರು ಮತ್ತು ಒನೇ ಇಯತ್ತೆಯವರಿಗೆ ಕ್ಲಾಸುಗಳವೆ. ಹಣದ ಕೊರತೆಯ ಮೂಲಕ ಸರಕಾರದವರು ಅಸಿ॥ ರನ್ನು ಕೊಟ್ಟಿಲ್ಲ. ಆದರೆ ಊರವರು ೬ತಿಂಗಳ ಮಟ್ಟಿಗೆ ತಮ್ಮ ಖರ್ಚಿನಿಂದ ಒಬ್ಬ ಅಸಿ॥ ನನ್ನು ಕೊಟ್ಟಿರುವರು ಶಾಲಾಖಾತೆಯು ಹಾಗೂ ಮುಲ್ಕೀ ಖಾತೆಯ ಅಧಿಕಾರಿಗಳು ಸಾಲೆಯ ಸುಸ್ಥಿತಿಯನ್ನು ನೋಡಿ ಶರಾ ಪುಸ್ತಕದಲ್ಲಿ ತಮ್ಮ ಉತ್ತಮವಾದ ಅಭಿಪ್ರಾಯವನ್ನು ಬರೆದಿರುವರು. ಅಭ್ಯಾಸ ಮಾನದಿಂದ ಸಾಲೆಯ ಸುಧಾರಣೆಯಾಗಿರುವದಲ್ಲದೆ ಎಲ್ಲ ಹುಡುಗರು ನೀತಿವಂತರೂ ಸಶಕ್ತರೂ ಆಗಿರುವರು.

ಬಳಿಕ ಅಧ್ಯಕ್ಷರು ಊರ ಜನರನ್ನು ಕುರಿತು:—ಇಂಥ ಕರ್ತವ್ಯದಕ್ಷ ಮಾಸ್ತರಿಗೆ ಸಹಾಯ ಮಾಡಿ ನಿಮ್ಮ ಮಕ್ಕಳ ಹಿತವನ್ನು ಸಾಧಿಸಿಕೊಳ್ಳಬೇಕೆಂಬ ಅಭಿಪ್ರಾಯದ ಭಾಷಣ ಮಾಡಿದರು; ಮತ್ತು ವಿದ್ಯಾರ್ಥಿಗಳಿಗೆ ವ್ಯಾಯಾಮದ ಮಹತ್ವದ ಬಗ್ಗೆ ಉಪದೇಶ ಮಾಡಿ ಪಾಸಾದ ವಿದ್ಯಾರ್ಥಿಗಳಿಗೆ ಇನಾಮುಗಳನ್ನೂ ಎಲ್ಲ ವಿದ್ಯಾರ್ಥಿಗಳಿಗೆ ಮಿಠಾಯಿಯನ್ನೂ ಹಂಚಿದರು. ಎಂಬದಾಗಿ ವಾಚನಾಲಯದ ಸೆಕ್ರೆಟರಿಗಳಾದ ಕೊಂಡೀಕೊಪ್ಪ ಎಂಬವರು ತಿಳಿಸುತ್ತಾರೆ.

**ಹೊಳಿನಾಗಲಾಪೂರ** (ಜಿ. ಬೆಳಗಾಂವ):—ಇಲ್ಲಿಯ ಸ್ಕೂಲ ಪಂಚರು ಬರೆಯುವದೇನಂದರೆ—ನಮ್ಮ ಊರ ಜನಸಂಖ್ಯೆಯು ೬೭೬ ಇದ್ದು ಅದರಲ್ಲಿ ಕುರುಬರ ಸಂಖ್ಯೆಯೇ ಹೆಚ್ಚಾಗಿರುವದು. ಇಂಥ ಹೀನಾವಸ್ಥೆಯಲ್ಲಿದ್ದ ಊರು, ಲಿಂ. ಫ ಕುಂಕೂರ ಎಂಬ ಮಾಸ್ತರರಿಂದ ಒಳ್ಳೇ ಸುಧಾರಣೆಯನ್ನು ಹೊಂದಿರುವದು. ಇವರು ಸಾಲೆಯಲ್ಲಿ ಹುಡುಗರ ಸಂಖ್ಯೆಯನ್ನು ಬೆಳಿಸಿ ಒಂದು ಅಸಿ॥ ಸ್ಥಳವನ್ನು ಸಂಪಾದಿಸಿರ

ರು; ೯೦ ಹು. ರಿಗೆ ಸಾಲುವಷ್ಟು ಒಂದು ಹೊಸ ಸಾಲೆಯು ಇಮಾರತಿಯೂ ಮಾಸ್ತ
ರಿಗೆ ಇರಲಿಕ್ಕೆ ಒಂದು ಮನೆಯೂ ಇವರ ಪ್ರಯತ್ನದಿಂದಲೇ ಆದವು. ಈ ಕೆಲಸದಲ್ಲಿ
ಮೆ॥ ಮಾಮಲೇದಾರ ಸಾ॥ ಸಂಪಗಾಂವ ಹಾಗು ಮೆ॥ ೩ನೇ ಅಸಿ॥ ಡೆ. ಎ. ಇ. ಕಸ
ೀಕರ ಇವರ ಸಹಾಯವು ಸಂಪೂರ್ಣವಾಗಿ ದೊರೆತಿರುವದು.

**ಬೆಟಗೇರಿ** ( ತಾ॥ ಗೋಕಾಕ ): —ಈ ಊರ ಸಾಲೆಯ ಇನಾಮಿನ ಸವಾ
ಂಭವು ಮೆ॥ ಶೀಗೀಹಳ್ಳಿ ೨ನೇ ಅಸಿ॥ ಡೆ. ಎ. ಇ. ಇವರ ಅಧ್ಯಕ್ಷತೆಯ ಕೆಳಗೆ ನೆರ
ೇರಿಸಲ್ಪಟ್ಟಿತು. ಆ ಕಾಲಕ್ಕೆ ರಾ. ರಾ. ಶೇ. ದಾ. ಬೆಟಗೇರಿ ಎಂಬವರು ತಮ್ಮ ಖರ್ಚಿ
ಂದ ಎಲ್ಲ ಹುಡುಗರಿಗೆ ಮಿಠಾಯಿ ಹಂಚಿದರು. ಮತ್ತು ಉತ್ತಮ ರೀತಿಯಿಂದ
ಪಾಸಾದ ಹುಡುಗರಿಗೆ ಅಧ್ಯಕ್ಷರು ಪುಸ್ತಕಗಳನ್ನು ಇನಾಮು ಕೊಟ್ಟರು. ಈಗ ಸಾಲೆ
ಯಲ್ಲಿ ೬೨ ಹುಡುಗರಿರುವರು. ಈ ಸಂಖ್ಯೆಯು ಬೆಳೆಯಲಿಕ್ಕೆ ಮೊದಲಿದ್ದ ಮಾಸ್ತರ
ಾದ ಮಿ॥ ಗೋವನಕೊಪ್ಪ ಹಾಗು ಈಗಿದ್ದ ಮಾಸ್ತರ ಮಿ॥ ಮುಲ್ಲಾ ಇವರ ಪ್ರಯ
ತ್ನವೇ ಕಾರಣವಾಗಿರುವದು ಎಂಬದಾಗಿ ಸ್ಕೂಲ ಪಂಚರು ಬರೆಯುತ್ತಾರೆ.

**ಸೂಳೇಭಾವಿ** ( ಜಿ. ವಿಜಾಪೂರ ): —ಸ್ಕೂಲ ಪಂಚರು ತಿಳಿಸುವದೇನಂ
ದರೆ—ಈ ಊರಲ್ಲಿ ಉರ್ದು ಶಾಲೆಯು ಸ್ಥಾಪನೆಯಾಗಿ ೨ ವರ್ಷಗಳಾದವು. ಇಷ್ಟು
ಸ್ವಲ್ಪ ಅವಧಿಯಲ್ಲಿ ಹುಡುಗರ ಸಂಖ್ಯೆಯು ೫೩ ಆಗಿರುವದು. ಮೆ॥ ಸ್ಪೆ. ಮು. ಡೆ
ಎ. ಇ. ಸಾ॥ ರು ಸಾಲೆಯನ್ನು ತಪಾಸಿಸಿ ಒಳ್ಳೇ ಸಂತೋಷವನ್ನು ವ್ಯಕ್ತಪಡಿಸಿದರು
ಈಗಿದ್ದ ಮಾಸ್ತರ ಮಿ. ಸರದಾರ ಬೇಗ ಇನಾಮದಾರ ಇವರ ದೀರ್ಘಪ್ರಯತ್ನದಿಂದ
ನಮ್ಮೂರ ಸಾಲೆಯು ಊರ್ಜಿತ ಸ್ಥಿತಿಯನ್ನು ಹೊಂದಹತ್ತಿದೆ.

**ಚಾಂದಕವಠೆ** ( ತಾ॥ ಶಿಂದಗಿ ): —ಇಲ್ಲಿಯ ಲೋ. ಬೋ. ಮೆಂಬರರಾದ
ದೇವಪ್ಪಾ ಪಾಟೀಲ ಇವರು ಊರ ಜನರಿಗೆ ಉಪದೇಶ ಮಾಡಿ ವರ್ಗಣಿಯನ್ನು
ಕೂಡಿಸಿ ವಿಶೇಷ ಪ್ರಕಾರದ ಸಾಲೆಯ ರಿಪೇರಿಯನ್ನು ಮಾಡಿಸಿಕೊಟ್ಟದ್ದಲ್ಲದೆ ಹುಡ
ಗರ ಸಂಖ್ಯೆಯನ್ನು ಬೆಳಿಸಲಿಕ್ಕೆ ಸಹಾಯ ಮಾಡಿದರು. ಎಂಬದಾಗಿ ಹೆ. ಮಾ
ಗುಮಾಸ್ತೆ ಇವರು ತಿಳಿಸುತ್ತಾರೆ.

**ಮಾರಣಬಸರಿ** ( ತಾ॥ ರೋಣ ): —ಈ ಊರ ಸಾಲೆಯಲ್ಲಿ ಈ ವಷ
ಶ್ರೀ ಗಜಾನನ ಉತ್ಸವವು ನೆರವೇರಿಸಲ್ಪಟ್ಟಿತು. ಮತ್ತು ಶ್ರೀ. ಲಿಂಗಪ್ಪ ಮಾಸ್ತರ ನರೆ
ಗಲ್ಲ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರೆದಿತ್ತು. ಆ ಕಾಲಕ್ಕೆ ಹೆ. ಮಾಸ್ತ
ಹಾಗು ಅಸಿ॥ ಮಾಸ್ತರರು ಬೇರೆ ಬೇರೆ ವಿಷಯಗಳ ಮೇಲೆ ಸಮಯೋಚಿತ ಭಾಷಣ
ಮಾಡಿದರು, ಹುಸೇನ ಸಾಹೇಬ ಸವಡಿ ಇವರ ಸುಶ್ರಾವ್ಯ ಗಾಯನವಾಯಿತು. ಮತ್ತು
ವಿದ್ಯಾರ್ಥಿಗಳು ಸ್ಯಮಂತಕೋಪಾಖ್ಯಾನ ನಾಟಕವನ್ನು ಮಾಡಿ ತೋರಿಸಿದರು. ಎಂಬ
ದಾಗಿ ಮು. ದ. ಅತ್ತಾರ ಎಂಬವರು ಬರೆಯುತ್ತಾರೆ.

೧, ೨, ೪ನೇ ತಿಂಗಳ ವೇಳಾಪತ್ರಿಕೆಯು.

| ವರ್ಗ | ತರಗತಿ. | ಸೋಮವಾರ | ಮಂಗಳವಾರ. | ಬುಧವಾರ. | ಗುರುವಾರ. | ಶುಕ್ರವಾರ. | ಶನಿವಾರ. | ವರ. |
|---|---|---|---|---|---|---|---|---|
| ೧–೨ ಪ್ರಥಮ ವರ್ಗ | ೪ನೇ | ಗಣಿತ | ನಾಮಪದ | ಗಣಿತ | ನಾಮಪದ | ನಾಮಪದ | ಪಲ್ಲಿಪ್ಪು | ಒನೇ ತಿಂಗಳ ಪರೀಕ್ಷೆ ಗಣಿತ — ೨೦ ಬಾಯಿವಿಚ್ಚಿ — ೧೪ ನಾಮಪದ — ೨೦ ನ್ಯೂಕ್ಲರಣ — ೧೦ ೧೦ ಕ ಪಿತಿ — ಸ್ಟೂಲು — |
| | ೩ನೇ | ಕಾಪೀಬರಹ | ಗಣಿತ | ಭೂಗೋಲ | ಗಣಿತ | ಗಣಿತ | ನಾಮಪದ | |
| | ೮ನೇ | ನಾಮಪದ | ಶಬ್ದಬರಹ (ನೋಡಿ ಬರೆ ಯುವದು) | ಕ್ರಿಯಾಪದ | ಶಬ್ದಬರಹ | ಕ್ರಿಯಾಪದ | ಶಬ್ದಬರಹ | |
| ೩–೪ ದ್ವಿತೀಯ ವರ್ಗ | ೪ನೇ | ನಾಮಪದ | ಗಣಿತ | ನಾಮಪದ | ಪ್ರಾರಿಂಗ | ಕಾಪೀಬರಹ | ಗಸ್ತಾಪತ್ರ | ಹುಬ್ಬರಹ — ೪ ಕಾಪೀಬರಹ — ೨ ಪತಿಹಾಸ — ೧ ಭೂಗೋಲ — ೧ ಪ್ರಾರಿಂಗ — ೧ ೮೮ ಪರಿಷ್ಕೃ — ಗಸ್ತಾಪತ್ರ — ೮೮ ಒಂತು |
| | ೧ನೇ | ಗಣಿತ | ನಾಮಪದ | ಗಣಿತ | ಬಾಯಿವಿಚ್ಚಿ | ಭೂಗೋಲ | ಕಾಪೀಬರಹ | |
| | ೮ನೇ | ಶಬ್ದಬರಹ | ಸರ್ವನಾ ಮಪದ ಯುವದು | ಬಾಯಿವಿಚ್ಚಿ | ಪತಿ | ನಮ್ಮ | ನಮ್ಮ | |

## ಪ್ರಥಮ ವರ್ಷ.

### ಮೊದಲ ಸೆಮಿಸ್ಟರ್.

೧—೫

| ೧ನೇ | ೨ನೇ | ೩ನೇ | ೪ನೇ | ೫ನೇ |
|---|---|---|---|---|
| ಕಾಮೀ ಬರಹ | ಶುದ್ಧ ಬರಹ (ಪುಸ್ತಕ ನೋಡಿ ಕೊಂಡು) | ಕವಿತೆ | ನ್ಯಾಕ್ಯರಣ | ಕಾಮೀ ಬರಹ |
| ಶುದ್ಧ ಬರಹ (ಪುಸ್ತಕ ನೋಡಿ ಕೊಂಡು) | ಕವಿತೆ | ನುಗ್ಗಿ | ಶುದ್ಧ ಬರಹ (ಪುಸ್ತಕ ನೋಡಿ ಕೊಂಡು) | ಕಾಮೀ ಬರಹ |
| ಕವಿತೆ | ನುಗ್ಗಿ | ನಾಚಕನ | ನುಗ್ಗಿ | ನಾಚಕನ |

### ದ್ವಿತೀಯ ಸೆಮಿಸ್ಟರ್.

೬—೧೦

| ೬ನೇ | ೭ನೇ | ೮ನೇ | ೯ನೇ | ೧೦ನೇ |
|---|---|---|---|---|
| ಡ್ರಾಯಿಂಗ್ | ಕವಿತೆ | ಗಣಿತ | ಡ್ರಾಯಿಂಗ್ | ಶುದ್ಧ ಬರಹ |
| ಶುದ್ಧ ಬರಹ | ಗಣಿತ | ನಾಚಕನ | ಶುದ್ಧ ಬರಹ | ಅಂಕೆಯು ಮಾಲೆಗಳು. |
| ಗಣಿತ | ನಾಚಕನ | ಶುದ್ಧ ಬರಹ | ಅಂಕೆಯು ಮಾಲೆಗಳು. | ಡ್ರಾಯಿಂಗ್ ಹೆಲ್ಪ್ ಬುಕ್ ಪುಟ ೫೬ |

## ತೃತೀಯ ವರ್ಷ.

### ಮೊದಲ ಸೆಮಿಸ್ಟರ್.

೧೧—೧೫

| ೧೧ನೇ | ೧೨ನೇ | ೧೩ನೇ | ೧೪ನೇ | ೧೫ನೇ |
|---|---|---|---|---|
| ಡ್ರಾಯಿಂಗ್ ಹೆಲ್ಪ್ ಬುಕ್ ಪುಟ ೫೬ | ಡ್ರಾಯಿಂಗ್ | ಅಂಕೆಯು ಮಾಲೆಗಳು. | ಗಣಿತ | ಕವಿತೆ |
| ಅಂಕೆಯು ಮಾಲೆಗಳು. | ಶುದ್ಧ ಬರಹ | ಗಣಿತ | ನಾಚಕನ | ಗಣಿತ |
| ಶುದ್ಧ ಬರಹ | ಗಣಿತ | ನಾಚಕನ | ಶುದ್ಧ ಬರಹ | ನಸ್ಯಪಾಠ |

### ದ್ವಿತೀಯ ಸೆಮಿಸ್ಟರ್.

೧೬—೨೦

| ೧೬ನೇ | ೧೭ನೇ | ೧೮ನೇ | ೧೯ನೇ | ೨೦ನೇ |
|---|---|---|---|---|
| ಗಣಿತ | ಕವಿತೆ | ಗಣಿತ | ಶುದ್ಧ ಬರಹ | ಬಾಯಿಲೆಕ್ಕ |
| ಶುದ್ಧ ಬರಹ | ಗಣಿತ | ನಾಚಕನ | ಕಾಮೀ ಬರಹ | ಬಾಯಿಲೆಕ್ಕ |
| ಗಣಿತ | ನಾಚಕನ | ಶುದ್ಧ ಬರಹ | ನಸ್ಯಪಾಠ | ಬಾಯಿಲೆಕ್ಕ |

| ವರ್ಷ | ತಿಂಗಳು | ದಿವಸ | ಗಂಟೆ | ನಿಮಿಷ | ಸೆಕೆಂಡು | ಕಾಮೀ ಬರಹ | ಹುಡ್ಡಿ ಬರಹ | ಭೂಗೋಲ |
|---|---|---|---|---|---|---|---|---|
| ೪—೫ ವಯಸ್ಸಿನ ಪೈಕಿ | ೬ನೇ | ತ್ರಾಯಿಂಗ | ೧೦ | ೦೦ | ೦೦ | ನಾಳ್ಕರಚನೆ | ಹೆಸರು | ೧ |
| | ೭ನೇ | ನಸ್ಯಪಾಠ | ೧೦ | ೦೦ | ೦೦ | ಕಾಮೀ ಬರಹ | ಹಣತಿ | ಬಾಯಿಲೆಕ್ಕ |
| | ೮ನೇ | ಅಂಕೆಯು ಪಾಠ ಗಳು | ೧೦ | ೦೦ | ೦೦ | ನಾಚಕನ | ಅಟ | ಪರಿಧಿ |
| ೫—೬ ವಯಸ್ಸಿನ ಪೈಕಿ | ೬ನೇ | ಇತಿಹಾಸ | ೧೦ | ೦೦ | ೦೦ | ಹುಡ್ಡಿ ಬರಹ | ಗಣಿತ | ಭೂಗೋಲ |
| | ೭ನೇ | ಬಾಯಿಲೆಕ್ಕ | ೧೦ | ೦೦ | ೦೦ | ಹೆಸರು | ಗಣಿತ | ಬಾಯಿಲೆಕ್ಕ |
| | ೮ನೇ | ಪರಿಧಿ | ೧೦ | ೦೦ | ೦೦ | ಹಣತಿ (ಉಚ್ಚಳಣಿ) | ಹೆಸರು | ಪರಿಧಿ |

| ವರ್ಷ | ತಿಂಗಳು | ದಿವಸ | ಗಂಟೆ | ನಿಮಿಷ | ಸೆಕೆಂಡು | ಕಾಮೀ ಬರಹ | ಹುಡ್ಡಿ ಬರಹ | ಭೂಗೋಲ |
|---|---|---|---|---|---|---|---|---|
| ೫—೬ ವಯಸ್ಸಿನ ಪೈಕಿ | ೬ನೇ | ಇತಿಹಾಸ | ೧೦ | ೦೦ | ೦೦ | ಹೆಸರು | ಗಣಿತ | ಇತಿಹಾಸ |
| | ೭ನೇ | ಬಾಯಿಲೆಕ್ಕ | ೧೦ | ೦೦ | ೦೦ | ನಾಚಕನ | ಹಣತಿ | ತ್ರಾಯಿಂಗ |
| | ೮ನೇ | ಪರಿಧಿ | ೧೦ | ೦೦ | ೦೦ | ಪರಿಧಿಚಿ | ಅಟ | ಪರಿಧಿಚಿ |

ಒಟ್ಟು ೫೦ ೦೦ ೦೦ ೧೦೦

**ಸೂಚನೆ:**— (೧) ಮುಂಜಾನೆ ೬॥ – ೭ ೮ ನರಿಗೆ ಪ್ರಾರ್ಥನೆ. (೨) ಮುಂಜಾನೆ ೯ ಘಂಟೆಗೆ, ಮಧ್ಯಾಹ್ನ ೪ ಘಂಟೆಗೆ ೧೫ ನಿಮಿಷ ವಿಶ್ರಾಂತಿ. (೩) ಸಂತೆಯ ದಿನ ಹೊರತಾಗಿ ದಿನಾಲು ಸಾಯಂಕಾಲ ೫ ರಿಂದ ೫॥ ನರಿಗೆ ಡ್ರಿಲ್, ಆಟಗಳು.

ಸಿದ್ಧನಾಥ ವಾಚನ ಮಂದಿರ
ಹೊರಬ. ಜಿ. ಧಾರವಾಡ

ಕನ್ನಡ

# ಶಾಲಾಪತ್ರಿಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೩ } ಅಕ್ಟೋಬರ, ೧೯೨೬. { ಸಂ. ೨

## ಸ್ಫುಟವಿಚಾರವು.

### ರಿಟ್ರೇನಿಂಗದ ವರ್ಗ.

ಟ್ರೇನಿಂಗ ಕಾಲೇಜಿನ ವರ್ಷಾರಂಭವನ್ನು ದಿಶಂಬರದ ಬದಲಾಗಿ ಜೂನ ತಿಂಗಳಲ್ಲಿ ಮಾಡಬೇಕೆಂದು ನಿರ್ಣಯವಾದ್ದರಿಂದ ಈ ದಿಶಂಬರದಲ್ಲಿ ಹೊಸ ವಿದ್ಯಾರ್ಥಿಗಳನ್ನು ೧ನೇ ವರ್ಷದ ವರ್ಗಕ್ಕೆ ತೆಗೆದುಕೊಳ್ಳುವದು ರಹಿತವಾಗಿದೆ. ಆದ್ದರಿಂದ ದಿಶಂಬರ ೧೯೨೬ ರಿಂದ ೧೫ ನೇ ಎಪ್ರಿಲ ೧೯೨೭ರ ವರೆಗೆ ೪॥ ತಿಂಗಳು ದಕ್ಷಿಣಭಾಗದೊಳಗಿನ ೩೫ ಜನ ೨ನೇ ವರ್ಷದ ಶಿಕ್ಷಕರಿಗೆ 'ರಿಟ್ರೇನಿಂಗ' ಕೊಡಬೇಕೆಂದು ನಿರ್ಧಾರವಾಗಿದೆ. ಈ ಶಿಕ್ಷಕರು ೩೫ ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರಿರಕೂಡದು. ಮತ್ತು ಅವರ ನೌಕರಿಯು ೧೦ – ೧೨ ವರ್ಷ ಆಗಿರಬೇಕು. ನಮ್ಮ ಭಾಗದಲ್ಲಿ ೪ ಡಿಸ್ಟ್ರಿಕ್ಟಿಯ ಲೋಕಲ್ ಬೋರ್ಡುಗಳೂ ೫ ಸ್ವತಂತ್ರ ಮುನಿಸಿಪಾಲಿಟಿಗಳೂ ಇರುವವು. ಇವುಗಳಿಂದ ಕೆಳಗೆ ಬರಿದಂತೆ ಶಿಕ್ಷಕರನ್ನು ರಿಟ್ರೇನಿಂಗದ ವರ್ಗಕ್ಕೆ ತೆಗೆದುಕೊಳ್ಳುವದು ಗೊತ್ತಾಗಿದೆ.

| | | | |
|---|---|---|---|
| ಧಾರವಾಡ ಜಿಲ್ಲೆ | ೯ | ಹುಬ್ಬಳ್ಳಿ ಮುನಿಸಿಪಾಲಿಟಿ | ೩ |
| ಬೆಳಗಾಂವಿ ,, | ೯ | ಗದಗ ,, | ೩ |
| ವಿಜಾಪುರ ,, | ೪ | ವಿಜಾಪುರ ,, | ೨ |
| ಕಾರವಾರ ,, | ೨ | ಧಾರವಾಡ ,, | ೨ |
| | | ಬಾಗಲಕೋಟ ,, | ೧ |
| | ೨೪ | | ೧೧ |

ಆದರೆ ಧಾರವಾಡ ಜಿಲ್ಲೆಯ ಬೋರ್ಡು ಶಿಕ್ಷಕರನ್ನು ರಿಟ್ರೇನಿಂಗ ವರ್ಗಕ್ಕೆ ಕಳಿಸಲಿಕ್ಕೆ ಒಪ್ಪಲಿಲ್ಲ. ಆದದರಿಂದ ಉಳಿದ ಜಿಲ್ಲೆಗಳ ಲೋಕಲಬೋರ್ಡುಗಳು ಅಥವಾ ಸ್ವತಂತ್ರ ಮುನಿಸಿಪಾಲಿಟಿಗಳು ಮೇಲೆ ತೋರಿಸಿದ ಸಂಖ್ಯೆಗಿಂತ ಹೆಚ್ಚು ಜನ ಶಿಕ್ಷಕರನ್ನು ಆರಿಸಿ ಕಳಿಸುವದಿದ್ದರೆ ಅನುಕೂಲವದೆ. ಅದರಂತೆಕರ್ನಾಟಕದ ನೆರೆಯಲ್ಲಿರುವ ಜಮಖಂಡಿ. ಸಾಂಗಲಿ, ಮಿರಜ, ಬುದಗಾಂವ ಮೊದಲಾದ ಸಂಸ್ಥಾನಗಳ ವಿದ್ಯಾಧಿಕಾರಿಗಳು ತಮ್ಮ ೨ನೇ ವರ್ಷದ ಕೆಲವು ಶಿಕ್ಷಕರನ್ನು ಕಳಿಸಬಹುದು.

ಇನ್ನು ರಿಟ್ರೇನಿಂಗ ವರ್ಗದಲ್ಲಿ ನಡೆಯತಕ್ಕ ವಿಷಯಗಳೆಂದರೆ:— ಮಾನಸ ಶಾಸ್ತ್ರದ ಹೊಸ ವಿಷಯ, ಬೇರೆ ಬೇರೆ ವಿಷಯಗಳನ್ನು ಕಲಿಸುವ ಉತ್ತಮ ಪದ್ಧತಿಗಳು, ಕ್ರಮಿಕ ಪುಸ್ತಕಗಳೊಳಗಿನ ಕಠಿಣ ಪಾಠಗಳು, ಬಾಲಕರ ವರ್ಗಕ್ಕೆ ಹಾಗೂ ಮೇಲಿನ ಇಯತ್ತೆಗಳಲ್ಲಿಯು ಶಿಕ್ಷಣಕ್ಕೆ ಬೇಕಾಗುವ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳುವದು, ಹೊಸ ಮಾದರಿಯ ಡ್ರಾಯಿಂಗು ಮತ್ತು ವಿಬರನ ಪದ್ಧತಿಯ ಡ್ರಿಲ್ಲು. ಇವಲ್ಲದೆ ಬಂದ ಎಲ್ಲ ಶಿಕ್ಷಕರಿಗೂ ಸ್ವಾನುಭವ ಶಿಕ್ಷಣವನ್ನು ಕೊಡುವದರಲ್ಲಿ ಬರುವದು. ಒಟ್ಟಿಗೆ ಈ ೧೦ ವರ್ಷಗಳಲ್ಲಿ ಶಿಕ್ಷಣ ಪದ್ಧತಿಗಳಲ್ಲಿ ಆದ ಸುಧಾರಣೆಯ ನಿಕಟಪರಿಚಯವನ್ನು ಮಾಡಿಕೊಡುವದು ಈ ವರ್ಗದ ಉದ್ದೇಶವಾಗಿರುವದು.

---

## ೨. ಸಾಠೆ ಪರಾಂಜಪೆ ಸ್ಕೇಲು.

ಮುಂಬೈ ಇಲಾಖೆಯ ಕಳೆದ ಕೌನ್ಸಿಲಿನಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಈ ಸ್ಕೇಲಿನಂತೆ ಪಗಾರ ಕೊಡಬೇಕೆಂಬ ವಿಷಯವು ಬಹುಮತದಿಂದ ಪಾಸಾಗಿರುವದಷ್ಟೇ ಅಸ್ಕೇಲನ್ನು ಎಲ್ಲ ಜಗರ ತಿಳುವಳಿಕೆಯಗೋಸ್ಕರ ಕೆಳಗೆ ಕೊಟ್ಟಿದೆ.

| | | | | |
|---|---|---|---|---|
| ಅಂಟ್ರೇಂಡ | ಅಸಿ॥ ಮಾ॥ | ೨೫ – ೧/೨ – ೩೦ | | |
| ,, | ಹೆ. ,, | ೩೦ – ೧/೨ – ೩೫ | | |
| ೧ನೇ ವರ್ಷದ ಟ್ರೇಂಡ | ಮಾ॥ | ೩೦ – ೧ – ೪೦ | ಸಿ. ಗ್ರೇ. | ೪೫ |
| ೨ನೇ ,, | ,, | ೩೫ – ೧½ – ೪೫ | ,, | ೭೫ |
| ೩ನೇ ,, | ,, | ೪೦ – ೨ – ೮೦ | ,, | ೧೦೦ |

# ಮನಃಶಕ್ತಿ ಪರೀಕ್ಷಣ.

ಅಥವಾ

# ಮಗುವಿನ ಗ್ರಾಹಕಶಕ್ತಿಯ ಪರಿಮಾಣ.

( ಪಂಡಿತ ಭೀ. ಜೀ. ಹುರಿಕವಿ )

ಮಗುವಿನ ಗ್ರಾಹಕಶಕ್ತಿಯ ಪರಿಮಾಣವನ್ನು ಗೊತ್ತುಪಡಿಸಿ, ಅವರ ಯೋಗ್ಯವಾದ ಉಪಯೋಗವನ್ನು ಪ್ರತ್ಯಕ್ಷ ಶಿಕ್ಷಣಕಾರ್ಯದಲ್ಲಿ ಮಾಡಿಕೊಳ್ಳಬೇಕೆಂಬುದು, ಶಿಕ್ಷಣಪದ್ಧತಿಯಲ್ಲಿ ವ್ಯಾವಹಾರಿಕಮಾನಸಶಾಸ್ತ್ರವು ಈಗಿನ ಕಾಲದಲ್ಲಿಟ್ಟ ಮುಂದಡಿಯೂ ಗಿರುತ್ತದೆ. ಇಂತು ಹುಡುಗರ ಮನಶ್ಯಕ್ತಿಯನ್ನು ಪರೀಕ್ಷಿಸುವ ಕ್ರಮಗಳು ಪಾಶ್ಚಾತ್ಯದೇಶಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ಅಮೇರಿಕದಲ್ಲಿ ಈಗ ಹೆಚ್ಚಾಗಿ ಬಳಕೆಯಲ್ಲಿ ಬರಹತ್ತಿವೆ. ಹುಡುಗರ ಗ್ರಾಹಕ ಶಕ್ತಿಯನ್ನು ಪರೀಕ್ಷಿಸುವದರಿಂದ ಶಿಕ್ಷಕನಿಗೆ ಶಿಕ್ಷಣ ವ್ಯವಸಾಯದಲ್ಲಿ ಎಷ್ಟು ವಿಧದಿಂದ ಉಪಯೋಗವಾಗುವನೆಂಬುದನ್ನು ಬೇರೆ ಹೇಳಲಿಕ್ಕೆ ಬೇಡ. ಭೂಮಿಯ ಗುಣವನ್ನು ತಿಳಿದ ಒಕ್ಕಲಿಗನಿಗೆ ಬೆಳೆಯನ್ನು ಬಿತ್ತಿ ಬೆಳೆಯಲು ಅನುಕೂಲವಲ್ಲವೇ ? ಆದರಂತೆಯೇ ಭೂಮಿಯೊಳಗಿನ ದೋಷವನ್ನು ತೆಗೆದು ಹಾಕಲು ಅವನಿಗೆ ಅನುವು ದೊರೆಯುವದಲ್ಲವೇ ? ಇದೇ ರೀತಿಯಿಂದ ಶಿಕ್ಷಕನಾದರೂ ಶಿಷ್ಯನ ಮನಸ್ಸಿನ ಮೆಟ್ಟನ್ನು ಅರಿತಿದ್ದರೆ, ತನ್ನ ಉದ್ದಿಷ್ಟವನ್ನು ಸುಲಭವಾಗಿಯೂ ಶ್ರೇಯಸ್ಕರವಾಗಿಯೂ ಸಾಧಿಸಬಹುದು; ಮತ್ತು ಹೆಚ್ಚು ಮನವರಿಕೆಯಿಂದಲೂ ಹುರುಪಿನಿಂದಲೂ ಕೆಲಸ ಮಾಡಬಹುದು. ಇಂತಹ ಶಿಕ್ಷಣ ಕ್ರಮದಲ್ಲಿ ತಿದ್ದುಪಡಿಯನ್ನು ಪಡೆದ ಹುಡುಗನಾದರೂ ಬಯಿಸಿದಂತೆಯೇ ಬೆಳಕಿಗೆ ಬರುವನೆಂದರೆ ಏನು ತಪ್ಪಾಗುವದು ? ಇನ್ನು ಶಿಕ್ಷಕನು ತನ್ನ ಕರ್ತವ್ಯದ ವಿಷಯಕ್ಕೆ ತಾನೇ ಮನಃಪೂರ್ವಕವಾಗಿ ಸಮಾಧಾನವನ್ನು ಹೊಂದಿದರೆ ಮಿಗಿಯುವದಿಲ್ಲ. " आपरितोषाद्विदुषां न साधु मन्ये " ಎಂಬಂತೆ ನಾಲ್ವರು ಬಲ್ಲವರಿಂದ ಹೊಗಳಿಸಿಕೊಂಡರೇ ಸರಿ. ಅದಲ್ಲದೆ ಸಾಮಾನ್ಯವಾಗಿ ನಾವು ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೂ ಶಿಕ್ಷಕನ ಮೇಲಧಿಕಾರಿಗಳು ಇದ್ದೇ ಇರುತ್ತಾರೆ. ಮುಖ್ಯಾಧ್ಯಾಪಕನು, ವಿದ್ಯಾಖಾತೆಯ ವಿಚಾರಕರು (ಡೆಪುಟಿ ಇನ್ಸಪೆಕ್ಟರ್, ಎಜ್ಯುಕೇಶನಲ್ ಇನ್ಸಪೆಕ್ಟರ್ ಮತ್ತು ಡಿರೆಕ್ಟರ್.) ಮತ್ತು ಪರೀಕ್ಷರು ಇವರೇ ಆ ಮೇಲಧಿಕಾರಿಗಳೆಂಬದು ಸ್ಪಷ್ಟವಿದೆ. ಇವರೆಲ್ಲರು ಸಾಮಾನ್ಯವಾಗಿ ಶಿಕ್ಷಕನ ಕೆಲಸದ ವಿಷಯಕ್ಕೆ ತಮ್ಮ ಅಭಿಪ್ರಾಯವನ್ನು ಕೊಡಲು ಅಧಿಕೃತರು; ಮತ್ತು ಇವರ ಅನುಕೂಲ ಪ್ರತಿಕೂಲ ಅಭಿಪ್ರಾಯವನ್ನೇ ಶಿಕ್ಷಕನ ಸ್ವಂತದ ಒಳಿತು ಕೆಡಕುಗಳು ಅವಲಂಬಿಸಿರುತ್ತವೆ. ಶಿಕ್ಷಕರು ಮತ್ತು ಮೇಲಧಿಕಾರಿಗಳಲ್ಲಿ ಏಕಮನಸ್ಕತೆಯೂ, ಸಹಾನುಭೂತಿಯೂ ಸದಾವಾಗಲೂ ಸಮವಾಗಿರುತ್ತದೆಂದು ಹೇಳಲಾಗುವದಿಲ್ಲ. ಮತ್ತು ಅಧಿಕಾರಿಯು

ತನ್ನ ಅಭಿಪ್ರಾಯವನ್ನೇ ಮುಂದುಮಾಡುವದು ಸಹಜವಾಗಿದೆ. ಇದು ಮನುಷ್ಯ ಸ್ವಭಾ
ವದ ಸಾಮಾನ್ಯ ವಿವೇಚನೆಯೇ ಹೊರತು ದೋಷೈಕದೃಷ್ಟಿಯ ಮಾತಲ್ಲ. ವ್ಯವಸ್ಥಿತ
ವಾದ ಪದ್ಧತಿಯಲ್ಲಿ ಇಂತಹ ಕುಂದುಗಳೇ ಇರುವದಿಲ್ಲ. ಆದರೂ ಶಿಕ್ಷಣದಲ್ಲಿ ವ್ಯಾಪೃ
ತರಾದ ಕೆಲವರು ಮಾತ್ರ ಹೀಗೆ ಆಗಾಗ ನುಡಿಯುತ್ತಿರುವದು ಕಿವಿಗೆ ಬೀಳುತ್ತದೆ
ಮಗುವಿನ ಗ್ರಾಹಕಶಕ್ತಿಯ ಪರಿಮಾಣವನ್ನು ಗೊತ್ತುಪಡಿಸುವದರಿಂದ ಮೇಲಿನ
ಎರಡೂ ಪಕ್ಷಗಳಲ್ಲಿದ್ದ ತಪ್ಪುತಿಳಿವಳಿಕೆಯು ದೂರಾಗುತ್ತದೆ. ಈ ದೃಷ್ಟಿಯಿಂದಲೂ
ಮನಃಶಕ್ತಿಯನ್ನು ಪರೀಕ್ಷಿಸುವ ಕ್ರಮಗಳು ಮಹತ್ವವನ್ನು ಪಡೆದಿವೆ.

ಸಾಮಾನ್ಯವಾಗಿ ಶಿಕ್ಷಕರು ತಮ್ಮ ಕೆಲಸದ ವಿಷಯಕ್ಕೆ ಬಹಳ ಚಿಂತಾತುರರಾಗಿ
ರುತ್ತಾರೆ. ತಮ್ಮ ಶಿಷ್ಯರು ಅಧ್ಯಯನದಲ್ಲಿ ಚೆನ್ನಾಗಿ ಪ್ರಗತಿಯನ್ನು ಹೊಂದಿರಬೇ
ಕೆಂದೂ, ವರಿಷ್ಠರಿಂದ ತಾವೂ ತಮ್ಮ ಕೆಲಸವೂ ಅಭಿನಂದಿಸಲ್ಪಡಬೇಕೆಂದೂ ಯಾವಾ
ಗಲೂ ಅವರ ಮನಸ್ಸಿನಲ್ಲಿ ಕಟಿಯುತ್ತಿರುತ್ತದೆ. ಇದರೊಳಗಿನ ವಿಶೇಷವೇನೆಂದರೆ :—
ಮೇಲೆ ಹೇಳಿದಂತೆ ಮನಸ್ಸಿಗೆ ಹಚ್ಚಿಕೊಂಡು ಚಿಂತಿಸುತ್ತಿರುವವರ ಚಿಂತೆಗೆ ನಿಜವಾದ
ಬೇರೆ ಕಾರಣವೇ ಇರುವದಿಲ್ಲ. ಮನಸ್ಸಿನ ದೌರ್ಬಲ್ಯವೊಂದೇ ಇದರ ಮೂಲವು. ಈ
ದೌರ್ಬಲ್ಯವನ್ನು ಹೋಗಲಾಡಿಸುವ ಉತ್ತಮ ಔಷಧವು ಜ್ಞಾನವು; ಮಕ್ಕಳ ಒಲವು
ಮತ್ತು ಮನಸ್ಸಿನ ಶಕ್ತಿಯ ತಿಳಿವಳಿಕೆ; ಪ್ರಗತಿಯನ್ನು ಪರೀಕ್ಷಿಸುವ ಮತ್ತು ಪರೀಕ್ಷೆಗಳ
ಪರಿಣಾಮವನ್ನು ಗೊತ್ತುಪಡಿಸುವ ಉತ್ತಮೋಪಾಯಗಳ ಅರಿವು; ಉಳಿದ ಹುಡು
ಗರೂ ಶಿಕ್ಷಕರೂ ಏನನ್ನು ಮಾಡಬಲ್ಲರೆಂಬದರ ವಿಚಾರ; ಇವೆಲ್ಲ ಸಂಗತಿಗಳನ್ನು ತಿಳಿ
ಶಿಕ್ಷಕನ ಮನಸ್ಸು ದುರ್ಬಲವಾಗಲಾರದು. ಶಿಕ್ಷಕನಲ್ಲಿ ನೆಲಸಿರುವ ಈ ರೋಗಕ್ಕೆ
ಮನಃಶಕ್ತಿಪರೀಕ್ಷಣವು ಒಂದು ಅನರ್ಘ್ಯವಾದ ಔಷಧಿಯಾಗಿದೆಯೆಂದು ಶಿಕ್ಷಣ ಶಾಸ್ತ್ರ
ಕೋವಿದರು ಹೇಳಹತ್ತಿದ್ದಾರೆ.

ಈ ಮನಃಶಕ್ತಿಪರೀಕ್ಷಣದ ಇತಿಹಾಸವನ್ನಿಷ್ಟು ಸ್ವಲ್ಪದರಲ್ಲಿ ವಿವೇಚಿಸುವದು
ಅಪ್ರಾಸಂಗಿಕವಾಗದೆಂದು ತಿಳಿಯುತ್ತೇವೆ. ಪದಾರ್ಥಗಳನ್ನು ಅಳೆಯುವದರ ಮಹತ್ವ
ವನ್ನು ಎಲ್ಲರೂ ಬಲ್ಲರು; ಆದರೆ ಮನಃಶಕ್ತಿಗಳ ಅಳತೆಯನ್ನು ವಿಚಾರಿಸಿದರೆ ಮಾತ್ರ
ಎಲ್ಲರೂ ಸುಮ್ಮನಾಗುತ್ತಾರೆ. ಮನಃಶಕ್ತಿಗಳ ಪರಿಮಾಣವು ಗೊತ್ತಾದರೆ ಅತ್ಯು
ತ್ತಮವಾಗುವದೆಂದು ಎಲ್ಲರೂ ಒಡಂಬಡುತ್ತಾರೆ ; ಆದರೆ ಅವುಗಳನ್ನು ಅಳೆಯುವದು
ಅಶಕ್ಯವೆಂದು ಅನೇಕರು ಅಭಿಪ್ರಾಯಬಡುತ್ತಾರೆ. ಕಲ್ಲು ಕಟ್ಟಿಗೆಗಳನ್ನು ಅಳೆಯ
ಬಹುದು. ಆದರೆ ಕಲ್ಪನೆಯನ್ನು ಅಳೆಯಲಾಸಲ್ಲ; ಬಾವಿಯು ಆಳವನ್ನು ಕಂಡುಹಿಡಿಯ
ಬಹುದು; ಆದರೆ ಹೃದಯಲ್ಲಿ ತುಂಬಿರುವ ರಸದ ಗಭೀರತೆಯನ್ನು ಪರೀಕ್ಷಿಸುವದಾ
ಗದು. ಮನಃಶಕ್ತಿಗಳ ಪರಿಮಾಣವು ಅಸಾಧ್ಯವೆಂದು ಹೇಳುವವರು ಮೇಲಿನಂತಹ
ಉದಾಹರಣೆಗಳನ್ನು ಕೊಟ್ಟು ತಮ್ಮ ಮಾತನ್ನು ಸಾಧಿಸುತ್ತಾರೆ. ಆದರೆ ಥಾರ್ನ್‌ಡೈ
ಯಿಕ್ (Thorndike) ಎಂಬ ವಿದ್ವಾಂಸನು ಇದಕ್ಕೆ ವಿರುದ್ಧವಾದ ತತ್ವವನ್ನು ಪ್ರತಿಪಾ

ದಿಸಿದ್ದಾನೆ. ಅವನು ಹೇಳುವದೇನಂದರೆ:—"ಈ ಜಗತ್ತಿನಲ್ಲಿ ಅಸ್ತಿತ್ವವನ್ನು ಪಡೆದಿರುವ ಪ್ರತಿಯೊಂದು ವಸ್ತುವಿಗಾಗಲಿ, ಭಾವಕ್ಕಾಗಲಿ, ಕೆಲವೊಂದು ಪರಿಮಿತಿಯು ಇದ್ದೇ ಇರುತ್ತದೆ. ಹೀಗೆ ಅದಕ್ಕೆ ಪರಿಮಿತಿ ಇದ್ದ ಮೇಲೆ ಅದನ್ನು ಅಳೆಯಲಿಕ್ಕೆ ಬಂದೇ ಬರುತ್ತದೆ." ಆದುದರಿಂದಲೇ, ಆಶ್ಚರ್ಯಕರವಾದ ಮನಸ್ಸಿನ ಬೇರೆ ಬೇರೆ ಶಕ್ತಿಗಳನ್ನೂ ಪ್ರಕಾರಗಳನ್ನೂ ಕೂಡ ಅಳೆಯಬಹುದೆಂದು ಅರ್ವಾಚೀನ ಕಾಲದ ಮಾನಸಶಾಸ್ತ್ರಜ್ಞರು ಹೇಳತೊಡಗಿದ್ದಾರೆ.

ಮನಃಶಕ್ತಿಯನ್ನು ಪರೀಕ್ಷಿಸುವ ಕ್ರಮಗಳು ಮನುಷ್ಯಜ್ಞಾತಿಯ ಆರಂಭದಿಂದಲೇ ಅಸ್ತಿತ್ವದಲ್ಲಿವೆಯೆಂದು ಹೇಳಬಹುದು. ತನ್ನನ್ನು ತಾನೇ ಪರೀಕ್ಷಿಸದೆ, ಮನಃಪೂರ್ವಕವಾಗಿಯೂ, ವಿಚಾರಪೂರ್ವಕವಾಗಿಯೂ ಮನುಷ್ಯನು ಏನನ್ನೂ ಕಲಿಯನೆಂದು ಹೇಳಬಹುದು; ತನ್ನ ಶಿಷ್ಯರನ್ನು ಒಳ್ಳೆಯ ರೀತಿಯಿಂದ ಕಲಿಸಬೇಕಾಗಿದ್ದರಿಂದ, ಅವರನ್ನವನು ಪರೀಕ್ಷಿಸಲೇ ಬೇಕು. ಸ್ಪರ್ಧೆಯ ಪರೀಕ್ಷೆಗಳೂ, ಶಾಲೆಯ ಪರೀಕ್ಷೆಗಳೂ ಮನಃಶಕ್ತಿಪರೀಕ್ಷಣದ ಮೂದರಿಗಳೇ. ಸುಮಾರು ೪೦೦೦ ವರ್ಷಗಳ ಹಿಂದೆಯೇ ಚೀನ ದೇಶದಲ್ಲಿ ಸ್ಪರ್ಧೆಯ ಪರೀಕ್ಷೆಗಳು ಆರಂಭವಾಗಿದ್ದವೆಂದು ನಾವು ಕೇಳುತ್ತೇವೆ; ಶಾಲೆಯ ಪರೀಕ್ಷೆಗಳಂತೂ ಶಾಲೆಗಳು ಸ್ಥಾಪಿಸಲ್ಪಟ್ಟಾಗಿನಿಂದ ಇದ್ದೇ ಇವೆ. ಆದರೆ ಇವೆಲ್ಲ ಕೇವಲ ಯೋಗ್ಯಾಯೋಗ್ಯತೆಯನ್ನು ನಿರ್ಣಯಿಸುವಂತಹಗಳು; ಮನಸ್ಸು ಕೆಲವೊಂದು ಸ್ಥಿತಿಗೆ ಬಂದಿದೆಯೋ ಇಲ್ಲವೋ ಎಂಬುದನ್ನು ಮಾತ್ರ ಇವುಗಳಿಂದ ನೋಡಬಹುದೇ ಹೊರತು, ಅದರ ಎಲ್ಲ ಮೆಟ್ಟಲುಗಳನ್ನು ಗೊತ್ತು ಹಚ್ಚಿಸಲ್ಯಕ್ಕೆ ಅದು ಎಲ್ಲಿದೆ ಎಂಬುದನ್ನು ತಿಳಿಯುವದಕ್ಕೆ ಇವು ಸಾಹಾಯ್ಯಕಾರಿಗಳಲ್ಲ.

ಎಲ್ಲಕ್ಕೂ ಮೊದಲು ಗೊತ್ತಾದ ಮನಃಶಕ್ತಿಪರೀಕ್ಷಣವು ಅಪ್ರತ್ಯಕ್ಷರೀತಿಯುದಾಗಿತ್ತು. ಉದಾಹರಣಾರ್ಥವಾಗಿ, ನಾವು ವಿದ್ಯುಚ್ಛಕ್ತಿಯನ್ನು ಸಾಕ್ಷಾತ್ತಾಗಿ ಅಳೆಯಲಾರೆವು. ಆದರೆ ವಿದ್ಯುತ್ಪ್ರಹಾದ ಶಕ್ತಿಯನ್ನನುಸರಿಸಿ ತನ್ನ ಆಕಾರವನ್ನು ಬದಲಿಸುವಂತಹ ವಸ್ತುವನ್ನು ತೆಗೆದುಕೊಂಡು ಆದರ ಅಳತೆಯ ಮೇಲಿಂದ ನಾವು ವಿದ್ಯುತ್ತಿನ ಅಳತೆಯನ್ನು ಗೊತ್ತು ಮಾಡಬಹುದು. ಇದರಂತೆಯೇ ಯಾವದೊಂದು ರೀತಿಯಿಂದ ಮನಸ್ಸನ್ನೂ ಅಪ್ರತ್ಯಕ್ಷ ರೀತಿಯಿಂದ ಅಳೆಯಬಹುದೆಂಬ ವಿಚಾರವು ಕೆಲವರಲ್ಲಿ ಹುಟ್ಟಿತು. ತಲೆಯೇ ಇದೆಲ್ಲಕ್ಕೆ ಅಧಿಷ್ಠಾನವಾದುದು. ಈ ರೀತಿಯಾಗಿ ಸಾಮುದ್ರಿಕ ಶಾಸ್ತ್ರಜ್ಞರು ( Phrenologists ) ಹೇಳುತ್ತಿದ್ದರು. ೧೯ನೆಯ ಶತಕದ ಆದಿಯಲ್ಲಿ ಇವರ ವಿಚಾರಗಳು ಸರ್ವತ್ರ ಪಸರಿಸಿದ್ದವು. ತಲೆಯು ಮಿದುಳಿನ ದ್ಯೋತಕವೆಂದೂ, ಮಿದುಳು ಮನಸ್ಸಿನ ದರ್ಶಕವೆಂದೂ ಇವರು ಉಪದೇಶಿಸಿದರು. ಆದರೆ ಕಾಲಾಂತರದಲ್ಲಿ ಇವರ ವಿಚಾರಗಳ ಮಹತ್ವವು ಕಡಿಮೆಯಾಯಿತು; ಅವುಗಳ ಮೇಲಿನ ಜನರ ವಿಶ್ವಾಸವು ಹಾರಿಹೋಯಿತು.

ಈ ಸಾಮುದ್ರಿಕರು ತಲೆಬುರುಡೆಯೇ ಮುಖ್ಯವೆಂದು ತಿಳಿಯುತ್ತಿದ್ದರು. ಆದು ದರಿಂದ ಅವರನ್ನು ಕಪಾಲ ಸಾಮುದ್ರಿಕರೆಂದು( Phrenologists )ಕರೆಯುವದುಂಟು. ಮುಖಸಾಮುದ್ರಿಕರು ( Physiognomists)ಇವರಿಗಿಂತಲೂ ಮೊದಲಿನವರು. ಕಪಾಲ ಸಾಮುದ್ರಿಕೆಯ ಜನಕನಾದ ಗಾಲ ( Gall ) ನಿಗಿಂತ ಸುಮಾರು ೫೦ ವರ್ಷಗಳ ಪೂರ್ವದಲ್ಲಿಯೇ ಲೆವ್ಹೇಟರನು (Levater ) ಮುಖಸಾಮುದ್ರಿಕೆಯ ಮೇಲೆ ಒಂದು ಪ್ರಬಂಧವನ್ನು ಬರೆದಿದ್ದನು. ಮುಖವೇ ( ತಲೆ ಬುರುಡೆಯಲ್ಲ ) ಮನಸ್ಸಿನ ನಿದರ್ಶಕವೆಂಬುದು ಅವನ ಮುಖ್ಯ ತತ್ವವಾಗಿತ್ತು. ಉದಾಹರಣಾರ್ಥವಾಗಿ ಮನುಷ್ಯನ ಕಲಹ ವೆಸಗುವ ಪ್ರವೃತ್ತಿಯು ಅವನ ಮೂಗಿನಿಂದ ವ್ಯಕ್ತವಾಗುತ್ತದೆ. ರೋಮನ್ನರ ಮೂಗಿನಂತೆ ಮುಂದಕ್ಕೆ ಹಾಯ್ದು ಮೂಗನ್ನು ಹೊಂದಿರುವದು ಜಗಳಗಂಟತನದ ಲಕ್ಷಣವೆಂದು ಅವನ ಅಭಿಪ್ರಾಯವು. ಲೊಂಬ್ರೊಸೊನು( Lombroso )ದುರಾಚಾರ ಪ್ರವೃತ್ತಿಗೂ, ಅವಯವಗಳ ವಿಶಿಷ್ಟಸನ್ನಿವೇಶಕ್ಕೂ ಇರುವ ಸಂಬಂಧವನ್ನು ಕಂಡುಹಿಡಿಯಲು ಪ್ರಯತ್ನಿಸಿದನು. ಆದರೆ ದುಷ್ಕೃತ್ಯದಲ್ಲಿ ಯಾವಾಗಲೂ ತೊಡಗಿರುವವರ ಮನಸ್ಸಿಗೂ ಆಚರಣೆಗೂ ಇರುವ ಸಂಬಂಧವನ್ನು ಪರೀಕ್ಷಿಸಬೇಕೇ ಹೊರತು, ಶರೀರಾವಯವಗಳಿಗೂ ಆಚರಣೆಗೂ ವಿಶೇಷ ಸಂಬಂಧವಿರಲಾರದೆಂದು ಈಗಿನವರು ನಂಬುತ್ತಾರೆ.

ಸರ್ ಫ್ರಾನ್ಸಿಸ್ ಗಾಲ್ಟನ್ (Sir Frances Galton) ಎಂಬವನು ಇಂಗ್ಲಂಡದಲ್ಲಿ ಮನಃಶಕ್ತಿ ಪರೀಕ್ಷಣಕ್ಕೆ ಅತ್ಯಂತ ಪ್ರೋತ್ಸಾಹನವನ್ನಿತ್ತನು. ಆದರೆ ಅವನು ಶರೀರಾವಯವಗಳ ಅಳತೆಯ ಮೇಲೂ ವಿಶ್ವಾಸವುಳ್ಳವನಿದ್ದನು. ಬುದ್ಧಿಶಕ್ತಿಗೂ ಶರೀರಾವಯವಗಳ ವಿಶಿಷ್ಟ ಲಕ್ಷಣಕ್ಕೂ ಕೆಲವೊಂದು ಸಂಬಂಧವಿದೆಯೆಂದು ಅವನು ನಂಬುತ್ತಿದ್ದನು. ಉದಾಃ—ನಡುಬೆರಳಿನ ಉದ್ದಳತೆ, ಬೆರಳ್ದುದಿಯಲ್ಲಿರುವ ಶಂಖಚಂಕ್ರಾದಿಗಳು, ಶರೀರದ ನಿಲುವಿಕೆಗೂ ಗೇಣಿನ ಅಳತೆಗೂ ಇರುವ ಸಂಬಂಧ ಇತ್ಯಾದಿ; ಈದಿಶೆಯಲ್ಲಿ ಶೋಧಗಳೂ ವಿಚಾರವೂ ನಡೆದು ಕೊನೆಯಲ್ಲಿ ಬೆರಳುಗಳ ಶಂಕಚಕ್ರಾದಿಗಳಿಂದ ಮನೋಧರ್ಮವನ್ನು ಕಂಡುಹಿಡಿಯುವ ಪದ್ಧತಿಯು ಪ್ರಚಾರದಲ್ಲಿ ಬಂತು. ಆದರೆ ಗಿಂಟನೆಯ ವರ್ಷ ಪ್ರೊಫೆಸರ್ ಕಾಲ್ ಪೀಯರಸನ್ (Prof. Kal Pearson)ಎಂಬವನು ಈ ತತ್ವವನ್ನು ಪೂರ್ಣವಾಗಿ ವಿರೋಧಿಸಿದನು. ಮನಃಶಕ್ತಿಯು ಪರಿಮಾಣಕ್ಕೂ ಶರೀರಾವಯವಗಳ ಅಳತೆಗೂ ಏನೂ ಸಂಬಂಧವಿಲ್ಲೆಂದು ಅವನ ಅಭಿಪ್ರಾಯವು. ತಲೆಬುರುಡೆಯ ಆಕಾರ ಮತ್ತು ಪರಿಮಿತಿಗೂ, ಬುದ್ಧಿಶಕ್ತಿಯ ಸ್ಥಿತಿಗೂ ಇರುವ ಸಂಬಂಧವು ತೀರ ಕಡಿಮೆಯೆಂದೂ, ಆ ಸಂಬಂಧವನ್ನು ಅನುಲಕ್ಷಿಸಿ ಬುದ್ಧಿಶಕ್ತಿಯ ವಿಷಯಕ್ಕೆ ಊಹೆಗಳನ್ನು ಮಾಡುವದು ವ್ಯವಹಾರದಲ್ಲಿ ನಿರುಪಯುಕ್ತವೆಂದೂ ಅವನು ಸಾರಿದನು. ಅದುದರಿಂದ ಕೇವಲ ನೋಡುವದರಿಂದಲೇ ನಾವು ಯಾವನೊಬ್ಬನು ಅಪರಾಧಿಯುಂದು ನಿರ್ಣಯಿಸಲಾರೆವೆಂದೂ, ಕೇವಲ ತಲೆಬುರುಡೆಯ ಅಳತೆಯಿಂದ ಯಾವನೊ

ನು ಬುದ್ಧಿವಂತನೆಂದು ನಿಶ್ಚಯಿಸಲಾರೆವೆಂದೂ, ಕೇವಲ ಕಿವಿಗಳ ಉದ್ದಳತೆಯಿಂದ ಯಾವನೊಬ್ಬನು ಮೂರ್ಖನೆಂದು ಖಂಡಿತವಾಗಿ ಹೇಳಲಾರೆವೆಂದೂ ಸಿದ್ಧವಾಯಿತು.

ಶರೀರಾವಯಗಳ ಅಳತೆಯಿಂದ ಮನಸ್ಸಿನ ಶಕ್ತಿಯನ್ನು ಅಳಿಯಲಿಕ್ಕೆ ಬಾರದೆ ಇದ್ದರೂ, ಅವುಗಳ ಶಕ್ತಿಯ ಅಳತೆಯಿಂದ ಅದನ್ನು ಗೊತ್ತುಪಡಿಸಬಹುದೆಂದು ಕೆಲ ರಿಗೆ ಎನಿಸಹತ್ತಿತು. ಪದಾರ್ಥಶಕ್ತಿಮಾಪನವು ಯಶಸ್ವಿಯಾಗಬಹುದೆಂದು ಅವ ಗೆ ತೋರಿತು. ಅನೈಚ್ಛಿಕವಾದ ಕಾರ್ಯಗಳನ್ನುಳಿದು ಉಳಿದ ಸಂದರ್ಭಗಳಲ್ಲೆಲ್ಲ, ರೀರವು ಮಾಡುವ ಪ್ರತಿಯೊಂದು ಕೆಲಸಕ್ಕೂ ಮನಸ್ಸಿನ ಅನುಕೂಲ್ಯವು ಅವಶ್ಯವಾ ರುತ್ತದೆ. ಈ ಕಲ್ಪನೆಯು ಹುಟ್ಟಿದ ಬಳಿಕ ಅನೇಕ ಯಂತ್ರಗಳು ರಚಿಸಲ್ಪಟ್ಟವು. ಂತಾ: —ಪದಾರ್ಥ ಶಕ್ತಿಮಾಪಕ ಯಂತ್ರವು ಮನುಷ್ಯನ ಮುಷ್ಟಿಯ ಶಕ್ತಿಯನ್ನು ೊತ್ತುಹಿಡಿಯುತ್ತದೆ; ಮತ್ತು ಇನ್ನೊಂದು ತರದ ಯಂತ್ರದಿಂದ ( Ergograph ) ಡುವಿನ ಬೆರಳಿನ ಶಕ್ತಿಯೂ ಭಾರವಹನವೂ ಗೊತ್ತಾಗುತ್ತದೆ. ಇದಾದ ಬಳಿಕ ಶರೀ ವನ್ನು ಮೆಲ್ಲನೆ ಬಾರಿಸಿ (Tapping) ಅದರಿಂದ ಶರೀರದ ಚಲನಶಕ್ತಿಯನ್ನು, ಗೊತ್ತು ರಚ್ಚುವ ಕ್ರಮವು ಪ್ರಚಾರಕ್ಕೆ ಬಂತು.

ಶಕ್ತಿಗೂ ಕಾರ್ಯಕ್ಕೂ ನಡುವೆ ಇರುವ ಕಾಲದ ಅಳತೆಯನ್ನು ಗೊತ್ತುಪಡಿ ಸುವ ಪ್ರಯೋಗಗಳಿಂದ ಅತ್ಯುತ್ತಮವಾದ ಪರೀಕ್ಷಾಕ್ರಮವು ಗೊತ್ತಾಯಿತು. ಹೀಗೆ ಈ ಅಳತೆಗಳು ಮೊದಲು ಮಾನಸಿಕ ಮತ್ತು ಶಾರೀರಿಕವೆಂಬ ಎರಡೂ ಬಗೆಯವಾಗಿ ದ್ದರೂ ಕೊನೆಯಲ್ಲಿ ಮಾತ್ರ ಕೇವಲ ಮಾನಸಿಕವಾಗಿ ಪರಿಣಮಿಸಿದವು. ಈ ಪ್ರಯೋ ಗಗಳಿಂದ ವಿಶಿಷ್ಟತರದ ಮಾನಸಿಕ ಕ್ರಿಯೆಗಳ ಪರಿಮಾಣವನ್ನು ಮಾಡುವದು ಗೊತ್ತಾ ಯಿತು. ಇದಾದ ಮೇಲೆ ಪ್ರೇರಣೆಯ ಬೆಳೆವಣಿಗೆಗೂ ಇಂದ್ರಿಯಜನ್ಯಜ್ಞಾನದ ಬೆಳೆವ ಣಿಗೆಗೂ ನಿಕಟಸಂಬಂಧವಿರುತ್ತದೆಂಬ ತತ್ವವು ಪ್ರಚಾರದಲ್ಲಿ ಬಂತು. ಇದಕ್ಕೆ ವೆಬರ್ ಫೆಕ್ನರ್ ನಿಯಮ (Weber-fechner Law) ವೆಂದು ಹೆಸರು, ಇದರಿಂದ ಇಂದ್ರಿಯ ಸಂವೇದನೆಗಳ ಅದರಲ್ಲಿಯೂ ಘ್ರಾಣೇಂದ್ರಿಯ ಮತ್ತು ಚಕ್ಷುರಿಂದ್ರಿಯಗಳ ಸಂವೇದನೆ ಗಳ ಪರಿಮಾಣವನ್ನು ಗೊತ್ತುಪಡಿಸುವದಕ್ಕೆ ಅವಕಾಶವಾಯಿತು. ಅದರಿಂದಲೇ ನೇಕ ತರದ ಕ್ರಮಗಳು (i. e inkblot tests, aesthesometer and Modou Hall's dotting machines ) ನಿರ್ಮಿತವಾದವು. ಆದರೆ ಮನಃಸಾಮರ್ಥ್ಯದ ಅಳತೆ ಯನ್ನು ಗೊತ್ತುಮಾಡುವ ಈ ಪ್ರಯತ್ನಗಳೆಲ್ಲ ಬಹುತರ ನಿಷ್ಫಲವಾದುವೆಂದೇ ಹೇಳ ಬೇಕಾಗಿದೆ.

ಹೀಗೆ ಮನಃಶಕ್ತಿಪರೀಕ್ಷಣದ ವಿಶಿಷ್ಟಕ್ರಮಗಳು ದಿನದಿನಕ್ಕೆ ಸುಧಾರಿಸುತ್ತಲೂ, ಮುಂದಡಿಯನ್ನಿಕ್ಕುತ್ತಲೂ ನಡೆದಾಗ, ಸರ್ವಸಾಮಾನ್ಯವಾಗಿ ಬುದ್ಧಿಶಕ್ತಿಯ ಪರಿಮಾಣ ವನ್ನು ಮಾಡುವ ಪ್ರಯತ್ನವು ಎಲ್ಲಿಯವರೆಗೆ ಬಂದು ಮುಟ್ಟಿತ್ತೆಂಬುದನ್ನು ನೋಡುವದೂ

ಅವಶ್ಯವಾಗಿದೆ. ಸಿರಿಲ್ ಬರ್ಟ್ ( Cyril Burt ) ನೆಂಬವನು ಈ ವಿಷಯದಲ್ಲಿ ಇತರ ಎಲ್ಲ ಆಂಗ್ಲ ಮಾನಸಶಾಸ್ತ್ರಜ್ಞರಿಗಿಂತಲೂ ಹೆಚ್ಚು ಪ್ರಯತ್ನ ಮಾಡಿದವನು. ಇವನು ಆಕ್ಸ್‌ಫರ್ಡ್‌ದಲ್ಲಿದ್ದ ಹುಡುಗರಲ್ಲಿ ತನ್ನ ಪ್ರಯೋಗಗಳನ್ನು ಮಾಡಿ ನೋಡಿದನು. ಇದೇ ವೇಳೆಗೆ ಅಂದರೆ ಕ್ರಿ. ಶ. ೧೯೦೫ರಲ್ಲಿ ಆಲ್ಫ್ರೆಡ್ ಬಿನೆಟ್ ( Alfred Binet ) ಎಂಬ ಫ್ರೆಂಚ ಮಾನಸಶಾಸ್ತ್ರಜ್ಞನು ತನ್ನ ಪರೀಕ್ಷಾಕ್ರಮಗಳ ಪ್ರಥಮ ಮಾಲೆಯನ್ನು ಪ್ರಸಿದ್ಧಿಸಿದನು. ಇವನು ೧೩½ ವರ್ಷಗಳಿಂದ ೧೩½ ವರ್ಷಗಳ ವರೆಗಿನ ಹುಡುಗರನ್ನು ಆರಿಸಿದನು, ಮತ್ತು ಮುಖ್ಯಾಧ್ಯಾಪಕನ ಹಾಗು ವರ್ಗದ ಶಿಕ್ಷಕನ ಅಭಿಪ್ರಾಯವನ್ನೂ ಸಾಲೆಯಲ್ಲಾದ ಪರೀಕ್ಷೆಗಳ ಪರಿಣಾಮವನ್ನೂ ಪೂರ್ಣವಾಗಿ ನಂಬಿ. ಆ ಹುಡುಗರಲ್ಲಿ ಅವರವರ ಬುದ್ಧಿಶಕ್ತಿಗನುಗುಣವಾಗಿ ಬೇರೆ ಬೇರೆ ಗುಂಪುಗಳನ್ನು ಮಾಡಿದನು. ಆ ಮೇಲೆ ಮನಃಶಕ್ತಿಪರೀಕ್ಷಕವಾದ ಹನ್ನೆರಡು ಅಭ್ಯಸನಗಳನ್ನು ಆ ಹುಡುಗರಿಗೆ ಕೊಟ್ಟನು. ಈ ಅಭ್ಯಸನಗಳು ಕ್ರಮಕ್ರಮವಾಗಿ ಹೆಚ್ಚು ಹೆಚ್ಚು ಕಠಿಣವಾದವುಗಳೂ, ಹುಡುಗರ ವಿಚಾರಶಕ್ತಿಯನ್ನು ಪರೀಕ್ಷಿಸುವಂತಹಗಳೂ ಇದ್ದವು. ಆ ಮೇಲೆ ಶಿಕ್ಷಕರ ಅಭಿಪ್ರಾಯಕ್ಕೂ, ಈ ಪರೀಕ್ಷೆಯ ಪರಿಣಾಮಕ್ಕೂ ಎಷ್ಟರ ಮಟ್ಟಿಗೆ ಮೇಳಬೀಳುವದೆಂಬದನ್ನು ನೋಡುತ್ತಿದ್ದನು. ಇವೆರಡರಲ್ಲಿಯೂ ಸಾಮ್ಯವು ಹೆಚ್ಚುಹೆಚ್ಚಾಗಿ ಬಂದಂತೆ, ಪರೀಕ್ಷಾಕ್ರಮವು ಹೆಚ್ಚುಹೆಚ್ಚಾಗಿ ಸಮಾಧಾನಕರವಾಗಿದೆಯೆಂದು ತಿಳಿಯಬೇಕೆಂಬದು ಸ್ಪಷ್ಟವೇ ಇದೆ. ಬುದ್ಧಿಶಕ್ತಿಯ ಪರೀಕ್ಷೆಮಾಡುವ ಎಲ್ಲ ಅಭ್ಯಸನಗಳಲ್ಲಿ ಗ್ರಾಹಕಶಕ್ತಿಯನ್ನು ಪರೀಕ್ಷಿಸುವಂತಹವು ಎಲ್ಲಕ್ಕೂ ಶ್ರೇಷ್ಠವಾದವುಗಳು. ಇಂತಹ ಪ್ರಯೋಗಗಳಿಂದ ಸಿದ್ಧವಾದುದೇನೆಂದರೆ:—ನಾವು ಮನಸ್ಸಿನ ಶಕ್ತಿಯನ್ನು ಪರೀಕ್ಷಿಸಬೇಕಾಗಿದ್ದರೆ, ಅದನ್ನು ಪ್ರತ್ಯಕ್ಷವಾಗಿಯೇ ಪರೀಕ್ಷಿಸಬೇಕೇ ಹೊರತು ಅಪ್ರತ್ಯಕ್ಷರೀತಿಯ ಪರಿಮಾಣವು ಫಲಕಾರಿಯಾಗಲಾರದು; ಮತ್ತು ಯಂತ್ರಗಳೂ, ಇತರ ಸಾಧನಗಳೂ ಮಾನಸಶಾಸ್ತ್ರದ ಪ್ರಯೋಗಶಾಲೆಗೇ ಹೆಚ್ಚು ಯೋಗ್ಯವಾದವುಗಳೆಂದೂ, ಮನಸ್ಸಿನ ಕೆಲವೊಂದು ಶಾಖೆಗಳ ವಿಚಾರದಲ್ಲಿ ಅವುಗಳ ಉಪಯೋಗವು ವ್ಯಾವಹಾರಿಕದೃಷ್ಟಿಯಿಂದಲೂ ಆಗಬಹುದೆಂದೂ ಶಿಕ್ಷಣಕೋವಿದರು ಅಭಿಪ್ರಾಯಪಟ್ಟರು. ಪ್ರತ್ಯಕ್ಷ ಶಿಕ್ಷಣದಲ್ಲಿ ಇಂತಹ ಯಂತ್ರಗಳ ಉಪಯೋಗವು ತಕ್ಕಷ್ಟು ಆಗುವದಿಲ್ಲ. ಮತ್ತು ಮನಸ್ಸಿನ ಶಕ್ತಿಯನ್ನು ಅಳೆಯುವ ಯಂತ್ರವನ್ನು ಇನ್ನೂ ಯಾರೂ ಕಂಡುಹಿಡಿದಿಲ್ಲ; ಇಷ್ಟೇ ಅಲ್ಲ; ಇಂತಹ ಯಂತ್ರವನ್ನು ಹುಡುಕುವದು ಶಕ್ಯವೋ ಎಂಬ ವಿಷಯದಲ್ಲಿ ತದ್ಜ್ಞರು ದಿನದಿನಕ್ಕೆ ಕಡಿಮೆ ಕಡಿಮೆ ನಂಬುಗೆಯುಳ್ಳವರಾಗುತ್ತ ನಡೆದಿದ್ದಾರೆ.

( ಮುಂದೆ ಸಾಗುವದು. )

# ಸಂಪಾದಕರ ಪ್ರವಾಸ.

ಟ್ರೇ. ಕಾ. ಕ್ಕೆ ಚಳಿಗಾಲದ ಸೂಟಿ ಇದ್ದದರಿಂದ ಪುಣೆಯು ಬೇಸಾಯದ ಪ್ರದರ್ಶನವನ್ನೂ ಮುಂದೆ ಮುಂಬೈ ಬಡೋದಾ ಅಹಮ್ಮದಾಬಾದ ಪಟ್ಟಣಗಳನ್ನೂ ನೋಡಬೇಕೆಂಬ ಕುತೂಹಲದಿಂದ ಇಲ್ಲಿಂದ ೨೯ನೇ ಅಕ್ಟೋಬರದ ದಿವಸ ಹೊರಟು ಪುಣೆಗೆ ೩೦ನೇ ತಾ. ಗೆ ಮುಟ್ಟಿದೆವು. ೩೧ನೇ ತಾ. ಗೆ ಪ್ರದರ್ಶನವು ಮುಗಿಯುವದಿದ್ದದರಿಂದ ಬುಗಿಬಂಡಿಯಲ್ಲಿ ಜನರ ಗದ್ದಲವು ಕಡಿಮೆಯಾಗಿತ್ತು. ಪುಣೆಯ ಪ್ರದರ್ಶನವನ್ನು ೩೦ ನುತ್ತು ೩೧ನೇ ತಾರೀಖಿನ ದಿವಸಗಳಲ್ಲಿ ನೋಡಿದೆವು. ಅದರ ವರ್ಣನೆಯನ್ನು ಮುಂದೆ ೀರಿ ಕಡೆಗೆ ಕೊಟ್ಟಿದೆ. ಪುಣೆ ಪಟ್ಟಣವು ಶಿಕ್ಷಣದ ದೃಷ್ಟಿಯಿಂದ ಮಹತ್ವದ ಪಟ್ಟಣವಾಗಿದೆ. ಇಲ್ಲಿ ಫರ್ಗ್ಯುಸನ್, ನ್ಯೂಪೂನಾ, ಡೆಕ್ಕನ್, ಎಂಜಿನಿಯರಿಂಗ, ಅಗ್ರಿಕಲ್ಚರಲ್, ಒಕ್ಕಲತನದ) ಮತ್ತು ಲಾ ಎಂಬ ೬ ಕಾಲೇಜಗಳು ಇರುವವು. ಅವುಗಳಲ್ಲಿ ನೊದಲಿನವು ಮೂರು ಆರ್ಟ್ಸ್ ಕಾಲೇಜುಗಳೂ ಉಳಿದ ಮೂರು ವ್ಯವಸಾಯವನ್ನು ಕಲಿಸುವ ಸಂಸ್ಥೆಗಳೂ ಆಗಿರುವವು. ಇಲ್ಲಿಯ ಜನಸಂಖ್ಯೆಯಲ್ಲಿ ಒಂದು ಕಾಲಪಾಲಷ್ಟು ವಿದ್ಯಾರ್ಥಿಗಳೇ ಇರುವರು. ಇದಲ್ಲದೆ ಈ ಪಟ್ಟಣವು ಮುಂಬೈ ಗವ್ಹರ್ನರರ ಮಳಿಗಾಲದ ರಾಜಧಾನಿಯಾದ್ದರಿಂದ ವಿಶೇಷ ಮಹತ್ವವುಂಟಾಗಿದೆ. ಇಲ್ಲಿ ನೋಡತಕ್ಕ ಅನೇಕ ಸಂಗತಿಗಳಿರುವವು. ಉಪವನಗಳಲ್ಲಿ ಬಂಡಗಾರ್ಡನ್, ಎಂಪ್ರೆಸ್ ಗಾರ್ಡನ್, ಗಣೇಶಖಿಂಡ ಗಾರ್ಡನ್ ಇವು ಪ್ರಸಿದ್ಧ. ಬಂಡ ಅಂದರೆ ಮುಳಾ ಮುತಾ ನದಿಗೆ ಹಾಕಿದ ಒಡ್ಡು. ಅದರ ಸವಿಾಪಕ್ಕೆ ಇರುವ ತೋಟಕ್ಕೆ ಬಂಡಗಾರ್ಡನ್ ಎಂದೆನ್ನುವರು. ಎಂಪ್ರೆಸ್ ಗಾರ್ಡನ್ ಎಂಬದು ದಂಡಿನ ಛಾವಣಿಯ ಆಚೆಗೆ ಇರುವದು. ಗಣೇಶಖಿಂಡ ಎಂಬದು ಗವ್ಹರ್ನರ ಸಾಹೆ ರ ಹಣ್ಣಿನ ತೋಟವು.

ಊರಲ್ಲಿದ್ದ ಪ್ರಸಿದ್ಧ ಹಣ್ಣುಹಂಪಲ ಕಾಯಿಪಲ್ಲೆಗಳ ಮಾರ್ಕೆಟಿಗೆ ರೇ ಮಾರ್ಕೆಟ ಎಂದೆನ್ನುವರು. ಪುಣೆಯ ಜನರು ಇದಕ್ಕೇ ಮಂಡಯಿ ಎನ್ನುವರು. ಇಲ್ಲಿ ಬೆಳಗಿನ ೮ ಗಂಟೆಗೆ ದೊಡ್ಡ ಜನರು ಸಹ ಜೋಳಿಗೆಗಳೊಳಗೆ ಪಲ್ಲೆಕಾಯಿಗಳನ್ನು ಹಾಕಿಕೊಂಡು ಹೋಗುತ್ತಿರುವದನ್ನು ನೋಡಬಹುದು.

ಈಚೆಗೆ ೧೯೧೯ ವರ್ಷಗಳಿಂದ ಸೇವಾಸದನ ಎಂಬ ಸಂಸ್ಥೆಯು ನಡೆದಿರುವದು. ಹೆಣ್ಣುಮಕ್ಕಳಿಗೆ ಉಪಯುಕ್ತವಾದ ಉದ್ಯೋಗಗಳನ್ನು ಕಲಿಸುವದೇ ಈ ಸಂಸ್ಥೆಯ ಉದ್ದೇಶವು. ಬೇನೆ ಬಿದ್ದವರಿಗೆ ಆರೈಕೆ ಮಾಡಲಿಕ್ಕೆ ತಕ್ಕವರಾಗುವಂತೆ ಕೆಲವು ಹೆಣ್ಣು ಮಕ್ಕಳಿಗೆ ನರ್ಸಿಂಗದ ಶಿಕ್ಷಣವನ್ನು ಕೊಡುವರು. ಶಿಕ್ಷಕಿಯರನ್ನು ಸಿದ್ಧಮಾಡುವ ಒಂದು ಟ್ರೇನಿಂಗ ಕಾಲೇಜು ಸಹ ಸೇವಾಸದನದಲ್ಲಿರುವದು. ಅಲ್ಲಿ ಒಂದು ನೂರು ಜನ ಶಿಕ್ಷಕಿಯರಿಗೆ ಶಿಕ್ಷಣ ಕೊಡುತ್ತಿರುವರು. ಈ ಶಿಕ್ಷಕಿಯರಿಗೆ ಮುಂಬೈ ಇಲಾಖೆಯಲ್ಲಿ

ಮತ್ತು ಹೊರಗೆ ಇದ್ದ ಸಂಸ್ಥಾನಗಳಲ್ಲಿಯೂ ಮಧ್ಯಪ್ರಾಂತದಲ್ಲಿಯೂ ಕೆಲಸವು ದೊ
ಯುವದು. ಮಧ್ಯಾನ್ಹದ ಹೊತ್ತಿನಲ್ಲಿ ಊರೊಳಗಿನ ಹೆ. ಮಕ್ಕಳ ಸಲುವಾಗಿ ಹೊ
ಗೆಯ ವರ್ಗವೂ ಶಿಕ್ಷಣದ ವರ್ಗಗಳೂ ನಡೆಯುವವು.

ಊರಲ್ಲಿ ಓಣಿಗೆ ಒಂದೊಂದರಂತೆ ನೀರಿನ ದೊಡ್ಡ ಹೌದುಗಳಿರುವವು. ಅವುಗ
ದಂಡಿಗೆ ಜನರು ಬೆಳಿಗ್ಗೆ ಎದ್ದು ಸ್ನಾನಮಾಡಿ ಅರಿವೆಗಳನ್ನು ಒಗೆದುಕೊಳ್ಳುವರು.

## ಒಕ್ಕಲತನದ ಪ್ರದರ್ಶನ.

ಈ ಪ್ರದರ್ಶನವನ್ನು ಪುಣೆಯ ಒಕ್ಕಲತನದ ಕಾಲೇಜಿನ ವಿಸ್ತೀರ್ಣವಾ
ಬೈಲು ಪ್ರದೇಶದದಲ್ಲಿ ನೆರವೇರಿಸಿದ್ದರು. ಈ ಸ್ಥಳವು ಸುಮಾರು ೩ ಮೈಲು ವಿಸ್ತಾ
ವಾಗಿದೆ. ಅದರಲ್ಲಿ ಬೇರೆ ಬೇರೆ ವಿಭಾಗಗಳನ್ನು ಕಲ್ಪಿಸಿ ಅವುಗಳಲ್ಲಿ ಬೇರೆ ಬೇ
ವಸ್ತುಗಳನ್ನು ಇಟ್ಟಿದ್ದರು. ಪ್ರದರ್ಶನಕ್ಕೆ ಸಾವಿರಾರು ಜನರು ಬೇರೆ ಬೇರೆ ವಾಹ
ಗಳಿಂದ ಬರುವದೂ ಹೋಗುವದೂ ನಡೆದಿತ್ತು. ವಾಹನಗಳನ್ನು ಬಿಟ್ಟು ಇಳಿದೊಡ
ವಿಶಾಲವಾಗಿ ಬೆಳೆದ ಗುಲ್ಮೊಹರ ಗಿಡಗಳ ದಟ್ಟಾದ ನೆರಳಿನಲ್ಲಿ ಮುಂದೆಸಾಗಲು ಬಲ
ಡೆಗೆ ಅನೇಕ ವಿಶ್ರಾಂತಿಗೃಹಗಳು ಇದ್ದವು.

**ನೀರಿನ ಕೆಲಸ:—** ತುಸು ಮುಂದೆ ಹೋಗಲು ಬೇಸಾಯದ ಕೆಲಸಗಳಿ
ನೀರಿನ ಪೂರೈಕೆ ಹೇಗೆ ಮಾಡಬಹುದೆಂಬದನ್ನು ತೋರಿಸುವ ಹಲವು ವಿಧ
ಯಂತ್ರಗಳು ಇಡಲ್ಪಟ್ಟಿದ್ದವು. ಅವುಗಳ ಪ್ರಯೋಗಗಳು ಸತತವಾಗಿ ನಡೆದಿದ್ದವು
ಜನರು ಆಯಾ ಯಂತ್ರಗಳ ಸುತ್ತಲು ನೆರೆದು ಅವುಗಳ ಉಪಯೋಗ ಮುಂತಾದ
ಗಳ ಬಗ್ಗೆ ಬೇಕಾದ ಮಾಹಿತಿಗಳನ್ನು ಕೇಳಿಕೊಳ್ಳುತ್ತಿದ್ದರು. ನೀರಿನ ಪೂರೈ
ಕೆಯು ಇಲ್ಲದಿರುವಂಥ ಅಥವಾ ಬಹಳ ಆಳವಾದ ಬಾವಿಗಳಿರುವಂಥ ಸ್ಥಳಗಳ
೩೦—೪೦೦ ಫೂಟು ಆಳವಾದ ಬಾವಿಗಳಿಂದಲೂ ಸಹ 'ಬೋರಿಂಗ' ಯಂತ್ರ
ಸಹಾಯದಿಂದ ನೀರನ್ನು ಒದಗಿಸಿಕೊಡುವ ಕ್ರಮವನ್ನು ಇಲ್ಲಿ ತೋರಿಸುತ್ತಿದ್ದರು
೨ ಇಂಚಿನಿಂದ ೧೦ ಇಂಚಿನವರೆಗೆ ವ್ಯಾಸವಿರುವ ನಳದ ಕೊಳವೆಗಳಲ್ಲಿ ನೀರನ್ನು ಮೇ
ಏರಿಸುವ ಬೇರೆ ಬೇರೆ ಪ್ರಕಾರದ ರಚನೆಯನ್ನು ತೋರಿಸಿದ್ದರು.

**ತೋಟದ ಕೆಲಸ:—** ಎಡಗಡೆಗೆ ನಾನಾತರದ ಹಣ್ಣುಹಂಪಲಗಳ ಗಿ
ಗಳನ್ನೂ ಹಣ್ಣುಗಳ ಮಾದರಿಗಳನ್ನೂ ಇಟ್ಟಿದ್ದರು. ಒಂದು ಬಾಳೆಯ ಗೊನೆಯ
೫–೬ ಫೂಟು ಎತ್ತರವಾಗಿದ್ದು ಅದರಲ್ಲಿ ತುಂಬಾ ಕಾಯಿಗಳಿದ್ದವು. ಹಣ್ಣುಗಳಿಂ
ತಯಾರಿಸುವಂಥ ಗುಳಂಬ, ಪಾಕ, ಪಾನಕ, ಮುಂತಾದವುಗಳ ಮಾದರಿಗಳನ್ನು ಸಿದ್ಧ

ಡಿಸಿ ಇಟ್ಟಿದ್ದರು. ಕಿತ್ತಳೆ ಹಣ್ಣುಗಳು ಒಂದೊಂದು ತೆಂಗಿನಕಾಯಿಯಷ್ಟು ದೊಡ್ಡ ದ್ದವು. ತುಸು ಮುಂದಕ್ಕೆ ಹೋದರೆ ಹೂವುಗಳ ಮತ್ತು ಎಲೆಗಳ ಸೌಂದರ್ಯದ ವಿಧತೆಯನ್ನು ತೋರ್ಪಡಿಸುವ ತೋಟಗಳು ರಚಿಸಲ್ಪಟ್ಟಿದ್ದವು. ಹಳದಿ, ಸರು ಬಣ ದ ಎಲೆಗಳುಳ್ಳ ಗಿಡಗಳ ಬೇರಿ ಬೇರಿ ಗುಂಪುಗಳು ಬಹು ಮನೋಹರ ಾಗಿ ತೋರುತ್ತಿದ್ದವು. ತೋಟದ ಕೆಲಸದಲ್ಲಿ ಉತ್ಸಾಹವುಳ್ಳ ಜನರು ತಮ್ಮ ತಮ್ಮ ಿಡಗಳನ್ನು ಕುಂಡೆಗಳಲ್ಲಿ ಬೆಳಿಸಿ ಪ್ರದರ್ಶನಕ್ಕೆ ತಂದು ಸುವ್ಯವಸ್ಥೆಯಿಂದ ಇಟ್ಟು ಶೀಕ್ಷಕರ ಮನಸ್ಸನ್ನು ಆಕರ್ಷಿಸುವಂತೆ ಮಾಡಿದ್ದರು.

**ಹುಟ್ಟುವಳಿ :—** ಒಕ್ಕಲತನದ ಕಾಲೇಜಿನ ಕಟ್ಟಿಡದ ಪಡಸಾಲೆಯ ಒಂದು ಾಗದಲ್ಲಿ ಪುಣೆಯ ಸೇವಾಸದನದವರೂ ಬೇರೆ ವ್ಯಾಪಾರಸ್ಥರೂ ಬಟ್ಟೆ, ಗೊಂಬೆ ುಂತಾದ ಸಾಮಾನುಗಳನ್ನು ಮಾರಾಟಕ್ಕಾಗಿ ಇಟ್ಟಿದ್ದರು. ಮತ್ತೊಂದು ಭಾಗದಲ್ಲಿ ಲ್ಲ ಪ್ರಕಾರದ ಜೋಳ, ಗೋದಿ, ಭತ್ತ, ರಾಗಿ, ನವಣೆ, ಕಡಲೆ ಮುಂತಾದ ಧಾನ್ಯಗ ನ್ನೂ ಉಳ್ಳೀಗಡ್ಡೆ, ಬೆಳ್ಳುಳ್ಳಿ, ಅರಿಷಣ, ಅಲ್ಲ, ಗೆಣಸು, ಬಟಾಟೆ ಮುಂತಾದ ಗಡ್ಡೆ ೀರುಗಳನ್ನೂ ತಬಕದಲ್ಲಿ ಹಾಕಿ ವ್ಯವಸ್ಥಿತವಾಗಿ ಇಟ್ಟಿದ್ದರು. ಹತ್ತಿ, ತಂಬಾಕ, ಬ್ಬು ಮುಂತಾದ ಕೃಷಿಜನ್ಯ ವಸ್ತುಗಳ ಮಾದರಿಗಳನ್ನು ಒಂದೊಂದು ಕೋಣೆ ುಲ್ಲಿ ಇಟ್ಟಿದ್ದರು. ಸಿಂಧಪ್ರಾಂತವಿಂದ ಕರ್ನಾಟಕದವರೆಗೆ ಇಡೀ ಮುಂಬಯಿ ಜಲಾಜೆಯ ಬೇರೆ ಬೇರೆ ಭಾಗಗಳಲ್ಲಿ ತಯಾರಾದಂಥ ಗುಡಾರ, ಧೋತರ, ುದಿಬಟ್ಟೆ, ಚಾಪೆ, ಕಟ್ಟಿಗೆಯ ಸಾಮಾನುಗಳು, ಶ್ರೀಗಂಧದ ಒಡವೆಗಳು, ತೊಗಲಿನ ತದಾರ್ಥಗಳು ಬೇರೆ ಬೇರೆ ಸ್ಥಳಗಳ ಸಹಕಾರಿ ಸಂಘಗಳಿಂದ ಬಂದಿದ್ದವು.

**ಕ್ರಿಮಿಕೀಟಕಗಳು :—**ಬೆಳೆಗಳನ್ನು ಹಾಳುಮಾಡುವಂಥ ನಾನಾತರದ ಕ್ರಿಮಿ-ಕೀಟಗಳನ್ನೂ ಅವುಗಳನ್ನು ನಾಶಮಾಡಿ ಬೆಳೆಗಳನ್ನು ಹೇಗೆ ರಕ್ಷಿಸಿಕೊಳ್ಳಬಹುದೆಂಬ ನ್ನೂ ಅಲ್ಲಿ ನೋಡಬಹುದಾಗಿತ್ತು.

**ವಿನೋದದ ಭಾಗ :—** ಒಂದು ಕಡೆಗೆ ಪ್ರೇಕ್ಷಕರ ವಿನೋದಕ್ಕಾಗಿ ಕೆಲವು ಪ್ರಯೋಗಗಳನ್ನು ಮಾಡಿ ತೋರಿಸುತ್ತಿದ್ದರು. ಹೆಚ್ಚು ಹಣ ಕೊಟ್ಟು ಕಾಯಂ ಟಿಕೀಟುಗ ನ್ನು ತೆಗೆದುಕೊಂಡವರಿಗೂ ಹೆಂಗಸರಿಗೂ ಒತ್ತಟ್ಟಿಗೆ ಸ್ಥಳಗಳನ್ನು ಏರ್ಪಡಿಸಿದ್ದರು. ಮಧ್ಯದಲ್ಲಿ ಗವ್ಹರ್ನರ ಸಾಹೇಬ ಮತ್ತು ಸುಪ್ರತಿಷ್ಠಿತ ಜನರ ಸಲುವಾಗಿ ಮೇಲ್ತರದ ಆಸನಗಳನ್ನು ರಚಿಸಿದ್ದರು. ಗವ್ಹರ್ನರ ಸಾಹೇಬರು ತಮಗೆ ಅನುಕೂಲವಿದ್ದಾಗ ಅಲ್ಲಿಗೆ ಬರುತ್ತಿದ್ದರು. ದಿನಾಲು ಒಂದೊಂದು ತರದ ಕಾರ್ಯಕ್ರಮವಿರುತ್ತಿತ್ತು. ಒಂದು ದಿವಸ ಸೈನಿಕರ ಯುದ್ಧದ ಕ್ರಮವನ್ನು ತೋರಿಸಿದರು. ಅದರಲ್ಲಿ ಕಾಲಾಳುಗಳೂ, ಕುದುರೆಯ ಸ್ವಾರರೂ, ತೋಪುಗಳೂ ಉಳ್ಳ ಒಂದು ಸೈನ್ಯದ ವಿಭಾಗವು ಒಂದು ಹಳ್ಳಿಯ ಮೇಲೆ

ಹಲ್ಲಿ ಮಾಡುವ ಕ್ರಮವು ತೋರಿಸಲ್ಪಟ್ಟಿತು. ಮತ್ತೊಂದು ದಿನ ಕೊಲ್ಲಾಪುರ ನುಹ
ರಾಜರ ದರ್ಬಾರಿನೊಳಗಿನ ಒಂದು ಆನೆಯು ಮೂಲೆಯನ್ನು ಹಾಕುವದು, ತುರಾಯಿ
ಯನ್ನು ಕೊಡುವದು, ಬೀಸಣಿಕೆಯಿಂದ ಗಾಳಿಯನ್ನು ಬೀಸುವದು ಮುಂತಾದ ಕೆಲ
ಗಳನ್ನೂ, ಸರ್ಕಸಿನಲ್ಲಿ ಮಾಡುವಂಥ ಅನೇಕ ಕಸರತ್ತುಗಳನ್ನೂ ಮಾಡಿ ತೋರಿಸಿತು
ಇದಲ್ಲದೆ ಪುಣೆಯ ಮಹಾರಾಷ್ಟ್ರ ವ್ಯಾಯಾಮ ಶಾಲೆಯಲ್ಲಿ ತಯಾರಾದ ಜನರು ಭಾ
ಗಳನ್ನು ಎಸೆಯುವದು, ಡ್ರಿಲ್ಲು ಮಾಡುವದು, ಶಾರೀರಕ ಕಸರತ್ತು ಮಾಡುವದು ಇ
ಗಳನ್ನು ತೋರಿಸಿದರು. ಸ್ಕೌಟಿನ ಜನರು ಬ್ಯಾಂಡು ಬಾರಿಸುತ್ತಿದ್ದರು. ಕೊಲ್ಹಾಪುರ
ಮಹಾರಾಜರ ಜಟ್ಟಿಗಳು ಕುಸ್ತಿಯನ್ನು ಆಡಿದರು.

**ಯಂತ್ರವಿಭಾಗ**ದಲ್ಲಿ ಒಕ್ಕಲತನಕ್ಕೆ ಬೇಕಾಗುವ ಎಲ್ಲ ಪ್ರಕಾರದ ಯಂತ್ರ
ಸಾಮಗ್ರಿಗಳನ್ನು ಸಂಗ್ರಹಿಸಿದ್ದರು. ೨೦ – ೨೫ ಕಂಪನಿಯವರು ತಮ್ಮಲ್ಲಿ ತಯಾ
ರಾಗುವ ಎಲ್ಲ ವಿಧದ ಯಂತ್ರಗಳ ಮಾದರಿಗಳನ್ನು ಅಲ್ಲಿ ಇಟ್ಟಿದ್ದು ಅವುಗಳ ಉಪ
ಯೋಗಗಳನ್ನು ಸಪ್ರಯೋಗವಾಗಿ ಮಾಡಿ ತೋರಿಸುತ್ತಿದ್ದರು.

ಆಯುಧ ವಿಭಾಗದಲ್ಲಿ ಬೇಸಾಯದ ಎಲ್ಲತರದ ಆಯುಧಗಳ ಪ್ರಕಾರಗಳನ್ನ
ಹಲವು ಕಂಪನಿಯವರು ತಂದು ಇಟ್ಟಿದ್ದರು. ಸಾತಾರೆಯ ಇಂಡಸ್ಟ್ರಿಯಲ್‌ವರ್ಕ್ಸ್
ವರೂ ಕಿರ್ಲೋಸ್ಕರ ಕಂಪನಿಯವರೂ ತಮ್ಮ ಲ್ಲಿಯ ಒಕ್ಕಲತನದ ಉಪಕರಣಗಳನ್ನ
ಅಲ್ಲಿ ತಂದು ಇಟ್ಟಿದ್ದರು. ಈ ಭಾಗವು ನಮ್ಮ ಒಕ್ಕಲಿಗರಿಗೆ ವಿಶೇಷ ಉಪಯೋ
ಗವಾಗುವಂತೆ ಇದ್ದಿತು.

**ದನಗಳು:**—ಮೈಸೂರು, ಕರ್ನಾಟಕ, ಗುಜರಾಥ, ಸಿಂಧ ಮೊದಲಾದ ಬೇ
ಬೇರೆ ಪ್ರಾಂತಗಳೊಳಗಿನ ಉತ್ಕೃಷ್ಟ ದನಗಳ ಮಾದರಿಗಳನ್ನು ಇಲ್ಲಿ ಸಂಗ್ರಹಿಸಿದ್ದರು
ಎತ್ತು, ಆಕಳು, ಎಮ್ಮೆ, ಕೋಣ, ಕುರಿ, ಆಡು, ಕೋಳಿ, ಅಂಗೋರಾ, ಮರಿಸೊ
ಜಾತಿಯ ಕುರಿ ಮುಂತಾದವುಗಳನ್ನು ಇಟ್ಟಿದ್ದರು. ಒಂದು ಐದು ಕಾಲಿನ ಎಮ್ಮೆಯ
ಬಿಳೇ ಚಿಗರೆಯೂ ಜನರಿಗೆ ಆಶ್ಚರ್ಯದ ನೋಟವಾಗಿದ್ದವು. ಸಿಂಧದ ಹಾಗು ಇಂಗ್ಲ
ಡದ ದನಗಳ ಮಿಶ್ರಜಾತಿಯ ಆಕಳುಗಳು ದಿನಾ ೨೦–೨೫ ಸೇರು ಹಾಲು ಹಿಂಡು
ದ್ದವು. ಅವುಗಳಿಗೆ ಇಣಿ ಇದ್ದಿಲ್ಲ. ಬಿಂದಿಗೆಯಂಥ ಕೆಚ್ಚಲವಿತ್ತು. ಇವುಗಳ ಬೆಲೆ ೨೦
ರಿಂದ ೩೦೦ ರೂಪಾಯಿ.

**ಆರೋಗ್ಯ ವಿಭಾಗ**ದಲ್ಲಿ ನಾರು, ಮಲೇರಿಯಾ, ಕಾಲರಾ, ಮೈಲಿ, ಪ್ಲೇಗ
ಮುಂತಾದ ಸಾಂಸರ್ಗಿಕ ರೋಗಗಳ ಉತ್ಪತ್ತಿ ಹಾಗು ಅವುಗಳಿಂದಾಗುವ ಅನಾ
ಗಳು ಮತ್ತು ಅವುಗಳ ನಿವಾರಣೆಯ ಉಪಾಯ ಇವುಗಳನ್ನು ತೋರಿಸಿದ್ದರು.

**ಸಂಸ್ಥಾನಗಳ ಕೆಲಸ:**— ಕೊಲ್ಹಾಪುರ ಮತ್ತು ಗ್ವಾಲ್ಹೇರಗಳಲ್ಲಿಯ ಒಕ್ಕ
ತನಕ್ಕೆ ಸಂಬಂಧಿಸಿದ ವಿಷಯಗಳನ್ನು ತೋರಿಸುವದಕ್ಕೆ ಸುಂದರವಾದ ಮಂಟಪಗಳ

ಯಾರಿಸಿದ್ದರು. ಕೊಲ್ಹಾಪುರದ ಮಂಟಪದಲ್ಲಿ ಆ ಸಂಸ್ಥಾನದ, ಬೇಸಾಯದ ಹುಟ್ಟುವಳಿ ಪದಾರಿಕೆಗಳಿಗೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸಿದ್ದರು. ಗ್ವಾಲ್ಹೇರದ ಮುಂ ಪದಲ್ಲಿ ಇನ್ನೊಂದು ವಿಶೇಷ ಸಂಗತಿಯಿದ್ದಿತು. ಗ್ವಾಲ್ಹೇರ ಸಂಸ್ಥಾನದಲ್ಲಿ ಸಾಗುವಾ ಳಿಕ್ಕೆ ತಕ್ಕಂಥ ಭೂಮಿಯು ಹೆಚ್ಚಾಗಿದ್ದು ಅಲ್ಲಿ ಜನದಟ್ಟಣೆಯು ಕಡಿಮೆಯಿರುವದು. ೀಳು ಭೂಮಿಯೂ ನೀರಿನ ಪೂರೈಕೆಯೂ ಬೇಕಾದಷ್ಟು ಇದ್ದೂ ಸಾಗುಮಾಡುವವರಿಲ್ಲ ರಿಂದ ಅಲ್ಲಿ ಹೋಗಿ ಕೃಷಿಯನ್ನು ಕೈ ಕೊಳ್ಳಲಿಚ್ಛಿಸುವವರಿಗೆ ಆ ಸರಕಾರದವರು ರಿಗೆಯಿಲ್ಲದೆ ಕೆಲವು ವರ್ಷಗಳವರೆಗೆ ಭೂಮಿಯನ್ನು ಕೊಡುವವಲ್ಲವೆ ಹಲವು ತರದ ನುಕೂಲತೆಗಳನ್ನು ಮಾಡಿ ಕೊಡುವೆವೆಂದು ಹೇಳುತ್ತಿದ್ದರು.

**ಚಿಲ್ಲರ ಉದ್ಯೋಗಗಳು**:— ನೂಲುವದು, ನೇಯುವದು, ಬಿತ್ತದ ಕೆಲಸ ಮುಂತಾವ ಚಿಲ್ಲರ ಉದ್ಯೋಗಗಳ ವಿಭಾಗವು ಒತ್ತಟ್ಟಿಗೆ ಇತ್ತು. ಈ ವಿಭಾಗದಲ್ಲಿ ತಂಧ್ರದ ಹೆಣ್ಣುಮಕ್ಕಳು ತೆಗೆದ ೧೦೦ ನಂಬರಿನ ನೂಲಿನಿಂದ ಕೈಯಿಂದ ನೇದ ೨೫ ರೂ. ಬೆಲೆ ಬಾಳುವ ಒಂದು ಸೀರೆಯು ನೋಡತಕ್ಕಂಥದಿತ್ತು. ಬಿತ್ತದಿಂದ ಹೆಣೆದು ಮಾಡಿದ ಅನೇಕ ತರದ ಸಾಮಾನುಗಳನ್ನು, ಬೇರೆ ಬೇರೆ ಜೇಲುಗಳಿಂದಲೂ ಸಂಸ್ಥೆಗಳಿಂದಲೂ ತರಿಸಿ ಮಾರಲಿಕ್ಕೆ ಇಟ್ಟಿದ್ದರು.

ಈ ಪ್ರದರ್ಶನವನ್ನು ಒಟ್ಟಿಗೆ ೨ ಲಕ್ಷಕ್ಕಿಂತ ಹೆಚ್ಚು ಜನರು ನೋಡಿದರು. ಅವ ರಲ್ಲಿ ಒಕ್ಕಲಿಗರು ೨೫ ಸಾವಿರ ಜನರಿದ್ದರೆಂದು ತಿಳಿದದೆ. ಅನೇಕ ಸಂಗತಿಗಳು ಈ ಪ್ರದರ್ಶನದಲ್ಲಿ ನೋಡತಕ್ಕಂಥವಿದ್ದವು. ಆದರೆ ಒಕ್ಕಲಿಗರಿಗೆ ಮಳಿಂಗಾಗದೆ ಇರು ವದರಿಂದ ಆಗುವಷ್ಟು ತೊಂದರೆಯು ಯಾತರಿಂದಲೂ ಆಗುವದಿಲ್ಲ. ಅವರ ಬೇಸಾ ಯದ ಜ್ಞಾನವು ಶಾಸ್ತ್ರೀಯವಲ್ಲದಿದ್ದರೂ ಅನುಭವಜನ್ಯವಾಗಿದೆ. ನಮ್ಮ ಪ್ರಾಂತ ದಲ್ಲಿ ಬರಬೀಳುವ ಪ್ರದೇಶವೆಂದರೆ ವಿಜಾಪುರ, ಸೊಲ್ಲಾಪುರ, ಅಹಮ್ಮದನಗರ ಮುಂ ತಾದ ಜಿಲ್ಲೆಗಳು. ಅವುಗಳಲ್ಲಿ ಕೆರೆಗಳಿಂದಾಗಲಿ ನದಿ ಹಳ್ಳಗಳಿಂದಾಗಲಿ ಕಾಲುವೆ ತೆಗೆದು ಎಲ್ಲ ಹೊಲಗಳಿಗೆ ಹನ್ನೆರಡು ತಿಂಗಳು ನೀರುಸಿಗುವಂತೆ ಆದರೆ ನಮ್ಮ ಒಕ್ಕ ಲಿಗರು ಎಂಥ ಸುಸ್ಥಿತಿಯನ್ನು ಹೊಂದಬಹುದು!

ಈ ಪ್ರದರ್ಶನದ ಒಟ್ಟು ಉತ್ಪನ್ನವು ೨ ಲಕ್ಷ ರೂಪಾಯಿಯಾಯಿತು. ಅದರಲ್ಲಿ ೩೬ ಸಾವಿರ ರೂ. ಪ್ರೇಕ್ಷಕರಿಂದ, ೫೦ ಸಾವಿರ ಸರಕಾರದಿಂದ, ಉಳಿದ ಹಣ ವರ್ಗಣೀ ರೂಪದಿಂದ ಕೂಡಿತ್ತು. ಅದರಲ್ಲಿ ೧ ಲಕ್ಷ ೪೦ ಸಾವಿರ ರೂ. ಒಟ್ಟು ವೆಚ್ಚವಾಯಿತು. ಉಳಿದ ೬೦ ಸಾವಿರ ರೂ. ಶಿಲ್ಕು ಉಳಿದದೆ. ಈ ಹಣದಿಂದ ಪ್ರತಿವರ್ಷ ಇಲಾಖೆಯ ಬೇರೆ ಬೇರೆ ಭಾಗಗಳಲ್ಲಿ ಇಂಥ ಪ್ರದರ್ಶನವನ್ನು ನೆರೆಯಿಸಬೇಕೆಂದು ನಿಶ್ಚಯ ವಾಗಿ ೧೯೨೭ರಲ್ಲಿ ಗುಜರಾಥದ ಸಲುವಾಗಿ ಅಮ್ಮದಾಬಾದದಲ್ಲಿ, ೧೯೨೮ರಲ್ಲಿ ಕರ್ನಾ

ಟಕವ ಸಲುವಾಗಿ ಧಾರವಾಡದಲ್ಲಿ, ಅಥವಾ ಬೆಳಗಾಂವಿಯಲ್ಲಿ ೧೯೨೯ರಲ್ಲಿ ಕೊಂಕಣದ ಸಲುವಾಗಿ ಮುಂಬೈಯಲ್ಲಿ ಪ್ರದರ್ಶನವಾಗುವದುಂಟು

## ಮುಂಬಯಿ

ಪುಣೆಯಲ್ಲಿ ನಾಲ್ಕು ದಿವಸ ಇದ್ದು ಮುಂಬೈಗೆ ನವಂಬರ ೩ನೇ ತಾ. ನ ದಿವಸ ಹೋದೆವು. ಪುಣೆ ಮುಂಬೈಗಳ ನಡುವೆ ೧೦ ಗಾಡಿಗಳು ಓಡಾಡುವದರಿಂದ ಗದ್ದಲವು ವಿಶೇಷವಿಲ್ಲ. ನಾವು ಹೋಗದೆ ಬಹಳ ವರ್ಷಗಳಾದ್ದರಿಂದ ಮುಂಬೈ ಪಟ್ಟಣದಲ್ಲಿ ಈ ಅವಧಿಯಲ್ಲಿ ಅನೇಕ ಹೆಚ್ಚು ಕಡಿಮೆಗಳಾದದ್ದು ಕಂಡುಬಂತು. ಠಾಣೆಯಿಂದ ದಾದರಕ್ಕೆ ಹೋಗುವ ಮೊವಲಿನ ಮಾರ್ಗವನ್ನು ಬಿಟ್ಟು ಮತ್ತೊಂದು ದೊಡ್ಡ ಗುಡ್ಡವನ್ನು ಕೊರೆದು ಸರಳವಾದ ಹಾದಿಯನ್ನು ಮಾಡಿದ್ದಾರೆ. ಪುಣೆ ಮುಂಬೈಗಳ ನಡುವೆ ಒಟ್ಟು ೨೪ ಬೋಗದೆಗಳು ಇರುವವು. ಮುಂಬೈ ಪಟ್ಟಣದ ಶಾಖಾ ನಗರಗಳು ೨೦ಮೈಲು ಅಂತರದಲ್ಲಿರುವ ಅಂಬರನಾಥದ ವರೆಗೆ ಹಬ್ಬಿರುವವು. ಡೆವ್ಹಲಪಮೆಂಟ ಖಾತೆಯವರು ಕೆಲವು ಶಾಖಾ ನಗರಗಳಲ್ಲಿ ಮಾರ್ಗಗಳನ್ನೂ ನಳದ ವ್ಯವಸ್ಥೆಯನ್ನೂ ಮಾಡಿಕೊಟ್ಟದ್ದರಿಂದ ಅವುಗಳಲ್ಲಿ ಜನರು ಬಂದು ವಾಸವಾಗಹತ್ತಿದ್ದಾರೆ. ಮುಂಬೈಯಿಂದ ಠಾಣೆಯವರೆಗೆ ೨೧ ಮೈಲು ಇಲೆಕ್ಟ್ರಿಕ್ (ವಿದ್ಯುತ್ತಿನ ಶಕ್ತಿಯಿಂದ ನಡೆಯುವ) ಗಾಡಿಯು ಇರುವದು. ಇದರಲ್ಲಿಯೂ ೩ ವರ್ಗಗಳಿದ್ದು ಡಬ್ಬಿಗಳು ಉಳಿದ ಡಬ್ಬಿಗಳಂತೆಯೇ ಅವೆ. ಆದರೆ ಇವುಗಳ ವೇಗ ಹೆಚ್ಚು. ಕಲ್ಲಿದ್ದಲಿಯ ಹೊಗೆ ಅಥವಾ ಹೊಲಸು ಇಲ್ಲ. ಅದರಿಂದ ಪ್ರವಾಸ ಮಾಡುವವರಿಗೆ ಸೊಗಸೆನಿಸುವದು. ರಾತ್ರಿಯಲ್ಲಿ ಅನೇಕ ದೀಪಗಳನ್ನು ಹಚ್ಚಿರುವದರಿಂದ ಬಹು ಚಂದಕಾಣುತ್ತದೆ. ಗಾಡಿಯಲ್ಲಿ ವಿದ್ಯುತ್ತಿನ ಬೀಸಣಿಕೆಗಳು ಬೀಸುವದರಿಂದ ಬೇಸಿಗೆಯಲ್ಲಿ ಪ್ರವಾಸಿಕರಿಗೆ ಸುಖವಾಗುವದು. ಈ ಗಾಡಿಗೆ ಎಂಜಿನದ ಅವಶ್ಯಕತೆಯಿಲ್ಲ. ಗಾಡಿಯ ಮಧ್ಯದ ಒಂದು ಡಬ್ಬಿಯಲ್ಲಿ ಇದರ ಯಂತ್ರವಿರುವದು. ಆ ಯಂತ್ರಕ್ಕೂ ತಂತಿಯ ಮೇಲಿದ್ದ ವಿದ್ಯುತ್ತಿನ ತಂತಿಗಳಿಗೂ ಸಂಬಂಧವಿರುವದು. ಗಾಡಿಯಲ್ಲಿ ಒಬ್ಬ ಕಂಡಕ್ಟರನಿರುವನು. ಅವನು ಟ್ರಾಮಗಾಡಿಯ ಕಂಡಕ್ಟರನಂತೆ ಗಾಡಿಯನ್ನು ನಡೆಸುವನು; ಇಳ್ಳವೆ ನಿಲ್ಲಿಸುವನು.

## ಬಡೋದೆ.

ಗಾಯಕವಾಡ ಮಹಾರಾಜರವರ ರಾಜಧಾನಿಯಾದ ಬಡೋದಾ ಪಟ್ಟಣವು ಮುಂಬಯಿಯಿಂದ ೨೪೮ ಮೈಲು ದೂರದಲ್ಲಿರುವನು. ಬಿ. ಬಿ. ಸಿ. ಆಯ್, ರೇಲವೆಯಿಂದ ೮ ತಾಸು ಪ್ರವಾಸಮಾಡಿ ಇಲ್ಲಿಗೆ ಹೋಗಬಹುದು. ಇಲ್ಲಿಯ ಜನಸಂಖ್ಯೆ ೯೪ ಸಾವಿರ. ೧೭೨೩ರಲ್ಲಿ ಪಿಲಾಜಿರಾವ ಗಾಯಕವಾಡ ಎಂಬವನು ತನ್ನ ಅನುಯಾಯಿಗಳೊಡನೆ ಬಂದು ಗುಜರಾಥದಲ್ಲಿ ರಾಜ್ಯವನ್ನು ಸ್ಥಾಪಿಸಿ ಬಡೋದಾಪಟ್ಟಣವನ್ನು ತನ್ನ

ರಾಜಧಾನಿಯಾಗಿ ಮಾಡಿಕೊಂಡನು. ವಟೋದರನೆಂಬದು ಈ ಪಟ್ಟಣದ ಮೂಲ ಹೆಸ
ರಾಗಿದ್ದು ಗುಜರಾಥೀ ಜನರು ಅದಕ್ಕೆ ವಡೋದರವೆಂದು ಈಗಲೂ ಅನ್ನುವರು. ಈ
ಪಟ್ಟಣವು ವಿಶ್ವಾಮಿತ್ರಿ ಎಂಬ ಚಿಕ್ಕ ನದಿಯ ಎರಡೂ ಪಾರ್ಶ್ವಗಳಲ್ಲಿ ಹಬ್ಬಿರುವದು.
ವಡೋದೆಯಲ್ಲಿ ಕಾಲಕಾಲಕ್ಕೆ ಆಳಿದ ಪ್ರಸಿದ್ಧರಾದ ಮಹಾರಾಜರ ಹೆಸರುಗಳಿಗೆ ಸಂಬಂ
ಧಿಸಿ ಆನಂದಪುರ, ಫತ್ತೇಪುರ, ಶಿವಪುರ, ಸುಪ್ರಸಿದ್ಧ ದಿವಾನರ ಹೆಸರಿನಿಂದ ಕರೆ
ಯಲ್ಪಡುವ ರಾವಪುರ, ಬಾಬಾಜಿಪುರ ಎಂಬ ವಿಭಾಗಗಳು ಇರುವವು.

ಬಡೋದಾ, ಕಾಡಿ, ನವಸರಿ, ಅಮರೇಲಿ, ಓಖಾಮಂಡಲ ಎಂಬ ೫ ಜಿಲ್ಲೆಗಳಿದ್ದು
ಸಂಸ್ಥಾನದ ಒಟ್ಟು ಜನಸಂಖ್ಯೆಯು ೨೧ ಲಕ್ಷವದೆ. ಸಂಸ್ಥಾನದ ವಾರ್ಷಿಕ ಉತ್ಪ
ನ್ನವು ೨೫ ಕೋಟಿ ರೂಪಾಯಿ ಇರುವದು. ಈ ಸಂಸ್ಥಾನದಲ್ಲಿ ನರ್ಮದಾ, ತಾಪಿ ಎಂಬ
ಎರಡು ಮುಖ್ಯ ನದಿಗಳು ಹರಿಯುವವು. ಅಮರೇಲಿ, ಓಖಾಮಂಡಲಗಳೆಂಬ ಎರಡು
ಜಿಲ್ಲೆಗಳು ಕಾಠೇವಾಡ ದ್ವೀಪಕಲ್ಪದಲ್ಲಿರುವವು. ಪುರಾಣಪ್ರಸಿದ್ಧವಾದ ದ್ವಾರಕಾಕ್ಷೇ
ತ್ರವು ಓಖಾಮಂಡಲದಲ್ಲಿರುವದು. ಇಲ್ಲಿಯೇ ಸಮೀಪದಲ್ಲಿ ಬೇಟ ಎಂಬ ದ್ವೀಪವಿದ್ದು
ಅಲ್ಲಿ ಓಖಾ ಎಂಬ ಬಂದರವನ್ನು ಕಟ್ಟಿ ಪರದೇಶದ ಹಡಗುಗಳು ಸಹ ಬಂದು ನಿಲ್ಲ
ಲಿಕ್ಕೆ ಅನುಕೂಲ ಮಾಡಿರುವರು. ಸಂಸ್ಥಾನದ ಸೈನ್ಯದಲ್ಲಿ ೪ ಸಾವಿರ ದಂಡಾಳುಗ
ಳಿರುವರು. ಅವರಲ್ಲಿ ೧೧೫ ಜನರು ತೋಫಖಾನೆಯವರೂ ೧೦೦೦ ರಾವುತರೂ ಮಿಕ್ಕ
ವರು ಕಾಲಾಳುಗಳೂ ಇರುವರು. ಈ ಯಾವತ್ತು ಸೈನ್ಯದ ಮೇಲೆ ಜನರಲ್ ಸಿಂಧೆ
ಇವರು ಸೇನಾಪತಿಗಳಾಗಿರುವರು.

**ಬಡೋದೆಯ ಕಾಲೇಜವು:**—ಈ ಶಿಕ್ಷಣ ಸಂಸ್ಥೆಯಲ್ಲಿ ೬೦೦ ವಿದ್ಯಾರ್ಥಿ
ಗಳು ಬಿ. ಎ. ಬಿ. ಎಸ್. ಸಿ. ಪರೀಕ್ಷೆಗಳ ಸಲುವಾಗಿ ಅಭ್ಯಾಸ ಮಾಡುತ್ತಿರುವರು.
ಕೆಲವರು ಎಮ್. ಎಸ್. ಸಿ. ಎಂಬ ಶಾಸ್ತ್ರೀಯ ವಿಷಯಗಳ ಮೇಲ್ಮರಗತಿಯ
ಪರೀಕ್ಷೆಯ ಅಭ್ಯಾಸಮಾಡುತ್ತಿದ್ದು ಅದಕ್ಕೆ ಬೇಕಾಗವ ಎಲ್ಲ ವಿಧದ ಉಪಕರಣ
ಗಳೂ ತಕ್ಕ ಅಧ್ಯಾಪಕರೂ ಇಲ್ಲಿ ಇರುವರು. ಈ ಪ್ರಯೋಗ ಶಾಲೆಯ ಉಪ
ಯೋಗವ ಸಲುವಾಗಿ ಕೋಲಗ್ಯಾಸನ್ನು ತೆಗೆಯುವ ಒಂದು ಯಂತ್ರವಿದೆ. ಅದು
ದೀಪ ಹಚ್ಚುವದಕ್ಕೂ ಉಷ್ಣತೆಯ ಬೇರೆ ಬೇರೆ ಪ್ರಯೋಗಗಳಿಗೂ ಉಪಯೋಗವಾ
ಗುವದು. ಇದರ ಕಟ್ಟಡವನ್ನು ೧೮೮೭ನೇ ಇಸವಿಯಲ್ಲಿ ೬ ಲಕ್ಷ ರೂ. ವೆಚ್ಚಮಾಡಿ
ಕಟ್ಟಿರುವರು. ಮಧ್ಯದಲ್ಲಿ ಎರಡು ಗುಮಟಿಗಳಿವೆ. ಅದರಿಂದ ಇಡೀ ಕಟ್ಟಡವು ಬಹು
ಸುಂದರವಾಗಿ ತೋರುವದು.

**ಮಹಾರಾಜರ ಪ್ರತಿಮೆ:**— ೧೯೦೭ನೇ ಇ. ಯಲ್ಲಿ ಮಹಾರಾಜರ ೨೫
ವರ್ಷಗಳ ಆಳಿಕೆಯ ಸಂಸ್ಮರಣೋತ್ಸವದ ಕಾಲದಲ್ಲಿ ಅವರ ಪಂಚಲೋಹದ ಅಶ್ವಾ
ರೂಢ ಪ್ರತಿಮೆಯೊಂದನ್ನು ಸಾರ್ವಜನಿಕವೆಚ್ಚದಿಂದ ಊರೊಳಗಿನ ಸಾರ್ವಜನಿಕ

ಉಪವನಕ್ಕೆ ಹೋಗುವ ದಾರಿಯಲ್ಲಿ ನಾಲ್ಕು ಮಾರ್ಗಗಳ ಮಧ್ಯದಲ್ಲಿ ಸ್ಥಾಪಿಸಿರುವರು ಈ ಪ್ರತಿಮೆಯು ಮಹಾರಾಜರವರು ತಮ್ಮ ೨೫ ವರ್ಷಗಳ ಆಳಿಕೆಯಲ್ಲಿ ಪ್ರಜೆಗಳ ಹಿತಕ್ಕಾಗಿ ಕೈಕೊಂಡ ಸಾಮಾಜಿಕ, ಸಾಂಪತ್ತಿಕ ಮತ್ತು ನೈತಿಕ ಸುಧಾರಣೆಗಳ ಸ್ಮಾರಕವಾಗಿರುವದು. ಈ ಪ್ರತಿಮೆಯನ್ನು ಇಂಗ್ಲಂಡದೊಳಗಿನ ಪ್ರಸಿದ್ಧ ಕಲಾವಿಶಾರದನಾದ ಡರ್ವೆಂಟವುಡ್ ಎಂಬವನು ಸಿದ್ಧಮಾಡಿದನು. ಇದಕ್ಕೆ ೬೦ ಸಾವಿರ ರೂ ವೆಚ್ಚವು ಹಿಡಿಯಿತು.

**ಸಾರ್ವಜನಿಕ ಉಪವನ:**—ವಿಶ್ವಾಮಿತ್ರೀ ನದಿಯ ಎರಡೂ ಪಾರ್ಶ್ವಗಳಲ್ಲಿ ಮುಖ್ಯ ಪಟ್ಟಣಕ್ಕೂ ದಂಡಿನ ಛಾವಣಿಗೂ ನಡುವೆ ಈ ಉಪವನವನ್ನು ರಚಿಸಿದವರು. ಇದು ೧೫೫ ಎಕರೆ ವಿಸ್ತೀರ್ಣವಾಗಿದೆ. ಇದನ್ನು ಸಿದ್ಧಮಾಡಲಿಕ್ಕೆ ೨ ಲಕ್ಷ ರೂ ವೆಚ್ಚವಾಗಿರುವವು.

**ಪದಾರ್ಥ ಸಂಗ್ರಹಾಲಯ:**—ಉಪವನದ ಮಧ್ಯದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಒಂದು ಪದಾರ್ಥ ಸಂಗ್ರಹಾಲಯವಿರುವದು. ಇದರಲ್ಲಿ ಔದ್ಯೋಗಿಕ ಕಲೆಗಳು, ಎಲ್ಲ ಬಗೆಯ ಪ್ರಾಣಿ ವನಸ್ಪತಿಗಳು, ಮಾನವ ಜಾತಿಗಳ ಪ್ರಕಾರಗಳು ಭೂಗರ್ಭಶಾಸ್ತ್ರ, ಪ್ರಾಚೀನ ಸಂಶೋಧನಶಾಸ್ತ್ರ. ಅರ್ಥಶಾಸ್ತ್ರ ಇವುಗಳಿಗೆ ಸಂಬಂಧಿಸಿದ ಭಾಗಗಳಿರುವವು. ಇವಲ್ಲದೆ ಹಿಂದು ಹಾಗು ಮೊಗಲ ಸಾಮ್ರಾಜ್ಯದ ಕಾಲದ ಅನೇಕ ಐತಿಹಾಸಿಕ ಚಿತ್ರಗಳಿರುವವು.

**ಅಲೆಂಬಿಕ್ ಕೆಮಿಕಲ್ ವರ್ಕ್ಸ:**—ಸ್ಪಿರಿಟ್, ಟಿಂಕ್ಚರ(ಇಂಗ್ಲಿಷ ಔಷಧದಲ್ಲಿ ಉಪಯೋಗಿಸುವ ಪ್ರವಾಹೀದ್ರವ್ಯ) ಇವುಗಳನ್ನು ಸಿದ್ಧಮಾಡುವ ಕಾರಖಾನೆಯು ಹಿಂದೆ ಮುಂಬಯಿಯಲ್ಲಿದ್ದ ವ್ಹಿಕ್ಟೋರಿಯಾ ಮಹಾರಾಣಿಯವರ ಸಂಗಮರವರೀ ಶೀಷೆಯ ಪ್ರತಿಮೆಯ ಮೇಲೆ ಯಾರೋ ಕುಹಕರು ಡಾಂಬರದಂಥ ರಸಾಯನವನ್ನು ಸುರಿದು ವಿದ್ರೂಪಮಾಡಿದ್ದರು. ಅದನ್ನು ಸರಿಪಡಿಸುವದಕ್ಕೆ ಅನೇಕ ಪಾಶ್ಚಿಮಾತ್ಯ ರಸಾಯನಶಾಸ್ತ್ರಜ್ಞರು ಪ್ರಯತ್ನ ಮಾಡಿದರೂ ಸಾಧ್ಯವಾಗಿದ್ದಿಲ್ಲ. ಆದರೆ ಮುಂಬಯಿಯ ವಿಲ್‌ಸನ್ ಕಾಲೇಜದ ಪ್ರೊಫೇಸರರಾದ ಟಿ. ಕೆ. ಗಜ್ಜರ ಎಂಬವರು ಆ ಕಲೆಯನ್ನು ತೆಗೆದುಹಾಕಿ ಮೂರ್ತಿಯನ್ನು ಮೊದಲಿದ್ದಂತೆ ಸರಿಪಡಿಸಿದರು. ಅಂದಿನಿಂದ ಪ್ರೊಫೇಸರ ಗಜ್ಜರರ ಹೆಸರು ಪ್ರಸಿದ್ಧಿಗೆ ಬಂದಿತು. ಅವರ ಆಡಳಿತೆಯ ಕೆಳಗೆ ಹಲವು ಬಗೆಯ ರಾಸಾಯನಿಕ ದ್ರವ್ಯಗಳನ್ನೂ ಅನೇಕ ತರದ ಔಷಧ ಸಾಮಗ್ರಿಗಳನ್ನೂ ತಯಾರಿಸುವ ಒಂದು ಕಾರಖಾನೆಯು ಸ್ಥಾಪಿಸಲ್ಪಟ್ಟಿತು. ಅವರ ಶಿಷ್ಯರಾದ ಕೋಟಿಫಾಸ್ಕರ ಅಮೀನ ಎಂಬವರು ಈ ಕಾರಖಾನೆಯನ್ನು ಬಡೋದೆಯಲ್ಲಿ ಸ್ಥಾಪಿಸಿದರು. ಸಂಸ್ಥಾನದ ಉತ್ತೇಜನವು ದೊರೆತದ್ದರಿಂದ ಈ ಕಾರಖಾನೆಯು ಯಶಸ್ವಿಯಾಗಿ ನಡೆದದೆ. ಇದಕ್ಕೆ ೫ ಲಕ್ಷ ಬಾಂಡವಲವನ್ನು ಹಾಕಿದ್ದು ಪ್ರೊ. ಅಮೀನರು

ಮುಖ್ಯ ಚಾಲಕರೂ ವ್ಯವಸ್ಥಾಪಕರೂ ಆಗಿರುವರು. ಡಾಕ್ಟರರಿಗೆ ಬೇಕಾಗುವಂಥ ಎಲ್ಲ ಗೆಯ ಔಷಧಗಳು ಇಲ್ಲಿ ಸಿಗುವದರಿಂದ ಪರದೇಶದಿಂದ ಅವುಗಳನ್ನು ತರಿಸುವ ಅವ ಕತೆಯಿಲ್ಲ

**ಸಂಸ್ಥಾನದ ಆಸ್ಪತ್ರಿ**:—ಈ ಔಷಧಾಲಯವನ್ನು ೫ ಲಕ್ಷ ರೂ. ವೆಚ್ಚವಾಡಿ ುಂದರವಾಗಿ ಕಟ್ಟಿದ್ದಾರೆ. ಇದರ ಅನಾವರಣ ಸಮಾರಂಭವನ್ನು ೧೯೧೭ರಲ್ಲಿ ಲಾರ್ಡ ರಿಂಗಡನ್ ಸಾಹೇಬರು ನೆರವೇರಿಸಿದರು. ಇಲ್ಲಿ ಬೇರೆ ಬೇರೆ ವೈದ್ಯಕೀಯ ವಿಭಾಗಗ ಲ್ಲಿ ನಿಷ್ಣಾತರಾದ ಪರದೇಶದ ಪದವಿಗಳನ್ನು ಪಡೆದ ೬ ಜನ ಡಾಕ್ಟರರೂ ೧೧ ಜನ ಸ್ ಅಸಿಸ್ಟಂಟರೂ ಇರುವರು. ಹೆಣ್ಣುಮಕ್ಕಳ ಉಪಚಾರಕ್ಕಾಗಿ ಒಬ್ಬ ಡಾಕ್ಟರಿಣಿಯೂ ಬ್ಬರು ಸಹಾಯಕ ಡಾಕ್ಟರಿಣಿಯರೂ ಇಬ್ಬರು ಯುರೋಪಿಯನ್ ನರ್ಸರೂ ಇರು ರು. ಇಲ್ಲಿ ಎಲ್ಲ ಬಗೆಯ ಆಧುನಿಕ ಸುಧಾರಣೆಯ ಯಂತ್ರಸಾಮಗ್ರಿಗಳನ್ನೂ ರೋಗಿ ಳ ಶುಶ್ರೂಷೆಗೆ ಬೇಕಾಗುವ ಮಿಕ್ಕ ಎಲ್ಲ ವಿಧದ ಅನುಕೂಲತೆಗಳನ್ನೂ ನೋಡಬ ುದು. ಎಕ್ಸರೇಜ, ವ್ಹಾಯಲೆಟ್‌ರೇಜ ಮುಂತಾದವುಗಳ ಯಂತ್ರಗಳೂ ಕಣ್ಣು ಲ್ಲು, ಕಿವಿ ಮುಂತಾದವುಗಳ ಉಪಚಾರಕ್ಕೆ ಬೇಕಾಗುವ ತಜ್ಞಡಾಕ್ಟರರೂ ಅವರಿಗೆ ಕಾಗುವ ಉಪಕರಣಗಳೂ ಇರುವವು. ವ್ಹಾಯಲೆಟ್‌ರೇಜ ಎಂಬ ಯಂತ್ರವ ಕಿರಣ ಳ ಉಪಯೋಗದಿಂದ ಇಸಬು, ಗಜಕರ್ಣ ಮುಂತಾವ ಚರ್ಮರೋಗಗಳ ನಿವಾ ಕೆಯಾಗುವದು. ಶಸ್ತ್ರಕ್ರಿಯೆಯಲ್ಲಿ ನಿಷ್ಣಾತರಾದ ಡಾ. ಚಂದ್ರಚೂಡ ಎಂಬವರು ದ್ಯಖಾತೆಯ ಮುಖ್ಯ ಅಧಿಕಾರಿಗಳೂ ಈ ಔಷಧಾಲಯವ ಮೇಲ್ವಿಚಾರಕರೂ ುರುವರು. ನೆಲಕ್ಕೆಲ್ಲ ಸಂಗಮರೀಕಲ್ಲಿನ ಹಾಸಿಗೆ ಇರುವದು. ರೋಗಿಗಳನ್ನು ನಗರ ಳಗಿಂದ ಕರೆದೊಯ್ಯಲಿಕ್ಕೆ ಮೋಟಾರ ಆಂಬುಲನ್ಸದ ವ್ಯವಸ್ಥೆ ಇರುವದು. ಮೋಟಾ ನ್ನು ಆಸ್ಪತ್ರಿಯಲ್ಲಿ ಒಯ್ಯಲಿಕ್ಕೆ ಬರುವಂತೆ ಸಾವಟಿಗೆಗಳ ಬದಲು ಇಳಿಜಾರಾದ ುರ್ಗವನ್ನು ಮಾಡಿರುವರು.

**ಟ್ರೇನಿಂಗ ಕಾಲೇಜ**:—ಇಲ್ಲಿಯ ಟ್ರೇ. ಕಾ. ದಲ್ಲಿ ೩ ವರ್ಷಗಳವರೆಗೆ ್ಯಾಸವು ನಡೆಯುವದು. ೧ನೇ ವರ್ಷದ ವರ್ಗದಲ್ಲಿ ೧೧೦, ೨ನೇ ವರ್ಷದ ವರ್ಗ ಳಳ, ೩ನೇ ವರ್ಷದ ವರ್ಗದಲ್ಲಿ ೩೪, ಅಂತು ೧೮೮ ಜನ ವಿದ್ಯಾರ್ಥಿಗಳಿರು ು. ಒಬ್ಬರು ಪ್ರಿನ್ಸಿಪಾಲರೂ ಒಬ್ಬರು ವ್ಹಾಯಿಸ್ ಪ್ರಿನ್ಸಿಪಾಲರೂ ೧೧ ಜನ ಶಿಕ್ಷ ೂ ಇರುವರು. ಅಭ್ಯಾಸ ಕ್ರಮವು ಸರ್ವಸಾಧಾರಣ ಸರಕಾರೀ ಟ್ರೇನಿಂಗ ೇಜದಂತೆ ಇರುವದು. ಈ ೧೮೮ ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಿಷಯಗಳನ್ನು ಸುವ ರೂಢಿಯು ಸಾಕಷ್ಟು ಆಗಬೇಕೆಂಬ ಉದ್ದೇಶದಿಂದ ಟ್ರೇನಿಂಗ ಕಾಲೇಜಕ್ಕೆ ಬಂಧಿಸಿ ಎರಡು ಪ್ರಾ ಕ್ಟೀಸಿಂಗ ಸ್ಕೂಲುಗಳನ್ನು ಜೋಡಿಸಿರುವರು.

**ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ**:— ' ಸೂರಸಾಗರ' ಎಂಬ ಸರೋ ವರ ದಂಡೆಗೆ ಒಂದು ಸುಂದರವಾದ ಕಟ್ಟಡದಲ್ಲಿ ಹೆ. ಮು. ಟ್ರೇ. ಕಾ. ಇರುವದು.

ಅದರಲ್ಲಿ ೩ ವರ್ಷಗಳ ಅಭ್ಯಾಸಕ್ರಮವಿದ್ದು ೬೯ ವಿದ್ಯಾರ್ಥಿನಿಯರಿರುವರು. ಒಬ್ಬ ಲೇಡೀ ಸುಪರಿಂಟೆಂಡೆಂಟರೂ ೧೧ ಮಂದಿ ಉಪಶಿಕ್ಷಕಿಯರೂ ಇರುವರು.

**ಮಧ್ಯವರ್ತಿ ವಾಚನಾಲಯಃ**— ಬಡೋದಾ ಸಂಸ್ಥಾನವು ಸುಧಾರಿ ದ್ದೆಂದು ಹೇಳಲಿಕ್ಕೆ ಅಲ್ಲಿಯ ವಾಚನಾಲಯದ ಯೋಜನೆಯು ಒಂದು ಬಲವಾದ ಸಾ ಯಾಗಿದೆ. ಈ ಯೋಜನೆಯನ್ನು ಕೈ ಕೊಂಡಿರುವ ಮಧ್ಯವರ್ತಿ ಸಂಸ್ಥೆಯು ನಗರ ಮಧ್ಯದಲ್ಲಿ ಮಹಾರಾಜರ ಹಳೆ ಅರಮನೆಯಲ್ಲಿ ಇರುವದು. ಇದರ ಮುಖ್ಯಾಧಿಕಾರಿ 'ಕ್ಯೂರೇಟರ' ಎನ್ನುವರು. ಇದರಲ್ಲಿ ಒಂದು ಲಕ್ಷ ಪುಸ್ತಕಗಳ ಸಂಗ್ರಹವಿರುವದ ಪ್ರತಿ ದಿನ ೩೦೦ ಪುಸ್ತಕಗಳನ್ನು ಜನರು ಒಯ್ಯುತ್ತಿರುವರು. ಇದರಲ್ಲಿ ಹೆಣ ಮಕ್ಕಳಿಗಾಗಿಯೂ ಚಿಕ್ಕ ಬಾಲಕರ ಸಲುವಾಗಿಯೂ ಬೇರೆ ಬೇರೆ ಭಾಗಗಳಿದ್ದು ಅ ಅವರಿಗೆ ಉಪಯೋಗವಾಗುವಂಥ ಪುಸ್ತಕಗಳನ್ನು ಇಟ್ಟಿರುವರು. ಚಿಕ್ಕ ಮಕ್ಕ ವಿಭಾಗದಲ್ಲಿ ಅವರಿಗೆ ಬೇಕಾಗುವಂಥ ಅನೇಕ ಆಟಗಳ ಉಪಕರಣಗಳನ್ನು ಇಟ್ಟಿ ವರು ಗುಜರಾಥಿ ಭಾಷೆಯಲ್ಲಿ ಚಿಕ್ಕ ಮಕ್ಕಳ ಸಲುವಾಗಿಯೇ ನಾಲ್ಕು ಮಾಸಿಕಗ ಹೊರಡುತ್ತಿರುವವು. ಈ ಎರಡೂ ಭಾಗಗಳ ಮೇಲ್ವಿಚಾರಣೆಗಾಗಿಯೂ ಓದುವ ರಿಗೂ ಆಡುವವರಿಗೂ ತಕ್ಕ ಸಹಾಯವನ್ನು ಮಾಡಲಿಕ್ಕೂ ತಜ್ಞರಾದ ಇಬ್ಬರು ಹೆಣ ಮಕ್ಕಳು ಇರುವರು. ಮಧ್ಯಾಹ್ನದ ಎರಡು ಗಂಟೆಯ ಸುಮಾರಕ್ಕೆ ಅಲ್ಲಿ ೨೫೦ ಜ ಬಾಲಕರಿದ್ದರು. ಸಂಸ್ಥಾನದ ಹಳ್ಳಿಗಳಲ್ಲಿಯೂ ವಾಚನಾಲಯದ ಯೋಜನೆಯಿ ವದು. ಒಟ್ಟಿಗೆ ೬೧೮ ಹಳ್ಳಿಗಳಲ್ಲಿಯೂ ೪೩ ಪಟ್ಟಣಗಳಲ್ಲಿಯೂ ವಾಚನಾಲಯ ಳಿರುವವು. ಹಳ್ಳಿಯ ವಾಚನಾಲಯಗಳಲ್ಲೆಲ್ಲ ಕೂಡಿ ೧೯೪ ಸಾವಿರ ಪುಸ್ತಕಗ ರುವವು. ಪಟ್ಟಣದ ವಾಚನಾಲಯಗಳಲ್ಲಿ ೧೮೪ ಸಾವಿರ ಪುಸ್ತಕಗಳಿರುವವು. ಇವೆಲ್ಲ ಮಧ್ಯವರ್ತಿ ವಾಚನಾಲಯದಿಂದ ಹಳ್ಳಿಗಳಿಗೆ ಪುಸ್ತಕಗಳನ್ನು ಸಣ್ಣ ಸಣ್ಣ ಕಪಾಟ ಗಳಲ್ಲಿ ಹಾಕಿ ಕಳುಹಿಸುವ ಯೋಜನೆಯಿರುವದು. ಒಂದು ಹಳ್ಳಿಯಲ್ಲಿ ಎರಡು ತಿಂಗ ವರೆಗೆ ಆ ಪುಸ್ತಕ ಸಂಗ್ರಹವು ಉಳಿದ ನಂತರ ಅದನ್ನು ಮತ್ತೊಂದು ಹಳ್ಳಿಗೆ ಕಳ ಅಲ್ಲಿಗೆ ಬೇರೆ ಪುಸ್ತಕಗಳನ್ನು ಕಳುಹಿಸುವರು. ಹೀಗೆ ಕಳೆದ ವರ್ಷದಲ್ಲಿ ೧೨೩ ಹ ಗಳಿಗೆ ಪುಸ್ತಕ ಸಂಗ್ರಹವು ಪೂರೈಸಲ್ಪಟ್ಟಿತು. ಈ ಯಾವತ್ತು ಬಗೆಯ ವಾಚನಾ ಯಗಳಲ್ಲಿ ಓದುವವರು ಯಾವ ರೀತಿಯಿಂದಲೂ ಹಣವನ್ನು ವೆಚ್ಚ ಮಾಡಬೇಕಾಗು ದಿಲ್ಲ. ಆದರೆ ವಾಚನಾಲಯದ ನೈಮಿತ್ತಿಕ ಅಥವಾ ಕಟ್ಟಡದ ವೆಚ್ಚದ ಫಿ ವನ್ನು ಸ ಕಾರದವರೂ ಫಿ ವನ್ನು ಲೋಕಲ್ ಬೋರ್ಡಿನವರೂ ಕೊಡುವರು. ಮಿಕ್ಕುಳಿದ ಫಿವನ ಊರ ಜನರು ವರ್ಗಣಿಯಿಂದ ಕೂಡಿಸಿ ಕೊಡುವರು. ಬಡೋದೆಯ ಸರಕಾರ ಈ ತರದ ವಾಚನಾಲಯಗಳ ಯೋಜನೆಗಾಗಿ ಪ್ರತಿವರ್ಷ ೯೦ ಸಾವಿರ ರೂಪಾಯ ಗಳನ್ನು ವೆಚ್ಚ ಮಾಡುವದು. ಅಮೇರಿಕೆ ಮುಂತಾದ ಸುಧಾರಿಸಿದ ರಾಷ್ಟ್ರಗಳ ಈ ತರದ ಯೋಜನೆಯು ಬಹು ದಿವಸಗಳಿಂದ ಇದ್ದರೂ ನಮ್ಮ ದೇಶದಲಿ ಬಡೋದ

ಸಂಸ್ಥಾನದಲ್ಲಿ ಮಾತ್ರ ಈ ಪ್ರಕಾರದ ವ್ಯವಸ್ಥೆಯಿರುವದು. ಉಳಿದ ಕಡೆಗೆ ಎಲ್ಲಿಯೂ ಇರುವದಿಲ್ಲ. ಬಡೋದೆಯ ಮಧ್ಯವರ್ತಿ ವಾಚನಾಲಯದಲ್ಲಿ ಹಳೆ ತಾಡವಾಲಿಯ ಹಸ್ತಲಿಖಿತ ಪ್ರತಿಗಳನ್ನು ಸಂಗ್ರಹಿಸಿರುವರು. ಅದರಲ್ಲಿ ೧೩ ಸಾವಿರ ಹಳೆ ಗ್ರಂಥಗಳಿರುವವು. ಅವುಗಳೊಳಗಿಂದ ಸದ್ಯಕ್ಕೆ ೩೭ ಸಂಸ್ಕೃತ ಗ್ರಂಥಗಳನ್ನು "ಗಾಯಕವಾಡ ಓರಿಯಂಟಲ್ ಸಿರೀಜ್" ಎಂಬ ಹೆಸರಿನಿಂದ ಪ್ರಕಟಿಸಿರುವರು.

**ಅರಮನೆಗಳು**:— ಬಡೋದಾ ನಗರದಲ್ಲಿ ಅನೇಕ ಅರಮನೆಗಳಿರುವವು. ಅವುಗಳಲ್ಲಿ ನಜರಬಾಗ, ಮಕರಪುರ. ಲಕ್ಷ್ಮೀವಿಲಾಸ ಎಂಬವು ಪ್ರಸಿದ್ಧ. ಮಹಾರಾಜರು ವಾಡಿಕೆಯಾಗಿ ಲಕ್ಷ್ಮೀವಿಲಾಸದಲ್ಲಿ ಇರುವರು. ಒಮ್ಮೊಮ್ಮೆ ಮಕರಪುರಕ್ಕೆ ಹೋಗುವರು. ಅವುಗಳಲ್ಲಿ ಲಕ್ಷ್ಮೀವಿಲಾಸದ ಸೌಂದರ್ಯವು ವರ್ಣನಾತೀತವಾಗಿರುವದು.

**ನಜರಬಾಗ**:— ನಜರಬಾಗ ಅರಮನೆಯನ್ನು ಹಿಂದಿನ ಮಹಾರಾಜನಾದ ಖಂಡೇರಾಯನ ಸಹೋದರನಾದ ಮಲ್ಹಾರರಾಯನು ಕಟ್ಟಿಸಿದನು. ಈಗಿನ ಮಹಾರಾಜರು ಅದರಲ್ಲಿ ಅನೇಕ ಸುಧಾರಣೆಗಳನ್ನು ಮಾಡಿರುವರು. ಇಲ್ಲಿ ಒಂದು ಕೋಣೆಯಲ್ಲಿ ಸಂಸ್ಥಾನದ ಮುತ್ತು ರತ್ನಗಳ ಅಮೂಲ್ಯ ಆಭರಣಗಳ ಸಂಗ್ರಹವಿರುವದು. ಇದರ ಬೆಲೆಯು ೩ ಕೋಟಿ ರೂಪಾಯಿ. ಮಹಾರಾಜರು ಉತ್ಸವದ ವೇಳೆಯಲ್ಲಿ ಹಾಕಿಕೊಳ್ಳುವ ಒಂದು ವಜ್ರದ ಕಂಠಿಯ ಬೆಲೆಯು ೪೦ ಲಕ್ಷ ರೂಪಾಯಿ. ಅದರೊಳಗಿನ ಒಂದೇ ದೊಡ್ಡ ವಜ್ರವು ೯ ಲಕ್ಷ ರೂಪಾಯಿ ಬೆಲೆ ಬಾಳುವದಂತೆ. ಇದು ಅಲಾಹಿನೇ ಇಸವಿಯಲ್ಲಿ ಬ್ರಾಜಿಲ್‌ದ ಕಣಿಯಲ್ಲಿ ದೊರೆಯಿತು. ಖುದ್ದ ಮುತ್ತು-ರತ್ನಗಳಿಂದ ಮಾಡಿದ ಒಂದು ರತ್ನಗಂಬಳಿಯು ನೋಡತಕ್ಕಂಥಾದ್ದಿರುವದು. ಅದನ್ನು ಖಂಡೇರಾವ ಮಹಾರಾಜರು ಮಕ್ಕಾದೊಳಗಿನ ಮಹಮ್ಮದ ಪೈಗಂಬರರ ಗೋರಿಯ ಮೇಲೆ ಹಾಕುವದಕ್ಕಾಗಿ ಮಾಡಿಸಿದ್ದರು. ಆದರೆ ಆ ರತ್ನಗಂಬಳಿಯು ಪೂರ್ಣವಾಗುವದರೊಳಗಾಗಿಯೇ ಅವರು ತೀರಿಕೊಂಡದ್ದರಿಂದ ಅದು ಇಲ್ಲಿಯೇ ಉಳಿಯಿತು.

**ಮಕರಪುರ**:—ಮಕರ ಪುರವೆಂಬ ಹಳ್ಳಿಯು ನಗರದಿಂದ ನಾಲ್ಕು ಮೈಲು ದೂರದಲ್ಲಿರುವದು. ಅಲ್ಲಿ ಖಂಡೇರಾವ ಮಹಾರಾಜರವರು ಸುಂದರವಾದ ಒಂದು ಅರಮನೆಯನ್ನು ಕಟ್ಟಿಸಿರುವರು. ವ್ಹಾಯಿಸರಾಯರಂಥ ಮೇಲ್ತರಗತಿಯ ಅತಿಥಿಗಳು ಬಂದಾಗ ಅಲ್ಲಿ ಇಳಿದುಕೊಳ್ಳುವರು. ಈ ಅರಮನೆಯ ಮುಂಭಾಗದಲ್ಲಿ ರಮ್ಯವಾದ ಒಂದು ಉಪವನವಿದ್ದು ಅದು ೧೩೦ ಎಕರೆ ವಿಸ್ತೀರ್ಣವಾಗಿರುವದು. ಈ ಉಪವನವನ್ನು ತಯಾರಿಸಲಿಕ್ಕೆ ಮೂರು ಲಕ್ಷ ರೂಪಾಯಿ ವೆಚ್ಚವಾಗಿದೆ. ಇದರಲ್ಲಿ ಚಿಗರಿ, ಜಿಂಕೆ, ಗಂಡಕ ಮುಂತಾದ ಪಶುಗಳ ಪ್ರತಿಮೆಗಳೂ ಕಾರಂಜಿ, ಸರೋವರ ಮುಂತಾದ ವಿಲಾಸದ ಸಾಧನಗಳೂ ಇರುವವು. ದಾರಿಯ ಅಂಚಿನ ಗಿಡಗಳನ್ನು ಗೋಪುರಾಕಾರವಾಗಿ ಕತ್ತರಿಸಿ ಮನೋಹರವಾಗುವಂತೆ ಮಾಡಿರುವರು.

**ಲಕ್ಷ್ಮೀವಿಲಾಸ:**—ಈ ಅತ್ಯಂತ ಮನೋಹರವಾದ ಅರಮನೆಯನ್ನು ಸದ್ಗ
ಸಯಾಜಿರಾವ ಮಹಾರಾಜರು ೬೦ ಲಕ್ಷ ರೂಪಾಯಿ ವೆಚ್ಚ ಮಾಡಿ ಕಟ್ಟಿಸಿರುವ
ಕಟ್ಟಡದ ರಚನೆಯು ಹಿಂದೂ-ಮುಸಲ್ಮಾನ ಪದ್ಧತಿಗಳ ಮಿಶ್ರರಚನೆಯುಳ್ಳದ್ದಿರುವ
ಇದರೊಳಗಿನ ಮುಖ್ಯ ಸಭಾಮಂದಿರವು ೯೩ ಫೂಟು ಉದ್ದ, ೫೪ ಫೂಟು ಅ
ಇರುವದು. ಗೋಡೆ ಮತ್ತು ನೆಲಗಳ ಮೇಲಿನ ಕೆತ್ತಿಗೆಯ ಕೆಲಸವನ್ನು ಇತಾಲಿ
ಶಿಲ್ಪಿಗರು ಮಾಡಿರುವರು. ಬೇರೆ ಬೇರೆ ಆಕಾರದ ಹಾಗು ಬಣ್ಣಗಳ ಸುಳವುಗಳ
ಕಾಜು, ರತ್ನ, ಸಂಗಮರವರೀ ಶಿಲೆಗಳನ್ನು ಕೆತ್ತಿ ಕೂಡಿಸಿ ಮನೋಹರವಾಗುವ
ನೂಡಿರುವರು. ಬೆಳ್ಳಿ-ಬಂಗಾರಗಳ ಪಲಂಗಗಳೂ ಸಾವಿರಾರು ರೂಪಾಯಿ ಬ
ಬಾಳುವ ರತ್ನಗಂಬಳಿಗಳೂ ಅನುರೂಪವಾದ ಆಸನಗಳೂ ಅರಮನೆಯ ಸೊಬಗ
ಹೆಚ್ಚಿಸುತ್ತಿರುವವು. ಈ ಅರಮನೆಯ ಬೇರೆ ಬೇರೆ ಶಾಲೆ (Hall) ಗಳಲ್ಲಿ ಕೆಂ
ಪು ಹಸರು, ನೇರಿಲ ಮುಂತಾದ ಬಣ್ಣಗಳ ರತ್ನಗಂಬಳಿಗಳನ್ನು ಹಾಸಿ ಅಲ್ಲಿರುವ ನಾನಾ
ವರ್ಣದ ಆಸನಗಳಿಗೂ ಅದೇ ಬಣ್ಣದ ಕಿನಖಾಬನ್ನು ಹಾಕಿ ಮಂದಿರವು ಒಂದೇ ಒಂ
ದು ಬಣ್ಣದಿಂದ ಕಂಗೊಳಿಸುವಂತೆ ಮಾಡಿರುವರು. ಊಟದ ಪಾತ್ರೆಗಳೆಲ್ಲ ಬಂಗಾರದ
ಈ ಅರಮನೆಯಲ್ಲಿ ಎಲ್ಲ ಮಹಾರಾಜರ ಹಾಗು ಪ್ರಸಿದ್ಧ ದಿವಾಣರ ಪ್ರತಿಮೆಗಳೂ ತೈಲ
ಚಿತ್ರಗಳೂ ವಿರಾಜಿಸುತ್ತಿರುವವು. ದೇಶೀಯ ಹಾಗು ಪರದೇಶೀಯ ಚಿತ್ರಕಲಾಕೋ
ವಿದರು ತೆಗೆದಂಥ ತೈಲಚಿತ್ರಗಳಿಂದ ಅರಮನೆಯ ಗೋಡೆಗಳು ಶೋಭಿಸುತ್ತಿರುವ
ನಮ್ಮ ದೇಶದ ಸುಪ್ರಸಿದ್ಧ ಚಿತ್ರಕಲಾವಿಶಾರದನಾದ ರಾಜಾರವಿವರ್ಮನು ತೆಗೆದ ದ್ರೌ
ದೀವಸ್ತ್ರಹರಣ, ಸೀತಾಸ್ವಯಂವರ, ರಾಧಾ-ಕೃಷ್ಣ, ನಲದಮಯಂತಿ ಮುಂತಾ
ಅನೇಕ ಸುರಮ್ಯ ಚಿತ್ರಗಳನ್ನು ಇಲ್ಲಿ ನೋಡಬಹುದು. ಈ ಅರಮನೆಯ ಮುಂದಿ
ಉಪವನವೂ ಅತ್ಯಂತ ಮನೋಹರವಾಗಿದ್ದು ೭೦ ಎಕರೆ ವಿಸ್ತೀರ್ಣವಾಗಿರುವದ

---

(ಮುಂದೆ ಸಾಗುವದು.

# ವ್ಹ. ಘಾ. ಪರೀಕ್ಷೆಯ ಪರಿಣಾಮವು.

೧೯೨೬.

## ಬೆಳಗಾಂವ ಸೆಂಟರ.

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

| ನಂಬರು. | ಹೆಸರು. |
|---|---|
| ೧೯೮ | ಭೂಪಾಲ ತಾತೋಬಾ ಅವಲಕ್ಕಿ |
| ೧೯೯ | ಸಂತರಾಮ ಸಿದ್ಲಪ್ಪ ಕೊಣ್ಣೂರ |
| ೨೦೦ | ನಾರಾಯಣ ವಿಷ್ಣುಪಂತ ನಾಯಿಕ |

ಕನ್ನಡ

# ಶಾಲಾಪತ್ರಿಕ

ಸಂಪಾದಕ:—**ಹನುಮಂತ ಗೋವಿಂದರಾವ ದೇಶಪಾಂಡೆ,** ಬಿ. ಎ.

ಸಂಪುಟ ೬೩ } ನವ್ಹೆಂಬರ, ದಿಶಂಬರ ೧೯೨೩. { ಸಂ. ೮, ೯.

# ಸ್ಫುಟವಿಚಾರವು.

## ಮುಂಬೈ ಇಲಾಖೆಯ ಹೊಸ ಮಂತ್ರಿಗಳು.

ನೇಕನಾಮದಾರ ಗವ್ಹರ್ನರ ಸಾಹೆಬರು ಕೆಳಗೆ ಬರೆದಂತೆ ಮಂತ್ರಿಗಳನ್ನು ನೇಮಿಸಿದ್ದಾರೆ.

**೧. ಸರ ಗುಲಾಮ ಹುಸೇನ ಹಿದಾಯತುಲ್ಲಾ:** —ಇವರು ಸ್ಥಾನಿಕ ಸ್ವರಾಜ್ಯದ ಮಂತ್ರಿಗಳಂತೆ ೬ ವರ್ಷ ಕೆಲಸ ಮಾಡಿದ್ದು ಅದೇ ದಪ್ತರವು ಪುನಃ ಅವರಿಗೆ ಈಗ ಒಪ್ಪಿಸಲ್ಪಟ್ಟಿದೆ. ಇವರು ಈಗ ೪೭ ವರ್ಷದವರಿರುವರು. ಮಂತ್ರಿಪದಕ್ಕೆ ಬರುವದಕ್ಕಿಂತ ಮೊದಲು ಇವರು ಹೈದರಾಬಾದದ ವಕೀಲರೂ, ಮುನಿಸಿಪಾಲಿಟಿಯ ವ್ಹಾಯಿಸ ಪ್ರೆಸಿಡೆಂಟರೂ, ಡಿ. ಲೋ. ಬೋ. ನ ಪ್ರೆಸಿಡೆಂಟರೂ ಆಗಿದ್ದರು. ಇವರ ೬ ವರ್ಷಗಳ ಆಳಿಕೆಯಲ್ಲಿ ಲೋ. ಬೋ. ಮುನಿಸಿಪಾಲಿಟಿಗಳ ಸಂಬಂಧದಿಂದ ಹೊಸ ಕಾಯಿದೆಗಳಾಗಿ ಸ್ಥಾನಿಕ ಸ್ವರಾಜ್ಯದಲ್ಲಿ ಲೋಕಪಕ್ಷಕ್ಕೆ ಅನೇಕ ಹೊಸ ಅಧಿಕಾರಗಳು ದೊರೆತವು. ಕೌನ್ಸಿಲಿನಲ್ಲಿ ಇವರಿಗೆ ಸಿಂಧದ ಮುಸಲ್ಮಾನ ಸಭಾಸದರ ಬೆಂಬಲವು ಸಂಪೂರ್ಣವಾಗಿದ್ದದರಿಂದ ಇವರ ಉಪಯುಕ್ತತೆಯು ವಿಶೇಷವಾಗಿದೆ.

**೨. ಡಾ. ರಘುನಾಥ ಪುರುಷೋತ್ತಮ ಪರಾಂಜಪೆ:** — ಇವರಿಗೆ ಫಾರೆಸ್ಟ ಅಬಕಾರೀ ಖಾತೆಗಳು ಕೊಡಲ್ಪಟ್ಟಿವೆ. ಇವರು ಮೊದಲನೇ ಸುಧಾರಿಸಿದ ಕೌನ್ಸಿಲಿನಲ್ಲಿ ಶಿಕ್ಷಣ ಮಂತ್ರಿಗಳಿದ್ದದರಿಂದ ಶಿಕ್ಷಕರಿಗೆ ಪರಿಚಿತರು. ಆನಂತರ ಇವರು (ಸ್ವರಾಜ್ಯ) ಸುಧಾರಣಾ ವಿಚಾರದ ಕವಿಯಾಟಿಯಲ್ಲಿ, ಕರಗಳ ವಿಚಾರಣೆಯ ಕವಿಯಾಟಿಯಲ್ಲಿ ಮೆಂಬರರಾಗಿ ನಿಯಮಿಸಲ್ಪಟ್ಟಿದ್ದರಿಂದ ಹೆಚ್ಚು ಅನುಭವವನ್ನು ಪಡೆದವರಾಗಿದ್ದಾರೆ.

೩. **ದಿವಾಣ ಬಾಹದ್ದೂರ ಹರಿಲಾಲ ದೇಸಾಯಿ:**—ಇವರು ಶಿಕ್ಷ
ಮಂತ್ರಿಗಳು. ದಿ. ಬಾ. ರವರು ಅಹಮ್ಮದಾಬಾದದ ಪ್ರಸಿದ್ಧ ವಕೀಲರು. ಇವ
೧೮೯೫ರಲ್ಲಿ ಬಿ. ಎ. ಪರೀಕ್ಷೆಯಲ್ಲಿಯೂ, ೧೮೯೬ರಲ್ಲಿ ಎಲ್, ಎಲ್, ಬಿ. ಪರೀಕ್ಷೆ
ಲ್ಲಿಯೂ ತೇರ್ಗಡೆ ಹೊಂದಿ ಲಿ ಗ್ರಾಂಡ ಜೇಕಬ ಪ್ರಾಯಿಜ ಎಂಬ ಇನಾಮನ್ನು ದೊ
ಕಿಸಿದರು. ಮುಂದೆ ಖೇಡಾ ಜಿಲ್ಹೆಯಲ್ಲಿ ವಕೀಲರಾದರು. ೧೯೦೮ರಲ್ಲಿ ಇವರು ಸ
ಕಾರೀ ವಕೀಲರಾಗಿ ನಿಯಮಿಸಲ್ಪಟ್ಟರು. ೧೯೧೧ರಲ್ಲಿ ಇವರಿಗೆ ರಾವಸಾಹೇಬ ಎಂ
ಬಿರುದು ದೊರಕಿತು. ೧೯೧೫ರಲ್ಲಿ ಇವರು ಅಹಮದಾಬಾದದ ಮುನಿಸಿಪಾಲಿಟಿಂ
ಸಭಾಸದರಾದರು ಮತ್ತು ಸ್ಕೂಲ ಬೋರ್ಡಿನ ಚೇರಮನ್ನರಾಗಿ ಆರಿಸಲ್ಪಟ್ಟರು. ಆ
ಇವರು ಸರಕಾರದಿಂದ ಪ್ರಾಥಮಿಕ ಶಾಲೆಗಳ ಕಟ್ಟಡಗಳಿಗಾಗಿ ೪ ಲಕ್ಷ ರು. ಗ
ಗ್ರಾಂಟು ದೊರಕಿಸಿದರು. ೧೯೨೬ನೇ ಜೂನದಲ್ಲಿ ಇವರಿಗೆ ದಿ. ಬಾ. ಎಂಬ ಪ
ವಿಯು ದೊರಕಿತು. ಇವರು ಶಿಕ್ಷಣದ ವಿಷಯಕ್ಕೆ ಪೂರ್ಣ ಆಸ್ಥೆಯುಳ್ಳವರಿದ್ದ
ರಿಂದ ಇವರ ಕಾಲಕ್ಕೆ ಶಿಕ್ಷಣದ ಪ್ರಗತಿಯಾಗುವದೆಂದು ನಂಬುತ್ತೇವೆ.

---

# ಮನಃಶಕ್ತಿಪರೀಕ್ಷಣ.

## ಅಥವಾ

# ಮಗುವಿನ ಗ್ರಾಹಕಶಕ್ತಿಯ ಪರಿಮಾಣ.

( ಕಳೆದ ತಿಂಗಳ ಸಂಚಿಕೆಯ ಲನೆಯ ಪುಟದ ಶೇಷವು ).

ಪಂಡಿತ ಭೀ. ಜೀ. ಹುಲಕವಿ.

---

ಫ್ರೆಂಚ ಮಾನಸಶಾಸ್ತ್ರಜ್ಞನಾದ ಬೈನೆಟ್ (Binet) ಎಂಬವನು ಬುದ್ಧಿಶಕ್ತಿಯ ಸಾಮಾನ್ಯ ಅಳತೆಯನ್ನು ಗೊತ್ತುಪಡಿಸುವ ಮಾಪನವನ್ನು ಹುಡುಕಿ ತೆಗೆದನು. ಇದಕ್ಕೆ ಇಂಗ್ಲಿಶದಲ್ಲಿ ಬೈನೆಟ್ ಸಿಮನ್ ಸ್ಕೇಲ್ (Benet–simon Scale) ಎಂದು ಹೆಸರು. ಯುರೋಪ ಮತ್ತು ಅಮೇರಿಕಾ ಖಂಡಗಳಲ್ಲಿರುವ ಸಾರ್ವಜನಿಕಶಾಲೆಗಳಲ್ಲಿ ಇದನ್ನು ಸರ್ವಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಈ ಮಾಪನದಲ್ಲಿ ೫೪ ಪ್ರಶ್ನಮಾಲಿಕೆಗಳಿವೆ. ಈ ಪ್ರಶ್ನಮಾಲಿಕೆಗಳು ಅನುಕ್ರಮದಿಂದ ಒಂದಕ್ಕಿಂತ ಒಂದು ಹೆಚ್ಚು ಕಠಿಣವಾಗಿವೆ. ಸಾಮಾನ್ಯವಾಗಿ ಮೂರು ವರ್ಷಗಳ ಕೂಸಿನಿಂದ ಸಾಧಾರಣ ಪ್ರೌಢ ವಯಸ್ಸಿನವರ ವರೆಗೆ ಎಲ್ಲರನ್ನೂ ಪರೀಕ್ಷಿಸುವದಕ್ಕೆ ಇವು ಅನುಕೂಲವಾಗಿವೆ. ಮೂರು ವರ್ಷಗಳ ವಯಸ್ಸಿನಿಂದ ಹದಿನಾರು ವರ್ಷಗಳ ವಯಸ್ಸಿನವರಿಗಿನ ಹುಡುಗರ ಬುದ್ಧಿಶಕ್ತಿಯನ್ನು ಅಳೆಯುಲು ಈ ಪ್ರಶ್ನಮಾಲಿಕೆಗಳನ್ನು ಉಪಯೋಗಿಸುತ್ತಾರೆ. ಯಾಕಂ

ರಿ ಮಗುವಿನ ಸೈಸರ್ಗಿಕ ಬುದ್ಧಿಶಕ್ತಿಯ ಬೆಳೆವಣಿಗೆಯು ಸಾಮಾನ್ಯವಾಗಿ ಹದಿನಾರ
ಯ ವರ್ಷದಿಂದಾಚೆಗೆ ನಿಂತುಹೋಗುತ್ತದೆ. ಈ ಪ್ರಶ್ನಮಾಲಿಕೆಗಳನ್ನು ಮತ್ತೆ
ೋಧಿಸಿ ೫ಳರಿಂದ ೯೦ರ ವರೆಗೆ ಬೆಳಿಸಿವರು. ಮತ್ತು ಹೆಚ್ಚು ವಯಸ್ಸಾಗಿ ಬೆಳೆದಂ
ಹ ಹುಡುಗರ ಬುದ್ಧಿಶಕ್ತಿಯ ಬೆಳೆವಣಿಗೆಯನ್ನೂ ಪರೀಕ್ಷಿಸಲು ಅನುಕೂಲಿಸುವಂತೆ
ಮಾಡಿದರು. ಸ್ಮರಣಶಕ್ತಿ, ಭಾಷೆಯ ಜ್ಞಾನ, ಶಬ್ದಸಂಗ್ರಹ, ದಿಕ್ಕಾಲಪ್ರದೇಶಗಳು,
ಣ್ಣ ಮತ್ತು ಕೈಗಳ ಶಕ್ತಿ, ಪರಿಚಿತ ಪದಾರ್ಥಗಳ ಸೂಕ್ಷ್ಮ ಪರೀಕ್ಷಣ, ನಿರ್ಣಯ
ಕ್ತಿ, ಸಾಮಾನ್ಯ ಪದಾರ್ಥಗಳ ಹೋಲಿಕೆ ಮತ್ತು ಭೇದಗಳ ಜ್ಞಾನ, ಗಣಿತ ವಿಷ
ಯಕ ವಿಚಾರ, ಕಠಿಣವಾದ ವ್ಯಾವಹಾರಿಕ ಸಮಸ್ಯೆಗಳ ಸಾಧಾರತೆ ನಿರಾಧಾರತೆಗ
ಳನ್ನು ಕಂಡುಹಿಡಿಯೋಣ, ಅಸಹ್ಯವಾದ ಮತ್ತು ಅಯೋಗ್ಯವಾದ ಸಂಗತಿಗಳನ್ನು
ಬಿಟ್ಟುಬಿಡುವ ಪ್ರವೃತ್ತಿ, ಸೂಕ್ಷ್ಮನಿರೀಕ್ಷಣ, ಗ್ರಾಹಕಶಕ್ತಿ, ಕಲ್ಪನೆ ಮತ್ತು ಸಂವೇದನೆ
ಗಳ ವೇಗ ಮತ್ತು ಬಾಹುಲ್ಯ, ಅಸ್ತವ್ಯಸ್ತವಾಗಿ ಬಿದ್ದಿರುವ ಒಂದು ವಸ್ತುವಿನ ಬೇರೆ
ಬೇರೆ ಭಾಗಗಳನ್ನು ಸರಿಯಾಗಿ ಕೂಡಿಸೋಣ ಅಥವಾ ಒಂದೇ ವಸ್ತುವಿಗೆ ಸಂಬಂಧಿ
ಸಿದ ಬೇರೆ ಬೇರೆ ಕಲ್ಪನೆಗಳನ್ನು ವಿವೇಕರಿಸೋಣ, ವಿಶೇಷಗಳಿಂದ ಸಾಮಾನ್ಯವನ್ನೂ,
ಸಾಮಾನ್ಯದಿಂದ ವಿಶೇಷಗಳನ್ನೂ ಹುಡುಕಿ ತೆಗೆಯೋಣ ಇವೇ ಮೊದಲಾದ ಅನೇಕಾ
ನೇಕ ವಿಧಗಳಿಂದ ಮಗುವಿನ ಬುದ್ಧಿಶಕ್ತಿಯ ಪರೀಕ್ಷೆಯನ್ನು ಮೇಲೆ ಹೇಳಿದ ೯೦
ಪ್ರಶ್ನ ಮಾಲಿಕೆಗಳಿಂದ ಮಾಡಲಿಕ್ಕೆ ಬರುತ್ತದೆ. ಸ್ಥಲಕಾಲಗಳ ಸಂಕೋಚಕ್ಕಾಗಿ ನಾವು
ಆ ಎಲ್ಲ ಪ್ರಶ್ನ ಮಾಲಿಕೆಗಳ ಸಂಪೂರ್ಣ ವರ್ಣನವನ್ನಿಲ್ಲಿ ಕೊಡಲಾರೆವು. ಆದರೂ
ದಿಗ್ದರ್ಶನಾರ್ಥವಾಗಿ ಒಂದನ್ನು ಮಾತ್ರ ಉದಾಹರಿಸುವೆವು.

ಇದು ಹನ್ನೊಂದು ವರ್ಷಗಳ ವಯಸ್ಸಿನವರನ್ನು ಪರೀಕ್ಷಿಸುವ ಪ್ರಶ್ನಮಾಲಿ
ಕೆಯು. ಇದರೊಳಗಿನ ನಾಲ್ಕು ಉಪಭಾಗಗಳನ್ನಿಲ್ಲಿ ಕೊಡುವೆವು.

**ಒಂದನೆಯದು:- ಅಸಂಬದ್ಧತೆಯನ್ನು ಪರೀಕ್ಷಿಸುವದು:**—ಉದಾ
ಹರಣಾರ್ಥವಾಗಿ ಹುಡುಗನಿಗೆ ಮುಂದಿನ ಸಂಗತಿಯನ್ನು ಹೇಳುವದು. "ಕೇಳಿರಿ.
ಒಂದು ದಿನ ಒಬ್ಬ ಮನುಷ್ಯನು ಕಾಲಗಾಡಿಯನ್ನು ಹತ್ತಿಕೊಂಡು ಹೋಗುವಾಗ ಅಕ
ಸ್ಮಾತ್ತಾಗಿ ತನ್ನ ತಲೆಯ ಮೇಲೆ ಬಿದ್ದು ಕೂಡಲೇ ಮರಣಹೊಂದಿದನು. ಅನಂತರ
ಅವನನ್ನು ವೈದ್ಯಶಾಲೆಗೆ ಒಯ್ಯಲು, ಅವನಿಗೆ ನೆಟ್ಟಗಾಗುವದಿಲ್ಲವೆಂದು ಹೇಳಿದರು.
ಇದರಲ್ಲಿ ತಿಳಿಗೇಡಿತನದ ಸಂಗತಿಯಾವದು?" ಇಂತಹ ಐದು ಉದಾಹರಣಗಳನ್ನು
ಕೊಡಬೇಕು; ಮತ್ತು ಇದರಲ್ಲಿ ಪಾಸಾಗಬೇಕಾದರೆ ಹುಡುಗನು ತೀರ ಕಡಿಮೆಯಂ
ದರೆ ಮೂರಕ್ಕಾದರೂ ಸರಿಯಾದ ಉತ್ತರವನ್ನು ಹೇಳಲಿಕ್ಕೆ ಬೇಕು.

**ಎರಡನೆಯದು:— ಕಠಿನ ಪ್ರಶ್ನಗಳಿಗೆ ಉತ್ತರ ಕೊಡುವದು:—**
ಉದಾ:—"ಸಾಲೆಗೆ ಹೋಗುತ್ತಿರುವಾಗ ತಡವಾಗುವದೆಂದು ತಿಳಿದರೆ ನೀನು ಮಾಡ

ತಕ್ಕುದೇನು? " ಇಂತಹ ಐದು ಪ್ರಶ್ನೆಗಳಲ್ಲಿ ಮೂರಕ್ಕಾದರೂ ಹುಡುಗನು ಸಮಾಧಾನಕರವಾದ ಉತ್ತರಗಳನ್ನು ಹೇಳಲಿಕ್ಕೆ ಬೇಕು.

**ಮೂರನೆಯದು:— ಕೇಳಿದ ಕ್ರಮದಿಂದ ಅಂಕೆಗಳನ್ನು ಹೇಳವದು:—** ಉದಾ:— ೯೬೪೭೫೫೧೮.

**ನಾಲ್ಕನೆಯದು:— ಶಬ್ದಗಳನ್ನು ಕೇಳುವದು ಮತ್ತು ವಾಕ್ಯಗಳನ್ನು ಮಾಡಿಸುವದು:—** ಮೂರು ನಿಮಿಷಗಳಲ್ಲಿ ಹುಡುಗರು ೬೦ ಶಬ್ದಗಳನ್ನು ಹೇಳಲಿಕ್ಕೆ ಬೇಕು; ಮತ್ತು ಕೊನೆಯಲ್ಲಿ ಕೊಟ್ಟ ಮೂರು ಶಬ್ದಗಳಿಂದ ವಾಕ್ಯಗಳನ್ನು ರಚಿಸಿ ಹೇಳಬೇಕು.

ಹುಡುಗನು ಎಷ್ಟು ವರ್ಷಗಳ ವಯಸ್ಸಿನವನಿರುತ್ತಾನೋ ಅಷ್ಟೇ ವರ್ಷಗಳ ವಯಸ್ಸಿನ ಪ್ರಶ್ನಮಾಲಿಕೆಯಲ್ಲಿ ಅವನು ಪಾಸಾದನೆಂದರೆ ಅವನ ಬುದ್ಧಿಶಕ್ತಿಯು ಸಾಮಾನ್ಯವಾಗಿ ಯೋಗ್ಯಸ್ಥಿತಿಯಲ್ಲಿದೆಯೆಂದು ತಿಳಿಯಬೇಕು. ಹಾಗಾಗದೆ ಕಡಿಮೆ ಅಥವಾ ಹೆಚ್ಚು ವರ್ಷಗಳ ವಯಸ್ಸಿನ ಪ್ರಶ್ನಮಾಲಿಕೆಯಲ್ಲಿ ಪಾಸಾದನೆಂದರೆ ಅವನ ಬುದ್ಧಿಶಕ್ತಿಯು ಕಡಿಮೆ ಅಥವಾ ಹೆಚ್ಚು ಪ್ರಮಾಣದಲ್ಲಿದೆಯೆಂದು ತಿಳಿಯಬೇಕು. ಉದಾಹರಣಾರ್ಥವಾಗಿ ನಾಲ್ಕು ವರ್ಷಗಳ ವಯಸ್ಸಿನ ಹುಡುಗನು ೫ ವರ್ಷಗಳ ವಯಸ್ಸಿನ ಪ್ರಶ್ನಮಾಲಿಕೆಯಲ್ಲಿ ಪಾಸಾದರೆ ಅವನ ಬುದ್ಧಿಶಕ್ತಿಯು ನೂರಕ್ಕೆ ೧೨೫ ರಂತೆ ಇದೆಯೆಂದು ತಿಳಿಯಬೇಕು; ಅಥವಾ ಅದೇ ಹುಡುಗನು ಮೂರು ವರ್ಷಗಳ ವಯಸ್ಸಿನ ಪ್ರಶ್ನ ಮಾಲಿಕೆಯಲ್ಲಿ ಪಾಸಾದರೆ ಅವನ ಬುದ್ಧಿಶಕ್ತಿಯು ಪ್ರಮಾಣವು ನೂರಕ್ಕೆ ೭೫ರಂತೆ ಇದೆಯೆಂದು ತಿಳಿಯಬೇಕು.

ವಯೋನುಗುಣವಾದ ಮನಃಶಕ್ತಿಮಾನ, ನಿಯಮಾನುಗುಣವಾದ ವಿಭಜನ ಮತ್ತು ಪರಸ್ಪರ ಸಂಬಂಧ ಇವು ಮೂರು ಗಣಿತ ವಿಷಯದೊಳಗಿನ ಮಹತ್ವದ ಶೋಧಗಳು. ಮೇಲೆ ಹೇಳಿದ ಪ್ರಶ್ನ ಮಾಲಿಕೆಗಳು ಈ ಗಣಿತತತ್ವಗಳನ್ನು ಒಳಗೊಂಡಿರುವದು ಅವುಗಳ ವಿಶೇಷವಾಗಿದೆ. ಅಂತೇ ಅವನ್ನು ಪಾಶ್ಚಾತ್ಯದೇಶಗಳಲ್ಲಿ ಸರ್ವಸಾಮಾನ್ಯವಾಗಿ ಉಪಯೋಗಿಸುತ್ತಲಿದ್ದಾರೆ. ಬೆಲ್ಜಿಯಮ್ ದೇಶದ ಒಬ್ಬ ಗಣಿತಶಾಸ್ತ್ರಜ್ಞನು ಈ ತತ್ವಗಳನ್ನು ಮೇಲಿನ ಪ್ರಶ್ನಮಾಲಿಕೆಗಳಿಗೆ ಅನ್ವಯಿಸಬಹುದೆಂಬುದನ್ನು ಮೊದಲು ತೋರಿಸಿಕೊಟ್ಟನು. ಇರಲಿ.

ವೈಯಕ್ತಿಕಪರೀಕ್ಷಾಕ್ರಮವು ಫ್ರಾನ್ಸದಲ್ಲಿ ಹುಟ್ಟಿತು; ಮತ್ತು ಸಾಮೂಹಿಕ ಪರೀಕ್ಷಾಕ್ರಮವು ಅಮೇರಿಕದಲ್ಲಿ ಹುಟ್ಟಿತು. ಆವಶ್ಯಕತೆಯೇ ಎರಡನೆಯ ತರದ ಪರೀಕ್ಷೆಗಳ ಮೂಲವು. ಯುದ್ಧದಿಂದುಂಟಾದ ಆವಶ್ಯಕತೆಯಂತೂ ಆ ವಿಧದ ಪರೀಕ್ಷೆಗಳ ಶೋಧಕ್ಕೆ ಮುಖ್ಯಕಾರಣವು. ಮಾನಸ ಸಾಸ್ತ್ರಜ್ಞರ ಮನಃ ಸಂಬಂಧವಾದ ಜ್ಞಾನವನ್ನು ವ್ಯವಹಾರದಲ್ಲಿ ಉಪಯೋಗಿಸಿದುದು ಇದರ ಮೊದಲನೆಯ ಸೋಪಾನವು. ಯುದ್ಧ

ಧ್ಯೆಯ ಶಿಕ್ಷಣಕ್ಕೆ ಅನರ್ಹರಾದ ವ್ಯಕ್ತಿಗಳನ್ನು ನಾವು ಆರಿಸಬಲ್ಲೆವೆಂದು ಅವರು ಹೇಳಿದರು. ಮಾನಸಶಾಸ್ತ್ರಜ್ಞರ ಈ ವಿಧದ ಪರೀಕ್ಷಣಕ್ರಮವನ್ನು ಸಂದೇಹವೆಂಬ ಒರೆಗಲ್ಲಿನಿಂದ ಚೆನ್ನಾಗಿ ಪರೀಕ್ಷಿಸಿದರು; ಆ ಮೇಲೆ ಯೋಧರ ಮನಃಶಕ್ತಿ ಪರೀಕ್ಷಣದ ಪ್ರಯೋಗಗಳನ್ನು ಮಾಡಿನೋಡಿದರು. ಹೀಗೆ ಮನಃಶಾಸ್ತ್ರಜ್ಞರು ತಮ್ಮ ಪ್ರಶ್ನಮಾಲಿಕೆಗಳಿಂದ ಅನೇಕ ಜನ ಯೋಧರನ್ನು ಪರೀಕ್ಷಿಸಿ, ಅವರವರ ಯೋಗ್ಯತೆಗನುಸಾರವಾಗಿ ಬೇರೆ ಬೇರೆ ವರ್ಗಗಳನ್ನು ಅವರಲ್ಲಿ ಮಾಡಿದರು. ಆನಂತರ ಅವೇ ಯೋಧರೊಡನೆ ಬಹುದಿವಸಗಳವರೆಗೆ ಇದ್ದು, ಅವರನ್ನು ಸಂಪೂರ್ಣವಾಗಿ ಬಲ್ಲಂತಹ ಅಧಿಕಾರಿಗಳಿಂದ ಅವರನ್ನು ಪರೀಕ್ಷಿಸಿದರು. ಈ ಪ್ರಕಾರವ ಎಂಡೂ ಪರೀಕ್ಷೆಗಳ ಪರಿಣಾಮವು ತಂತೋ ತಂತವಾಗಿ ಒಂದೇ ಆಯಿತು. ಹೀಗೆ ಮಾನಸಶಾಸ್ತ್ರಜ್ಞರು ತಾವು ನುಡಿದುದನ್ನು ಮಾಡಬಲ್ಲರಿಷ್ಟೇ ಅಲ್ಲದೆ, ಅದಕ್ಕೂ ಹೆಚ್ಚಾಗಿಯೂ ಮಾಡಲಾರ್ಪರೆಂಬುದು ವ್ಯಕ್ತವಾಯಿತು. ಈ ವಿಧವಾಗಿ ಸಾಮೂಹಿಕ ಪರೀಕ್ಷಣದ ಅಥವಾ ಸೈನ್ಯಪರೀಕ್ಷಣದ ಕ್ರಮವು ಸರ್ವಸಾಮಾನ್ಯವಾಗಿ ವ್ಯವಹಾರದಲ್ಲಿ ಉಪಯುಕ್ತವಾಯಿತು.

ಬೈನೆಟ್‌ನು ವ್ಯಕ್ತಿಯ ಮನಃಶಕ್ತಿಪರೀಕ್ಷಣದ ಯೋಗ್ಯವಾದ ದಾರಿಯನ್ನು ಮಾನಸಶಾಸ್ತ್ರಜ್ಞರಿಗೆ ತೋರಿಸಿಕೊಟ್ಟನು. ಅಮೇರಿಕದವರು ಸಾಮೂಹಿಕ ಪರೀಕ್ಷಣದ ಸರಿಯಾದ ದಾರಿಯನ್ನು ತೋರಿಸಿದರು. ಉತ್ತಮವೆಂದು ನಿರ್ಣೀತವಾದ ಸಾಮೂಹಿಕ ಪರೀಕ್ಷಣದ ಅನೇಕ ಪ್ರಶ್ನಮಾಲಿಕೆಗಳು ಅಮೇರಿಕದ ಸಾಲೆಗಳಲ್ಲೆಲ್ಲ ಪ್ರಸಿದ್ಧಿಸಿ ಹಂಚಲ್ಪಟ್ಟವು. ಹೀಗಾಗಿ ಅಮೇರಿಕದಲ್ಲಿ ಈ ತರದ ಅನೇಕ ಪ್ರಶ್ನಮಾಲಿಕೆಗಳ ಮಾಲಿಕೆಗಳು ಸದ್ಯಕ್ಕೆ ಪ್ರಚಾರದಲ್ಲಿವೆ. ಅವು ಬೇರೆ ಬೇರೆ ಸಂಘಗಳಿಂದ ಪ್ರಸಿದ್ಧಿಸಲ್ಪಟ್ಟಿವೆ. ಅವುಗಳ ಮುಖ್ಯ ಲಕ್ಷಣವೇನಂದರೆ:– ಅವುಗಳ ಉತ್ತರಗಳನ್ನು ಹುಡುಗರು ಬಹು ಬೇಗನೆ ಕೊಡತಕ್ಕವ್ವು. ಇಂತಹ ಒಂದು ಪರೀಕ್ಷೆಯುಲ್ಲಿ ( Alpha Group *i. e.* The American Army Group Examination ) ವಿದ್ಯಾರ್ಥಿಯು ೨೫ ನಿಮಿಷಗಳಲ್ಲಿ ೨೧೨ ಪ್ರಶ್ನಗಳ ಉತ್ತರಗಳನ್ನು ಕೊಡಬೇಕಾಗುತ್ತದೆ. ಟರ್ಮನ್ ( Terman ) ಎಂಬವನು ೧೨೫ ಪ್ರಶ್ನಗಳ ಉತ್ತರಗಳನ್ನು ಹೇಳಲು ೨೭ ನಿಮಿಷಗಳ ಅವಧಿಯನ್ನು ಕೊಡುತ್ತಾನೆ. ಇನ್ನು ಈ ಪ್ರಶ್ನಗಳ ಎರಡನೆಯ ಲಕ್ಷಣವೇನಂದರೆ- ಈ ಪ್ರಶ್ನಗಳ ಉತ್ತರಗಳು ಪ್ರಶ್ನ ಪತ್ರಿಕೆಯಲ್ಲಿಯೇ ಇದ್ದ ಗುರುತುಗಳ ರೂಪದಿಂದಿರುತ್ತವೆ. ಹೀಗೆ ಪ್ರಶ್ನಗಳು ಅಸಂಖ್ಯಾತವಾಗಿರುವದರಿಂದ, ಪ್ರತಿಯೊಬ್ಬ ಪರೀಕ್ಷ್ಯನಿಗೆ ಒಂದೊಂದು ಚಿಕ್ಕ ಪುಸ್ತಕವನ್ನು ಕೊಡಬೇಕಾಗುತ್ತದೆ. ಅದರ ಪ್ರತಿಯೊಂದು ಪೃಷ್ಠವು ಒಂದು ಮಾದರಿಯ ಪ್ರಶ್ನಮಾಲಿಕೆಯಿಂದ ತುಂಬಿರುತ್ತದೆ. ಸಾಮಾನ್ಯವಾದ ಸಾಲೆಯ ಪರೀಕ್ಷೆಗಳಲ್ಲಿ ಮೂರು ತಾಸುಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ಹತ್ತು ಪ್ರಶ್ನಗಳಿಗೆ ವಿದ್ಯಾರ್ಥಿಯು ಉತ್ತರಕೊಡಬೇಕಾಗುತ್ತದೆ. ಆದರೆ ಈ ಮನಃಶಕ್ತಿ ಪರೀಕ್ಷಣದ ಪ್ರಶ್ನಮಾಲಿಕೆಗಳಲ್ಲಿ ಸುಮಾರು ೨೦೦ ಪ್ರಶ್ನಗಳಿಗೆ ಅರ್ಧತಾಸಿನಲ್ಲಿ ಉತ್ತ

ರವನ್ನು ಕೊಡಬೇಕಾಗುತ್ತದೆ. ಇಂತಹ ಪರೀಕ್ಷಕನಾದರೂ ಬಹುತರವಾಗಿ ನಿಶ್ಚಿತನೂ ತಪ್ಪಿಲ್ಲದವನೂ ಆಗುತ್ತಾನೆ. ಯಾಕಂದರೆ, ಈ ಪರೀಕ್ಷೆಯಲ್ಲಿ ವೈಯಕ್ತಿಕ ದೋಷಕ್ಕಾಗಲಿ ಪರೀಕ್ಷ್ಯನ ಶಬ್ದಜಾಲದಿಂದ ಮೋಸಹೋಗುವದಕ್ಕಾಗಲಿ ಆಸ್ಪದವು ಕಡಿಮೆ

ಇನ್ನು ಈ ಬುದ್ಧಿಶಕ್ತಿ ಪರೀಕ್ಷಣದ ಮಹತ್ವವನ್ನಿಷ್ಟು ವಿಚಾರಿಸುವ. ಸಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳ ವಯೋನುಗುಣವಾದ ಪ್ರಗತಿಯನ್ನು ಸೂಕ್ಷ್ಮವಾಗಿಯೂ ಶಾಂತರೀತಿಯಿಂದಲೂ ಪರೀಕ್ಷಿಸಲು, ಶಿಕ್ಷಣವಿಷಯದಲ್ಲಿ ಪರಿಷ್ಕರಣವು ಅತ್ಯವಶ್ಯವಾಗಿದೆಯೆಂದು ಕಂಡುಬಂತು. ಯುನಾಯಿಟೆಡ್ ಸ್ಟೇಟ್ಸದಲ್ಲಿಯ ನೂರಾರು ಸಾಲೆಗಳಲ್ಲಿಯ ನಿಜಸ್ಥಿತಿಯನ್ನು ಚೆನ್ನಾಗಿ ಪರೀಕ್ಷಿಸಲು ಕಂಡುಬಂದುದೇನಂದರೆ– ಒಟ್ಟು ವಿದ್ಯಾರ್ಥಿಗಳ ಸುಮಾರು ೫ನೆಯ ಅಂಶದಿಂದ ಅರ್ಧದವರೆಗೆ ಹುಡುಗರು ತನ್ನ್ಮ ತನ್ನ್ಮ ತರಗತಿಗೆ ಅನುಗುಣವಾದ ಪ್ರಗತಿಯನ್ನು ಹೊಂದುವದಿಲ್ಲ; ಅವರಲ್ಲಿ ನೂರಕ್ಕೆ ೧೦ ರಂತೆ ಎರಡು ವರ್ಷಗಳವರೆಗೂ, ೬ರಂತೆ ಮೂರು ವರ್ಷಗಳವರೆಗೂ ಒಂದೇ ತರಗತಿಯಲ್ಲಿ ಹಿಂದೆ ಉಳಿಯುತ್ತಾರೆ, ಸಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿಸುವದಕ್ಕಾಗಿ ಪ್ರತಿವರ್ಷ ಯುನೈಟೈಡ್ ಸ್ಟೇಟ್ಸದಲ್ಲಿ ೪೦೦ ದಶಲಕ್ಷ ಡಾಲರಗಳು ವೆಚ್ಚವಾಗುತ್ತವೆ; ಈ ದ್ರವ್ಯದಲ್ಲಿ ನೂರಕ್ಕೆ ೧೦ ರಷ್ಟು ಹಣವು ಹುಡುಗರಿಗೆ ಕಲಿತದ್ದನ್ನೇ ಕಲಿಸುವದರಲ್ಲಿ ಖರ್ಚಾಗುತ್ತದೆ; ಆದರೂ ಅವರು ಹೇಗೆ ಕಲಿತು ಜಾಣರಾಗಬೇಕೋ ಹಾಗೆ ಆಗುವದಿಲ್ಲ. ಇಂತಹ ಶೋಧನವನ್ನು ನಮ್ಮ ದೇಶದಲ್ಲಿ ಮಾಡಿನೋಡಿದರೆ, ಅಲ್ಲಿಗಿಂತಲೂ ಇಲ್ಲಿ ಬಹಳೇ ನಿರಾಶಾಜನಕವಾದ ಮತ್ತು ಶೋಕಕಾರಕವಾದ ಸ್ಥಿತಿಯು ಇದ್ದದ್ದು ಕಂಡು ಬರಬಹುದೆಂಬಲ್ಲಿ ಸಂದೇಹವಿಲ್ಲ. ಇತರಲಿ ಮೇಲೆ ಹೇಳಿದ ದುಷ್ಪರಿಣಾಮವು ದೃಷ್ಟೋತ್ಪತ್ತಿಗೆ ಬಂದ ಕೂಡಲೆ, ಅದರ ನಿವಾರಣೋಪಾಯವನ್ನು ಕುರಿತು ಅಲ್ಲಿಯ ಸಮಾಜನಾಯಕರು ಮನಃಪೂರ್ವಕವಾಗಿ ಯತ್ನಿಸಹತ್ತಿದರು. ವೈಯಕ್ತಿಕ ಲಕ್ಷ್ಯವನ್ನು ಪೂರಯಿಸಿ ವಿದ್ಯಾಭ್ಯಾಸನಮಾಡಿಸುವದು, ಒಂದು ವರ್ಗದಿಂದ ಮೇಲಿನ ವರ್ಗಕ್ಕೆ ವಿದ್ಯಾರ್ಥಿಗಳನ್ನು ಕಳಿಸುವ ಉತ್ತಮ ಪರೀಕ್ಷಾಕ್ರಮವನ್ನು ಗೊತ್ತುಮಾಡುವದು, ವಿದ್ಯಾರ್ಥಿಗಳ ದೈಹಿಕಸಾಮರ್ಥ್ಯಕ್ಕೆ ಹೆಚ್ಚು ಲಕ್ಷ್ಯವನ್ನು ಕೊಡುವದು, ಸಾಲೆಗಳ ಆಳಿಕೆಯ ಕ್ರಮವಲ್ಲಿ ಆವಶ್ಯಕವಾದ ಸುಧಾರಣೆಗಳನ್ನು ಮಾಡುವದು ಈ ತರದ ಉಪಾಯಗಳಿಂದ ಮೇಲಿನ ಕೆಟ್ಟ ಪರಿಣಾಮವನ್ನು ನಿಲ್ಲಿಸಬಹುದೆಂದು ಅವರು ನಿರ್ಣಯಿಸಿದರು. ಅವರ ಈ ವಿಚಾರದಲ್ಲಿ ಬಹುಭಾಗವು ನಿಜವಿದ್ದರೂ, ಅದರಲ್ಲಿ ದೋಷದ ಭಾಗವು ಇಲ್ಲವೇ ಇಲ್ಲವೆಂದು ಮಾತ್ರ ಹೇಳಲಾಗುವದಿಲ್ಲ. ಯಾಕಂದರೆ ಉತ್ತಮವಾದ ಮತ್ತು ನಿರ್ದುಷ್ಟವಾದ ಸ್ಥಿತಿಯಲ್ಲಿ ಎಲ್ಲ ಹುಡುಗರು ಒಂದೇ ರೀತಿಯಿಂದ ಸರಿಯಾಗಿಯೇ ಪ್ರಗತಿಯನ್ನು ಹೊಂದುವರೆಂಬ ಗ್ರಹಿಕೆಯು ಇದರಲ್ಲಿ ಅಂತರ್ಭೂತವಾಗಿದೆ. ಮನಃ ಶಕ್ತಿಪರೀಕ್ಷಣದ ಉತ್ತಮವಾದ ಪ್ರಶ್ನಮಾಲಿಕೆಗಳಿಂದ ಈ ಗ್ರಹಿಕೆಯು ತಪ್ಪಾದುದೆಂದು ಈಗ ಗೊತ್ತಾಗಿದೆ. ತೀರ ಕಡಿಮೆತರದ ದಡ್ಡತನದಿಂದ ಅತ್ಯುಚ್ಚ ಪ್ರತಿಭೆ

ಶಾಗ್ರತೆಯವರೆಗೆ ಬುದ್ಧಿಶಕ್ತಿಯಲ್ಲಿ ಅನೇಕತರದ ಮೆಟ್ಟಿಲುಗಳಿವೆ. ಆದುದರಿಂದ
ಕ್ಕಳ ಸ್ವಾಭಾವಿಕವಾದ ಮನಃ ಪ್ರವೃತ್ತಿಗಳನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸುವದು
ಾವಶ್ಯವಾದ ಮಾತಾಗಿದೆ. ಅದರಲ್ಲಿಯೂ ಬೇರೆ ಬೇರೆ ಹುಡುಗರ ಮನಃಶಕ್ತಿಯ
ದ್ದ ವ್ಯತ್ಯಾಸಗಳನ್ನು ನಿರೀಕ್ಷಿಸುವದು ಅದಕ್ಕೂ ಆವಶ್ಯಕವಾದದ್ದು. ನಿಜವಾಗಿ ವಿಚಾ
ಮಾಡಿದರೆ, ಸಾಮಾನ್ಯವಾಗಿ ಸುಸ್ಥಿತಿಯಲ್ಲಿದ್ದ ಹುಡುಗನ ಪ್ರಗತಿಯ ಮಾನದಿಂದ,
ಾನಸಿಕ ದೃಷ್ಟಿಯಿಂದ ಅಶಕ್ತರೂ ವ್ಯಂಗರೂ ಆದ ಹುಡುಗರ ಪ್ರಗತಿಯನ್ನು ಅಳೆ
ುವದು ಸರಿಯಲ್ಲ. ಹೀಗೆ ಮಾಡದೆ ಆಯಾ ಹುಡುಗರ ಮನಃ ಶಕ್ತಿಯಲ್ಲಿದ್ದ ಸೂಕ್ಷ್ಮ
ೀದಗಳನ್ನು ಪ್ರತ್ಯವಲೋಕಿಸಬೇಕು; ಮತ್ತು ಅವಕ್ಕನುಗುಣವಾಗಿ ಅವರವರಿಗೆ
ಭ್ಯಾಸಕ್ರಮವನ್ನು ಏರ್ಪಡಿಸಬೇಕು; ಅಂದರೆ ಮಗುವು ತನ್ನ ಮನಸ್ಸಿನ ಶಕ್ತಿಗೆ
ನುಗುಣವಾದ ರೀತಿಯಿಂದಲೇ ಪ್ರಗತಿಯನ್ನು ತೋರಿಸುತ್ತ ಹೋಗುವದು. ಈ
ಗತಿಯು ಸಾಮಾನ್ಯದೃಷ್ಟಿಯಿಂದ ಸಾವಕಾಶವಾಗಿರಬಹುದು; ಇಲ್ಲವೆ ತೀವ್ರವಾಗಿರ
ಹುದು. ತಾವು ತೇರ್ಗಡೆಹೊಂದದೆ ಇರುವ ವಿಷಯದ ಅಭ್ಯಾಸವನ್ನು ಹುಡುಗರು
ಷ್ಟು ಮನಃಪೂರ್ವಕವಾಗಿ ಮಾಡುವದಿಲ್ಲವೆಂಬುದು ಸರ್ವಶಿಕ್ಷಕರಿಗೂ ತಿಳಿದ ಮಾತು.
ೀರ್ಗಡೆ ಹೊಂದದೆ ಇರುವದರಿಂದ ಆತ್ಮವಿಶ್ವಾಸವು ಹಾರಿಹೋಗುವದು; ಮತ್ತು
ಲಸಮಾಡುವ ಹುರುಪು ಕುಂಠಿತವಾಗುವದು. ಪರೀಕ್ಷೆಯಲ್ಲಿ ಯಶಸ್ಸನ್ನು ಪಡೆಯದೆ
ಿರುವ ಒಂದು ಚಟವೇ ಈಗಿನ ಕಾಲದ ಹುಡುಗರಲ್ಲಿ ಹೆಚ್ಚಾಗಿ ಗೋಚರಿಸುತ್ತ
ಿಂಬುದು ನಿಜವು. ಇದನ್ನು ನಿಲ್ಲಿಸಬೇಕಾದರೆ, ವಿದ್ಯಾರ್ಥಿಗಳ ಮನಃಶಕ್ತಿಗೂ, ಅವರು
ಮಾಡಬೇಕಾಗಿರುವ ಕೆಲಸಕ್ಕೂ ಇರುವ ಪ್ರಮಾಣವನ್ನು ನೋಡಲಿಕ್ಕೆ ಬೇಕು. ಉಗೆ
ಂಡಿಯ ಹಾದಿಯೊಳಗಿನ ಸೇತುವೆಯ ಕಟ್ಟುವ ಇಂಜಿನೀಯರನು ಅದಕ್ಕೆ ಉಪಯೋಗಿ
ತಕ್ಕ ಪದಾರ್ಥಗಳನ್ನೂ, ಆ ಪದಾರ್ಥಗಳ ಪ್ರತ್ಯಂಶಕ್ಕೆ ಬೀಳತಕ್ಕ ಭಾರವನ್ನೂ
ಚೆನ್ನಾಗಿ ತಿಳಿದುಕೊಳ್ಳುತ್ತಾನೆ; ಶಿಕ್ಷಣದ ಕೆಲಸದಲ್ಲಿ ತೊಡಗಿದ ಇಂಜನೀಯರನಾದರೂ
ಅದರಂತೆಯೇ ಮಾಡಲಿಕ್ಕೆ ಬೇಕು.

ರಾಷ್ಟ್ರದ ಭವಿಷ್ಯತ್ಕಾಲವು ಪ್ರಕಾಶಮಾನವಾಗಲಿ ತದ್ವಿರುದ್ಧವಾಗಲಿ ಆಗುವದು
ಮಕ್ಕಳ ಶಿಕ್ಷಣ ಕ್ರಮವನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ; ಅವರ ಬುದ್ಧಿಶಕ್ತಿಯನ್ನೇ
ಸಂಪೂರ್ಣ ದೇಶದ ಸ್ಥಿತಿಯು ಅವಲಂಬಿಸಿರುತ್ತದೆಂದು ಹೇಳಬಹುದು. ವಿಜ್ಞಾನ,
ರಾಜನೀತಿ, ಕಲೆ, ನೀತಿಶಾಸ್ತ್ರ ಮತ್ತು ಧರ್ಮಶಾಸ್ತ್ರಗಳಲ್ಲಿ ಜನರು ನಿಷ್ಣಾತರಾಗಿ ಮುಂ
ದುವರಿಯುವದೇ ನಾಗರಿಕತೆಯ ಪ್ರಗತಿಯ ಲಕ್ಷಣವು. ನೈವಿಕವಾದ ಕುಶಾಗ್ರತೆಯು
ದಾರಿಯನ್ನು ತೋರಿಸಿದರೆ, ಸಾಧಾರಣವಾದ ಸಾಮರ್ಥ್ಯವು ಅದನ್ನು ಅನುಸರಿಸುತ್ತದೆ;
ಇಲ್ಲವೆ ಅನುಕರಿಸುತ್ತದೆ. ಆದುದರಿಂದ ವಿಶಿಷ್ಟ ತರದ ಮತ್ತು ಶ್ರೇಷ್ಠ ಜಾತಿಯ
ಬುದ್ಧಿಶಕ್ತಿಯನ್ನು ಗೊತ್ತುಹಚ್ಚುವದು ಶಿಕ್ಷಕರಿಗೆ ಚೆನ್ನಾಗಿ ಗೊತ್ತಿರಲಿಕ್ಕೆ ಬೇಕು.
ಸಾಮಾನ್ಯವಾದ ಸಾಲೆಯ ಪರೀಕ್ಷೆಗಳಲ್ಲಿ ವಿಶೇಷ ಶ್ರಮವಿಲ್ಲದೆ ಎಲ್ಲರಿಗಿಂತಲೂ ಹೆಚ್ಚು

ಗುಣಗಳನ್ನು ಪಡೆಯುವ ಹುಡುಗರಿಗೆ ಮನಃಶಕ್ತಿಪರೀಕ್ಷಣದ ಪ್ರಶ್ನಮಾಲಿಕೆಗಳನ
ಕೊಡಬೇಕು; ಮತ್ತು ವಿಶೇಷ ತರದಿಂದ ಚುರುಕಾದ ಬುದ್ಧಿಶಕ್ತಿಯನ್ನು ಹೊಂದಿದ
ರನ್ನು ಸಂಪೂರ್ಣ ವಿಚಾರಮಾಡಿ ಮೇಲಿನ ವರ್ಗಕ್ಕೆ ಹಾಕಬೇಕು; ಇಲ್ಲವೆ ಇಂತ
ವಿಶಿಷ್ಟವರ್ಗದಲ್ಲಿ ಹಾಕಬೇಕು. ಈ ವಿಶಿಷ್ಟ ವರ್ಗಗಳಲ್ಲಿ ವೇಳೆಯು ನಿಯಮ ನಿರ್ಬಂ
ವಿಲ್ಲದೆ ತರಗತಿಯು ಅಧ್ಯಯನವು ಮುಗಿಮುಗಿದಂತೆ ಮುಂದೆ ಸಾಗುತ್ತಿರಬೇಕು. ಹೀ
ಮಾಡುವದರಿಂದ ಇಯತ್ತೆಗಳನ್ನು ಹಾರಿಸಿ ಮುಂದೆ ಹೋಗುವ ತೊಂದರೆಯು ತಪ್ಪ
ವದು; ಶೀಘ್ರವಾಗಿಯೂ ಕ್ರಮವಾಗಿಯೂ ವಿದ್ಯಾರ್ಥಿಗಳು ಪ್ರಗತಿಯನ್ನು ಹೊಂದ
ವರು.

ಒಂದು ಸಾಲೆಯನ್ನು ಬಿಟ್ಟು ಇನ್ನೊಂದು ಸಾಲೆಗೆ ಹೋಗುವ ಹುಡುಗನ
ಯಾವಾಗಲೂ ವೇಳೆಯ ದೃಷ್ಟಿಯಿಂದ ಬಹಳ ಹಾನಿಯನ್ನು ಹೊಂದುತ್ತಾನೆ. ಪ
ಪುಸ್ತಕಗಳು ಬೇರೆ ಬೇರೆಯಾಗಿರುವ ಕಾರಣದಿಂದಾಗಲಿ, ಸಾಲೆಯೊಳಗಿನ ಕಲಿಸು
ಪದ್ಧತಿಗಳ ವ್ಯತ್ಯಾಸದ ಮೂಲಕವಾಗಿಯಾಗಲಿ ಅವನು ಕೆಳಗಿನ ತರಗತಿಗೆ ಹೋಗು
ಪ್ರಸಂಗ ಬರಬಹುದು. ( ಈ ಮಾತು ಮಾತ್ರ ನಮ್ಮಲ್ಲಿಯ ಪ್ರಾಥಮಿಕ ಶಾಲೆಗಳ
ಅನ್ವಯಿಸುವದಿಲ್ಲ; ದ್ವೈತೀಯಿಕ ಶಾಲೆಗಳಿಗೆ ಕೆಲಮಟ್ಟಿಗೆ ಅನ್ವಯಿಸುತ್ತದೆ.) ಮನ
ಶಕ್ತಿ ಪರೀಕ್ಷಣದ ಪ್ರಶ್ನಮಾಲಿಕೆಗಳನ್ನು ಕೊಟ್ಟು ಇಂತಹ ವಿದ್ಯಾರ್ಥಿಗಳನ್ನು ಪರೀ
ಸುವದರಿಂದ ನಿಜವಾಗಿ ಅವರಿಗೆ ಹಾನಿಯಾಗಲಾರದು.

ಮನಃಶಕ್ತಿಪರೀಕ್ಷಣದ ಈ ಪ್ರಶ್ನಮಾಲಿಕೆಗಳು ಅನಾವಶ್ಯಕವಾಗಿವೆಯೆಂದ
ಅನೇಕರು ಆಕ್ಷೇಪಿಸುತ್ತಾರೆ. ಅವರು ಹೇಳುವದೇನಂದರೆ—ಹುಡುಗರ ಬುದ್ಧಿಶಕ್ತಿ
ಯನ್ನು ಸೂಕ್ಷ್ಮನಿರೀಕ್ಷಕನಾದ ಪಾಲಕನಾಗಲಿ, ತೀಕ್ಷ್ಣದೃಷ್ಟಿಯ ಶಿಕ್ಷಕನಾಗಲಿ ಸಹ
ಜವಾಗಿ ಕಂಡುಹಿಡಿಯಬಹುದು. ಅವರು ಹೇಳುವ ಮಾತು ನಿಜ. ಆದರೆ ಹುಡುಗನ
ದಡ್ಡನೋ ಜಾಣನೋ, ತೀಕ್ಷ್ಣನೋ ಮಂದನೋ ಎಂಬದನ್ನಷ್ಟೇ ನಿರ್ಣಯಿಸಿದರೆ ನಮ
ಕೆಲಸವಾದಂತಾಗಲಿಲ್ಲ. ನಿಶ್ಚಿತವಾಗಿಯೂ ಪರಿಪೂರ್ಣವಾಗಿಯೂ ಹುಡುಗನ ಮನ
ಸ್ಥಿತಿಯ ಮೆಟ್ಟು ಗೊತ್ತಾಗಬೇಕು. ಮನುಷ್ಯನು ಅಸ್ವಸ್ಥನಾಗಿರುವಾಗ ಕೇವಲ ಅವ
ನಿಗೆ ಬೇನೆ ಬಂದಿದೆಯೆಂಬದಿಷ್ಟೇ ತಿಳಿದರೆ ಸಾಕಾಗುವದಿಲ್ಲ; ಆ ಬೇನೆಯ ಸೂಕ್ಷ್ಮ
ಲಕ್ಷಣಗಳನ್ನೂ ಕಾರಣಗಳನ್ನೂ ವೈದ್ಯನು ಪರೀಕ್ಷಿಸುವದು ಅವಶ್ಯವು. ಅದರಂತೆಯೆ
ಶಿಕ್ಷಕನು ಹುಡುಗರ ಮನಃಶಕ್ತಿಯ ನಿಜವಾದ ಮೆಟ್ಟನ್ನೂ, ಸ್ಥಿತ್ಯಂತರಗಳನ್ನೂ, ಪ್ರ
ವೃತ್ತಿಗಳನ್ನೂ ತಿಳಿದಿರುವದು ಅವಶ್ಯವಾಗಿದೆ. ಲೇಖಾರಂಭದಲ್ಲಿ ಹೇಳಿದಂತೆ ಈ ಪ್ರಶ್ನ
ಮಾಲಿಕೆಗಳ ಪ್ರಯೋಗವು ಪರದೇಶಗಳಲ್ಲಿ ಭರದಿಂದ ನಡೆದಿದೆ; ಮತ್ತು ಇದರಿಂದ
ಹುಡುಗರ ವಿದ್ಯಾಭ್ಯಾಸದ ಚರ್ಚೆಯ ವಿಷಯದಲ್ಲಿ ಆಶ್ಚರ್ಯಕರವಾದ ವ್ಯತ್ಯಾಸವು
ಟಾಗಿದೆ. ಈ ಕ್ರಮದಿಂದ ಎಷ್ಟೋ ಕುಶಾಗ್ರಬುದ್ಧಿಯವರು ಅಲ್ಪಾವಧಿಯಲ್ಲಿಯೇ
ಕಲ್ಪನಾತೀತವಾಗಿ ಮುಂದುವರಿದಂಥ ಆಶ್ಚರ್ಯವನ್ನುಂಟು ಮಾಡುವ ಎಷ್ಟೋ ಉದಾ
ಹರಣಗಳೂ ಪ್ರಸಿದ್ಧವಾಗಿವೆ.

ಶಿಕ್ಷಣ ವಿಷಯವನ್ನು ಕುರಿತು ಆಂಗ್ಲ ಭಾಷೆಯಲ್ಲಿ ಹೊರಡುವ ದೇಶೀಯ ಹಾಗು ವಿದೇಶೀಯ ಮಾಸಪತ್ರಿಕೆಗಳಲ್ಲಿ ಈ ವಿಷಯವನ್ನು ಚರ್ಚಿಸುವ ಅನೇಕ ಲೇಖಗಳು ವಿದ್ವಜ್ಜನರಿಂದ ಬರೆಯಲ್ಪಟ್ಟಿವೆ. ಅದರಂತೆಯೇ ಈ ವಿಷಯವನ್ನು ಕುರಿತು ಅನೇಕ ಗ್ರಂಥಗಳೂ ಪ್ರಸಿದ್ಧರಾದ ಶಿಕ್ಷಣಕೋವಿದರಿಂದ ಬರೆಯಲ್ಪಟ್ಟಿವೆ. ಇವೆಲ್ಲವನ್ನೂ ಬಲ್ಲ ಲೇಖಕರಿಗೆ ಪ್ರಸ್ತುತಲೇಖನವು ಯಾವ ದೃಷ್ಟಿಯಿಂದಲೂ ಪರಿಪೂರ್ಣವಾಗಿಲ್ಲೆಂಬ ಅರಿವು ತನ್ನಾಗಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಜಗತ್ತಿನಲ್ಲಿ ಶಿಕ್ಷಣಪದ್ಧತಿಯು ವಿಷಯದಲ್ಲಿ ಯಾವ ಯಾವ ತರದ ಕ್ರಾಂತಿಕಾರಕವಾದ ವಿಚಾರಶೋಧಗಳು ನಡೆದಿವೆಯೆಂಬುದು ಅನನುಕೂಲ ಪರಿಸ್ಥಿತಿಯಲ್ಲಿದ್ದ ಪ್ರಾಥಮಿಕ ಶಿಕ್ಷಕರಿಗೆ ಅಲ್ಪಾಂಶದಿಂದಾದರೂ ಗೊತ್ತಾಗಿ ಅವರ ಮನಸಿಗೆ ಕಾರ್ಯಕಾರಣವಲ್ಲಿ ಚಾಲನಾದಿಗಳು ದೊರೆಯಬೇಕು; ಶಿಕ್ಷಣಾಭಿಮಾನಿಗಳೂ ಆಂಗ್ಲ ಭಾಷೆಯನ್ನು ಬಲ್ಲವರೂ ಆದ ಜನರ ಲಕ್ಷ್ಯವು ಈ ವಿಷಯದ ಕಡೆಗೆ ಸೆಳೆಯಲ್ಪಟ್ಟು ಅವರು ಅದನ್ನು ಕುರಿತು ಹೆಚ್ಚು ಹೆಚ್ಚಾಗಿ ಲಿಖಿಸುವಂತೆ ಮಾಡಲು ಪ್ರವೃತ್ತರಾಗಬೇಕು; ಮತ್ತು ಆ ಭಾಷೆಯನ್ನರಿಯದವರಿಗೆ ಈ ವಿಷಯದ ಸಾಮಾನ್ಯ ರೂಪರೇಷೆಯು ಕಣ್ಣ ಮುಂದೆ ಬರಬೇಕು: ಎಂಬ ಈ ಸರಳವಾದ ಉದ್ದೇಶಗಳಿಂದ ಈ ಬರಹವನ್ನು ಕೈಕೊಂಡಿದ್ದೇವೆ. ಆದುದರಿಂದ ಒಮ್ಮೆ ಪೂರ್ಣವಾಗಿ ಶಿಕ್ಷಣಾಭಿಮಾನಿಗಳೂ ಶಿಕ್ಷಕರೂ ಈ ಲೇಖನವನ್ನು ಓದಿದರೆ ಸಾಕು: ಲೇಖನ ಶ್ರಮದ ಸಾರ್ಥಕ್ಯವಾಗುವದು.

ಕೊನೆಯಲ್ಲಿ ಆಂಗ್ಲ ಭಾಷೆಯನ್ನು ಬಲ್ಲವರ ಅವಗಾಹನೆಗಾಗಿಯೂ, ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವದಕ್ಕಾಗಿಯೂ, ಯಾವ ಗ್ರಂಥಾದಿಗಳಿಂದ ವಿಷಯವು ಸಂಗ್ರಹೀತವಾಯಿತೋ ಅವುಗಳ ನಾಮಾದಿಗಳನ್ನಿಷ್ಟು ಇಲ್ಲಿ ಉಲ್ಲೇಖಿಸುವದು ನಮ್ಮ ಕರ್ತವ್ಯವೆಂದು ಬಗೆಯುತ್ತೇವೆ. (1) Mental Tests. (2) The Group Tests of Intelligence (3) New examiner by Dr. P. B. Ballard. (1) The Measurement of Intelligence (2) The Intelligence of School children by. Prof. L. M. Terman. ಇವರಿಲ್ಲರಿಗೆ ಮನಃಪೂರ್ವಕವಾದ ಕೃತಜ್ಞತೆಗಳನ್ನು ಸಮರ್ಪಿಸಿ, ಕೇವಲ ಪೂರ್ವರೂಢವಾದ ಪದ್ಧತಿಯೆಂದು ಅಂಧತೆಯಿಂದ ಅಡಿಗಳನ್ನಿಕ್ಕದೆ ಸ್ವತಂತ್ರ ವಿಚಾರದಿಂದ ಶಿಕ್ಷಣಮಾರ್ಗವನ್ನು ಸುಕರವಾಗಿಯೂ ಸುಖಕರವಾಗಿಯೂ ಮಾಡುವ ಪ್ರವೃತ್ತಿಯುಳ್ಳವರಾಗಿರೆಂದು ಶಿಕ್ಷಕ ಮಿತ್ರರನ್ನು ಬೇಡಿಕೊಂಡು ಈ ಲೇಖವನ್ನು ಮುಗಿಸುತ್ತೇವೆ.

# ವಿಜಯನಗರದ ೨ನೇ ದೇವರಾಯನು.



ಅನುವಾದಕ: — ವೆ. ಶಾ. ಪ್ರಭು.

ವಿಜಯನಗರದಲ್ಲಿ ಆಳಿದ ಯಾದವ ಕುಲದ ಅರಸರಲ್ಲಿ ಮಹೋನ್ನತನಾದ ಪ್ರೌಢ ದೇವರಾಯನು ವಿಜಯರಾಯ ಮತ್ತು ನಾರಾಯಣ ದೇವಿ ಇವರ ಮಗನು. ವಿಜಯರಾಯನ ಶಿಲಾಲೇಖಗಳು ಶಕ ೧೩೩೧ರಿಂದ ಶಕ ೧೩೪೦ರ ವರೆಗೆ ಬರಿದಷ್ಟಿಕ್ಕವೆ. ವಿಜಯರಾಯನು ೧ನೇ ದೇವರಾಯನ ಕಾಲದಲ್ಲಿ ೩ ವರ್ಷ ಯುವರಾಜನಾಗಿದ್ದು ನಂತರ ಶಕ ೧೩೩೩ರಿಂದ ೧೩೪೦ರ ವರೆಗೆ ೭ವರ್ಷ ರಾಜನಾಗಿದ್ದನು. (ವೀರ ವಿಜಯನಿಂದ ಕೊಡಲ್ಪಟ್ಟ ಧರ್ಮಶಾಸನಗಳು ತಂಜಾವರ ಜಿಲ್ಲೆಯಲ್ಲಿ ದೊರೆತವೆ. ಈತನು ಶಕ ೧೩೩೩ನೇ ವಿಕೃತ್ ಸಂ॥ ದಲ್ಲಿ ಹುಲಿನಾಡು ಎಂಬಲ್ಲಿ ಒಂದು ಅಗ್ರಹಾರವನ್ನು ನೆಲೆಗೊಳಿಸಿ ಅದಕ್ಕೆ ತನ್ನ ಗುರುವಿನ ಹೆಸರಿಟ್ಟನು. ಇದರ ಮೇಲಿಂದ ನೋಡಿದರೆ ಈತನು ಕುಲಗುರುವಾದ ಕ್ರಿಯಾಶಕ್ತಿಯ ವಿಷಯಕ್ಕೆ ಬಹಳ ಪೂಜ್ಯಬುದ್ಧಿಯುಳ್ಳವನೆಂದು ತಿಳಿಯುತ್ತದೆ.

ವಿಜಯರಾಯನಿಗೆ ಮೂರು ಮಂದಿ ಮಕ್ಕಳು. ಹಿರಿಯವಳು ಹರಿಯಾಂಬೆ (ಹರಿಮೆ), ನಡುವಿನವನು ಪ್ರೌಢ ದೇವರಾಯನು (೨ನೇ ದೇವರಾಯನು) ಕಿರಿಯವನು ಪ್ರತಾಪದೇವರಾಯನು (ಪ್ರತಾಪರಾಯನು). ೨ನೇ ದೇವರಾಯನ ವಿಷಯದ ಉಪಲಬ್ಧವಾಗಿರುವ ಐತಿಹಾಸಿಕ ಸಂಗತಿಗಳನ್ನು ಪ್ರಕೃತ ಲೇಖದಲ್ಲಿ ಸಂಗ್ರಹವಾಗಿ ಹೇಳಿರುತ್ತದೆ.

೨ನೇ ದೇವರಾಯನಿಗೆ ಹಲವು ಬಿರುದುಗಳಿದ್ದವು. ಅವುಗಳಲ್ಲಿ ಮುಖ್ಯವಾದವು ಪರಮೇಶ್ವರ, ವೀರಪ್ರತಾಪ, ಮಹಾಮಂಡಲೇಶ್ವರ, ಬಾಸೆಗೆ ತಪ್ಪುವ ರಾಯರ ಗಂಡ, ಮೂರು ರಾಯರ ಗಂಡ, ರಾಜಗಜಗಂಡ ಭೇರುಂಡ, ಅಪ್ರತಿಮ ಬಿರುದಾಂಕ ಇತ್ಯಾದಿ. ಈತನು ಇನ್ನೂ ಚಿಕ್ಕವನಿರುವಾಗಲೇ ಅಂದರೆ ಕ್ರಿ. ಶ. ೧೪೨೨ರಲ್ಲಿ ಪಟ್ಟವೇರಿದನು. ಆ ಕಾಲಕ್ಕೆ ದಕ್ಷಿಣ ದೇಶಕ್ಕೆ ಪ್ರವಾಸಿಯಾಗಿ ಬಂದ 'ಅಬ್ದುಲ್‌ರಝಾಕ'ನೆಂಬ ಅರಬನು ಈತನಿಗೆ ಭೆಟ್ಟಿಯಾಗಿದ್ದನು. ದೇವರಾಯನು ಬಹಳ ಚಿಕ್ಕವನೆಂತಲೂ ಬಹಳ ಚಲುವನೆಂತಲೂ ರಝಾಕನು ಹೇಳುತ್ತಾನೆ. ದೇವರಾಯನು ಮೂರು ವರ್ಷ ಯುವರಾಜನಾದಾಗ ಅಂದರೆ ಶಕ ೧೩೩೭ (೧೪೧೫ಇ.) ರಲ್ಲಿ ಶೃಂಗೇರಿಯ ಸ್ವಾಮಿಗಳಾದ 'ಚಂದ್ರಶೇಖರ ಭಾರತಿ' ಗಳಿಗೆ ಒಂದು ದಾನಪತ್ರವನ್ನು ಕೊಟ್ಟಿದ್ದನು. ಈತನು ಸಮುದ್ರತೀರದವರೆಗಿದ್ದ ಪಶ್ಚಿಮಭಾಗವನ್ನು ಕೈವಶಮಾಡಿಕೊಂಡದ್ದರಿಂದ ಮಂಡಲೇಶ್ವರನೆಂಬ ಬಿರುದು ಈತನಿಗೆ ಇತ್ತೆಂಬದು ಒಂದು ಶಾಸನದಿಂದ ತಿಳಿಯುತ್ತದೆ. ಅದರಲ್ಲಿ ಈತನು 'ಪಶ್ಚಿಮ ಸಮುದ್ರಾಧಿಪತಿ' ಎಂಬ ಬಿರುದೂ ಇರುವದು.

ದೇವರಾಯನ ವಿಷಯಕ್ಕೆ ರಝಾಕನು ಮಾಡಿದ ವರ್ಣನೆಯು ಹೀಗಿರುವದು: — ಅರಸನು ೪೦ ಕಂಬಗಳುಳ್ಳ ವಿಶಾಲವಾದ ಸಭಾಮಂದಿರದಲ್ಲಿ. ಬಹಳ ವೈಭವದೊಡನೆ ಸಿಂಹಾಸನದ ಮೇಲೆ ಕೂತಿರುವನು. ಬ್ರಾಹ್ಮಣರ ಹಾಗು ಇತರ ಜನರ ದೊಡ್ಡ ಸಮುದಾಯವು ಆತನ ಬಲಕ್ಕೂ ಎಡಕ್ಕೂ ನಿಂತಿರುವದು. ರಾಜನು ' ಕಿನಖಾ 'ಬಿನ ಬದ್ದಂಗಿಯನ್ನು ಧರಿಸಿರುವನು. ಕೊರಳಲ್ಲಿ ಅಮೂಲ್ಯ ಮುತ್ತುರತ್ನಗಳ ಕಂಠಿಯನ್ನು ಹಾಕಿಕೊಂಡಿರುವನು. ರತ್ನ ಪರೀಕ್ಷಕರಿಗೂ ಸಹ ಆ ಮುತ್ತುರತ್ನಗಳ ಬೆಲೆಯನ್ನು ಹೇಳುವದು ದುಸ್ತರವು. ಮೈಯು ಕಂದೀ ಬಣ್ಣದ್ದು. ನಿಲುವಿಕೆಯಲ್ಲಿ ಎತ್ತರವು ಸೌಷ್ಠವನೂ ದೇಹದಿಂದ ಕೃಶನೂ ಆಗಿರುವನು. ಅರಸನ ರೂಪವು ಒಟ್ಟಿಗೆ ಮೋಹಕ ವಾಗಿರುವದು."

ದೇವರಾಯನ ಒಲವು ಲಿಂಗಾಯತ ಧರ್ಮದ ಕಡೆಗೆ ಇತ್ತೆಂಬದು ೧೪೧೯ರಲ್ಲಿ ಕೊಡಲ್ಪಟ್ಟ ಒಂದು ಶಾಸನದಿಂದ ತಿಳಿಯುತ್ತದೆ. ದೇವರಾಯನು ಸುರಪತಿಯಾದ ಇಂದ್ರನ ಅವತಾರವೆಂದು ಆ ಕಾಲಕ್ಕೆ ಎಲ್ಲರೂ ತಿಳಿಯುತ್ತಿದ್ದರು. ಅದಕ್ಕೊಪ್ಪುವಂತೆ ಈತನ ಐಶ್ವರ್ಯವೂ ಅಪಾರವಿತ್ತು. ' ನುನಿಝು 'ನೆಂಬ ಮತ್ತೊಬ್ಬ ಪ್ರವಾಸಿಯು ದೇವರಾಯನ ಸಂಪತ್ತನ್ನು ಹೀಗೆ ವರ್ಣಿಸಿರುವನು. "ಈತನಲ್ಲಿ ಲಕ್ಷ ಕೋಟಿ ಬೆಲೆಯ ಭಂಗಾರವಿರುವದು. ರತ್ನಾದಿಗಳು ಹೇರಳವಾಗಿರುವವು. ಸುತ್ತಲಿನ ಅರಸರು ಈತ ನಿಗೆ ಕಪ್ಪ ಕೊಡುವರು. ಈತನ ಸಭೆಯಲ್ಲಿ ೧೦೦ಮಂದಿ ವೀರಶೈವ ವಿರಕ್ತರು ಇದ್ದರು. ಬುಕ್ಕಣ್ಣ, ಜಕ್ಕಣ್ಣ ಮೊದಲಾದ ದಂಡನಾಯಕರು ಸೇನಾಪತಿಗಳಾಗಿದ್ದರಲ್ಲದೆ ಮೇಲಾದ ವಿದ್ವಾಂಸರೂ ಕವಿಗಳೂ ಆಗಿದ್ದರು. "

ಈತನ ರಾಜ್ಯಕಾರಭಾರದಕ್ಷತೆಯೂ ಚನ್ನಾಗಿತ್ತು. ರಾಜ್ಯವೆಲ್ಲ ಮಂಡಲ ಅಥವಾ ನಾಡುಗಳಾಗಿ ವಿಭಾಗಿಸಲ್ಪಟ್ಟಿತ್ತು. ಮಂಡಲೇಶ್ವರರು ೮ ವರ್ಷಕ್ಕಿಂತ ಹೆಚ್ಚುಕಾಲ ಒಂದೇ ಕಡೆಯಲ್ಲಿ ಅಧಿಕಾರಿಗಳಾಗಿರುತ್ತಿದ್ದಿಲ್ಲ. ಅಧಿಕಾರಿಗಳು ಎಲ್ಲಾದರೂ ಪ್ರಜೆಗ ಳನ್ನು ಪೀಡಿಸುತ್ತಿದ್ದರೆ ಕೂಡಲೆ ಅವರಿಗೆ ಯೋಗ್ಯ ಶಾಸನ ಮಾಡುವನು. ಒಮ್ಮೆ ಕೈಕೆಳಗಿನ ಅಧಿಕಾರಿಗಳು ಹೆಚ್ಚಿನ ತೆರಿಗೆಯನ್ನು ಪ್ರಜೆಗಳ ಕಡೆಯಿಂದ ಎತ್ತಿದರು, ಜನರು ಹೆದರಿ ಊರುಬಿಟ್ಟು ಹೋದರು; ಗುಡಿಗಳಲ್ಲಿ ಪೂಜಾದಿಗಳು ನಿಂತುಹೋ ದವು. ಅರಸನು ಕೂಡಲೆ ವಿಚಾರಿಸಿ, ಎಲ್ಲ ಹಣವನ್ನು ತಿರುಗಿ ಕೊಟ್ಟು, ರೈತರನ್ನು ಭಯೆಯಿಂದ ನಡಿಸಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಕಟ್ಟಪ್ಪಣೆಯನ್ನು ಮಾಡಿದನೆಂ ಬದು ಶಕ ೧೩೪೪ರಲ್ಲಿ ಕೊಡಲ್ಪಟ್ಟ ಶಾಸನದಿಂದ ತಿಳಿಯುತ್ತದೆ.

ಈತನಿಗೆ ವಿದ್ಯೆಯಲ್ಲಿ ಆಸಕ್ತಿಯೂ ಚನ್ನಾಗಿ ಇತ್ತು. ಈತನು "ಮಹಾನಾಟಕ ಸುಧಾನಿಧಿ" ಎಂಬ ಗ್ರಂಥದಲ್ಲಿ ರಾಮಾಯಣದ ಕಥೆಯನ್ನು ನಾಟಕ ರೂಪದಿಂದ ಬರೆ ದಿರುವನು. ಹಂಪಿಯಲ್ಲಿದ್ದ " ಹಜಾರರಾಮನ " ಗುಡಿಯನ್ನು ಈತನೇ ಕಟ್ಟಿಸಿದನು.

ಅಕಬರ ಬಾದಶಹನಂತೆ ಈತನು ಎಲ್ಲ ಮತಗಳ ಅನುಯಾಯಿಗಳನ್ನು ನೆರಿಸಿ ವಾ
ವಿವಾದ ಮಾಡಿಸುವನು. ಪೆದ್ದಯಾಚಾರ್ಯ ಅಥವಾ ಮುಕುಂದ ಪೆದ್ದಿ ಎಂಬ ವಿದ್ವಾ
ಸನು ರಾಮಾಯಣಕ್ಕೆ ೯ ತಿಂಗಳಲ್ಲಿ ಟೀಕೆಯನ್ನು ಬರೆದು ಪಟ್ಟಣದಲ್ಲಿ ಮೆರಿಸಿದನು
ಇದಕ್ಕೆ ಪ್ರತಿಯಾಗಿ ವೀರಶೈವ ಮತದ ಪ್ರತಿಷ್ಠೆಗಾಗಿ ಜಕ್ಕಣ್ಣ ದಂಡನಾಯಕನು ತ
ಗುರುವಾದ ಮಹಾಲಿಂಗದೇವನ ಸಹಾಯದಿಂದ " ನೂರೊಂದು ಸ್ಥಲ " ವೆಂಬ ಲಿಂ
ವಂತ-ಮತದ ಗ್ರಂಥವನ್ನು ರಚಿಸಿ ಅದನ್ನು ರಾಜ ಸಭೆಯು ನಿರಕ್ಕರೊಡನೆ, ಅರಸನ ಎ
ವೈಭವದೊಡನೆ ಮೆರವಣಿಗೆ ಮಾಡಿಸಿದನು. ಆಸ್ಥಾನ ಪಂಡಿತ ಪದವಿಗೋಸ್ಕರ ಚಾವ
ರಸ, ಕುಮಾರವ್ಯಾಸ ಎಂಬ ಕವಿಗಳು ಮಹಾಭಾರತವನ್ನು ರಚಿಸಿದ್ದರು. ರಾಜಸಭೆಯ
ಚಾಮರಸನ ಕಾವ್ಯವು ಶ್ರೇಷ್ಠವಾದದ್ದೆಂದು ನಿರ್ಣಯವಾಯಿತು. ಕುಮಾರವ್ಯಾಸನ
ಚಾಮರಸನ ಬೀಗನಾದ್ದರಿಂದ ತನ್ನ ಪತ್ನಿಗೆ (ಚಾಮರಸನ ತಂಗಿಗೆ) ಹೇಳಿದ್ದೇನೆಂದರೆ-
'ನೀನು ನಿನ್ನ ಅಣ್ಣನು ಬರೆದಿಟ್ಟ ಗ್ರಂಥವನ್ನು ಆತನಿಗೆ ತಿಳಿಯದಂತೆ-ತಂದು ಅದನ
ನನ್ನ ಮುಂದೆ ಸುಡದಿದ್ದರೆ ನಾನು ಆತ್ಮಹತ್ಯ ಮಾಡಿಕೊಳ್ಳುವೆನು.' ಆಕೆಯು ಪತಿಯ
ಪ್ರತಿಜ್ಞೆಗೆ ಹೆದರಿ ಅಣ್ಣನ ಗ್ರಂಥವನ್ನು ತಂದು ಕೊಟ್ಟಳು. ಈ ಸಂಗತಿಯು ಚಾವ
ರಸನಿಗೆ ತಿಳಿದು ಆತನು ಪಶ್ಚಾತ್ತಾಪ ಪಟ್ಟಾಗ್ಯೂ ತಂಗಿಯ ಸೌಭಾಗ್ಯಕ್ಕಿಂತ ತನ್ನ
ಗ್ರಂಥವು ಹೆಚ್ಚಿನದಲ್ಲೆಂದು ತಿಳಿದು " ಪ್ರಭುಲಿಂಗಲೀಲೆ " ಎಂಬದಿನ್ನೊಂದು ವೀರ
ಶೈವ ಗ್ರಂಥವನ್ನು ರಚಿಸಿದನು. (ಈ ಕಥೆಯು ನಿಜವಲ್ಲೆಂಬದು ವಿದ್ವಾಂಸರ ಅಭ
ಪ್ರಾಯವು.) [ಸಂ. ಕ. ಶಾ. ಪ.]

ದೇವರಾಜನ ಸಭೆಯಲ್ಲಿ ಉದ್ದಾಮ ಶ್ರೀನಾಥ ರಾಜನಾಥರೆಂಬ ತೆಲಗ
ಕವಿಗಳಿದ್ದರು. ರಾಜನಾಥನು ವಿದ್ವಾಂಸನಿದ್ದು ಯೋಗಾನಂದ ಪ್ರಹಸನ, ವಿಭಾಗ
ರತ್ನಮಾಲೆ, ಸೌಂದರ್ಯ ಲಹರಿಯ ಟೀಕೆ ಇತ್ಯಾದಿ ಗ್ರಂಥಗಳನ್ನು ರಚಿಸಿದನು.
ಈತನಿಗೆ ಅಭಿನವ ಭವಭೂತಿ, ಅಷ್ಟಭಾಷಾ ಪರಮೇಶ್ವರ, ಚೇರ-ಚೋಳ-ಪಾಂಡ್ಯ
ಪ್ರಥಮಾರಾಧ್ಯ, ಕವಿಮಲ್ಲಗಲ್ಲತಾಡನಪಟು ಇತ್ಯಾದಿ ಬಿರುದುಗಳಿದ್ದವು. ವಿನು
ಕೊಂಡದ ಮುಂಡಲೇಶ್ವರನಾದ ವಲ್ಲಭಾಮಾತ್ಯ ಕ್ರಿಯಾಶಕ್ತಿ ಮೊದಲಾದ ಪ್ರಸಿದ್ಧ ಜನರ
ಬೆಂಬಲವು ಈತನಿಗೆ ಸಂಪೂರ್ಣವಾಗಿ ಇತ್ತು. ಆದರೆ ಕವಿತ್ವದಲ್ಲಿ ಶ್ರೀನಾಥನೇ ಶ್ರೇಷ್ಠ
ನೆಂದು ನಿರ್ಣಯವಾಗಲು ಆತನು ರಾಜನಾಥನ ಡಿಂಡಿಮ (ನಗಾರೆ) ವನ್ನು ಒಡೆದು
ಹಾಕಿಸಿದನು. ದೇವರಾಯನು ಶ್ರೀ ನಾಥನಿಗೆ ಸುವರ್ಣ ಮುದ್ರೆಗಳಿಂದ ಅಭಿಷೇಕ
ಮಾಡಿಸಿ ಆತನಿಗೆ ಕವಿಸಾರ್ವಭೌಮನೆಂಬ ಬಿರುದನ್ನು ಕೊಟ್ಟನು.

ಕೆಳಗೆ ಹೇಳಿದ ಕವಿಗಳು ಈತನ ಆಸ್ಥಾನದಲ್ಲಿ ಮೆರೆಯುತ್ತಿದ್ದರು:— ಮಹಾ
ಲಿಂಗದೇವ, ಲಕ್ಕಣ್ಣ, ಜಕ್ಕಣ್ಣ, ಚಾಮರಸ, ಕಲ್ಲುಮಠದ ಪ್ರಭು, ಶ್ರೀ ಗಿರಿನಾಥ,
ನಾಗದೇವ, ಮಗ್ಗಿ ಮಾಯಿದೇವ, ಗುರುಬಸವಣ್ಣ, ಚಂದ್ರ ಕವಿ, ಇರುಗಪ್ಪ, ಭಾಸ್ಕರ

ರಣಭೋಜ, ಕಲ್ಯಾಣಕೀರ್ತಿ, ಜಿನದೇವ, ಕವಿಮಲ್ಲ, ಕುಮಾರವ್ಯಾಸ, ಪರಂಜ್ಯೋತಿ ಯತಿ, ನಾರಾಯಣಕವಿ, ಅರುಣಗಿರಿನಾಥ, ರಾಜಶೇಖರ, ವಿನುಕೊಂಡದವಲ್ಲ ಪ್ರಾವಮಾತ್ಯ ಇತ್ಯಾದಿ.

ದೇವರಾಯನ ಆಳಿಕೆಯಲ್ಲಿ ವಿದ್ಯಾವಿಷಯಕ್ಕೆ ಆಶ್ರಯದೊರೆದಂತೆ ಸಾಮಾಜಿಕ ಸುಧಾರಣೆಗೂ ಪ್ರೋತ್ಸಾಹವಿತ್ತು. ಶಕ ೧೩೪೬ರ ಒಂದು ಶಾಸನದಿಂದ ತಿಳಿಯುವ ಹೇನಂದರೆ— ಎಲ್ಲ ಬ್ರಾಹ್ಮಣರು– ಕನ್ನಡಿಗರು, ತಮಿಳರು, ತೆಲುಗುಗಳು, ಎಲ್ಲ ಗೋತ್ರ, ಸೂತ್ರ, ಶಾಖೆಯವರು ದೇವ ಸನ್ನಿಧಿಯಲ್ಲಿ ನೆರೆದು, ಇನ್ನು ಮುಂದೆ ಕನ್ಯಾ ವಿಕ್ರಯ, ವರದಕ್ಷಿಣೆ ಮುಂತಾಧ ಪ್ರಕಾರಗಳಿಂದ ಹಣವನ್ನು ತೆಗೆದುಕೊಳ್ಳಬಾರದು; ಈ ನಿಯಮವನ್ನು ಮುರಿದವರಿಗೆ ಯೋಗ್ಯ ದಂಡನೆಯಾಗುವದೆಂದು ನಿರ್ಣಯ ಮಾಡಿ ನರು.

ದೇವರಾಯನ ಸೈನ್ಯವು ೧೧ ಲಕ್ಷ ವಿತ್ತೆಂದು ರಝಾಕನು ಹೇಳುತ್ತಾನೆ. ಮೈಸೂ ರಲ್ಲಿ ದೊರೆವ ಇ. ಸ. ೧೪೩೦ನೆಯ ಶಾಸನದಲ್ಲಿ ದೇವರಾಯನ ದಂಡಿನಲ್ಲಿ ೧೦ ಸಾವಿರ ತುರ್ಕೀ ಕುದುರೆ ಸ್ವಾರರು ಇದ್ದರೆಂದೂ ವಿಜಯನಗರದ ಸಾಮ್ರಾಜ್ಯವು ಗುಲಬುರ್ಗೆ ಯಿಂದ ರಾಮೇಶ್ವರ, ಸಿಲೋನ, ಪೇಗುಗಳವರೆಗೆ ಹಬ್ಬಿದ್ದು ಅದರಲ್ಲಿ ೩೦೦ ಕೋಟೆ ಗಳಿದ್ದವೆಂದೂ ಹೇಳಿರುತ್ತದೆ. ಲಕ್ಕಣ್ಣನು ಹಡಗುಪಡೆಯ ನಾಯಕನಾಗಿದ್ದನು. ದೇವರಾಯನು ಪಶ್ಚಿಮ ಸಮುದ್ರಾಧಿಪತಿಯಾಗಿದ್ದಲ್ಲದೆ ಪೂರ್ವ ದಕ್ಷಿಣ ಸಮುದ್ರಗಳ ವರೆಗಿನ ನಾಡುಗಳನ್ನು ಸಹ ಗೆದ್ದುಕೊಂಡಿದ್ದನು. ಈತನು ಮೂರು ಬಗೆಯ ನಾಣ್ಯ ಗಳನ್ನು ಅಚ್ಚು ಹಾಕಿಸಿದ್ದನೆಂದು ತಿಳಿಯುತ್ತದೆ. (೧) ಬಂಗಾರದ ವರಹ; ಪ್ರತಾಪ (ಅರ್ಧವರಹ); ಪಣಂ (ಪ್ರತಾಪದ ೧೦ನೇ ಅಂಶ). (೨) ಬೆಳ್ಳಿಯ ತಾರ (ಪಣದ ಆರನೇ ಅಂಶ); (೩) ತಾಮ್ರ ಜತಲ (ತಾರದ ಮೂರನೇ ಅಂಶ). ವಿಶೇಷವಾಗಿ ಎಲ್ಲ ನಾಣ್ಯಗಳು ಹರಿಹರನ ಕಾಲದ ನಾಣ್ಯಗಳಂತೆ ಒಂದು ಮಗ್ಗಲು ದೇವ–ದೇವತೆಗಳು ಳ್ಳವು. ಕೆಲವು ನಾಣ್ಯಗಳ ಮೇಲೆ ಒಂದು ಮಗ್ಗಲು ವಿಷ್ಣುವಿನ ಆಕಾರವೂ ಇನ್ನೊಂದು ಮಗ್ಗಲು ಶಿವನ ಆಕಾರವೂ ಇರುವವು. ಬಂಗಾರದ ನಾಣ್ಯಗಳ ಮೇಲೆ ಬಹಳ ಕಡೆ ಯಲ್ಲಿ ಆನೆಯ ಕುರುಹನ್ನು ಮುದ್ರಿಸಿರುವರು. ಅದು ದೇವರಾಯನ "ರಾಜಗಜ ಗಂಡ ಭೇರುಂಡ" ಎಂಬ ಬಿರುದಿನ ಕುರುಹು. ಯಾಕಂದರೆ ಈತನು ಅಡವಿಯಲ್ಲಿ ಆನೆಗಳ ಬೇಟೆಯಾಡುವದರಲ್ಲಿ ಪ್ರೀತಿಯುಳ್ಳವನಾಗಿದ್ದನು. ಎಷ್ಟೋ ನಾಣ್ಯಗಳ ಮೇಲೆ 'ದೇವರಾಯ' ಎಂಬ ಅಕ್ಷರಗಳು ನಾಗರಿಲಿಪಿಯಲ್ಲಿ ಇರುತ್ತವೆ. ತಾಮ್ರದ ನಾಣ್ಯ ಗಳ ಮೇಲೆ ಒಂದೇ "ಶ್ರೀ" ಎಂಬ ಅಕ್ಷರವು ಇರುತ್ತದೆ. ಇನ್ನು ಕೆಲವು ನಾಣ್ಯಗಳ ಮೇಲೆ ನಂದಿಯ ಕುರುಹು ಇರುವದು. ಇದು ರಾಜನಿಗಿದ್ದ ಶೈವ ಮತದ ಪ್ರೀತಿ ಯನ್ನು ತೋರಿಸುತ್ತದೆ. ಬೇರೆ ಕೆಲವು ನಾಣ್ಯಗಳ ಮೇಲೆ ಶಂಖ, ಚಕ್ರಗಳ ಕುರುಹು ಗಳು ಕಂಡುಬರುತ್ತವೆ.

ದೇವರಾಯನಿಗೆ ಬಹಳ ಮಂತ್ರಿಗಳಿದ್ದರು. ಅವರ ಹೆಸರುಗಳು— ಸಿಂಗಣ್ಣ ದಂಡನಾಥ, ಹರಿಯಣ್ಣ, ತಿಮ್ಮಣ್ಣ, ಚಂದ್ರಪ್ಪ, ಅಣಪ್ಪ, ನಾಗಣ್ಣ, ಪೆರುಮಲದಂ ನಾಯಕ, ಬೈಚಪ್ಪ ಒಡೆಯ, ಔಚಪ್ಪ ಒಡೆಯ, ಲಕ್ಕಣ್ಣ, ಜಕ್ಕಣ್ಣ, ಮಡ್ಡಣ್ಣ ಶಂಕರದೇವ, ನರಸಿಂಹ ಒಡೆಯ, ಕೇತಯ, ಬಲ್ಲಾಳದೇವ, ಪಂತ ಮೈಲಾರ, ವಲ್ಲಾ ದೇವ, ಶ್ರೀಗಿರಿ, ಸಿದ್ದಂಣ, ಗುರುರಾಯ ಮಹಾಪ್ರಭಣ್ಣ ಇತ್ಯಾದಿ.

ದೇವರಾಯನ ಹೆಂಡತಿಯ ಹೆಸರು 'ಪೊನ್ನಳ ದೇವಿ. ಈಕೆಯಲ್ಲಿ ದೇವರಾಯ ನಿಗೆ ಮಲ್ಲಿಕಾರ್ಜುನ, ಇಮ್ಮಡಿ ಪ್ರೌಢದೇವರಾಯ ಎಂಬ ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳೂ ಇದ್ದರೆಂದು ತಿಳಿಯುತ್ತದೆ. ಕರಸ್ಥಲ ವೀರಣ್ಣ, ತಿರುಮಲ ರಾಯ ಇವರಿಬ್ಬರು ಅಳಿಯಂದಿರು ಎಂದು ಕವಿಗಳ ಉಲ್ಲೇಖವದೆ.

ಸಾರಾಂಶ:— ಕರ್ಣಾಟಕದಲ್ಲಿ ಧರ್ಮದಿಂದ ರಾಜ್ಯವನ್ನು ಆಳಿದ ಅರಸರಲ್ಲಿ ಹೆಚ್ಚಿನವನಾದ ಶ್ರೀ ದೇವರಾಯನು ಧರ್ಮ ಸಹಿಷ್ಣುತೆಯ ಬಗ್ಗೆ ಪ್ರಸಿದ್ಧನಾಗಿಯೂ ಮಂಡಲೇಶ್ವರರ ಉದ್ದಾಮತನಕ್ಕೆ ಅಂಕುಶನಾಗಿಯೂ, ವಾಙ್ಮಯದ ಉನ್ನತಿಗೆ ಉದಾರ ಹಸ್ತನಾಗಿಯೂ, ಆಸಮುದ್ರ ಕ್ಷಿತೀಶ ಪದವಿಗೆ ಸುಪಾತ್ರನಾಗಿಯೂ ಇದ್ದನು. ಈತನು, ರಾಜ್ಯದಲ್ಲಿ ಶಾಂತತೆಯೂ ಸಮೃದ್ಧಿಯೂ ನೆಲೆಗೊಳ್ಳುವಂತೆ ಮಾಡಿ ಶಕಗಿಷ್ಟರ ರಲ್ಲಿ (ಇ. ಸ. ೧೪೪೬) ಸ್ಮೃತಿಶೇಷನಾದನು.

—Modern Review.

## ಸಂಪಾದಕರ ಪ್ರವಾಸ.

( ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು. )

**ಸ್ವೀಟ್ ಹೆಸ್ಟ್ ಹಾವುಸ (ಅತಿಥಿಗೃಹ)**:— ಬಡೋದೆಯ ನಾಯಿಬ ದಿವಾಣ ರಾದ ರಾ. ಬ. ಗೋವಿಂದಭಾಯಿಯವರಿಗೆ ನಮ್ಮ ವಿಷಯಕ್ಕೆ ವಿಶೇಷ ಪರಿಚಯದ ಪತ್ರವಿದ್ದದರಿಂದಲೂ ನಾವು ಅಲ್ಲಿಗೆ ಹೋಗುವದು ಅವರಿಗೆ ಮೊದಲೇ ಗೊತ್ತಿದ್ದದರಿಂ ದಲೂ ಸಂಸ್ಥಾನದ ಅತಿಥಿಯಂತೆ ನಮ್ಮ ಬಗ್ಗೆ ಎಲ್ಲ ಪ್ರಕಾರದ ವ್ಯವಸ್ಥೆಯು ಅತಿಥಿಗೃ ಹದಲ್ಲಿಯೇ ಮಾಡಲ್ಪಟ್ಟಿತ್ತು. ಅಲ್ಲಿ ಎಲ್ಲ ಬಗೆಯ ಅನುಕೂಲವಿತ್ತು. ಯುರೋಪಿ ಯನ್ ಪದ್ಧತಿಯಂತೆ ಇರುವ ಸದ್ಗೃಹಸ್ಥರಿಗೆ ಬೇರೆ ಬಂಗಲೆಯಲ್ಲಿ ವ್ಯವಸ್ಥೆ ಇರುವದು. ಅತಿಥಿಗೃಹದಲ್ಲಿ ಇಳಿದ ಸದ್ಗೃಹಸ್ಥರ ವ್ಯವಸ್ಥೆಯು ಸಂಸ್ಥಾನದಿಂದಲೇ ನಡೆಯುವದು. ಅಲ್ಲಿ ಮ್ಯಾನೇಜರ ( ವ್ಯವಸ್ಥಾಪಕ ) ನೆಂಬ ಅಧಿಕಾರಿಯೂ ಕಾರಕೂನರೂ ಪರಿಚಾರ ಕರೂ ಇರುವರು. ಅತಿಥಿಗಳಿಗೆ ಎಲ್ಲ ಬಗೆಯ ಸೌಕರ್ಯವನ್ನುಂಟುಮಾಡಲಿಕ್ಕೆ ಎಲ್ಲರೂ ಮನಃಪೂರ್ವಕವಾಗಿ ಪ್ರಯತ್ನಪಡುವರು. ಈ ಗೃಹದಲ್ಲಿ ಅತಿಥಿಗಳಿಗೆ

ರಲಿಕ್ಕೆ ಉತ್ತಮತರದ ಕೋಣೆಗಳಿರುವವು. ಅವುಗಳಲ್ಲಿ ಎಲ್ಲ ವಿಧದ ಆಸನ ಂಚಗಳಿರುವವು. ಊರಲ್ಲಿ ಅಡ್ಡಾಡಲಿಕ್ಕೆ ಅತಿಥಿಗಳಿಗೆ ಮೋಟಾರಗಳಿರುವವು. ಆದ ರಿಂದ ನಗರವಲ್ಲಿಯ ದರ್ಶನೀಯ ಸ್ಥಳಗಳನ್ನು ನಾಲ್ಕು ದಿವಸಗಳಲ್ಲಿಯೇ ನೋಡ ಕ್ಕೆ ನಮಗೆ ಅನುಕೂಲವಾಯಿತು. ಇದಲ್ಲದೆ ಸಂಸ್ಥೆಗಳ ಚಾಲಕರು ಇಂಥ ಅತಿಥಿ ಳಿಗೆ ತಮ್ಮ ತಮ್ಮ ಸಂಸ್ಥೆಗಳನ್ನು ಅತ್ಯುತ್ಸಾಹದಿಂದ ತೋರಿಸುತ್ತಿರುವದರಿಂದ ೋಡುವರಿಗೆ ಒಂದು ವಿಶೇಷ ಪ್ರಕಾರದ ಆನಂದವುಂಟಾಗುತ್ತದೆ. ಮತ್ತು ಸಂಸ್ಥೆಯ ುಖ್ಯ ಚಾಲಕರೇ ಅತಿಥಿಯ ಕೂಡ ಇರಬೇಕೆಂಬ ನಿರ್ಬಂಧವಿದ್ದದರಿಂದ ಜ್ಞಾನಾರ್ಜ ಗೂ ಕೆಲಮಟ್ಟಿಗೆ ಅಸ್ಪದವಿರುವದು.

**ಸಯಾಜಿ ವಿಹಾರ ಕ್ಲಬ್**:—ಸಂಸ್ಥಾನದ ಮುಖ್ಯ ಅಧಿಕಾರಿಗಳು ದಿನಾಲು ಂಜೆಗೆ ಇಲ್ಲಿ ನೆರೆಯುವರು. ಟೆನಿಸ್, ಬಿಲಿಯರ್ಡ ಮೊದಲಾದ ಆಟಗಳನ್ನು ಆಡ ಕ್ಕೆ ಅನುಕೂಲತೆ ಇರುವದು. ಈ ಕ್ಲಬ್ಬಿಗೆ ಈಗಿನ ಮಹಾರಾಜರಾದ ಸಯಾಜಿರಾ ುರ ಹೆಸರು ಕೊಡಲ್ಪಟ್ಟಿದೆ. ಮಹಾರಾಜರು ಒಮ್ಮೊಮ್ಮೆ ಅಲ್ಲಿಗೆ ಬಂದು ಉಳಿದ ಸದಸ್ಯರ ಕೂಡ ಪ್ರೀತಿಯಿಂದ ಮಾತನಾಡುವರು ಮತ್ತು ತಮಗೆ ಇಷ್ಟವಿದ್ದ ಆಟಗ ನ್ನು ಆಡುವರು. ರಾ. ಬ. ಗೋವಿಂದಭಾಯಿಯವರು ನಮ್ಮನ್ನು ಅಲ್ಲಿಗೆ ಒಂದು ವಸ ಕರಿದೊಯ್ದು ಅಲ್ಲಿಯ ಪ್ರತಿಷ್ಠಿತ ಜನರ ಪರಿಚಯ ಮಾಡಿಕೊಟ್ಟರು. ಮೊದಲು ನರಲ್ ನಾನಾ ಸಾಹೇಬ ಸಿಂದೆ ಯವರ ಪರಿಚಯವಾಯಿತು. ಬಾಯಸ್ಕೌಟದ ದ್ಧತಿಯ ಪ್ರಚಾರದ ಬಗ್ಗೆ ಕೆಲವು ಮಾತುಕಥೆಗಳು ನಡೆದವು. ಈ ಪದ್ಧತಿಯಿಂದ ಾಲಕರ ಅಭ್ಯಾಸದ ಹಾನಿಯು ಆಗದಂತೆ ಸ್ಕೌಟ ಮಾಸ್ತರರು ಎಚ್ಚರ ಪಡಬೇ ಂದು ಅವರು ಅಭಿಪ್ರಾಯ ಪಟ್ಟರು. ಅಭ್ಯಾಸದ ಹೊತ್ತಿನಲ್ಲಿ ಬಾಯ ಸ್ಕೌಟರನ್ನು ಾಲೆಗಳಿಂದ ಕರಿದೊಯ್ಯಬಾರದು. ಸ್ಕೌಟ ಮಾಸ್ತರರು ಸ್ಕೌಟರಾದ ವಿದ್ಯಾರ್ಥಿಗಳ ಭ್ಯಾಸದ ಕಡೆಗೂ ಲಕ್ಷಕೊಡಬೇಕೆಂದು ಹೇಳಿದರು. ಇದು ಬಡೋದೆಯಲ್ಲಿಯ ಲಕ್ಷಣ ಪರಿಸ್ಥಿತಿ ಇರಬಹುದೆಂದು ನಾನು ಹೇಳಿದ್ದರಿಂದ ಅವರಿಗೆ ಕೊಂಚ ಸಮಾ ಾನವಾಯಿತು. ಮೇಜರ ಸಾವಂತ ಎಂಬವರು ಕಾಲಾಳುಗಳ ಪಡೆಯ ಮುಖ್ಯ ಧಿಕಾರಿಗಳು. ಅವರಿಗೆ ಧಾರವಾಡ ಹತ್ತರವೇ ಕೆಲವು ಭೂಮಿಗಳು ಇನಾಮಾಗಿ ುವದರಿಂದ ಅವರೂ ನಮ್ಮ ಪರಿಚಯದವರಾದರು. ಹಾಯಕೋರ್ಟನ ರಜಿ ಾರರಾದ ಪಡತೆಯವರು ಬೆಳಗಾಂವಿಯವರಾದ್ದರಿಂದ ಇತ್ತ ಕಡೆಯ ಕೆಲವು ಸಂಗ ಗಳನ್ನು ಕೇಳಿದರು.

**ಸೆಂಟ್ರಲ್ ಜೇಲು** :—ಇದು ಸಂಸ್ಥಾನದ ಮಧ್ಯವರ್ತಿ ತುರಂಗವು. ಇಲ್ಲಿ ೦೦ ಜನ ಕೈದಿಗಳಿರುವರು. ಡಾ. ಮಾನಕರ ಎಂಬ ಗುಜರಾಥೀ ಗೃಹಸ್ಥರು ಸುಪ ಂಟೆಂಡೆಂಟರಿರುವರು. ತುರಂಗದಲ್ಲಿ ಅತ್ಯುತ್ತಮ ಜಮಖಾನೆಗಳೂ ರತ್ನಗಂಬಳಿಗಳೂ

ಆಗುವವು. ಜಮಖಾನೆಗಳ ಮೇಲೆ ನವಿಲು, ಮೊಸಳೆ, ಆನೆ ಮೊದಲಾದ ಪ್ರಾಣಿ
ಚಿತ್ರಗಳನ್ನು ಬಹು ಅಂದವಾಗಿ ನೇಯುವರು. ಅಲ್ಲಿಯ ಸ್ವಚ್ಛತೆಯು ವರ್ಣನೀ
ವಾಗಿತ್ತು.

**ಮಹಾರಾಜರ ದರ್ಶನ:**—ಮಹಾರಾಜರು ಆರೋಗ್ಯ ಲಾಭಕ್ಕಾಗಿ ವಿ
ಯಿತಿಗೆ ಹೋದವರು ಮರುದಿವಸವೇ ಅಂದರೆ ೨೦ನೇ ನವಂಬರದ ಬೆಳಿಗ್ಗೆ ಬರು
ರಿದ್ದರಿಂದ ಮಹಾರಾಜರ ದರ್ಶನ ಲಾಭವನ್ನು ಪಡಕೊಂಡು ಹೋಗುವದಕ್ಕೆ ನ
ಸನ್ಮಾನಿತ ಸ್ನೇಹಿತರಾದ ರಾ. ಬ. ಗೋವಿಂದಭಾಯಿಯವರು ಹೇಳಿದ್ದರಿಂದ ನಾ
ಅಲ್ಲಿಯೇ ಉಳಿದೆವು. ಬೆಳಗಿನ ೯ ಘಂಟೆಗೆ ಸರಿಯಾಗಿ ತೋಫಿನ ಸಪ್ಪಳವು ಪ್ರಾ
ಭವಾಗಲು ಮಹಾರಾಜರ ಸ್ಪೆಶಲ್ ಗಾಡಿಯು ಸ್ಟೇಶನ್ನಿನಲ್ಲಿ ಬಂತೆಂದು ಜನರು ಕೌ
ಕದಿಂದ ಅವರು ಬರುವ ಮಾರ್ಗವನ್ನು ನಿರೀಕ್ಷಿಸಹತ್ತಿದರು. ಎರಡೂ ಬದಿಗೆ ರಾ
ತರು, ಕಾಲಾಳುಗಳು, ಆನೆ, ಒಂಟೆ, ತೋಫಖಾನೆ, ಮೊದಲಾದ ಸನ್ನಾಹವು ಮ
ರಾಜರಿಗೆ ವಂದನೆಗೈಯಲಿಕ್ಕೆ ಸಜ್ಜವಾಗಿತ್ತು. ವಿಶೇಷವೇನೆಂದರೆ ಈ ಸಂಸ್ಥಾನ
ಬಂಗಾರ ಬೆಳ್ಳಿಗಳ ತೋಫುಗಳಿರುವವು. ಅವುಗಳಲ್ಲಿ ಬಂಗಾರದ ತೋಫ
ಬೆಳ್ಳಿಯ ಮಡಾಸು ಮಾಡಿದ ಗಾಡಿಯ ಮೇಲೆ ಬೆಳ್ಳಿಯ ತೋಫನ್ನು ಹಿತ್ತಾಳೆ ತಗ
ಹಾಕಿದ ಗಾಡಿಯ ಮೇಲೆ ಏರಿಸಿ ಆನೆಯಂಥ ದೊಡ್ಡ ಎತ್ತುಗಳನ್ನು ಅವುಗ
ಹೂಡಿದ್ದರು. ಆ ಎತ್ತುಗಳ ಕೋಡುಗಳಿಗೆ ತುಂಬಾ ಬಂಗಾರದ ಗೊಣಸಗಳ
ಇಟ್ಟು ಮೈಮೇಲೆ ನೆಲದ ವರೆಗೆ ಅಲೆಯುವಂಥ ಜರದ ಝೂಲಗಳನ್ನು ಹಾಕಿದ್ದ
ಆನೆಗಳ ಮೇಲೆ ಬೆಳ್ಳಿ ಬಂಗಾರದ ಅಂಬಾರಿಗಳನ್ನು ಕಟ್ಟಿದ್ದರು. ಇಷ್ಟರಲ್ಲಿ ಮಹಾ
ಜರ ಮೆರವಣಿಗೆಯು ಹೊರಟ ಪೂರ್ವಚಿನ್ಹವಾದ ಬ್ಯಾಂಡಿನ ಹಾಗೂ ಚೌಫ
ಬಜಂತ್ರಿಗಳ ಸಪ್ಪಳವು ಕೇಳಿಸಹತ್ತಿತು. ಸ್ವಾರರು ತಮ್ಮ ಕುಣಿಯುವ ಕುದುರೆ
ಮೇಲೆ ಟಪ್ ಟಪ್ ಎಂದು ಅವಸರದಿಂದ ಬರಹತ್ತಿದರು. ನಂತರ ಆರು ಬೆಟ್ಟಿದ
ಕುದುರೆಗಳನ್ನು ಹೂಡಿದ ಮಹಾರಾಜರ ರಥವು ಕಾಣಿಸಹತ್ತಿತು. ಮಹಾರಾಜ
ಎಲ್ಲರಿಗೂ ಕೈ ಎತ್ತಿ ಸಲಾಮು ಮಾಡುತ್ತ ಬರುತ್ತಿದ್ದರು. ಮಹಾರಾಜರ ಮೆ
ಸುವರ್ಣದ ಹಿಡಿಕೆಯುಳ್ಳ ಛತ್ರನನ್ನು ಹಿಡಿದಿದ್ದು ಅವರ ಹತ್ತರ ರಾಜಕುಮಾರನ
ಧೈರ್ಯಶೀಲರಾಯನು ಕುಳಿತಿದ್ದನು. ಎದುರಿಗೆ ಮಹಾರಾಜರ ಮೊಮ್ಮಗನ
ಪ್ರತಾಪಸಿಂಹ ಯುವರಾಜನು ಇದ್ದನು. ಮಹಾರಾಜರಿಗೆ ಈಗ ೬೪ ವರ್ಷಗಳ
ದರಿಂದಲೂ ಮೂರುಸಾರೆ ಪುತ್ರವಿಯೋಗವಾದ್ದರಿಂದಲೂ ಕೆಲವು ವರ್ಷಗಳ ಹಿ
ಅವರ ಮೋರೆಯ ಮೇಲಿದ್ದ ಉತ್ಸಾಹದ ಕಳೆಯು ಕಂಡುಬರುವದಿಲ್ಲ. ವಾ
ಕ್ಯದ ಲಕ್ಷಣಗಳು ತೋರಹತ್ತಿವೆ. ಮುಖವು ಬಾಡಿದೆ. ಮೋರೆಯ ಮೇಲೆ ನ
ಗಳು ಕಾಣಿಸಹತ್ತಿವೆ. ಹಿಂದಿನ ವರ್ಷಕ್ಕಿಂತ ಈ ಸಾರಿ ಹೆಚ್ಚು ಕಣ್ಣಾದವರ

ಂಡು ಬರುವರೆಂದು ಅಲ್ಲಿಯ ಜನರು ಅನ್ನುತ್ತಿದ್ದರು. ಆದರೂ ಮೋರಿಯ ಮೇಲೆ ಸೌಭಾಗ್ಯದ ಪರ್ವವೂ ಜ್ಞಾನದ ತೇಜವೂ ಒಡೆದು ಕಂಡುಬರುವವು.

**ದಿವಾಣರ ದರ್ಶನ**:— ಸರ ಮನುಭಾಯಿ ನರ್ಮದಾಶಂಕರ ಮೆಥಾ ನವರು ಇಲ್ಲಿಯ ದಿವಾಣರಾಗಿ ೧೧ ವರ್ಷಗಳಾದವು. ಮೊದಲು ಇವರು ತತ್ವಜ್ಞಾನ ದ ಪ್ರೊಫೆಸರಾಗಿದ್ದರು. ಮುಂದೆ ಮುಲ್ಕಿ ಖಾತೆಯಲ್ಲಿ ಕೆಲವು ವರ್ಷ ಅನುಭವ ಹೊಂದಿದ ಮೇಲೆ ಸಂಸ್ಥಾನದ ದಿವಾಣರಾದರು. ಇವರು ಶಾಂತವೃತ್ತಿಯವರೂ ಗಂಭೀರಮುದ್ರೆಯವರೂ, ವಿದ್ವಾಂಸರೂ ಆಗಿರುವರು. ಪ್ರಾಥಮಿಕ ಶಿಕ್ಷಕರಿಗೆ ೧ ವರ್ಷದ ಶಿಕ್ಷಣ (ಟ್ರೇನಿಂಗ) ಕೊಟ್ಟರೆ ಸಾಕೆಂದು ಅವರ ಅಭಿಪ್ರಾಯವು. ಪ್ರಾಥಮಿಕ ಸಾಲೆಗಳಲ್ಲಿ ಸಾಮಾನ್ಯ ಜ್ಞಾನದ ಉಚ್ಚತರದ ಶಿಕ್ಷಣವು ದೊರೆಯುವದಿಲ್ಲ ವಾದ್ದರಿಂದ ಟ್ರೇನಿಂಗ ಕಾಲೇಜದಲ್ಲಿ ಸಾಮಾನ್ಯಜ್ಞಾನದ ಶಿಕ್ಷಣವನ್ನೂ ಅಧ್ಯಾಪನದ ಶಿಕ್ಷಣವನ್ನೂ ಕೊಡುವದು ಅವಶ್ಯವಿದ್ದದರಿಂದ ೩ ವರ್ಷಗಳವರೆಗೆ ಶಿಕ್ಷಣ ಕೊಡುವದು ಅವಶ್ಯವೆಂದು ನಾನು ಹೇಳಿದೆನು.

**ನ್ಯಾಯಮಂದಿರ**:— ಇಲ್ಲಿಯ ನ್ಯಾಯ ಕೋರ್ಟುಗಳೂ ಮೆಜಿಸ್ಟ್ರೇಟ ಕೋರ್ಟುಗಳೂ ಒಂದೇಕಡೆಗೆ ಇದ್ದದರಿಂದ ವಕೀಲರಿಗೂ ಪಕ್ಷಕಾರರಿಗೂ ಅನುಕೂಲ ವಾಗಿದೆ. ಈ ವಿಶಾಲವಾದ ಮಂದಿರವು ಎರಡು ಅಂತಸ್ತುಗಳುಳ್ಳದ್ದಾದೆ. ಅಟ್ಟದ ಮೇಲೆ ಹಾಯಕೋರ್ಟು, ಜಿಲ್ಲಾ ಕೋರ್ಟುಗಳಿರುತ್ತವೆ. ಹಾಯಕೋರ್ಟನಲ್ಲಿ ಮೂವರು ನ್ಯಾಯಾಧೀಶರಿರುವರು. ಮಿ. ಗಣೇಶ ಕೃಷ್ಣ ದಾಂಡೇಕರ ಎಂಬವರು ಮುಖ್ಯ ನ್ಯಾಯಾಧೀಶರು. ಕೆಳಗಡೆ ಮೆಜಿಸ್ಟ್ರೇಟ ಕೋರ್ಟುಗಳಿರುತ್ತವೆ. ಕೆಳಗಿನ ಭಾಗದಲ್ಲಿ ನಡುವೆ ಒಂದು ವಿಶಾಲವಾದ ಸಭಾಗೃಹವಿರುವದು. ಅದು ೧೧೫ ಫೂಟು ಉದ್ದ ೬೬ ಫುಟು ಅಗಲವದೆ. ಇದನ್ನು ನಗರ ಸಭಾಮಂದಿರ (ಟೌನಹಾಲ)ದಂತೆ ಉಪಯೋಗಿಸುತ್ತಾರೆ.

**ಥಾಣೆ ಎಂಬ ಹಳ್ಳಿಯು**:— ಥಾಣೆ ಈ ಗ್ರಾಮವು ಬಡೋದೆಯಿಂದ ೪ ಮೈಲಿನ ಮೇಲಿರುವದು. ಇಲ್ಲಿಯ ಜನವಸ್ತಿಯು ೩೨೦೦. ಊರಲ್ಲಿ ಬಣಗಳಿಲ್ಲ. ಹತ್ತಿ, ಗಂಬಾಕು, ಸೆಜ್ಜೆ, ಗೋದಿ ಮೊದಲಾದ ಬೆಳೆಗಳು ಬರುವದರಿಂದ ಜನರು ಶ್ರೀಮಂತರಿ ದ್ದಾರೆ. ಇಲ್ಲಿ ನಾಲ್ಕು ಸಾಲೆಗಳಿರುವವು. ಗುಜರಾಥಿ ಹುಡುಗರ ಸಾಲೆಯಲ್ಲಿ ೨೦೦ ಹುಡುಗರು, ಕನ್ಯಾ ಶಾಲೆಯಲ್ಲಿ ೧೨೫, ಅಂತ್ಯಜ ಶಾಲೆಯಲ್ಲಿ ೭೫, ಇಂಗ್ರೇಜಿ ಸಾಲೆ ಯಲ್ಲಿ ೪೫ ಮಂದಿ ವಿದ್ಯಾರ್ಥಿಗಳು ಕಲಿಯುತ್ತಿರುವರು. ಜನಸಂಖ್ಯೆಗೆ, ಕಲಿಯುವ ಹುಡುಗರ ಪ್ರಮಾಣವು ೧೦೦ಕ್ಕೆ ೧೪ ರಂತೆ ಇರುವದು. ಇವೆಲ್ಲ ಸಾಲೆಗಳಿಗೆ ಸ್ವತಂತ್ರ ಕಮೂರತುಗಳಿವೆ. ಇಲ್ಲಿಯ ವಾಚನಾಲಯದ ವ್ಯವಸ್ಥೆಯನ್ನು ನೋಡಲಿಕ್ಕೆ ಮೊದಲೇ ತಿಳಿಸದೆ ಅಲ್ಲಿಗೆ ಹೋಗಿ ನೋಡಲು, ಅಲ್ಲಿ ಓದುತ್ತ ಕುಳಿತ ಕೆಲವು ಜನರು ಇದ್ದದ್ದು ಕಂಡುಬಂತು. ದಿನಾಲು ೨೦, ೨೫ ಪುಸ್ತಕಗಳನ್ನು ಜನರು ವಾಚನಾಲಯದಿಂದ ಓದ

ಲಿಕ್ಕೆ ಒಯ್ಯುವರು. ಈ ವಾಚನಾಲಯದ ವಾರ್ಷಿಕ ವೆಚ್ಚವು ೧೫೦ ರೂ. ಇರುವದ
ಮತ್ತು ಇದಕ್ಕೋಸ್ಕರ ೪೦೦೦ ರೂ. ವೆಚ್ಚಮಾಡಿ ಒಂದು ಸ್ವತಂತ್ರ ಕಟ್ಟಡವನ
ಕಟ್ಟಿರುವರು. ಇಲ್ಲಿಯ ಜೈನ ಜನರು ಜ್ಞಾನದ ಬಗ್ಗೆ ಎಷ್ಟು ಪ್ರೀತಿಯುಳ್ಳವರೆಂಬ
೧೬೦೦೦ ರೂಪಾಯಿ ವೆಚ್ಚಮಾಡಿ ಸುಂದರವಾಗಿ ಕಟ್ಟಿಸಿದ ಜ್ಞಾನಮಂದಿರವನ
ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಮಂದಿರದಲ್ಲಿ ಜೈನ ಧರ್ಮ ಗ್ರಂಥಗ
ಹಸ್ತಲಿಖಿತ ಪ್ರತಿಗಳನ್ನು ಸಂಗ್ರಹಿಸಿ ಬೇರೆ ಬೇರೆ ಕಪಾಟುಗಳಲ್ಲಿ ಇಟ್ಟಿರುವರ
ಓದಲಿಕ್ಕೆ ಬಂದ ಜನರಿಗೆ ಅವುಗಳನ್ನು ತೆಗೆದುಕೊಡುವರು. ಕೀರ್ತನ, ಪುರಾ
ಗಳೂ ಇದೇ ಮಂದಿರದಲ್ಲಿ ನಡಿಯುವವು. ಈ ಹಳ್ಳಿಯಲ್ಲಿ ಸಾಮಾನ್ಯ ಜನರಲ್ಲಿಯ
ಸುಧಾರಣೆಯ ಸಂಸ್ಕಾರವು ಚೆನ್ನಾಗಿ ಆಗಿದೆಂಬದು ಇಲ್ಲಿಯ ಹೊಲೆಯರ ಓಣಿಯನ
ನೋಡುವದರಿಂದ ಗೊತ್ತಾಯಿತು. ಈ ಓಣಿಯನ್ನು ನೋಡಿದ ಕೂಡಲೆ ಇ
ಅಂತ್ಯಜರ ಓಣಿಯಲ್ಲವೆಂದು ನನ್ನಭಾವನೆಯಾಯಿತು. ಇಲ್ಲಿಯ ಅಂತ್ಯಜರು ಸೆರೆಕು
ಯುವದನ್ನು ಬಿಟ್ಟಿದ್ದಲ್ಲದೆ ಸುಣ್ಣ ಸುಡುವದು, ಇಟ್ಟಂಗಿಗಳನ್ನು ಮಾಡುವದು, ಉಪ
ರರ ಕೆಲಸ ಇವೇ ಮುಂತಾದ ಮೇಲ್ತರದ ಹೊರೆಗಳನ್ನು ಮಾಡುವರು. ಆದದರಿಂ
ಆ ಜನರು— ಹುಡುಗರು, ಹುಡುಗಿಯರು, ಹೆಂಗಸರು, ಗಂಡಸರು ಎಲ್ಲರು, ಪಟ್ಟ
ಗರ ರೀತಿ ನಡತೆಗಳನ್ನು ಬಲ್ಲವರಾಗಿಯೂ ಪರಕೀಯರಿಗೆ ಮಾನಮರ್ಯಾದೆಗಳನ
ಕೊಡುವವರಾಗಿಯೂ ಇರುತ್ತಾರೆ. ಇವರ ಮನೆಗಳೂ ಓಣಿಯೂ ಆದೇ ಹಳ್ಳಿಯೊ
ಗಿನ ಇತರ ಜನರ ಮನೆಗಳಗಿಂತ ಹೆಚ್ಚು ಸ್ವಚ್ಛವಾಗಿಯೂ ಅಚ್ಚು ಕಟ್ಟಾಗಿಯ
ಇರುವವು. ಒಟ್ಟಾಗಿ ಈ ಹಳ್ಳಿಯು ಮಾದರಿ ತೆಗೆದುಕ್ಕೊಳ್ಳತಕ್ಕಂಥ ಹಳ್ಳಿ ಎಂ
ಹೇಳಲಿಕ್ಕೆ ಏನೂ ಅಡ್ಡಿಇಲ್ಲ. ಇಲ್ಲಿ ಅಂತ್ಯಜರದೊಂದು ದೇವರಗುಡಿ ಇರುವದ
ಅಲ್ಲಿ ಅವರು ದಿನಾಲು ಭಜನೆ ಮಾಡುತ್ತಿರುವರು. ಇಲ್ಲಿಯ ದೇಸಾಯಿಯರು ಸಾವ
ಜನಿಕ ವ್ಯಾಯಾಮ ಶಾಲೆಯನ್ನು ಕಟ್ಟಿಸಲಿಕ್ಕೆ ೧೯೦೦ ರೂ. ಯನ್ನು ಕೊಟ್ಟಿದ್ದಾ
ಅದು ಬೇಗನೆ ತಯಾರಾಗುವದದೆ.

**ಬಡೋದೆಯ ಜುಮ್ಮಾದಾದಾ ವ್ಯಾಯಾಮ ಮಂದಿರ** :— ಇದ
ಪ್ರವರ್ತಕರು ಪ್ರೊಫೆಸರ ಮಾಣಿಕರಾವ ಎಂಬವರು. ಈ ಮಂದಿರದ ಸ್ಥಾಪನೆಯಾಗಿ ೨
ವರ್ಷಗಳಾದವು. ಹಿಂದು ಪದ್ಧತಿಯಂತೆ ಅಂಗಸಾಧನೆಯನ್ನು ಎಲ್ಲ ವಿಧದ ತರುಣರಿ
ಕೊಡುವದು ಈ ಸಂಸ್ಥೆಯ ಮುಖ್ಯ ಉದ್ದೇಶವದೆ. ಈ ಮಂದಿರದಲ್ಲಿ ಒಂದು ಕೋಣೆ
ಯಲ್ಲಿ ಅಂಗಸಾಧನೆಯ ಉಪಕರಣಗಳ ಸಂಗ್ರಹವಿರುವದು. ಇನ್ನೊಂದರ
ಶ್ರೀ ಮಾರುತಿಯ ಸ್ಥಾಪನೆಯನ್ನು ಮಾಡಿರುವರು. ಅಲ್ಲಿಯೇ ಸಮೀಪದಲ್ಲಿ ವಾಚನ
ಲಯವಿರುವದು. ಹೊರಗೆ ವಿಶಾಲವಾದ ಬೈಲಿನಲ್ಲಿ ಹುಡುಗರ ಕವಾಯತು, ಕ
ಛಾಲೆಗಳನ್ನು ತಿರುಗಿಸುವದು, ಪಟ್ಟಿಯಾಡುವದು ಇಂಥ ಆಟಗಳು ಅಥವಾ ವ್ಯಾಯ
ಮಗಳು ನಡೆಯುವವು. ಸಾರ್ವಜನಿಕ ದೊಡ್ಡ ದೊಡ್ಡ ಸಭೆಗಳೂ ಇಲ್ಲಿ ಆಗುವವ
ಅಂಥ ಸಭೆಗಳಿಗೆ ಮಹಾರಾಜರು ಸಹ ಹೋಗುವರು. (ಮುಂದೆ ಸಾಗುವದು)

# ಬೌದ್ಧಧರ್ಮದ ಪಂಥಗಳು

( ಪಂಡಿತ ಕೇಶವ ಕರ್ಮಾ ಗಲಗಲಿ ಇವರಿಂದ ಪರಿವರ್ತಿತವಾದದ್ದು )

ಬುದ್ಧನ ಮಹಾಪರಿ ನಿರ್ವಾಣವಾದ ಬಳಿಕ ಕೆಲವು ಕಾಲ ಸಂದ ಮೇಲೆ ಅವನ ಅನುಯಾಯಿಗಳಲ್ಲಿ ಗಂಭೀರವಾದ ಮತಭೇದಗಳುಂಟಾದವು. ಕನಿಷ್ಕನ ಆಳಿಕೆಯಲ್ಲಿ 'ಮಹಾಯಾನ' 'ಹೀನಯಾನ'ಗಳೆಂಬ ಎರಡು ಪಂಥಗಳು ಉದಯವಾದವು. ಹೀನಯಾನ ಪಂಥವು ಬುದ್ಧನ ಉಪದೇಶವನ್ನೇ ಅನುಸರಿಸಿತು. ಅವನು ಹಾಕಿಕೊಟ್ಟ ನಿಯಮಗಳನ್ನೇ ಗಟ್ಟಿಯಾಗಿ ಹೀನಯಾನ ಪಂಥವು ಅನುಸರಿಸಿತು. ಮಹಾಯಾನ ಪಂಥವು ಸಂಪೂರ್ಣ ಭಿನ್ನವಾಗಿ ವಿಕಾಸವನ್ನು ಹೊಂದಿತು. ಧರ್ಮದ ಮೂಲ ಭಿತ್ತಿಯನ್ನು ರಚಿಸಿದ ಬುದ್ಧನಿಗೆ ಇದರ ಪರಿಚಯವು ಕೂಡ ಇರಲಿಲ್ಲ.

ಮಹಾಯಾನ ಪಂಥವು ನಾಗಾರ್ಜುನನೊಡನೆ ಆರಂಭವಾಯಿತು. 'ಪ್ರಾಜ್ಞ ಪರಿಮಿತಾ' ಶಾಸ್ತ್ರದಲ್ಲಿ ಅವನು ಇದರ ತತ್ವಗಳನ್ನು ಉಲ್ಲೇಖಿಸಿಟ್ಟಿರುವನು. ಬುದ್ಧನ ಮೂಲ ಉಪದೇಶಗಳನ್ನು ಬದಿಗೆ ಸರಿಸಿ ಮಹಾಯಾನ ಪಂಥವು ಎಷ್ಟೋ ಅಂಶಗಳಲ್ಲಿ ಅಡ್ಡಹಾದಿಗೆ ಒಲಿದರೂ ಈ ಪಂಥದ ಅನುಯಾಯಿಗಳು ಬುದ್ಧ ಧರ್ಮಕ್ಕೆ ಹೊಸದೊಂದು ತೇಜಸ್ಸನ್ನೂ, ಶಕ್ತಿಯನ್ನೂ ಒದಗಿಸಿಕೊಟ್ಟು ಅದನ್ನು ಲೋಕಪ್ರಿಯವಾಗಿ ಮಾಡಿದರು. ಇವರು ಕ್ರಿಸ್ತಾಬ್ದದ ಪ್ರಥಮಶತಕಕ್ಕಿಂತ ಮುಂಚಿತವಾಗಿಯೇ ಬುದ್ಧ ಧರ್ಮದ ಕಾರುಣ್ಯಮೂರ್ತಿಯಾದ ಮಹಾನುಭಾವನಾದ ಅವಲೋಕಿತೇಶ್ವರನ ಕಲ್ಪನೆಗಳನ್ನು ನೆಲೆಗೊಳಿಸಿದರು. ಈ ಅವಲೋಕಿತೇಶ್ವರನು ತಾನು ಗಳಿಸಿದ ಮೋಕ್ಷವನ್ನು ವಿಶ್ವದ ಎಲ್ಲ ಜೀವಿಗಳು ಬೋಧಿಯನ್ನು ( True knowledge ) ಮತ್ತು ಮುಕ್ತಿಯನ್ನು ಪಡೆಯುವವರೆಗೆ ಅಂಗೀಕರಿಸಲಿಕ್ಕೆ ಅಲ್ಲಗಳೆದನು. ಅವಲೋಕಿತೇಶ್ವರನು ಎಲ್ಲ ಶಕ್ಯವಾದ ದೈವೀ ರೂಪಗಳನ್ನು ತಂದೆ ತಾಯಿಗಳ ಆಕಾರವನ್ನು ಕೂಡ, ಅಧ್ಯಾತ್ಮ ಜ್ಞಾನವನ್ನು ಕೊಡಲು ಸ್ವೀಕರಿಸುವ ಲಕ್ಷಣವುಳ್ಳವನಾದನು.

ಮೈತ್ರೇಯನಾಥನೂ, ಆರ್ಯದೇವನೂ ಅಸಂಗನೂ ಮತ್ತೆ ಇನ್ನೂ ಕೆಲವರೂ ನಾಗಾರ್ಜುನನನ್ನು ಹಿಂಬಾಲಿಸುವರು. ತಮ್ಮ ಅಗಾಧ ವಿದ್ವತ್ತೆಯಿಂದ ಪ್ರಖ್ಯಾತರಾದ ಇವರುಗಳು ಎಷ್ಟೋ ಗ್ರಂಥಗಳನ್ನು ಬರೆದರು. ಇವರ ಚಿಕಿತ್ಸಕ ಬುದ್ಧಿಯು ಎಲ್ಲಕ್ಕೂ ಹೆಚ್ಚಿನದಾದ ದುಃಖಾಕುಲವಾದ ಮಾನವ ಜಾತಿಯ ಬಗ್ಗೆ ಇರುವ ಉದಾರ ಹೃದಯದ ಸಹಾನುಭೂತಿಯು ಹೆಚ್ಚು ಹೊಗಳತಕ್ಕದ್ದಾಗಿದೆ. ಅಸಂಗನು ೫ನೇ ಶತಕದಲ್ಲಿ ಮಹಾಯಾನ ಪಂಥದೊಳಗೆ ತಾಂತ್ರಿಕ ತತ್ವಗಳನ್ನು ತಿಳಿಯಪಡಿಸಿದನು. ತಾರಾನಾಥನು ಹೇಳುವಂತೆ ಮೊದಲು ೨೦೦ ವರ್ಷಗಳವರೆಗೆ ಆಗ ಇರುವ ಬುದ್ಧ ಧರ್ಮಕ್ಕೆ ಅಪರಿಚಿತವಾದ ಆ ತತ್ವಗಳು ಅಷ್ಟೊಂದು ವರ್ಚಸ್ಸನ್ನು ಸ್ಥಾಪಿಸಲಿಲ್ಲ

ತಾಂತ್ರಿಕ ಪದ್ಧತಿಯ ತ್ವರಿತಗತಿಯ ಬೆಳವಣಿಗೆಯ ಮುಂಚೂಣಿಗೆ ಏನೇ ಕಾರಣಗಳಿರಲಿ ವಜ್ರಯಾನವೆಂಬ ಉಪಪಂಥವು ಉದಯವನ್ನು ಹೊಂದುವದಕ್ಕಿಂತ ಮೊದಲೇ ತಾಂತ್ರಿಕ ಪದ್ಧತಿಯ ಬಗ್ಗೆ ಅನೇಕ ಗ್ರಂಥಗಳು ಬರೆಯಲ್ಪಟ್ಟಿದ್ದವು. ವಜ್ರಯಾನವೆಂಬ ಉಪಪಂಥದ ಉತ್ಪಾದಕನು ಓರಿಸಾದ ಅರಸನಾದ ಇಂದ್ರಭೂತಿಯು.

ಮಾಹಾಯಾನ ಪಂಥದಲ್ಲಿ ಉದ್ಭೂತವಾದ ವಜ್ರಯಾನ ಸಂಪ್ರದಾಯವು ಬುದ್ಧಧರ್ಮದ ಪೂತಮನಸ್ಕರಾದ ಅನುಯಾಯಿಗಳಿಗೆ ತರ್ಕಶುದ್ಧವಾಗಿಯೂ ಉನ್ನತವಾಗಿಯೂ ಕಂಡಿತು. ವಜ್ರಯಾನ ಪಂಥದ ಅನುಯಾಯಿಗಳು ಸಂಸ್ಕೃತದಲ್ಲಿ, ತಿಬೆಟಿಯನ್ ಭಾಷೆಯಲ್ಲಿ, ಹಿಂದುಸ್ಥಾನದ ದೇಶಭಾಷೆಗಳಲ್ಲಿ ಒಳ್ಳೇ ಪುಷ್ಟಿಕರವಾದ ಗ್ರಂಥಗಳನ್ನು ಬರೆದರು. ಯಾತರಿಂದ ಅನೇಕ ಉಪಪಂಥಗಳು ಹುಟ್ಟಿದವೋ ಅಂಥ ಮಹತ್ತರವಾದ ಸಾಹಿತ್ಯವನ್ನು ನಾವು ಗಣನೆಗೆ ತರಲೇಬೇಕಾಗುವದು. ತಿಬೇಟಿನ Tongyur ರು ಸಂಗ್ರಹಿಸಿದ ಪುಸ್ತಕಗಳಲ್ಲಿ ಆರಂಭವಾಗಲಿ ಕಡೆಯಾಗಲಿ ವಜ್ರ ಶಬ್ದದಿಂದ ಮುಗಿದಿದ್ದರೆ ಅವರೆಲ್ಲರು ವಜ್ರಯಾನೀಯರೆಂದು ತಿಳಿಯತಕ್ಕದ್ದು. ಯಾ ಗ್ರಂಥಕಾರರ ಹೆಸರುಗಳ ಆರಂಭವಾಗಲಿ ಕಡೆಯಾಗಲಿ ವಜ್ರಶಬ್ದಾಂಕಿತವೋ ಅ ಲ್ಲರು ವಜ್ರಾಚಾರ್ಯರು (ಗುರುಗಳು). ಪ್ರಮುಖರಾದ ವಜ್ರಾಚಾರ್ಯರು ಈ ವಿಷಯಗಳ ಮೇಲೆ ಸಾವಿರಾರು ಗ್ರಂಥಗಳನ್ನು ಬರೆದಿರುವರು. ಮಧ್ಯಕಾಲದಲ್ಲಿ ಸಿದ್ಧಾಚಾರ್ಯರೆಂದು ಕರೆಯಲ್ಪಟ್ಟವರೂ ಮತ್ತು ಕೆಲವು ಪ್ರಖ್ಯಾತರಾದ ಮಹಾಪುರುಷರು ಗ್ರಂಥಗಳನ್ನು ರಚಿಸಿರುವರು. ಇವರ ಸಾಂಪ್ರದಾಯಿಕ ಸಂಖ್ಯೆ ೮೪. ಪ್ರಖ್ಯಾತವಾದ ಸಾಧನಮಾಲೆಯು ಬೌದ್ಧಪುರಾತನ ಶಿಲ್ಪವಿದ್ಯೆಯ ಅಭ್ಯಾಸಕ್ಕೆ ಉಪಯುಕ್ತವಾಗಿರುವದು. ಇದು ಸಂಸ್ಕೃತದಲ್ಲಿದ್ದು ೩೦೦ ಲಘು ಗ್ರಂಥಗಳನ್ನು ಒಳಗೊಂಡಿರುವ ಮುಖ್ಯವಾಗಿ ಗೊತ್ತಿದ್ದ ಬೌದ್ಧ ಗ್ರಂಥಗಳ ಕ್ಯಾಟಲಾಗವೇ ಎರಡು ದೊಡ್ಡ ಹೊಗೆಗಳನ್ನು ಒಳಕೊಳ್ಳುವಷ್ಟಿರುವದು.

ವಜ್ರಯಾನ ಪಂಥವು ಎಲ್ಲಿ ತನ್ನ ನಿಲ್ದಾಣವನ್ನು ಮಾಡಿತೋ, ಆ ತಳಹದಿಯು ಕೊಂಚವಾಗಿ ನಿರೀಕ್ಷಿಸುವಾ. ಬುದ್ಧನು ನಿರ್ವಾಣವನ್ನು ಉಪದೇಶಿಸಿದನು. ಆ ಇದರ ಲಕ್ಷಣವನ್ನು ಕೇಳಲಾಗಿ ಅವನು ಎಂದೂ ಉತ್ತರವನ್ನೇ ಕೊಡಲಿಲ್ಲ. ೫ ವರ್ಷಗಳು ಕಳೆದಬಳಿಕ ಅಶ್ವಘೋಷನಾದರೂ ದೀಪವು ಆರಿಹೋಗುವ ಸಾಮ್ಯವ ಕೊಟ್ಟನಲ್ಲದೆ ಹೆಚ್ಚಾಗಿ ವಿವರಿಸಲಿಲ್ಲ. ನಿರ್ವಾಣವನ್ನು ಬಣ್ಣಿಸಲು ನಾಗಾರ್ಜುನ ಹೆಚ್ಚು ದಿಟ್ಟನಾಗಿ ನಿರ್ವಾಣವೆಂದರೆ ಶೂನ್ಯದಂತೆ ಒಂದು ಸ್ಥಿತಿಯು. ಯಾ ಬಗ್ಗೆ ಇರುವಿಕೆ ಇಲ್ಲವೆ ಇಲ್ಲದಿರುವಿಕೆ, ಸಂಬಂಧ ಅಥವಾ ಅಸಂಬಂಧ ಯಾವ ಹೇಳಲಿಕ್ಕೆ ಬರುವದಿಲ್ಲವೋ ಅದೆಂದನು. ಇಂತಹ ಅತಿ ಶೇಷ್ಮವಾದ ಅತೀಂದ್ರಿಯ ಸ್ಥಿತಿಯುಳ್ಳ ನಿರ್ವಾಣವೂ ನಿಜವಾಗಿ ಜನರ ಮನಸ್ಸನ್ನು ರಂಜಿಸಲಿಕ್ಕೆ ಸಮರ್ಥವ

ಲ್ಲ. ಆ ಬಳಿಕ ಅವನ ಶಿಷ್ಯನಾದ ಮೈತ್ರೇಯನಾಥನು ವಿಜ್ಞಾನ (ಪೂರ್ಣಜ್ಞಾನ)ದ ಕಲ್ಪನೆಯನ್ನು ಶೂನ್ಯವಾದದಲ್ಲಿ ಪ್ರಚಾರಗೊಳಿಸಿದನು. ಮತ್ತು ಯೋಗಾಚಾರ (self worship) ಪದ್ಧತಿಯನ್ನು ಪ್ರಸಾರಗೊಳಿಸಿದನು. ಬುದ್ಧ ಧರ್ಮದ ಮುಖ್ಯ ಅನುಯಾಯಿಗಳನ್ನು ಇದೂ ಸಮಾಧಾನಪಡಿಸಲಿಲ್ಲ. (ಗೃಹಸ್ಥರೂ ಸಾಮಾನ್ಯರೂ ಒತ್ತಟ್ಟಿಗುಳಿಯಲಿ) ಬಳಿಕ ಮಹಾಸುಖವಾದ (eternal bliss) ದ ಹೊಸತತ್ವವು ಬಳಿಕೆಯಲ್ಲಿ ಬಂದಿತು.

ಮಹಾಸುಖವಾದಕ್ಕನುಸಾರವಾಗಿ, ಬೋಧಿಚಿತ್ತವು (ಬೋಧಿಯನ್ನು ಅಥವಾ ನಿರ್ವಾಣವನ್ನು ಕುರಿತು ಒಲೆದ ಮನಸ್ಸು ) ಮೇಲ್ಗಡಿಗೆ ಹೋಗಲು ಪ್ರಾರಂಭಿಸುವದು. ಹೀಗೆ ಅದು ೨೬ ಲೋಕಗಳೊಳಗಿಂದ ಹಾಯ್ದು ಹೋಗಬೇಕು. ಅವು ಕಾಮ, ರೂಪ, ಅರೂಪ ಎಂದು ವಿಭಾಗಿಸಲ್ಪಟ್ಟಿರುವವು. ಮೊದಲನೇ ಲೋಕದಲ್ಲಿ ಕಾಮವು (ಇಚ್ಛೆ) ಯು ಇಡಲ್ಪಟ್ಟಿರುವದು. ೨ನೇ ಲೋಕದಲ್ಲಿ ರೂಪವು (ಆಕಾರವು) ಇಡಲ್ಪಟ್ಟಿರುವದು. ೩ನೇದರಲ್ಲಿ ರೂಪವು ನಷ್ಟವಾಗುವದು. ಕಟ್ಟಕಡೆಯ ರೂಪ ಲೋಕದಲ್ಲಿ ಅಮಿತಾಭಾನು ಅಂದರೆ ಬುದ್ಧನು (ಅಳತೆಯಿಲ್ಲದ ಬೆಳಕುಳ್ಳವನು) ವಾಸಿಸುತ್ತಾನೆ. ಅದರಾಚೆಗಿರುವ ತಾಣದಲ್ಲಿ ಸುಮೇರು ಶಿಖರವುಂಟು. ಇಲ್ಲಿಂದ ಬೋಧಿಚಿತ್ತವು ಶೂನ್ಯದಲ್ಲಿ ಮುಳಿಗಿಹೋಗುವದು. ಉಳಿದದ್ದೇನೂ ಉಳಿಯುವದಿಲ್ಲ. ವಿಜ್ಞಾನವೊಂದು ಶಾಶ್ವತ ಸುಖದ (ಮಹಾಸುಖ) ಭಾವನೆಯೊಂದಿಗೆ ಉಳಿಯುವದು.

ಈ ಮೇರೆಗೆ ವಿಜ್ಞಾನವಾದವನ್ನೂ ಶೂನ್ಯವಾದವನ್ನೂ ಅನುಸರಿಸುವ ಮಹಾಸುಖವಾದವನ್ನು ವಜ್ರಯಾನ ಪಂಥವು ಎತ್ತಿಹಿಡಿದು ಅದರ ಅನುಯಾಯಿಗಳಿಗೆ ಒಂದು ಸುಲಕ್ಷಣಬದ್ಧವಾದ ವ್ಯಾಖ್ಯಾನವನ್ನು ಮಾಡಿಕೊಟ್ಟಿತು. ಯೋಗವನ್ನು ಬೇಡುವವರಿಗೆ ಇದು ಯೋಗವನ್ನು ಮಾಡಿಕೊಟ್ಟಿತು. ಮಂತ್ರೋಚ್ಚಾರದಿಂದೆ ತೃಪ್ತರಾಗುವವರಿಗೆ ಅದೇ ದಾರಿಯಿಂದ ಸದ್ಗುಣಗಳನ್ನು ನೀಡಿತು. ಯಾರು ದೇವತೆಗಳನ್ನು ಬಯಸುವರೋ ಅವರಿಗೆ ಅಸಂಖ್ಯ ದೇವತೆಗಳು ಕೊಡಲ್ಪಟ್ಟವು. ಯಾರು ಪಾರ್ಥಿವ ಸಿದ್ಧಿಯನ್ನು ಬಯಸುವರೋ ಅವರಿಗೆ ಎಲ್ಲತರದ ಸಿದ್ಧಿ (success) ಗಳನ್ನು ದೊರಕಿಸಲು ದಾರಿಮಾಡಿಕೊಟ್ಟಿತು. ಯಾರು ಇಂದ್ರಿಯ ಸುಖವನ್ನು ಬಯಸುವರೋ ಅವರಿಗೆ ಅದೂ ಲಬ್ಧವಾಗಿ ಮತ್ತು ಬಂದಿಷ್ಟು ಹೆಚ್ಚಿಗೆ ಸಿಕ್ಕಿತು.

ಮೇಲೆ ಬಣ್ಣಿಸಿದ ಸಂಗತಿಗಳಿಂದ ಈ ವಜ್ರಾಚಾರ್ಯರು ಸಾಮಾನ್ಯ ಜನರಿಗೆ ಮೋಹಕವಾಗುವಂತೆ ಎಲ್ಲಿಯತನಕ ಧರ್ಮವನ್ನು ಒಯ್ದರೆಂಬದನ್ನು ಸುಲಭವಾಗಿ ಕಲ್ಪಿಸಬಹುದು. ಇಂಥ ಸಂಗತಿಗಳಿಗೆ ಗೂಢಾರ್ಥವನ್ನು ವಿವರಿಸಿ ಹೇಳುವ ಪ್ರವೃತ್ತಿಯು ಈಗಣ ಕಾಲದಲ್ಲಿ ಕಂಡುಬರುತ್ತಿದೆ. ಆದಾಗ್ಯೂ ಸಂಶಯವಿಲ್ಲದೆ ಸಾಂಧ್ಯ ಭಾಷೆಯಲ್ಲಿ ( Twilight language) ಹಲವು ಸಂದರ್ಭಗಳಲ್ಲಿ ಕೆಲವು ಶಬ್ದಗ

ಳಿಗೆ ಅರ್ಥವು ನಿಃಸಂದಿಗ್ಧವಾಗಿದ್ದು ಅದು ಹೆಚ್ಚಿನ ಅರ್ಥ ಮಾಡಲಿಕ್ಕೆಅನುಮತಿಯನ್ನ
ಕೊಡುವದಿಲ್ಲ. ಈ ತರದ ಧರ್ಮವನ್ನು ರೂಢವಾಗಿ ಮಾಡುವದರಿಂದ ಪೂವ
ಹಿಂದುಸ್ತಾನವು ತನ್ನ ಬಲವನ್ನು ಕಳಕೊಂಡದ್ದೂ ಮತ್ತು ಜನರಲ್ಲಿ ಎಲ್ಲತರದ ಭ್ರ
ತೆಗಳು ನೆಲೆಗೊಂಡದ್ದೂ ಅಚ್ಚರಿಯಲ್ಲ. ಇದರಿಂದ "ನಾಲಂದ, 'ಆದಂತಪುರೀ, ವಿ
ಮಶಿಲೆ" ಈ ಮೂರೂ ಮಠಗಳಲ್ಲಿರುವ ವಜ್ರಾಚಾರ್ಯರನ್ನು ಮುಸಲ್ಮಾನರು ಹಾ
ಮಾಡುವ ಕಾರ್ಯವನ್ನು ಕೈಕೊಂಡದ್ದು ಸುದೈವವೆಂದೇ ಎಣಿಸಬೇಕಾಗುವದು.

ಇದರಂತೆ ಹಸ್ತಲಿಖಿತ ಪ್ರತಿಗಳ ಬಗ್ಗೆ ಇತ್ತಲಾಗಿ 'ಚಿತ್ರಶೋಧಪ್ರಕರಣ
ವೆಂಬ ಪುಸ್ತಕವು ಪ್ರಕಟಿಸಲ್ಪಟ್ಟಿದೆ. ಆರ್ಯದೇವ ಅಥವಾ ಅಯ್ಯದೇವನೆಂಬವ
ಮೇಲೆ ಇದರ ಕರ್ತೃತ್ವವು ಆರೋಪಿಸಲ್ಪಟ್ಟಿರುವದು. ಈ ಪುಸ್ತಕವು ಆಕಾರದಿಂ
ಚಿಕ್ಕದಾಗಿದ್ದರೂ ಗುಣಗಳಿಂದ ಗರಿಷ್ಠವಾಗಿದೆ. ಇದರಲ್ಲಿ ವಜ್ರಯಾನ ಪಂಥದ
ಮುಖ್ಯ ತತ್ವಗಳು ವಿವರಿಸಲ್ಪಟ್ಟಿರುವವು. ಇದರಲ್ಲಿಯ ಕೆಲವು ತತ್ವಗಳು ಚಿತ್ತಾ
ಕರ್ಷಕವಾಗಿವೆ.

"A dog swimming in the Ganges is not considered purified, therefore bathing in holy plaecs is useless. If bathing can confer merit, then indeed is the fisherman meritorious. not to speak of the fish and other aquaotic Creatures who are in the water day and night. It is certain that from bathing even the sin is not washed away, because those (pilogrims) who frequent holy bathing places are found to be full of passion and vice."

"ನಾಯಿಯು ಗಂಗೆಯ ಜಲದಲ್ಲಿ ಸ್ನಾತವಾವರೆ ಅದು ಪರಿಶುದ್ಧವಾದದ್ದೆಂದ
ಎಣಿಸಲ್ಪಡುವದಿಲ್ಲ. ತೀರ್ಥಗಳಲ್ಲಿ ಸ್ನಾನಮಾಡುವದು ಪ್ರಯೋಜನಕಾರಿಯೆಂದು
ಹೇಳಲಾಗದು. ಸ್ನಾನವು ಸದ್ಗುಣಗಳನ್ನು ಕೊಡುತ್ತಿದ್ದರೆ ಮೀನ ಬಲೆಗಾರನು ನಿಜ
ವಾಗಿ ಸದ್ಗುಣಶಾಲಿಯಾಗಬೇಕಾದೀತು. ಹಗಲೆಲ್ಲ ನೀರೊಳಗಿರುವ ಮೀನ ಮೊದ
ಲಾದ ಪ್ರಾಣಿಗಳ ಮಾತೇ ಬೇಡ. ಸ್ನಾನದಿಂದ ಪಾಪವು ಪ್ರಕ್ಷಾಲಿತವು ಆಗುವದಿಲ್ಲವೇ
ಇಲ್ಲ. ಹಾಗಾದರೆ ಯಾತ್ರೆಯ ಸ್ಥಳಗಳಲ್ಲಿಯೇ ಇರುವ ಜನರು, ಅನೇಕ ದುರ್ಗುಣ
ಳಿಂದ ಯಾಕೆ ಕೂಡಿ ಇದ್ದಾರು ? *

* ಪೌರ್ವಾತ್ಯ ಪರಿಷತ್ತಿನಲ್ಲಿ ಬಡೋದೆಯ ಪ್ರೊಫೆಸರರಾದ ವಿನಯತೋಷ ಭಟ್ಟಾಚಾರ್ಯ ಇವರು
ಓದಿದ ಇಂಗ್ಲಿಷ ನಿಬಂಧದ ಸಾರಾಂಶವು. ವಿಶ್ವಭಾರತಿಯಿಂದ ತೆಗೆದು ಬರೆಯಲ್ಪಟ್ಟಿದೆ.

# ತಾತನ ಉಪದೇಶಾಮೃತ

ಲೇಖಕ:—ಸಿ. ಬಾ. ಕಾಡಣ್ಣವರ, ವಿದ್ಯಾರ್ಥಿ ಕರೀಕಟ್ಟಿ.

ಈ ಭೂಮಂಡಲದಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ 'ಮೃತ್ಯುವು' ಇರಲಿಕ್ಕೇಬೇಕು. ಮೃತ್ಯುವು ಇಲ್ಲದಿದ್ದರೆ, ಈ ಮನುಷ್ಯ ಜನ್ಮವು ಎಷ್ಟು ಗರ್ವಿನಿಂದೊರ್ತಿಸುತ್ತಿತ್ತೆಂಬ ದನ್ನು ಹೇಳಲಾಸಲ್ಲ; ಆದ್ದರಿಂದ ಮೃತ್ಯುವು ಮನುಷ್ಯನಿಗೆ ಒಂದು ಶತ್ರುವಿನಂತಿರು ವದು. ನಾವು ಕಡಲಲ್ಲಿ ಸೇರಿದರೂ, ಗೃಹದಲ್ಲಿ ಹೊಕ್ಕರೂ, ತಾಯಿಯ ಗರ್ಭದಲ್ಲಿ ಸೇರಿದರೂ, ನೀರಿನಲ್ಲಿ ಮುಳುಗಿದರೂ, ಹೌದಿನಲ್ಲಿ ಸೇರಿದರೂ, ಮರವನ್ನೇರಿದರೂ, ಕಡಿಯಬುಡಕ್ಕೆ ಅಡಗಿದರೂ, ಹಗೆಯಲ್ಲಿ ಅಡಗಿಕೊಂಡರೂ ಮೃತ್ಯುವೆಂಬ ವೈರಿಯು ಎಂದೂ ಬಿಡಲಾರದು; ಆದ್ದರಿಂದ " ಜಾತಸ್ಯ ಮರಣಂ ಧ್ರುವಂ " ಎಂಬ ನಾಣ್ಣುಡಿ ಯಂತೆ ಭೂಮಿಯಮೇಲೆ ಹುಟ್ಟಿದ ಸರ್ವ ಪ್ರಾಣಿಗಳಿಗೆಲ್ಲ ಸಾವು ಇರಲಿಕ್ಕೇಬೇಕು. ದೇವರಿಗೆ ಮಾತ್ರ ಎಂದೂ ಸಾವಿಲ್ಲವು. ಸಾಂಪ್ರತಕ್ಕೆ ಯಾವದೇ ಮನುಷ್ಯನು ಸಾಯು ವಕಾಲಕ್ಕೆ ತಮ್ಮ ಮಕ್ಕಳಿಗೆ ಬುದ್ಧಿಯ ಮಾತುಗಳನ್ನು ಹೇಳಿ ಸಾಯುವದು ಪ್ರತಿ ಯೊಂದು ದೇಶದಲ್ಲಿಯೂ, ರಾಷ್ಟ್ರದಲ್ಲಿಯೂ ಇರತಕ್ಕ ಪದ್ಧತಿಯು. ತಂದೆಯು ಸಾಯು ವಕಾಲಕ್ಕೆ ತಮ್ಮ ಮಕ್ಕಳಿಗೆ ಬುದ್ಧೀ ಹೇಳುವದು ಅವರ ಮೊದಲನೆಯ ಕರ್ತವ್ಯವು. ಅವರು ತಮ್ಮ ಮಕ್ಕಳಿಗೆ ಅನೇಕ ರೀತಿಯಿಂದ ಬುದ್ಧಿಯನ್ನು ಹೇಳುತ್ತಾರೆ. ಕೆಲವರು ತಮ್ಮ ತಂದೆಯು ಹೇಳಿದ ಮಾತನ್ನು ಲಕ್ಷಕ್ಕೆ ತರುವದಿಲ್ಲ. ಅವರು ಹೇಳಿದ ಪ್ರಕಾರ ವರ್ತಿಸುವದಿಲ್ಲ. ಒಳ್ಳೆಯವರೇ ಇರಲಿ, ಕೆಟ್ಟವರೇ ಇರಲಿ, ಎಲ್ಲರೂ ತಮ್ಮ ತಂದೆಯ ಮಾತನ್ನು ನಡಿಸುತ್ತಾರೆಂದು ಹೇಳಲಿಕ್ಕೆ ಬರುವದಿಲ್ಲ. ಯಾಕಂದರೆ ಅಗ್ನಿಯಿಂದ ಜನಿ ಸಿದ ಧೂಮವು ತಿರುಗಿ ಅಗ್ನಿಗೆ ಹ್ಯಾಗೆ ವೈರಿಯಾಗುವದೋ ಅದೇ ಪ್ರಕಾರ ತಂದೆಯ ಉದರದಿಂದ ಹುಟ್ಟಿದ ಮಕ್ಕಳು ತಿರುಗಿ ತಂದೆಗೆ ವೈರಿಗಳಾಗುತ್ತಾರೆ. ಉದಾಹರಣಾರ್ಥವಾಗಿ ಅಕಬರ ಬಾದಶಹನಿಗೆ ಹುಟ್ಟಿದ ಸೇಲಿಮನು ತಿರುಗಿ ಅಕಬರನಿಗೆ ವೈರಿಯಾಗಲಿಲ್ಲವೇ? ಆದ್ದರಿಂದ " ಪಿತೃದೇವೋಭವ " ಎಂಬ ನಾಣ್ಣುಡಿಯಂತೆ, ತಂದೆಯು ದೇವರ ಸಮಾನನೆಂದರಿತು, ಅವನನ್ನು ಭಕ್ತಿಯಿಂದ ಪೂಜಿಸುವದೇ ಮಕ್ಕಳ ಆದ್ಯ ಕರ್ತವ್ಯವು. ಅವರು ಹೇಳಿದ ವಾಕ್ಯಗಳು ದೇವರ ವ್ಯಾಕ್ಯಗಳೆಂದೂ, ಅವರ ಅಪ್ಪಣೆಗಳೇ ನಮಗೆ ಪರಮ ಭೂಷಣವೆಂದೂ, ಅವರ ಧ್ವನಿಯೇ ನಮಗೆ ದೇವರ ವಾವ್ಯಗಳೆಂದೂ ತಿಳಿದು, ಯಾವನು ಪೂಜಿಸುವನೋ ಅವನು ನಿಜವಾದ ಸುಖಕ್ಕೊಳಗಾಗುವನು. ಉದಾಹರಣಾರ್ಥವಾಗಿ ಈ ಪ್ರಕಾರ ಹಿಂದಕ್ಕೆ ರಘುವಂಶದಲ್ಲಿ ಚಂದ್ರನಂತೆ ಶಾಂತನೂ, ಸೂರ್ಯನಂತೆ ತೇಜಸ್ವಿಯೂ ಆದ ಶ್ರೀರಾಮಚಂದ್ರನು ಮಾತ್ರ ವರ್ತಿಸುತ್ತಿದ್ದನು. ಅವನು ತನ್ನ ತಂದೆಯು ಹೇಳಿದ ಮಾತುಗಳನ್ನು ಎಳ್ಳಷ್ಟಾದರೂ ಮೀರುತ್ತಿ

ದ್ದಿಲ್ಲ. ಇರಲಿ, ಅವನ ಸ್ವಭಾವಗಳನ್ನು ವರ್ಣನ ಮಾಡುತ್ತ ಕೂತರೆ ಒಂದು ದೊಡ್ಡ ಪುಸ್ತಕವೇ ಆಗಬಹುದು; ಆದ್ದರಿಂದ ಅದನ್ನು ಬಿಟ್ಟು ದಶರಥರಾಯನ ಬುದ್ಧಿಯ ಮಾತುಗಳನ್ನು ಮಾತ್ರ ಸ್ವಲ್ಪದರಲ್ಲಿ ಕೆಳಗೆ ವಿವರಿಸುವೆನು.

ಹಿಂದಕ್ಕೊಮ್ಮೆ ದಶರಥರಾಯನು ಬೇನೆಬಿದ್ದ ಕಾಲಕ್ಕೆ ತನ್ನ ಮಗನಾದ ಶ್ರೀ ರಾಮಚಂದ್ರನನ್ನು ಕರೆದು, ಹತ್ತಿರ ಕೂಡ್ರಿಸಿಕೊಂಡು ಅಂದದ್ದೇನೆಂದರೆ – ನನ್ನ ಪ್ರೀತಿಯ ಮಗನೇ, ನನ್ನ ಮರಣ ಕಾಲವು ಸವಿಾಪಿಸಿತು. ಆದರೆ ನಾನು ನಿನಗೆ ಕೆಲವು ಬುದ್ಧಿಯ ಮಾತುಗಳನ್ನು ಹೇಳುವೆನು ಕೇಳು. ಕರ್ಣೋಪಕರ್ಣವಾಗಿ ಕೇಳಜೇಡ, ನಾನು ಹೇಳಿದಂತೆ ನೀನು ವರ್ತಿಸಿದರೆ ಜಗತ್ತಿನಲ್ಲಿ ಸತ್ಕೀರ್ತಿಯನ್ನು ಹೊಂದುವಿ. ಆದ್ದರಿಂದ ಮಗನೇ, ಲಕ್ಷವಿರಲಿ!

ಎಲ್ಲೆ ಪ್ರಿಯಪುತ್ರಾ, ನೀನು ಯಾವಾಗಲೂ ನಸುಕಿನಲ್ಲಿ ಎದ್ದು, ಸರ್ವಜ್ಞನೂ ಸರ್ವವ್ಯಾಪಿಯೂ, ಸರ್ವಾಂತರ್ಯಾಮಿಯೂ, ಸರ್ವ ಸಾಕ್ಷಿಯೂ ಆದ ಪರಮಾತ್ಮನನ್ನು ಸ್ಮರಿಸು. ಅಂದರೆ ನೀನು ಮಾಡಿದ ಪಾಪಕೃತ್ಯಗಳೆಲ್ಲ ಅಳಿದು. ನಿನ್ನ ಆಯುಷ್ಯವೂ, ಕೀರ್ತಿಯೂ ಇಹಪರಗಳಲ್ಲಿ ಪಸರಿಸಿ, ಕಟ್ಟಕಡೆಗೆ ಮೋಕ್ಷ ಪದವಿಯು ದೊರಕುವದೇನಾಶ್ಚರ್ಯ!

**ಶ್ರೀರಾಮು:**— ನನ್ನ ಪ್ರೀತಿಯ ತಂದೆಯೇ, ನಿನ್ನ ಉಪದೇಶಾಮೃತವನ್ನು ಕೇಳಿ ನನ್ನ ಹೃದಯವೆಂಬ ಭಾಂಡಾರವು ತುಂಬಿ ತುಳುಕುತ್ತಿರುವದು. ನಿನ್ನ ಉಪದೇಶದಿಂದ ನನ್ನ ಆತ್ಮದಲ್ಲಿರತಕ್ಕ ದುಷ್ಟ ಗುಣಗಳು ನಷ್ಟವಾದವು. ಆದರೆ ತಾವು ತಮ್ಮ ಕಂದನಮೇಲೆ ಪ್ರೇಮವನ್ನಿಟ್ಟು, ಇನ್ನೂ ಹೆಚ್ಚಿಗೆ ಬೋಧಿಸಬೇಕೆಂದು ನನ್ನಭಿಪ್ರಾಯವಿದೆ.

**ದಶರಥಃ**— ನನ್ನ ಪ್ರೀತಿಯ ಕಂದನೇ, ನಾನು ಹೇಳಿದಂತೆ ನೀನು ವರ್ತಿಸು ಇಲ್ಲದಿದ್ದರೆ ನಾನು ಹೇಳಿದ್ದು "ಹೊಳೆಯಲ್ಲಿ ಹೋಮಸುಟ್ಟಂತೆ" ವ್ಯರ್ಥವಾಗುವದು. ಇನ್ನುಮೇಲೆ ನಾನು ನಿನಗೆ ಪಾಪಪುಣ್ಯಗಳ ಬಗ್ಗೆ ಹೇಳುವೆನು ಕೇಳು. ಪಾಪಪುಣ್ಯಗಳೆಂಬ ಎರಡು ಪ್ರಕಾರದ ಭೇದಗಳನ್ನು ಯಾವಾತನು ತಿಳಿದುಕೊಳ್ಳುವದಿಲ್ಲವೋ ಅವರಿಗೆ ಶಂಭುವಿನ ಕೃಪೆಯಾಗುವದಿಲ್ಲ; ಮಹೇಶ್ವರನ ಕೃಪೆಯಿಲ್ಲದೆ ಮನವು ಶುದ್ಧವಾಗದು; ಮನವು ಶುದ್ಧವಾಗದೆ ಭ್ರಾಂತಿಯಳಿಯದು; ಭ್ರಾಂತಿಯು ನಾಶವಾಗದೆ ಶಿವಜ್ಞಾನವಾಗದು; ಶಿವಜ್ಞಾನವಿಲ್ಲದಿದ್ದರೆ ಮೋಕ್ಷವಿಲ್ಲ. ಆದ್ದರಿಂದ ಪ್ರಿಯಪುತ್ರಾ ಪಾಪ-ಪುಣ್ಯಗಳ ಭೇದವನ್ನು ಮೊದಲು ಅರಿತುಕೋ ಅಂದರೆ ನಿನಗೆ ನಿಜವಾದ ಸುಖವು ಲಭಿಸುವದು.

**ಶ್ರೀರಾಮು:**— ಪ್ರೀಯ ತಂದೆಯೇ! ನೀವು ಹೇಳಿದ ಪಾಪಪುಣ್ಯಗಳ ಸಾರಾಂಶವನ್ನು ಕೇಳಿ ನಾನು ಕೃತಾರ್ಥನಾದೆನು. ನೀವು ಹೇಳಿದ ಪ್ರತಿಯೊಂದು ಬುದ್ಧಿಯು

ಾತನ್ನು ಜನ್ಮಾಂತರದ ವರೆಗೆ ನಡೆಸುವೆನು. ಆದರೆ ತಾವು ತಮ್ಮ ಕಂದನಮೇಲೆ ಪ್ರೇಮವನ್ನಿರಿಸಿ, "ಅಹಂಕಾರವೆಂಬ" ಗುಣದ ಬಗ್ಗೆ ಕೆಲವು ವಚನಗಳನ್ನುಸುರ ೀಕೆಂದು ನಾನು ಬೇಡಿಕೊಳ್ಳುತ್ತೇನೆ.

**ದಶರಥ:**— ಪ್ರಿಯಪುತ್ರಾ ! ಅಹಂಕಾರದ ಬಗ್ಗೆ ಕೆಲವು ಮಾತುಗಳನ್ನು ೀಳುವೆನು ಕೇಳು. ಅಹಂಕಾರವೆಂಬ ದುರ್ಗುಣವು ಐಶ್ವರ್ಯದಿಂದುತ್ಪತ್ತಿಯಾ ುತ್ತದೆ. ಐಶ್ವರ್ಯವು ಳಿದರೂ ಈ ದುರ್ಗುಣವು ನಶ್ವರವಾಗದು. ಆದ್ದರಿಂದ ಈ ಅಹಂಕಾರವೆಂಬ ಪಶುವನ್ನು ನಿನ್ನ ಹೃದಯಾರಣ್ಯದಲ್ಲಿ ಬರಗೊಡಬೇಡ. ಅದರ ವಾಸನೆಗಾಗಿ ಅಂದರೆ, ಅದರ ರುಚಿಗಾಗಿ ಇಂದ್ರಿಯಗಳೆಂಬ ನಾಯಿಗಳು ಸಿದ್ಧವಾಗಿ ರುವವು. ಅಂಥ ನಾಯಿಗಳನ್ನು ಕಬ್ಬಿಣ ಸರಪಳಿಯಿಂದ ಗಟ್ಟಿಯಾಗಿ ಬಿಗಿದು ಹಿಡಿ ಯಬೇಕು. ತರುವಾಯ ವಾಯುನಿರೋಧವೆಂಬ ಜಾಳಿಗೆಯಲ್ಲಿ ಅಹಂಕಾರವೆಂಬ ಪಶುವನ್ನು ಒಯ್ದು ನಿಲ್ಲಿಸಿ, ಜ್ಞಾನದೃಷ್ಟಿ ವಿವೇಕವುಳ್ಳ ಮಗನೆಂಬ ನೀನು, ಕೈಯ್ಯಲ್ಲಿ ಧೈರ್ಯವೆಂಬ ಧನುಸ್ಸನ್ನು ಧರಿಸಿ, ಆ ಪಶುವನ್ನು ಕೊಲ್ಲಲು ಯತ್ನಿಸು. ನಾನೇ ಈಶ್ವರನೆಂಬ ಬುದ್ಧಿರೂಪ ಬಾಣವನ್ನು ಆ ಧನುಸ್ಸಿನ ದಾರಕ್ಕೆ ಹೂಡಿ, ಅಹಂಕಾರ ನೆಂಬ ಪಶುವನ್ನು ಹೊಡೆದು, ಭೂಮಿಯಮೇಲೆ ಕೆಡವಿಬಿಡು." ಎಂದು ದಶರಥನು ನುಡಿದನು.

**ಶ್ರೀರಾಮ:**—ಪ್ರಿಯ ತಾತನೇ! ತಥಾಸ್ತು. ನಾನು ಇಂಥ ಸುಬೋಧಾಮೃ ತವನ್ನು ನನ್ನ ಜನ್ಮಾಂತರದಲ್ಲಿಯೂ ಸಹ ಕೇಳಿಲ್ಲ ಆದ್ದರಿಂದ ತಾವು ದಯಮಾಡಿ ಪ್ರತಿಯೊಂದು ಗುಣದಬಗ್ಗೆ ವಿವರಿಸಿ ಹೇಳಬೇಕೆಂದು ನನ್ನ ಸಂಪೂರ್ಣ ಅಭಿಪ್ರಾಯ ವಿದೆ.

**ದಶರಥ:**— ಪ್ರಿಯಕಂದಾ ! ಲಕ್ಷವಿಲ್ಲದೆ ಕೇಳಬೇಡ. ನಾನು ಹೇಳಿದಂತೆ ನರ್ತಿಸು. ಪ್ರತಿಯೊಂದು ಗುಣದಬಗ್ಗೆ ವಿವರಿಸಿ ಹೇಳಿದರೆ ಒಂದು ದೊಡ್ಡ ಪುಸ್ತಕವೇ ಸಾಲದು. ಆದ್ದರಿಂದ ಪ್ರತಿಯೊಂದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುವೆನು ಕೇಳು. ಕ್ರೋಧವೆಂಬ ವೈರಿಯನ್ನು ನಿನ್ನ ಹೃದಯಾರಣ್ಯದಿಂದ ಹೊರದೂಡು. ಮಾತ್ಸರ್ಯ ವನ್ನು ಬಿಡು. ರಾಜ್ಯಕಾರಭಾರದಲ್ಲಿ ಪಕ್ಷಪಾತ ಮಾಡಬೇಡ. ನ್ಯಾಯದಿಂದ ನಡೆ. ಸಾಕ್ಷಿ ನುಡಿಯುವ ಪ್ರಸಂಗಬಂದರೆ, ದಾಕ್ಷಿಣ್ಯಕ್ಕೊಳಗಾಗದೆ ಸತ್ಯವನ್ನೇ ನುಡಿ.

**ಶ್ರೀರಾಮ:**—ಪ್ರಿಯತಾತನೇ ! ಹಂಸಪಕ್ಷಿಯು ಕ್ಷೀರದಿಂದಲೂ, ಭೃಂಗವು ಅರಳಿದ ಪುಷ್ಪಗಳಿಂದಲೂ, ಕ್ಷುಧೆಯು ಅನ್ನದಿಂದಲೂ, ತೃಷೆಯು ಜಲದಿಂದಲೂ, ಕಮಲವು ಸೂರ್ಯನಿಂದಲೂ ತೃಪ್ತಿಪಡುವಂತೆ, ನಾನು ತಮ್ಮ ಉಪದೇಶವೆಂಬ ಅಮೃತ ದಿಂದ ತೃಪ್ತಿಹೊಂದಿದೆನು. ಆದರೆ "ದುಃಖವೆಂಬ ದುರ್ಗುಣವು ಯಾವ ಪ್ರಕಾರ ದಿಂದುದ್ಭವಿಸುವದು ? ಪರೋಪಕಾರ ಮತ್ತು ಅಂತಃಕರಣವೆಂಬ ಸುಗುಣಗಳು ಯಾವರೀತಿಯಿಂದ ಲಭಿಸುವವು ?" ಎಂಬದನ್ನು ಬೋಧಿಸಬೇಕು.

**ದಶರಥ**:—ಪ್ರಿಯ ಪುತ್ರೋತ್ತಮನೇ ! ನಿನ್ನ ಈ ಕುಶಲವಾದ ಪ್ರಶ್ನಗ
ನ್ನಾಲಿಸಿ ನಾನು ಬೆಪ್ಪಾದೆನು ನಿನ್ನ ಪ್ರಶ್ನಗಳಿಗೆ ಸಮರ್ಪಕವಾದ ಉತ್ತರಗಳನ್ನು
ಹೇಳುವೆನು ಕೇಳು. " **दुःखानि पापात्जायन्ते** " ಎಂಬ ನಾಣ್ಣುಡಿಯಂತೆ, ದುಃಖ
ವೆಂಬ ದುರ್ಗುಣವು ಪಾಪದಕೃತ್ಯಗಳನ್ನು ಮಾಡುವದರಿಂದುದ್ಭವಿಸುತ್ತದೆ. ಪರೋಪ
ಕಾರವೆಂಬ ಸುಗುಣವು ಪುಣ್ಯಕರವಾದ ಕೃತ್ಯಗಳನ್ನು ಮಾಡುವದರಿಂದಲೂ, ಪುರಾಣ
ಪುಣ್ಯಕಥೆಗಳನ್ನು ಕೇಳುವದರಿಂದಲೂ, ಬುದ್ಧಿವಂತರ ಅನುಷಂಗದಿಂದಲೂ, ಗುರೂಪ
ದೇಶವನ್ನು ಕೇಳುವದರಿಂದಲೂ ಲಭಿಸುತ್ತದೆ. ಅಂತಃಕರಣವೆಂಬ ಸುಸ್ವಭಾವವ
ಸೃಷ್ಟೀಶನ ಮಾಹಾತ್ಮೆಯನ್ನೂ, ತಾನು ಮಾಡುವ ಕೃತಿಯನ್ನೂ ಅವಲಂಬಿಸಿ ಲಭಿ
ಸುವದು. ಇದು ಎರಡನೆಯವರು ಕಲಿಸಿದರೆ ಬರುವ ಗುಣವಲ್ಲ. ತನ್ನಿಂದತಾನೇ
ಜನಿಸಬೇಕು. " The quality of mercy is not strained, it
droppeth as the gentle raiu from heaven upon the
place beneath"ಎಂಬ ನಾಣ್ಣುಡಿಯಂತೆ, ಆಕಾಶದಿಂದ ಸೌಮ್ಯವಾದ ಮಳೆಯು
ಭೂಮಿಯಮೇಲೆ ಬಿದ್ದು, ಯಾವ ಪ್ರಕಾರ ಭೂಮಿಯನ್ನು ತೃಪ್ತಿಪಡಿಸುವದೋ,
ಅದೇ ಪ್ರಕಾರ ಅಂತಃಕರಣವೆಂಬ ಸ್ವಭಾವವು ಎರಡನೆಯವರ ಹೇಳಿಕೆಯಿಂದ ಬರುವ
ದಿಲ್ಲ. ತನ್ನಿಂದ ತಾನೇ ಹುಟ್ಟಿ, ಜನರನ್ನು ತೃಪ್ತಿಪಡಿಸತಕ್ಕದ್ದು. ಅಂತಃಕರಣ
ವೆಂಬ ಸ್ವಭಾವವು ಸಾಮಾನ್ಯಸ್ವಭಾವವಲ್ಲ. ಯಾಕಂದರೆ, ಇದರಿಂದಲೇ ಸಕಲ
ಸೃಷ್ಟಿಯು ಕಾರ್ಯವು ಆತಂಕವಿಲ್ಲದೆ ನಡೆಯುವದು. ಸಕಲೈಶ್ವರ್ಯಗಳಲ್ಲಿಯೂ ಈ
ಗುಣವು ಶ್ರೇಷ್ಠತರಗತಿಯುಳ್ಳದ್ದು. " Mercy is above the sceptred
sway " ಎಂಬ ನಾಣ್ಣುಡಿಯಂತೆ, ಅಂತಃಕರಣವೆಂಬ ಸ್ವಭಾವವು ರಾಜದಂಡಕ್ಕಿಂ
ತಲೂ ಶ್ರೇಷ್ಠತರಗತಿಯುಳ್ಳದ್ದು. ಆದ್ದರಿಂದ ಮಗನೇ, ಅಂತಃಕರಣವೆಂಬ ಸ್ವಭಾವ
ವನ್ನು ಮೊದಲು ಅರಿತುಕೋ, ಅಂದರೆ ನಿನಗೆ ನಿಜವಾದ ಸುಖವು ಪ್ರಾಪ್ತವಾಗುವದು.

**ಶ್ರೀರಾಮ**:—ಪ್ರಿಯ ತಾತನೇ ! ಗುರುವಿನಿಂದ ಶಿಷ್ಯನೂ, ಕೃಷಿಕರ್ಮ
ಕನಿಂದ ಧನಗಳೂ, ಮಾತೆಯಿಂದ ಪುತ್ರನೂ, ಪತಿಯಿಂದ ಪತ್ನಿಯೂ ಬುದ್ಧಿಗಲಿತು
ಕೃತಾರ್ಥರಾಗುವಂತೆ, ತಮ್ಮಿಂದ ನಾನು ಬುದ್ಧಿಗಲಿತೆನು. ಅದರೆ ತಾವು ದಯಮಾಡಿ
ಇನ್ನೂ ಹೆಚ್ಚಿಗೆ ಬೋಧಿಸಬೇಕು.

**ದಶರಥ**:—ಪ್ರಿಯ ಪುತ್ರಾ ! ಪ್ರತಿಯೊಂದರ ವಿಷಯವಾಗಿ ಹೆಚ್ಚಿಗೆ ಕೇಳ
ಬೇಡವೆಂದು ಹೇಳ್ಲನ್ನೇ ? ಆದ್ದರಿಂದ ಇನ್ನು ಮುಂದೆ ನೀನು ನಡುವೆ ಬಾರದೆ, ನಾನು
ಹೇಳಿದಂತೆ ಕೇಳುತ್ತಲೂ, ಅದರಂತೆ ವರ್ತಿಸುತ್ತಲೂ ಹೋಗು. " ಧಾರ್ಮಿಕ, ರಾಜ
ಕೀಯ, ದಾಸ್ಯತ್ವ, ಧರ್ಮನಿಷ್ಠೆ ಸಾಮಾಜಿಕ ಹಿತಗಳ ಕಡೆಗೆ ಹೆಚ್ಚು ಲಕ್ಷವಿರಲಿ " !

ಅಭುಕ್ತೋಕ್ತಿಗಳನ್ನಾಡಬೇಡ. ಕ್ಷವಾಗುಣ ತೊರಿಯಬೇಡ. ನಾನೇ ಹೆಚ್ಚಿನವನೆಂದು ಆತ್ಮಸ್ತುತಿ ಮಾಡಿಕೊಳ್ಳಬೇಡ. ಬಹಳ ದುಡ್ಡು ಅದೆ ಎಂದು ಗರ್ವದಿಂದ ವರ್ತಿಸಬೇಡ. ನನಗೆ ಇಷ್ಟು ರಾಜ್ಯವದೆ, ನಾನೇ ರಾಜನೆಂದು ಹೊಗಳಿಕೊಳ್ಳಬೇಡ. ಯಾಕಂದರೆ, " ಸ್ವದೇಶೇ ಪೂಜ್ಯತೇ ರಾಜಾ, ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬ ನಾಣ್ಣುಡಿಯಂತೆ, ಯಾವಾತನು ನಾನೇ ರಾಜನೆಂದು ಹೊಗಳಿಕೊಳ್ಳುವನೋ ಅವನು ಮಾತ್ರ ಸ್ವದೇಶಿಯವರಿಂದಷ್ಟೇ ಮನ್ನಿಸಲ್ಪಡುವನು. ಆದರೆ ವಿದ್ವಾಂಸನು ಮಾತ್ರ ಸರ್ವಜಜ್ಞರಿಂದ ಮನ್ನಿಸಲ್ಪಡುವನು. ಯಾವನು ತನ್ನ ಗುಣಗಳನ್ನು ತಾನೇ ಹೊಗಳಿಕೊಳ್ಳುತ್ತಾನೋ ಅವನು ಸಜ್ಞನರಿಂದ ಸನ್ಮಾನ್ಯನೆಂದೆಣಿಸಲ್ಪಡುವದಿಲ್ಲ. ಪರಸ್ತ್ರೀಯನ್ನು ಪಾಪ ದೃಷ್ಟಿಯಿಂದ ನೋಡಬೇಡ. ಯಾವಾಗಲೂ ಅಕ್ಕತಂಗಿಯರಂತೇ ನಾವಿಸು. ನಾನು ಮಾಡಿದ್ದೇ ಯೋಗ್ಯವದೆಯೆಂದು ತಿಳಿಯಬೇಡ. ಒಂದು ವೇಳೆ ಅದು ಅಯೋಗ್ಯವಾದರೂ ಇರಬಹುದು. ಇದು ಒಂದು ಸೊಕ್ಕಿನ ದೊಡ್ಡ ಕುಂದು ಆಗುತ್ತದೆ. ಮತ್ತೂ ಇದರಿಂದ ಜನರ ಸ್ನೇಹವು ಮುರಿಯುತ್ತದೆ. ಹಾಗೂ ಮನುಷ್ಯರು ಯಾವಾಗಲೂ ತಪ್ಪಿಲ್ಲದೆ ಇರುತ್ತಾರೆಂದು ಹೇಳಲಿಕ್ಕೆ ಬರುವದಿಲ್ಲ. ಮುಖಸ್ತುತಿ ಮಾಡುವವರ ಸ್ತುತಿಗೆ ಉಬ್ಬಬೇಡ. ಅದು ಶ್ರೀಮಂತ ತನವನ್ನು ಸಹ ಮುಳುಗಿಸುವಂಥ ದೊಡ್ಡ ನೋಸಗಾರಿಕೆ ಇರುತ್ತದೆ. ವಿದ್ವಾಂಸರನ್ನು ಪೂಜಿಸು. ಅವರನ್ನು ಸೌಮ್ರತನದಿಂದ ನಡಿಸಿಕೋ. ಅವರೇ ನಿನ್ನ ನಿಜವಾದ ಮಿತ್ರರು; ಪ್ರತಿಯೊಂದು ವಸ್ತುವಿನಿಂದ, ಪ್ರತಿಯೊಂದು ದೇಶದಿಂದ ಬುದ್ಧಿಸಂಪಾದಿಸು. ನಿನ್ನ ತಪ್ಪುಗಳನ್ನು ತಿದ್ದಿಕೋ. ಮೂರ್ಖರ ಹಾಗೆ ಅಲಂಕಾರ, ಆಹಾರ ಮುಂತಾದ ವಿಷಯಗಳಲ್ಲಿ ಡಂಬ ತೋರಿಸಬೇಡ. ಅಮಲು ಪದಾರ್ಥಗಳಿಗೆ ಆಹುತಿಯಾಗಬೇಡ. ಇಷ್ಟೇ ಅಲ್ಲ ಅಂಥ ಅಭಮರಿಂಗಡಲೂ ಅಡ್ಡಾಡಬೇಡ. ಈ ಮದಪದಾರ್ಥಗಳು ಮನುಷ್ಯನ ರೂಪವನ್ನೂ, ಗುಣಗಳನ್ನೂ ಕಳಿಯುತ್ತವೆ. ಇವಲ್ಲದೆ ಅವು ರೋಗಿಷ್ಠರನ್ನು ಮಾಡಿ, ಸೌಂದರ್ಯವನ್ನು ಸುಟ್ಟು, ಕಟ್ಟಕಡೆಗೆ ಮೃತ್ಯುವಿನ ಕೊನ್ನಾರದಲ್ಲಿ ಹಾಕುತ್ತವೆ. ಹೆಚ್ಚಿನ ಆಹಾರವೂ ದ್ವೇಷ ಮೇಲಿನ ಒಲವೂ ನಿಂದೆಗೆ ಆಶ್ರಯಕೊಡುತ್ತವೆ. ನಿನೇ ನಿನ್ನ ಜ್ಞಾನ ದೃಷ್ಟಿಯಿಂದ ಪರೀಕ್ಷಿಸು. ಎರಡನೆಯವರನ್ನು ಅವಲಂಬಿಸಬೇಡ. ಯಾವಾತನು ತನ್ನ ಲಸವನ್ನು ಮೈಗಳ್ಳನಾಗದೆ ಮಾಡುವನೋ ಅವನು ಕೀರ್ತಿಯನ್ನೂ, ಸೌಖ್ಯವನ್ನೂ ಸೂರಕಿಸುವನು.

**ರಾಮಃ**—ಪ್ರಿಯ ತಾತನೇ ! ನನ್ನ ಕೈಕೆಳಗಿನ ಜನರನ್ನೂ, ಪ್ರಜೆಗಳನ್ನೂ ಯಾವರೀತಿಯಿಂದ ನಡಿಸಿಕೊಳ್ಳಬೇಕೆಂಬದನ್ನು ತಿಳಿಸು.

**ದಶರಥಃ**—ಪ್ರಿಯ ಸುತನೇ ! ಅದನ್ನೇ ಹೇಳುವೆನು ಕೇಳು. ನಿನ್ನ ಕೈಕೆಳಗಿನರ ತಪ್ಪುಗಳನ್ನು ಕ್ಷಮಿಸು. ಅವರ ಸ್ವಲ್ಪ ತಪ್ಪಿನ ಸಲುವಾಗಿ ಹೊರಗೆ ಹಾಕ

ಬೇಡ. ನೀನು ಯಾವಾಗಲೂ ಪ್ರಜೆಗಳನ್ನು ಹೊಟ್ಟೇ ಮಕ್ಕಳಂತೆ ಕಾಪಾಡು, ನಿನ್ನ ಸ್ವಂತ ಸುಖದ ಸಲುವಾಗಿ ಜನರಿಗೆ ದುಃಖಕೊಡಬೇಡ. ಸನ್ಮಾರ್ಗದಿಂದ ಅಗಲಾಡ ಬೇಡ. ದುರ್ಮಾರ್ಗವನ್ನು ಹಿಡಿಯಬೇಡ. ಸದ್ಗುಣಗಳನ್ನು ಸಂಪಾದಿಸು. ಕೀರ್ತಿ ಯನ್ನುಗಳಿಸು. ಜ್ಞಾಪಕಕ್ಕೆ ಬಂದ ವಿಚಾರಗಳನ್ನು ಒಮ್ಮಲೇ ಪ್ರಕಟಿಸದೆ, ಸತ್ಯಾ ಸತ್ಯಗಳನ್ನು ತಿಳಿದು ಹೊರಗೆಡವು. ನ್ಯಾಯವುಳ್ಳ ಮಂತ್ರಿಗಳನ್ನು ನೇಮಿಸು. ರಾಷ್ಟ್ರ ದಲ್ಲಿ ಶಾಂತತೆಯನ್ನು ನೆಲೆಗೊಳಿಸು. ಒಟ್ಟಿನ ಮೇಲೆ ನಾನು ದಾನತಿ ಮಾಡಹೇಳಿದ ಪ್ರತಿಯೊಂದು ಬುದ್ಧಿಯ ಮಾತನ್ನು ಪಾಲಿಸುತ್ತಹೋದರೆ, ಈ ಲೋಕದಲ್ಲಿ ಕೀರ್ತಿ ಯನ್ನೂ, ಪರಲೋಕದಲ್ಲಿ ಸದ್ಗತಿಯನ್ನೂ ಪಡೆಯುವಿ. ಆದ್ದರಿಂದ ಪ್ರಿಯ ಪುತ್ರನೆ “ ಈಶ್ವರಸ್ಯ ಪೂಜಯಾ ಜನಾಃ ಸುಖಮಧಿಗಚ್ಛಂತಿ ” ಎಂಬ ನಾಣ್ಣುಡಿಯಂತೆ “ ಈಶ್ವರನ ಪೂಜೆಯಿಂದ ಜನರು ತೃಪ್ತಿಪಡುವಂತೆ, ನೀನು ತಂದೆ ತಾಯಿಗಳ ಸೇವೆ ಯಿಂದಲೂ, ಪೂಜೆಯಿಂದಲೂ ತೃಪ್ತಿಪಡು, ” ಎಂದು ಹೇಳಿದನು. ಆಗ ಜಗನ್ಮಾನ್ಯ ನಾದ ಶ್ರೀರಾಮಚಂದ್ರನು ತಂದೆಯ ಹೇಳಿಕೆಯಂತೆ ನಡೆದು, ಇಹಪರಗಳಲ್ಲಿ ಅಷ್ಟೈ ಶ್ವರ್ಯಗಳನ್ನೂ, ಸದ್ಗತಿಯನ್ನೂ ಗಳಿಸಿ, ಕೀರ್ತಿಶಾಲಿಯಾಗಿ ಪೋದನು. ಆದ್ದರಿಂದ ನಾವಾದರೂ ನಮ್ಮ ತಂದೆಯ ಆಜ್ಞೆಗಳನ್ನು ಪಾಲಿಸಿ, ಜಗತ್ತಿನಲ್ಲಿ ಸತ್ಕೀರ್ತಿಯನ್ನು ಪಡೆಯಲಿಚ್ಛಿಸುವ.

---

## ಭರತಖಂಡದ ಇತಿಹಾಸದ ಜನ್ಮವೃತ್ತ

### ನೆಲದ ರಚನೆ

ಇನ್ನೂವರೆಗೆ ನಾವು ಇತಿಹಾಸವೆಂದು ಹೆಸರಿಟ್ಟು ಅರಸರ ಜೀವನ ಚರಿತ್ರೆ ಗಳನ್ನು ಮಾತ್ರ ಓದುತ್ತಿರುವೆವು. ಅರಸರ ಚರಿತ್ರಗಳಲ್ಲಿ ಜನಸಾಮಾನ್ಯದ ವೃತ್ತಾಂತವು ಎಷ್ಟು ಮಟ್ಟಿಗೆ ಒಡಮೂಡುವದೋ ಅಷ್ಟೇ ಸಾಕೆಂದು ತಿಳಿದುಕೊಳ್ಳುವೆವು. ಅರಸನೆ ದರೆ ಜನಸಾಮಾನ್ಯದಲ್ಲೊಬ್ಬನು. ಅವನು ನಾಯಕನಾಗಿರಲಿ, ಯಾರೇ ಆಗಿರಲಿ ಅವ ವೃತ್ತಾಂತದಿಂದ ಜನಸಾಮಾನ್ಯದ ಪರಿಚಯವು ನಮಗೆ ಆಗಲಾರದು. ಜನಸಾಮಾ ನ್ಯದ ಇತಿಹಾಸವೇ ನಿಜವಾಗಿ ದೇಶದ ಇತಿಹಾಸವು. ಇನ್ನು ಜನಸಾಮಾನ್ಯದ ಉನ್ನ ತಿಯು ಇಲ್ಲವೆ ಅವನತಿಯು ಹೆಚ್ಚಾಗಿ ದೇಶದ ಪ್ರಾಕೃತಿಕ ಸ್ಥಿತಿಯನ್ನವಲಂಬಿಸಿರು ವದು. ಈ ಕಾರಣದಿಂದ ನಮ್ಮ ಜನನಿಯಾವ ಜನ್ಮಭೂಮಿಯ ಆದಿಕಾಲದ ಇತಿಹಾ ಸವನ್ನು ಸಂಕ್ಷೇಪವಾಗಿಯಾದರೂ ತಿಳಿದುಕೊಳ್ಳುವದು ಒಳ್ಳೆಯದು. ದೇಶದ ಮಣ್ಣು ನೀರುಗಳು ಯಾವ ಕಾಲದಿಂದ ನಮ್ಮನ್ನು ಸಲಹುತ್ತ ಬಂದಿವೆಯೆಂಬುದನ್ನು ಕುರಿತ ವೊದಲು ಒಂದೆರಡು ಮಾತುಗಳನ್ನು ಹೇಳುವೆವು.

---

ಪುವಾಸಿ ಎಂಬ ಬಂಗಾಲಿ ಮಾಸಿಕದೊಳಗಿನ ಲೇಖದ ಆಧಾರದಿಂದ ಬರೆಯಲ್ಪಟ್ಟಿದೆ.
ಪಂಡಿತ ಪೂಜಾರ.

ಭರತಖಂಡದ ದಕ್ಷಿಣ ಭಾಗವು ಈ ಪರೆಗೂ ದ್ವೀಪಕಲ್ಪವೆಂದು ಹೇಳಲ್ಪಡು ತ್ತದೆ; ಈ ಭೂಭಾಗವು ನಮ್ಮ ದೇಶದ ಉತ್ತರ ಭಾಗಕ್ಕಿಂತ ಮೊದಲು ಉಂಟಾಗಿರು ವದು. ಸುಮಾರು ಎರಡುವರೆ ಕೋಟಿ ವರ್ಷಗಳ ಪೂರ್ವದಲ್ಲಿ—ಭೂ ಸೃಷ್ಟಿಯ ಆರಂಭ ಯುಗದಲ್ಲಿ ಈ ನಮ್ಮ ದಕ್ಷಿಣ ಹಿಂದುಸ್ತಾನವು ಉಂಟಾಯಿತು. ಭೂತತ್ವಶಾಸ್ತ್ರದ ಪರಿಚಯವೇ ಇಲ್ಲದವರಿಗೆ ಈ ಮಾತುಗಳೆಲ್ಲ ಕೇವಲ ಕಲ್ಪನೆಯೆಂದು ತೋರಬಹುದು. ಸ್ಪಷ್ಟವಾಗಿ ಭೂತತ್ವಶಾಸ್ತ್ರದ ಅಭ್ಯಾಸವನ್ನು ಮಾಡಲಾರದವರಿಗೆ ಧೈರ್ಯಕೊಟ್ಟು ಹೇಳುವದೇನಂದರೆ—ನಾವು ಶಾಸ್ತ್ರಜ್ಞರಾದ ವಿದ್ವಾಂಸರು ಚೆನ್ನಾಗಿ ಪರಿಶೀಲಿಸಿ ನಿರ್ಣಯಿಸಿದ ಸಿದ್ಧಾಂತಗಳನ್ನೇ ಇಲ್ಲಿ ಹೇಳುತ್ತಿರುವೆವೆಂದು ಅವರು ನಂಬಬೇಕು.

ಮೇಲೆ ಭೂಸೃಷ್ಟಿಯ ವಯಸ್ಸನ್ನು ಹೇಳಿದಲ್ಲಿ ಸಮಗ್ರ ಭೂಗೋಲದ ಸೃಷ್ಟಿ ಯೆಂದು ಯಾರೂ ತಿಳಿದುಕೊಳ್ಳಬಾರದು. ಈ ಭೂಗೋಲವು ತೀರ ಕಡಿಮೆಯೆಂದರೆ ಮೂರುಕೋಟಿ ವರ್ಷಗಳ ಪೂರ್ವದಲ್ಲಿ ಉಂಟಾಗಿದೆ. ಯಾವ ತೇಜೋಮೇಘ (ನೀಹಾರಿಕಾ-ಗೋಲಕ) ದಿಂದ ಪೃಥಿವಿಯು ಉಂಟಾಗಿದೆಯೊ, ಅದು ಎಲ್ಲಕ್ಕೂ ಮೊದಲು ಪೃಥಿವಿಯಾಗಿ ಪರಿಣಮಿಸಿದಾಗ ಮೊದಲಿಗೆ ಪೃಥಿವಿಯ ಕಠಿಣ ಕವಚದ ನಿರ್ಮಾಣವಾಯಿತು. ಅತ್ಯಂತ ಉಷ್ಣತಾಶಾಲಿಯಾದ ತೇಜೋಮೇಘದ ಉಷ್ಣತಾ ಮಾನವು ಸಹಜ ಮಟ್ಟಿಗೆ ಕಡಿಮೆಯಾಗಿ ಯಾವಾಗ ೧೫೭೦° (c) ಆಯಿತೋ ಆಗ ಭೂಮಿಯ ಕಠಿಣ ಕವಚವುಂಟಾಯಿತು. ಬಳಿಕ ಮತ್ತೆ ಉಷ್ಣತೆಯು ತಗ್ಗುತ್ತ ತಗ್ಗುತ್ತ ೩೭೦ ಡಿಗ್ರಿ ಅಂಶಕ್ಕೆ ಬರಲು ಆವಾಗ ಜಲ ( ಸಮುದ್ರದ ) ಸೃಷ್ಟಿಯ ಆರಂಭವು. ಪೃಥಿವಿಯ ಇತಿಹಾಸದಲ್ಲಿ ಜಲಸೃಷ್ಟಿಯಾದ ತರುವಾಯ ಸ್ಥಲಸೃಷ್ಟಿಯಲ್ಲ. (ನೀರಿನ ತರುವಾಯ ಪೃಥಿವಿಯು ಸೃಷ್ಟಿಯೆಂದು ವೇದದಲ್ಲಿ ಹೇಳಿದೆ.)

ಪೃಥಿವಿಯ ಸ್ಥಲ, ಜಲಗಳ ಉತ್ಪತ್ತಿಯುಂಟಾದ ಆದಿಕಾಲದ ವಿವರಣೆಯನ್ನು ಇಲ್ಲಿ ಹೇಳುವದಿಲ್ಲ. ಯಾವಾಗ ಸ್ಥಲ ಜಲಗಳ ವಿಭಾಗ, ಪರಿವರ್ತನ ಇವುಗಳಿಂದ ದೇಶ, ಉಪದೇಶಗಳು ಉಂಟಾಗುತ್ತಿದ್ದವೋ ಆ ಆದಿ ಯುಗದ ( Palaeoozic ) ವೃತ್ತಾಂತವನ್ನು ಹೇಳುತ್ತಿರುವೆವು. ದಕ್ಷಿಣ ಹಿಂದುಸ್ತಾನವು ಉಂಟಾದಾಗ ರಜಪುತಸ್ತಾನವು ಸಮುದ್ರದ ದಂಡೆಯಲ್ಲಿತ್ತು; ಮತ್ತು ಅದರ ದಂಡೆಗುಂಟ ಬಹು ವಿಸ್ತೃತವಾದ ಮತ್ತು ಅತ್ಯುನ್ನತವಾದ ಪರ್ವತಾವಳಿಯು ಹಬ್ಬಿತ್ತು. ಈಗಿನ ಅರವಲಿ ಪರ್ವತಾವಳಿಯು ಆ ಮಹಾಪರ್ವತಾವಳಿಯ ಧ್ವಂಸಾವಶೇಷವು. ಈ ಆದಿ ಯುಗದಿಂದ ಇಲ್ಲಿಯವರೆಗೆ ದಕ್ಷಿಣ ಹಿಂದುಸ್ತಾನದ ಪೂರ್ವದಂಡೆಯು ಬಹುಶಃ ಒಂದೇ ರೀತಿಯಲ್ಲಿದೆ; ವಿಶೇಷವಾದ ಯಾವ ಬದಲಾವಣೆಯೂ ಉಂಟಾಗಿಲ್ಲ. ಆದರೆ ಇದರ ದಕ್ಷಿಣ ಪಶ್ಚಿಮದಿಕ್ಕುಗಳು ಅತಿ ವಿಶಾಲವಾದ ಒಂದು ಮಹಾದೇಶದ ಭಾಗಗಳಾಗಿದ್ದವು, ಮತ್ತು

ಆ ಮಹಾದೇಶವು ಆಫ್ರಿಕದ ದಕ್ಷಿಣ ಮೇರೆಯಿಂದ ಮಲಯು ದೇಶದವರೆಗೆ ಹಿಂದಿ ಮ ಹಾಸಾಗರವನ್ನು ವ್ಯಾಪಿಸಿಕೊಂಡು ಇತ್ತು. ಆ ಯುಗದಲ್ಲಿ ಬಹುಶಃ ಸಮಗ್ರ ಉತ್ತರ ಹಿಂದುಸ್ತಾನ, ಆಫಗಾನಿಸ್ತಾನ, ಈ ಪ್ರದೇಶಗಳನ್ನು ಸಮುದ್ರವು ವ್ಯಾಪಿಸಿತ್ತು.

ಆ ಯುಗದಲ್ಲಿ ಶಂಬೂಕ ಮೊದಲಾದ ಜಾತಿಗಳ ಕೆಲವು ಜೀವಿಗಳೂ ಮೂರು ನಾಲ್ಕುತರದ ಮಾನಗಳೂ, ಕೆಲ ಕೆಲವು ಉಭಯ ( ಜಲಸ್ಥಲ ) ಚರಗಳೂ ಸರೀಸೃಪಗಳೂ ಮಾತ್ರ ಹುಟ್ಟಿದ್ದವು. ಮೇಲ್ತರಗತಿಯ ಸ್ತನ್ಯಪಾಯಿ ( ಸಸ್ತನ ) ಜೀವಿಗಳು ಹುಟ್ಟಿರಲಿಲ್ಲವೆಂಬದಿಷ್ಟೇ ಅಲ್ಲ; ಆಗಿನವರೆಗೆ ಪೃಥಿವಿಯು ಆಕಾಶದಲ್ಲಿ ಹಕ್ಕಿಗಳ ಕೀ ಕಲವಿರಲಿಲ್ಲ; ಸೃಷ್ಟಿಯು ಧ್ಯಾನ ಮಗ್ನವಾಗಿರುವಂತೆ ಮೌನ ವ್ರತವನ್ನವಲಂಬಿಸಿತ್ತು.

ಆ ಬಳಿಕ ಎರಡನೆಯ ಯುಗದ (Mesozoic) ಕೊನೆಯ ಭಾಗದಲ್ಲಿ ಹಿಂದಿ ಮಹಾಸಾಗರದಲ್ಲಿ ವ್ಯಾಪಿಸಿದ್ದ ಮಹಾದೇಶದಿಂದ ದಕ್ಷಿಣಹಿಂದುಸ್ತಾನದ ಪಶ್ಚಿಮ ದಂಡೆಯು ಹೇಗೋ ವಿಚ್ಛಿನ್ನವಾಗಿ ಬೇರೆಯಾದಾಗ ಅಂದರೆ ದಕ್ಷಿಣ ಹಿಂದುಸ್ತಾನವು ಒಂದು ದ್ವೀಪಕಲ್ಪದಂತೆ ಆಗುತ್ತ ನಡೆದಾಗ ಪೃಥಿವಿಯು ಮೇಲೆ ಮನುಷ್ಯನು ಹುಟ್ಟಿರಲಿಲ್ಲ. ಆದರೆ ಈ ಯುಗದಲ್ಲಿ ಅಸಾಮದ ಕೆಲವು ಭಾಗ ಮತ್ತು ಪೂರ್ವ ಹಿಮಾಲಯ ಇವುಗಳಿಗೆ ದಕ್ಷಿಣ ಭೂಭಾಗವು ಹೊಂದಿಕೊಳ್ಳುವದು ಮುಗಿದಿತ್ತು. ಆದರೆ ವಾಯವ್ಯದಿಕ್ಕಿನ ಪ್ರದೇಶ, ಸಿಂಧುವಿನ ಆಚೆಯ ಪ್ರದೇಶ, ಬ್ರಹ್ಮದೇಶ ಇವು ನೀರಲ್ಲಿಯೇ ಮುಳುಗಿದ್ದವು.

ಇದರ ತರುವಾಯ ಮನುಷ್ಯನ ಉತ್ಪತ್ತಿಯಾದ ಮೂರನೆಯ ಯುಗ ( Tertiary ಅಥವಾ Cainozoic ) ದಲ್ಲಿಯೂ ಗಂಗಾ ಸಿಂಧುಗಳ ದಂಡೆಯ ಪ್ರದೇಶಗಳು ಸಂಪೂರ್ಣವಾಗಿ ಉಂಟಾಗಿರಲಿಲ್ಲ. ಈ ಬೆಳೆಯುಳ್ಳ ಪ್ರದೇಶಗಳು ಮನುಷ್ಯ ವಸತಿಗೆ ಯೋಗ್ಯವಾಗುವದಕ್ಕೆ ಇದರ ಮುಂದೆ ಹೆಚ್ಚು ಕಾಲವು ಹಿಡಿಯಲಿಲ್ಲ; ಬಹುಶಃ ಮುಂದೆ ೧೦–೧೨ ಸಾವಿರ ವರ್ಷಗಳು ಹಿಡಿದಿರಬಹುದು. ಪ್ರಾಚೀನಕಾಲದಲ್ಲಿ ನೆಲವು ಉಂಟಾದ ಪ್ರಕಾರವನ್ನು ಸಂಕ್ಷೇಪವಾಗಿ ಹೇಳಿತಷ್ಟೇ, ಇದಕ್ಕೂ ಭರತಖಂಡದ ನಿವಾಸಿಗಳ ಇತಿಹಾಸಕ್ಕೂ ಇರುವ ಸಂಬಂಧವನ್ನು ಹೇಳುವೆವು.

## ಮಾನವೋತ್ಪತ್ತಿ.

ಮಾನವೋತ್ಪತ್ತಿಯಾದ ಮೂರನೆಯ ಯುಗದ ಮಧ್ಯಭಾಗವು ಅತಿಕ್ರಮಿಸಿ ಸುಮಾರು ೧೨ ಲಕ್ಷ ವರ್ಷಗಳಾಗಿ ಹೋಗಿವೆ. ನಮ್ಮ ಪ್ರತಿಒಬ್ಬರ ಶರೀರವು ಈ ಹನ್ನೆರಡು ಲಕ್ಷ ವರ್ಷಗಳಲ್ಲಿ ಕ್ರಮದಿಂದ ಆದ ವಿಕಾಸದ (ಉತ್ಕ್ರಾಂತಿಯ) ಫಲವು. ಪ್ರತಿಒಬ್ಬ ಮನುಷ್ಯನ ಶರೀರವು ೧೨ ಲಕ್ಷ ವರ್ಷಗಳಪರಿಗಿನ ಆವರ್ತನದಿಂದ ಈಗಿನ ಪರಿಪಕ್ವತೆಯನ್ನು ಹೊಂದಿರುವದರಿಂದ ಮುಖಚರ್ಯವನ್ನು ನೋಡಿದಾಗ ಆತನು

ಲ್ಪವಯಸ್ಕನೆಂದು ತೋರಿದರೂ ಅದು ನಿಜವಲ್ಲವೆಂಬದು ಸ್ಪಷ್ಟವದೆ. ಈ ಬಹು ಪ್ರಾಚೀನಕಾಲದ ಮಾನವ ಜಾತಿಯ ಮೂಲೋತ್ಪಾದಕನಾದ ಆದಿ 'ಮನುವು' ಯಾವ ಪುಣ್ಯಸ್ಥಲದಲ್ಲಿ ಹುಟ್ಟಿದನೆಂಬದನ್ನು ಹೇಳುವೆವು.

ಭೂಸ್ತರದೊಳಗಿನ ಅಸ್ಥಿಪಂಜರಗಳನ್ನು ಪರೀಕ್ಷಿಸಿಯೂ ಮನುಷ್ಯನ ಜನ್ಮ ಯುಗದ ಜಲಸನ್ನಿವೇಶ ಸ್ಥಲಸನ್ನಿವೇಶಗಳ ಸ್ಥಿತಿಯನ್ನು ಆಲೋಚಿಸಿಯೂ "ಮಾನವ ತ್ವ"ಜ್ಞರಾದ ಪಂಡಿತರು ಆಫ್ರಿಕಾಖಂಡ ಮತ್ತು ಏಶಿಯದ ಆಗ್ನೇಯ ಭಾಗ ಇವು ಳ ಹೊರತು ಇನ್ನಾವ ಪ್ರದೇಶವೂ ಮಾನವನ ಆದಿ ಜನ್ಮ ಭೂಮಿಯಾಗಿರಲಾರದೆಂ ದನ್ನು ಏಕಮತ್ಯದಿಂದ ಒಪ್ಪಿಕೊಂಡಿದ್ದಾರೆ. ಇದಲ್ಲದೆ ಹಿಮಾಲಯದಿಂದ ಉತ್ತ ರಕ್ಕೆ ಇಲ್ಲವೆ ಹಿಮಾಲಯದಿಂದ ಉತ್ತರ ಆಫ್ರಿಕದವರಗೆ ಎಳೆದ ರೇಖೆಯ ಉತ್ತರಕ್ಕೆ ನೆಯ ಯುಗದ ಮಧ್ಯಕಾಲದಲ್ಲಿ ಎಲ್ಲಿಯೂ ಮಾನವ ಶಿಶುವಿನ ಜನನ ಶಯ್ಯೆಯು ಕಾಸಿರಲಾರದೆಂಬದು ಸಿದ್ಧವಾಗಿದೆ.

ಸುಮಾರು ೫೦ ವರ್ಷಗಳ ಪೂರ್ವದಲ್ಲಿ ಸುಪ್ರಸಿದ್ಧ ವಿದ್ವಾಂಸನಾದ ಡಾರ್ವಿ ನ್ನನು ಅತಿ ಸೂಕ್ಷ್ಮವಾಗಿ ಆಲೋಚಿಸಿ ಆಫ್ರಿಕದ ದಕ್ಷಿಣ ಭಾಗದಲ್ಲಿ ಮಾನವನ ಪ್ರಥ ಮ ಜನ್ಮವು ಆಗಿರಬಹುದೆಂದು ಹೇಳಿರುವನು. ಬೇರೆಕಡೆಗೆ ಮಾನವನ ಪ್ರಥಮ ಜನ್ಮವು ಶಕ್ಯವಿಲ್ಲವೆಂದು ಆತನಿಗೆ ಕಂಡುಬಂದಿತು. ದಕ್ಷಿಣ ಆಫ್ರಿಕದ ಸ್ವಲ್ಪ ವಿಸ್ತಾ ರವುಳ್ಳ ಪ್ರದೇಶದಲ್ಲಿ ಮನುಷ್ಯನ ಅತಿ ಶೈಶವ ಯುಗದ ಹಬ್ಬುಗೆಯಾಗುವದು ಶಕ್ಯ ವಿರಲಿಲ್ಲವೆಂಬುದೂ ಹಿಂದುಸ್ತಾನದ ದಕ್ಷಿಣ ಭಾಗಕ್ಕೆ ಹೊಂದಿ ಅತಿ ವಿಸ್ತೃತವಾದ ಮಹಾದೇಶವು ಆಫ್ರಿಕದ ದಕ್ಷಿಣಮೇರೆಯಿಂದ ಮಲೇಶಿಯದವರೆಗೆ ಹಬ್ಬಿತ್ತೆಂಬದೂ, ಮಲೇಶಿಯದಿಂದ ಅದು ಬೇರೆವಿಕ್ಕಿಗೆ ಆಸ್ಟ್ರೇಲಿಯದವರೆಗೆ ಹಬ್ಬಿತ್ತೆಂಬದೂ ಆಗ ಗೊತ್ತಾ ಗಿದ್ದರೆ ಆದಿಮಾನವನ ಜನ್ಮ ಕ್ಷೇತ್ರವನ್ನು ಗೊತ್ತು ಹಿಡಿಯುವದಕ್ಕೆ ಅತನಿಗೆ ವಿಲಂಬ ವಾಗುತ್ತಿರಲಿಲ್ಲ. ಈಗ ಹೇಳಿದ ಮಹಾದೇಶವೇ ಮಾನವನ ಆದಿಜನ್ಮ ಭೂಮಿಯೆಂಬ ದನ್ನು ಒಪ್ಪುವದಕ್ಕೆ ಅನುಕೂಲವಾದ ಹಲವು ಸಂಗತಿಗಳುಂಟು. ಶಾಸ್ತ್ರಜ್ಞರು ತೋರಿ ಸಿದ ಪ್ರಮಾಣಗಳನ್ನು ಇಲ್ಲಿ ಅವತರಿಸುವದರಿಂದ ವಿಷಯವು ಕಠಿಣವಾಗುವದರಿಂದ ಇಲ್ಲಿ ಸಹಜವಾಗಿ ತಿಳಿಯಬಹುದಾದ ಒಂದು ಯುಕ್ತಿಯನ್ನು ತೋರಿಸುವೆವು.

ವೈವಸ್ವತಮನುವಿಗಿಂತ ಯುಗಾನು ಯುಗಗಳಿಂದ ಪ್ರಾಚಿನನಾದ, ಮಾನವಮ ಶದ ಆದಿ ವಿಸ್ತಾರ ಕರ್ತನಾದ ಅತಿವೃದ್ಧ ಮನುವಿನ ಕಾಲದ ಮನುಷ್ಯರು ಫಲಾಹಾರಿ ಗಳಾದದರಿಂದ ಅವರಿಗೆ ಒಬ್ಬೊಬ್ಬರಸಲುವಾಗಿ ಹೆಚ್ಚು ವಿಸ್ತಾರವಾದ ಪ್ರದೇಶವು ಬೇಕಾಗಿತ್ತು. ಅವರಿಂದ ಮನುಷ್ಯರ ತಂಡಗಳು ದೊಡ್ಡವಾಗುತ್ತ ಹೋಗಲು ಆಹಾ ರದ ವ್ಯವಸ್ಥೆಗಾಗಿ ಅವು ಮೂಲನಿವಾಸಸ್ಥಾನವನ್ನು ಬಿಟ್ಟು ದೂರದೂರಕ್ಕೆ ಹೋಗ ಹತ್ತಿದವು. ದೂರದೂರಕ್ಕೆ ಹೋದ ತಂಡಗಳು ಹೊಸ ಪ್ರದೇಶದಲ್ಲಿ ಹೆಚ್ಚಾದ

ಆಹಾರ ಪದಾರ್ಥಗಳನ್ನು ಸಂಪಾದಿಸಿ ಹೆಚ್ಚಾಗಿ ಬೆಳವಣಿಗೆಯನ್ನು ಹೊಂದಿದವು. ಜನ್ಮಸ್ಥಳವನ್ನು ಬಿಟ್ಟು ಹೋಗದ ತಂಡಗಳು ನಿಶ್ಚಯವಾಗಿ ಬೆಳವಣಿಗೆಯನ್ನು ಹೊಂದಿರಲಾರವು. ಧ್ರುವವನ್ನು ಬಿಟ್ಟು ಅಧ್ರುವವನ್ನು ಹಿಡಿಯದಿರುವದು ಮನುಷ್ಯ ಸ್ವಭಾವವು. ಅವದರಿಂದ ಮನುಷ್ಯನು ಅನಾದಿಕಾಲದಿಂದ ಇದ್ದದ್ದನ್ನು ಕಾದುಕೊಳ್ಳುವದಕ್ಕೆ ಹವಣಿಸುತ್ತಿರುತ್ತಾನೆ. ಶಕ್ಯವಿದ್ದಮಟ್ಟಿಗೂ ಜೀವನಕ್ಕಾಗಿ ಹೋರಾಡುತ್ತ ಹಲವು ಜನರು ಜನ್ಮಭೂಮಿಯಲ್ಲಿಯೇ ವಾಸಮಾಡಿರಬಹುದು. ಹೀಗೆ ಜನ್ಮಭೂಮಿಯಲ್ಲಿ ವಾಸಮಾಡಿದ ಮನುಷ್ಯರ ತಂಡಗಳು ಶಾರೀರಿಕ ಮಾನಸಿಕ ಉನ್ನತಿಯನ್ನು ಅಷ್ಟುಮಟ್ಟಿಗೆ ಹೊಂದಿರಲಾರವೆಂದು ಊಹಿಸಬಹುದು.

ಮೇಲೆ ಹೇಳಿದ ಈ ಮಾತನ್ನು ಲಕ್ಷದಲ್ಲಿಟ್ಟುಕೊಂಡು ಸ್ವೀಕರಿಸಿದರೆ ಒಂದು ಕಾಲದಲ್ಲಿ ಹಿಂದೀ ಮಹಾಸಾಗರದಲ್ಲಿ ಹಬ್ಬಿದ ಮಹಾದೇಶದಲ್ಲಿ ಮನುಷ್ಯನು ಮೊದಲು ಹುಟ್ಟಿದನೆಂಬ ಮಾತು ಕೂಡುತ್ತದೆಯೋ ಇಲ್ಲವೋ ನೋಡಿರಿ. ಮೇಲೆ ಉಲ್ಲೇಖಿಸಿದ ಮಹಾದೇಶವು ಈಗ ಮಹಾಸಾಗರದಲ್ಲಿ ಮುಳುಗಿ ಹೋಗಿದೆ. ಆಫ್ರಿಕದ ದಂಡೆಯಿಂದ ಮಲೇಶಿಯದವರೆಗೆ ಆ ಮಹಾದೇಶದ ಅವಶೇಷಗಳಾಗಿ ಕೆಲವು ಸಣ್ಣ ಸಣ್ಣ ದ್ವೀಪಗಳು ಈಗ ಉಳಿದಿವೆ. ಈ ದ್ವೀಪಗಳಲ್ಲಿ ವಾಸಿಸುವ ಮೂಲ ನಿವಾಸಿಗಳಿಲ್ಲ ಬಹುಶಃ ದಕ್ಷಿಣ ಆಫ್ರಿಕದ ನಿಗ್ರೋ ಜನರನ್ನು ಹೋಲುವರು. ಶರೀರದ ಹೋಲಿಕೆಯಷ್ಟೇ ಅಲ್ಲ; ಅವರ ಅನೇಕ ಪಂಗಡಗಳಲ್ಲಿ ಪರಸ್ಪರ ಭಾಷೆಯಲ್ಲಿಯೂ ಹಲವು ಹೋಲಿಕೆಗಳು ಕಂಡುಬರುವವು.

ದ್ವೀಪಗಳು ದೂರದೂರಕ್ಕಿವೆ. ಅವುಗಳ ನಡುವೆ ದುರ್ಲಂಘ್ಯವಾದ ಅಗಾಧ ಮಹಾಸಾಗರವು ಬಹುಕಾಲದಿಂದ ನೆಲಸಿದೆ. ಆದರೂ ಪರಸ್ಪರ ಸಂಬಂಧವಿಲ್ಲದಂತೆ ಇದ್ದ ಈ ದ್ವೀಪಗಳ ಜನಾಂಗಗಳಲ್ಲಿ ಆಕೃತಿ ಭಾಷೆಗಳ ಹೋಲಿಕೆಯು ಹೇಗೆ ಬಂದಿತೆಂಬದನ್ನು ಆಲೋಚಿಸಬೇಕು. ಒಂದಾನೊಂದು ಕಾಲದಲ್ಲಿ ಈ ಜನಾಂಗಗಳು ಒಂದೇ ಪ್ರದೇಶದಲ್ಲಿ ವಾಸಮಾಡಿದ್ದರೆ ಮಾತ್ರ ಈ ಹೋಲಿಕೆಗಳು ಶರೀರದಲ್ಲಿಯೂ ಮನಸ್ಸಿನಲ್ಲಿಯೂ ರೂಢಮೂಲವಾಗಿ ನೆಲಸಬಹುದು. ಭೂಪ್ರಲಯಕಾಲವಲ್ಲಿ ಆ ಮಹಾದೇಶವು ನಾಶಹೊಂದುತ್ತಿರುವಾಗ ನಿಗ್ರೋ ಅಥವಾ ನಿಗ್ರೋಗಳಂಥ ಬಹು ಜನ ನಿವಾಸಿಗಳು ಓಡಿ ಹೋಗಿ ಉತ್ತರಕ್ಕಿರುವ ಬೇರೆ ಬೇರೆ ದೇಶಗಳಲ್ಲಿ ನೆಲಸಿರಬಹುದು ಈ ಕಾರಣದಿಂದಲೇ ಅಗಾಧ ಮಹಾಸಾಗರದ ನಡುವೆ ದೂರ ದೂರದಲ್ಲಿ ಒಂದಕ್ಕೊಂದು ಹೋಲಿಕೆಯುಳ್ಳ ಜನಾಂಗಗಳು ವಾಸವಾಗಿರುವದು ಸಂಭವವಾಗಿ ತೋರುತ್ತದೆ.

ಮೂಲನಿವಾಸದಿಂದ ಓಡಿ ಹೋಗಿ ಸಮೀಪದ ಪ್ರದೇಶಗಳಲ್ಲಿ ಸೇರಿಕೊಂಡ ಜನರು ನಿಗ್ರೋಗಳನ್ನು ಹೋಲುತ್ತಿದ್ದರೆಂಬದಕ್ಕೆ ಪ್ರಮಾಣಗಳುಂಟು. ಈ ವಿಷಯದಲ್ಲಿಯೂ ಸಹಜವಾಗಿ ಕಂಡು ಬರುವ ಒಂದು ಮಾತನ್ನು ಹೇಳುವೆವು. ಭರತಖಂಡದ ಕೋಲ ಎಂಬ ಜಾತಿಯ ಜನರು ಇತರ ಜಾತಿಗಳ ಸಂಸರ್ಗದಿಂದ ಬಹುಮಟ್ಟಿಗೆ

ನ್ಟಗೆ ಪರಿವರ್ತನ ಹೊಂದಿರುವರೆಂಬದೇನೋ ನಿಜ. ಆದರೆ ಈಗಲೂ ಅವರು ಕೇ
ಕೆಲವು ವಿಷಯಗಳಲ್ಲಿ ನಿಗ್ರೋಗಳನ್ನು ಹೋಲುವರೆಂದು ತೋರಿಬರುವದು. ಕೋಲಃ
ಭಾಷೆಯು ಮೂಲಸ್ವರೂಪದಲ್ಲಿ ಇವರಿಗೆ ಏನೂ ಸಂಬಂಧವಿಲ್ಲದ, ಮತ್ತು ಇವರಿಗೆ ಅಪ
ರಿಚಿತರಾದ ಆಸ್ಟ್ರೇಲಿಯದ ಮೂಲನಿವಾಸಿಗಳ, ಮತ್ತು ಹಿಂದಿ ಮಹಾಸಾಗರದೊಳಗಿನ
ದ್ವೀಪ ಸಮುದಾಯದ ಮೂಲ ನಿವಾಸಿಗಳ ಭಾಷೆಯನ್ನು ಹೋಲುವದೆಂದು ಭಾಷಾ
ಶಾಸ್ತ್ರಜ್ಞರು ಕಂಡುಹಿಡಿದಿರುವರು. ಈ ಹೋಲಿಕೆಗಳ ಮೇಲಿಂದ ಒಂದು ಬಹು
ವಿಸ್ತೀರ್ಣವಾದ ಮಹಾದೇಶವು ಹಿಂದಿ ಮಹಾಸಾಗರದಲ್ಲಿತ್ತೆಂಬದನ್ನೂ ಅಲ್ಲಿ ಮನು
ಷ್ಯನು ಮೊದಲು ಹುಟ್ಟಿದನೆಂಬದನ್ನೂ ಪಾತಕರು ನಂಬಲು ಅಡ್ಡಿಯಿಲ್ಲ. ಯವದ್ವೀಪ
(ಜಾವಾ)ದಲ್ಲಿ ಸಿಕ್ಕಿರುವ ಪ್ರಾಚೀನ ಯುಗದ ಅಸ್ಥಿಪಂಜರವು ಅಂಶವು ಪ್ರಾಥಮಿಕ
ಮನುಷ್ಯನ ಅಸ್ಥಿಪಂಜರವೆಂದು ನಿರ್ಣಯಿಸಲ್ಪಟ್ಟಿದೆ.

ಇಲ್ಲಿ ಕೆಲವರು ಹೀಗೆ ಆಕ್ಷೇಪಿಸಬಹುದು:—ಒಂದು ವಿಸ್ತೀರ್ಣವಾದ ಮಹಾದೇ
ಶದಲ್ಲಿ ನಿಗ್ರೋಜನರ ಸೃಷ್ಟಿಯು ಮೊದಲು ಆಗಿರಬಹುದು, ಮತ್ತು ಭೂಪ್ರಳಯದಲ್ಲಿ
ಅವರ ಕೆಲ ಕೆಲವು ತಂಡಗಳು ಬೇರೆ ಬೇರೆ ದ್ವೀಪಗಳಲ್ಲಿ ವಾಸಮಾಡಿರಬಹುದು; ಅವು
ಗಳಲ್ಲಿ ಕೆಲವು ತಂಡಗಳು ಭರತಖಂಡ ಮೊದಲಾದ ದೇಶಾಂತರಗಳಲ್ಲಿಯೂ ಸೇರಿರ
ಬಹುದು. ಆದರೆ ಒಂದಾನೊಂದು ಕಾಲದಲ್ಲಿ ಹಿಂದೀ ಮಹಾಸಾಗರದೊಳಗಿನ
ಮಹಾದೇಶದಲ್ಲಿ ಹುಟ್ಟಿದಂಥ, ಆದಿಕಾಲದ ಶರೀರ ಲಕ್ಷಣಗಳುಳ್ಳ ಜನರು ಉಳಿದ ದೇಶ
ಗಳ ಜನರೊಡನೆ ಸಂಪರ್ಕವಿಲ್ಲದೆ ಅವರಿಂದ ಭಿನ್ನರಾಗಿ ಹುಟ್ಟಿರಬಹುದಲ್ಲವೇ ? ಅಂ
ದರೆ ಆಕ್ಷೇಪಕರು ಕೇಳುವದೇನೆಂದರೆ–ಭಿನ್ನ ಭಿನ್ನ ದೇಶಗಳಲ್ಲಿ ( ಕೆಲವು ಆಫ್ರಿಕದ ದಕ್ಷಿ
ಣದಲ್ಲಿ ಕೆಲವು ಭರತಖಂಡದಲ್ಲಿ ) ಮಾನವ ಸೃಷ್ಟಿಯು ಆಗಿಲ್ಲವೆಂಬುದಕ್ಕೆ ಪ್ರಮಾಣ
ವೇನು ? ಈ ವಿಷಯದಲ್ಲಿ ಒಂದು ಸಣ್ಣ ಶಾಸ್ತ್ರೀಯ ಕಾರಣವನ್ನು ಹೇಳಬಹುದು.
ಮನುಷ್ಯರೆಲ್ಲರು ಒಂದೇ ಜಾತಿ ಇಲ್ಲವೆ ಪಂಗಡವು (Species); ಅಂದರೆ ಒಂದೇ
ಆದಿ ಮನುಷ್ಯ ಶರೀರದಿಂದ ಎಲ್ಲ ಮನುಷ್ಯರ ಸೃಷ್ಟಿಯಾಯಿತೆಂಬದಕ್ಕೆ ಬಲವತ್ತರ
ವಾದ ಪ್ರಮಾಣವು ಯಾವದೆಂದರೆ ಬೇಕಾದ ಒಂದು ದೇಶದ ಮನುಷ್ಯನಿಗೂ ಇನ್ನೊಂದು
ಯಾವದೊಂದು ದೇಶದ ಮನುಷ್ಯನಿಗೂ ವಿವಾಹವಾದ ಬಳಿಕ ಸಂತಾನವು ಹುಟ್ಟುವದು;
ಈ ಸಂತಾನವು ಮತ್ತೆ ತಮ್ಮೊಳಗಿನ ಅಥವಾ ಬೇರೆ ಪಂಗಡದ ಮನುಷ್ಯನೊಡನೆ ವಿವಾಹ
ಮಾಡಿಕೊಳ್ಳಲು ಆಗಲೂ ಅವರ ವಂಶ ವೃದ್ಧಿಯಾಗುವದಕ್ಕೆ ಯಾವ ವಿಘ್ನವೂ ಇಲ್ಲ.
ಯಾವದೊಂದು ಜೀವವು ಒಂದು ವರ್ಗಕ್ಕೆ ( Gens ) ಸೇರಿದ್ದಾಗಿದ್ದರೆ ಅದು
ಜಾತಿ. ಇಲ್ಲವೆ ಪಂಗಡ ( Species ) ಈ ದೃಷ್ಟಿಯಿಂದ ಭಿನ್ನವಾಗಿದ್ದರೆ ಮೊದಲು
ಆ ಜೀವಗಳ ವಿವಾಹವಾಗಲು ಸಂತಾನೋತ್ಪತ್ತಿಯಾಗುವದಿಲ್ಲ. ಒಂದು ಜಾತಿಯು
(Species) ಬೇರೆ ಜಾತಿಯೊಡನೆ ಅತ್ಯಂತ ನಿಕಟ ಸಂಪರ್ಕದಿಂದ ಕೂಡಿದ್ದರೂ ಅವು
ಗಳ ಪರಸ್ಪರ ಸಂಯೋಗದಿಂದ ಉಂಟಾಗುವ ಸಂತಾನವು ಸಂತಾನೋತ್ಪಾದಕ ಶಕ್ತಿ

ಯಿಲ್ಲದ್ದಾಗುವದು. ಸಮಗ್ರ ಮಾನವ ಜಾತಿಯು ಮೂಲತಃ ಒಂದೇ ಎಂದು ಒಪ್ಪಿದರೆ ನಿಗ್ರೋಜಾತಿಯವರೂ ನಾವೂ ಮೂಲತಃ ಒಂದೇ ಎಂದು ಒಪ್ಪಬೇಕಾಗುವದು. ಹಾಗಾದರೆ ಕೊನೆಯಲ್ಲಿ ಹೇಳಿದ ಜಾತಿಯು ಹುಟ್ಟಿದ ಪ್ರದೇಶವೇ ನಮ್ಮ ಪಿತೃಲೋಕವೆಂದು ಒಪ್ಪಿಕೊಳ್ಳಬೇಕಾಗುವದು.

ಪ್ರಥಮ ಉತ್ಪತ್ತಿ ಯುಗದಲ್ಲಿ ಮನುಷ್ಯನು ಸ್ಥಲಮಾರ್ಗದಿಂದ ಭರತಖಂಡದಲ್ಲಿ ಪ್ರವೇಶಿಸಿರಬಹುದು, ಈ ಮಾತನ್ನು ಭೂರಚನೆಯ ವರ್ಣನೆಯಿಂದ ತಿಳಿದುಕೊಳ್ಳಬಹುದು. ಹಿಂದುಸ್ತಾನದಲ್ಲಿ ಪ್ರವೇಶಿಸಿದ ಬಳಿಕ ಸಮಗ್ರ ದಕ್ಷಿಣ ಹಿಂದುಸ್ತಾನವನ್ನು ವ್ಯಾಪಿಸಿರಬಹುದು. ಮತ್ತು ಈಶಾನ್ಯಕ್ಕೆ ಭೋಟಾನಾಗಪೂರ, ಮತ್ತು ರಾಜಮಹಾಲಗುಡ್ಡ ಈ ದಾರಿಗುಂಟ ಅಸಾಮದ ಕೆಲಭಾಗದಲ್ಲಿ ಖಾಸಿಯಾ ಗುಡ್ಡಗಳವರೆಗೆ ವ್ಯಾಪಿಸಿರಬಹುದು. ವಾಯವ್ಯದಿಕ್ಕಿನ ಪ್ರದೇಶವು ಹೊಸಮಣ್ಣಿನಿಂದ ಬೆಳೆಯಲ್ಪಟ್ಟ ಪ್ರದೇಶವಾಗಿ ಪರಿಣಮಿಸಿದ ಬಳಿಕ ಆ ಪ್ರದೇಶವನ್ನು ವ್ಯಾಪಿಸಿದ ದೈವಶಾಲಿಗಳು ಭರತಖಂಡದ ಮೇರೆಯನ್ನು ದಾಟಿ ಮುಂದೆ ಹೋಗಿರಲಾರರು. ಯಾಕಂದರೆ ಸಮುದ್ರದ ಹೆಸರನ್ನು ಹೊಂದಿದ ಸಿಂಧುನದವು ಆಗ ಬಹುಶಃ ಸಮುದ್ರದಷ್ಟು ದುರ್ಲಂಘ್ಯವಾಗಿರಬಹುದು, ಮತ್ತು ವಾಯವ್ಯದ ಪರ್ವತಾವಳಿಯು ದಾಟಬಾರದಷ್ಟು ಎತ್ತರವಾದ ಪ್ರಾಕಾರದಂತೆ ಇರಬಹುದು.

ಮೇಲೆ ಹೇಳಿದ ಮಾತುಗಳನ್ನೆಲ್ಲ ವಿಚಾರ ಮಾಡಿದ ಬಳಿಕ ಮನುಷ್ಯನ ಪ್ರಥಮ ಪರಿಭ್ರಮಣಯುಗದಲ್ಲಿ ಭರತಖಂಡಕ್ಕೆ ಬಂದ ಜನರು ಯಾವಾಗ ಬಂದರು? ಅವರದೇನಾಯಿತು ? ಅವರು ಎಲ್ಲಿ ಹೋದರು ? ಈ ಕಾಲದ ಆರ್ಯ ವಂಶಜರಿಗೂ ದ್ರವಿಡ ವಂಶಜರಿಗೂ ಆ ಆದಿಕಾಲದ ಮಾನವ ಸಂಬಂಧವುಂಟೋ ಇಲ್ಲವೋ ಇವನ್ನು ವಿಚಾರ ಮಾಡಬೇಕು.

ನಾವು ಹೇಳಿದ್ದೇನಂದರೆ:—ಮನುಷ್ಯನ ಆದಿ ಪಿತೃಲೋಕವು ಈಗ ಬಹಳ ಮಟ್ಟಿಗೆ ಸಮುದ್ರದಲ್ಲಿ ಮುಳುಗಿದೆ. ಸಮುದ್ರಲ್ಲಿ ಮುಳುಗಿದ ಆ ಪಿತೃಗಳ ಅಸ್ಥಿಗಳ ಮೇಲೆ ಭರತಖಂಡದ ಗಂಗಾ ಪ್ರವಾಹವು ಈಗಲೂ ತರ್ಪಣೋದಕವನ್ನು ಹರಿಯಿಸುತ್ತಿರುವದು. ನಾವೂ ಆ ಪಿತೃಲೋಕದ ವಿಷಯವಾಗಿ ಭಕ್ತಿವಂತರಾಗಿ ಭರತಖಂಡದ ಪ್ರಾಚೀನ ಜನಾಂಗಗಳ ಮೂಲವನ್ನು ಕುರಿತು ವಿಚಾರ ಮಾಡುವದಕ್ಕೆ ತೊಡಗುವ.

## ೩ ಭರತಖಂಡದಲ್ಲಿ ಮಾನವರ ಪ್ರಸಾರ

ಮಾನವರ ಉತ್ಪತ್ತಿಸ್ಥಾನದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿದೆವು. ಈ ವಿಷಯಲ್ಲಿ ಶಾಸ್ತ್ರಜ್ಞರು ನಿರ್ಣಯಿಸಿವ ವಿಷಯಗಳ ಪರಿಶೀಲನೆಯನ್ನೇನೂ ಮಾಡದವರು ಇವೆಲ್ಲ ಕಲ್ಪನಾತರಂಗಗಳೆಂದು ಅನ್ನಬಹುದು. ಅವರು ಹಾಗೆ ಅಂದರೂ ಅಡ್ಡಿಯಿಲ್ಲ. ಮನುಷ್ಯನ ಪ್ರಥಮೋತ್ಪತ್ತಿಯು ಎಲ್ಲಿಯಾದರೂ ಆಗಲಿ, ಬಹು ಪ್ರಾಚೀನ

ಕಾಲದಿಂದಲೇ ಭರತಖಂಡವು ಮನುಷ್ಯನ ವಾಸಭೂಮಿಯಾಗುತ್ತ ಬಂದಿದೆಯೆಂ ಬುದನ್ನು ಒಪ್ಪಲೇ ಬೇಕು. ಈ ಮಾತನ್ನು ಸಹಜವಾಗಿ ಸಿದ್ಧಮಾಡಬಹುದು.

ಕನಿಷ್ಠಪಕ್ಷ ೭ ಲಕ್ಷ ವರ್ಷಗಳ ಪೂರ್ವದ ಯುಗದಲ್ಲಿ (Pliocene)ನಿರ್ಮಾಣವಾದ ಭೂಸ್ತರದಲ್ಲಿ ಹಲವು ಅಸ್ಥಿಪಂಜರಗಳು ಹಲವೆಡೆಗಳಲ್ಲಿ ದೊರತಿವೆ. ಇದೇ ಯುಗದ ಅಸ್ಥಿಪಂಜರಗಳು ಭರತಖಂಡದ ಭೂಸ್ತರಗಳಲ್ಲಿ ಇವೆಯೋ ಇಲ್ಲವೋ ತಿಳಿಯದು. ಆದರೆ ಮನುಷ್ಯನು ಎಲ್ಲ ದೇಶಗಳಲ್ಲಿ ಹಬ್ಬಿದ (Quaterary) ೪ ನೆಯ ಅಂದರೆ ಹೊಸ ಯುಗದ ಭೂಸ್ತರಗಳಲ್ಲಿಯು ಅಸ್ಥಿಪಂಜರಗಳು ಭರತಖಂಡದಲ್ಲಿ ದೊರೆತಿವೆ. ಈ ಯುಗವು ಹೋಗಿ ಸುಮಾರು ೬ ಲಕ್ಷ ವರ್ಷಗಳಾದವು. ಈ ಕಾಲದಲ್ಲಿ ದಕ್ಷಿಣಹಿಂದುಸ್ತಾನವು ನಡುವೆ ಸಮುದ್ರವಿದ್ದುದರಿಂದ ಏಶಿಯದ ಇತರ ಭಾಗಗಳಿಂದ ಸಂಪೂರ್ಣವಾಗಿ ಬೇರೆಯಾಗಿತ್ತೆಂದೂ, ಆಗ ದಕ್ಷಿಣ ಹಿಂದುಸ್ತಾನದೊಡನೆ ಒಂದು ಕಡೆ ಮಾದಾಗಾಸ್ಕರವೂ ಇನ್ನೊಂದು ಕಡೆಗೆ ಮಲಯ ದ್ವೀಪ ಸಮುದಾಯವೂ ಸಂಪೂರ್ಣವಾಗಿ ಹೊಂದಿಕೊಂಡಿತ್ತೆಂದೂ ಭೂಶಾಸ್ತ್ರಜ್ಞರು ಹೇಳುವರು. ಈ ಹೊಸ ಯುಗದ ಪಾಷಾಣಾಯುಧಗಳನ್ನು ಧರಿಸಿದ ಮನುಷ್ಯರು (Palacol thic Man) ಭರತಖಂಡದಲ್ಲಿ ಸಂಚರಿಸುತ್ತಿದ್ದಾಗಲೂ ಭರತಖಂಡದ ಆಗ್ನೇಯ ಮತ್ತು ನೈಋತ್ಯ ಪ್ರದೇಶಗಳೊಡನೆ ಅವರ ಸಂಪರ್ಕವು ಎಷ್ಟು ಮಟ್ಟಿಗೆ ಇತ್ತೋ ಅಷ್ಟು ಮಟ್ಟಿಗೆ ಭರತಖಂಡದ ಉತ್ತರ ಭಾಗದ ಎಲ್ಲ ಪ್ರದೇಶದೊಡನೆ ಅವರ ಸಂಪರ್ಕವು ಇರಲಿಲ್ಲ. ಆಗ ಹಿಮಾಲಯದ ಉತ್ತರದಲ್ಲಿ ಮತ್ತು ವಾಯವ್ಯದಲ್ಲಿ ಭರತಖಂಡದವರ ಸಂಚಾರವು ಅಸಂಭವವಾಗಿತ್ತೆಂಬದೂ ಸರ್ವ ಸಮ್ಮತವಾಗಿದೆ.

ವೇದದಲ್ಲಿ ಐತಿಹಾಸಿಕ ಯುಗದ ನಾಗರಿಕತೆಯ ಅಂಶಗಳನ್ನು ಕಾಣುವೆವಷ್ಟೇ; ಭರತಖಂಡದಲ್ಲಿ ಈ ಯುಗವು ೪—೫ ಸಾವಿರ ವರ್ಷಗಳಿಗಿಂತ ಪೂರ್ವದ್ದಲ್ಲವೆಂದು ಹಲ ಕೆಲವರು ಊಹಿಸುತ್ತಾರೆ. ಈಜಿಪ್ತದೇಶದಲ್ಲಿ ಈ ಐತಿಹಾಸಿಕ ಯುಗವು ಬಹುಶಃ ೧೦ ಸಾವಿರ ವರ್ಷಗಳ ಪೂರ್ವದಲ್ಲಿ ಆರಂಭವಾಗಿರುವದೆಂದು ಪ್ರಮಾಣಗಳು ದೊರೆತಿವೆ. ಭರತಖಂಡದಲ್ಲಿಯೂ ಈ ಐತಿಹಾಸಿಕ ಯುಗವು ೧೦ ಸಾವಿರ ವರ್ಷಗಳ ಪೂರ್ವದ್ದೆಂದು ತಿಳಿದದ್ದಾದರೆ ಪ್ರಾಚೀನತ್ವದ ಅತಿ ಪಕ್ಷಪಾತಿಗಳಿಗೂ ಕೂಡ ವಿರುದ್ಧವಾಗಿ ಹೇಳಬೇಕಾದದ್ದೇನೂ ಉಳಿಯುವದಿಲ್ಲ.

ಇನ್ನು ಕನಿಷ್ಠಪಕ್ಷ ೫ ಲಕ್ಷ ವರ್ಷಗಳ ಪೂರ್ವದಲ್ಲಿ, ಅಂದರೆ ಮನುಷ್ಯನು ನಾಗರಿಕತೆಯನ್ನು ಹೊಂದುವದಕ್ಕಿಂತ ಬಹುಕಾಲ ಮುಂಚೆ ಭರತಖಂಡದಲ್ಲಿ ಮನುಷ್ಯ ವಸತಿಯಿತ್ತೆಂದು ಕಂಡುಹಿಡಿಯಲ್ಪಟ್ಟಿದೆ. ಆ ಅತಿಪ್ರಾಚೀನ ಕಾಲದಲ್ಲಿ ಭರತಖಂಡದಲ್ಲಿ ಸಂಚರಿಸುತ್ತಿದ್ದ, ಪಾಷಾಣಾಯುಧಗಳಿಂದ ಸ್ವಸಂರಕ್ಷಣವನ್ನು ಮಾಡಿಕೊಳ್ಳುತ್ತಿದ್ದಂಥ ಆ ಕಾಡು ಜನರಿಗೂ ನಮಗೂ ಎನಾದರೂ ಸಂಪರ್ಕವು ಉಂಟೋ ಇಲ್ಲವೋ ಎಂಬದನ್ನು ಈಗ ವಿಚಾರಿಸುವ.

ಐತಿಹಾಸಿಕಯುಗವು ಆರಂಭವಾಗುವದಕ್ಕೆ ಮುಂಚೆ ಅಂದರೆ ೧೦ ಸಾವಿ
ವರ್ಷಗಳ ಪೂರ್ವದಲ್ಲಿ ೬೦ ಸಾವಿರ ವರ್ಷಗಳ ಅವಧಿಯುಷ್ಟು ಇನ್ನೊಂದು ಮಾನವ
ನಾಗರಿಕತೆಯ ಯುಗವು ಕಲ್ಪಿಸಲ್ಪಟ್ಟಿದೆ. ಈ ಯುಗದ ಒಂದು ಭಾಗದಲ್ಲಿ ಮನುಷ್ಯ
ಜನಾಂಗವು ಕಲ್ಲಿನಾಯುಧಗಳನ್ನು ಮಸೆದು ಹದಗೊಳಿಸಿಕೊಳ್ಳುತ್ತಿದ್ದಿತು. ಸ್ವೇ
ಕಾಲದ ತರುವಾಯ ನವಪಾಷಾಣಯುಗದ ಮನುಷ್ಯನು ( Neolithic man
ಸುಖಾನುಕೂಲತೆಗಳ ಹಲವು ಸಾಧನಗಳನ್ನು ಕಂಡು ಹಿಡಿದಿದ್ದನು. ಭರತಖಂಡದ
ಈ ಯುಗದಜನರು ಅವಕ್ಕಿಂತನೊದಲಿನ ಯುಗದವರ ವಂಶಜರೆಂಬ ವಿಷಯದಲ್ಲಿ ಸಂ
ಯವು ಬರಲಾರದು ಮನುಷ್ಯನು ಈ ಯುಗದಲ್ಲಿ ತೋಟಗಳನ್ನು ಮಾಡಿ ಗಿಡ
ಳನ್ನು ನಟ್ಟು ಹಣ್ಣುಗಳನ್ನು ತಿನ್ನಲು ಕಲಿತಿದ್ದನು. ಬಟ್ಟೆಗಳನ್ನು ಹೆಣೆಯಲು ಕಲಿ
ದ್ದನು. ಮತ್ತು ತಿಗುರಿಯ ಮೇಲೆ ಹಲವು ತರದ ಮಣಿನ ಪಾತ್ರೆಗಳನ್ನು ಮಾ
ಕೊಳ್ಳ ಬಲ್ಲವನಾಗಿದ್ದನು. ಈ ಯುಗದ ನಾಗರಿಕತೆಯ ನಿದರ್ಶನಗಳು ಉತ್ತರ ಹಿಂ
ಸ್ತಾನದ ನಾಗಾ ಮತ್ತು ಖಾಸಿಯಾ ಪರ್ವತಗಳಿಂದಾರಂಭಿಸಿ ಗಂಗಾನದಿಯ ದಂಡಿಂ
ವರೆಗಿನ ಪ್ರದೇಶದಲ್ಲಿ ಹಲವು ಕಂಡುಬರುವವು. ಕೇವಲ ಬಂಗಾಲದಲ್ಲಿ ಈ ಚಿಹ್ನ
ಗಳು ದೊರೆತಿಲ್ಲ. ಮತ್ತು ಪಂಜಾಬದಲ್ಲಿಯೂ ಈ ವರೆಗೆ ದೊರೆತಿಲ್ಲ. ವಿಂಧ್ಯದಿಂ
ದಕ್ಷಿಣದ ಕೊನೆಯವರೆಗೆ ಹಲವೆಡೆಗಳಲ್ಲಿ ಈ ಯುಗದ ಮಾನವಸುಧಾರಣೆಯ ನಿ
ರ್ದನಗಳು ದೊರೆಯುವವು. ಆದರೆ ಅವು ಉತ್ತರ ಹಿಂದುಸ್ತಾನದ ನಿದರ್ಶನ
ಳಿಂದ ಬೇರೆಯಾಗಿವೆ; ಅವುಗಳಲ್ಲಿ ಕೆಲವುಗಳ ವಿಷಯವಾಗಿ ಹೇಳುವೆವು.

ಮೊದಲು ಪ್ರಾಚೀನ ಪಾಷಾಣ ಯುಗದ ಇತಿಹಾಸದ ಸಂಗತಿಗಳನ್ನು ಹೇ
ವೆವು. ಈ ಅತಿ ಪ್ರಾಚೀನ ಯುಗವ ಮನುಷ್ಯನ ನಾಗರಿಕತೆಯ ಚಿಹ್ನಗಳು ಉತ್ತ
ಹಿಂದುಸ್ತಾನದಲ್ಲಿ ಅಷ್ಟೊಂದು ಸಿಕ್ಕುವದಿಲ್ಲ. ಆದರೆ ದಕ್ಷಿಣ ಹಿಂದುಸ್ತಾನದ
ಇವು ವಿಪುಲವಾಗಿ ದೊರೆಯುವವು. ಮದ್ರಾಸದ ಕೊನೆಯ ಮೇರೆಯಿಂದ ಆರಂಭ
ವಿಂಧ್ಯ ಪ್ರದೇಶದವರೆಗೆ ಈ ಚಿಹ್ನಗಳು ವಿಶೇಷವಾಗಿ ಸಂಗ್ರಹಿಸಲ್ಪಟ್ಟಿವೆ. ಶ್ರೀಯು
Le Mesurier ( ಲ್ಯ ಮಸುರಿಯೆ ) ಎಂಬವನು ೧೮೬೧ನೆಯ ಇಸವಿಯ
ಮೊದಲು ಈ ಚಿಹ್ನಗಳನ್ನು ಶೋಧಿಸಿದನು. ತರುವಾಯ ಇಲ್ಲಿಯವರೆಗೆ ಶ್ರೀಯು
ಬ್ರುಸ್ ಫೂಟ್, ಮೆಡ್‌ಲಿಕ್ಟ ( Brusce Foote, Medlicott ) ಮೊದಲಾ
ವರು ನರ್ಮದಾ ತೀರದಿಂದ ಮದ್ರಾಸದ ವರೆಗಿನ ಪ್ರದೇಶದಲ್ಲಿ ಹಲವು ಪಾಷಾಣ
ಯುಧಗಳು ಗೃಹೋಪಕರಣಗಳು, ಮೊದಲಾದವನ್ನು ಶೋಧಿಸಿದರು. ಮದ್ರಾಸ
ಬಳಿಯಲ್ಲಿರುವ ಪಲ್ಲಾವರಂ ಎಂಬಲ್ಲಿ ಮತ್ತು ಚಿಂಗಲ್‌ಪೇಟ್, ನೆಲ್ಲೂರ, ದಕ್ಷಿ
ಆರ್ಕಾಟ ಇವುಗಳಲ್ಲಿ ಮಣ್ಣು ಸುಟ್ಟು ಮಾಡಿವ ಮತ್ತು ಕಲ್ಲಿನಿಂದ ಮಾಡಿದ ಒಂ
ತರದ ಶವದ ಪೆಟ್ಟಿಗೆಗಳು ದೊರೆತಿವೆ. ಬಹುಶಃ ಈ ಒಡವೆಯು ಹೊಸ ಪಾಷಾ
ಯುಗದ್ದಾಗಿರಬೇಕು. ಇದೇತರವ ಶವದ ಪೆಟ್ಟಿಗೆಯನ್ನು ಈಗಲೂ ಪಲ್ಲಾವರಂ ಮೊ

ರಾದ ಕಡೆಗಳಲ್ಲಿ ಪ್ರೇತಿಯರ ಸಮಾಧಿಗಾಗಿ ಹಲವು ದ್ರವಿಡ ಜಾತಿಯ ಜನರು ಉಪಯೋಗಿಸುತ್ತಿರುವರೆಂಬದು ಅತಿ ಆಶ್ಚರ್ಯದ ವಿಷಯವಾಗಿದೆ. ಇದರಿಂದ ದಕ್ಷಿಣ ಹಿಂದುಸ್ತಾನದ ದ್ರವಿಡ ಜನರು ಅತಿ ಪ್ರಾಚೀನ ಕಾಲದ ಮೂಲ ನಿವಾಸಿಗಳ ವಂಶಜರೆಂದು ಸೂಚಿತವಾಗುವದಿಲ್ಲವೇ ? ಶ್ರೀಯುತ ರೀ (Rea) ಸಾಹೇಬರು ಸಂಗ್ರಹಿಸಿದ ತಿನವೆಲಿ ಜಿಲ್ಲೆಯೊಳಗಿನ ಪ್ರಾಚೀನ ನಿದರ್ಶನಗಳ ವಿವರಣೆಯು ಪ್ರಕಟವಾದ ಬಳಿಕ ಇನ್ನೂ ಈ ವಿಷಯವಾಗಿ ಹೆಚ್ಚು ವಿಷಯಗಳು ತಿಳಿದು ಬರುವವು. ಆಗ ಶವವನ್ನು ಒಂದು ಸಣ್ಣ ಮೇಲ್ಭಾಗವುಳ್ಳ ಮಣ್ಣಿನ ಪಾತ್ರೆಯಲ್ಲಿ ಹಾಕಿ ಹುಗಿಯುವ ಪದ್ಧತಿಯಿತ್ತು. ಈ ತರದ ಶವ ಪೆಟ್ಟಿಗೆಯು ಉತ್ತರ ಹಿಂದುಸ್ಥಾನದಲ್ಲೆಲ್ಲಿಯೂ ದೊರೆತಿಲ್ಲ.

ಉತ್ತರ ಹಿಂದುಸ್ತಾನದಲ್ಲಿ ಅತಿ ಪ್ರಾಚೀನವಾದ ಪಾಷಾಣಯುಗದ ಚಿಹ್ನಗಳು ಅಷ್ಟೊಂದು ಉಪಲಬ್ಧವಾಗಿಲ್ಲ. ಆದರೆ ನವ ಪಾಷಾಣ ಯುಗದ ಮತ್ತು ಐತಿಹಾಸಿಕ ಯುಗದ ಪೂರ್ವಕಾಲದ ಅನೇಕ ನಿದರ್ಶನಗಳು ಆಸಾಮದ ಪೂರ್ವಭಾಗದಿಂದ ಗಂಗಾತೀರ ಪ್ರದೇಶದ ವರೆಗೆ ಬಹಳವಾಗಿ ಸಿಕ್ಕಿರುವವು. ಈ ಮಾತನ್ನು ವಾಚಕರು ಲಕ್ಷದಲ್ಲಿಡಬೇಕು.

ಶವಕ್ಕೆ ಅಗ್ನಿಸಂಸ್ಕಾರ ಮಾಡುವ ಪದ್ಧತಿಯು ಪ್ರಚಾರಕ್ಕೆ ಬರುವಮುಂಚೆ ಉತ್ತರ ಹಿಂದುಸ್ತಾನದಲ್ಲಿ ಪ್ರಚಾರದಲ್ಲಿದ್ದ ಶವಸಂಸ್ಕಾರಪದ್ಧತಿಯ ವಿಷಯವು ಉಲ್ಲೇಖಿಸಲು ತಕ್ಕದ್ದಾಗಿದೆ.

ಮಿರ್ಜಾಪೂರ ಪಟ್ಟಣದ ಬಳಿಯಲ್ಲಿ ನವ ಪಾಷಾಣಯುಗದ ಒಂದು ಸಮಾಧಿಯು ದೊರೆತಿದೆ. ಅದು ಕಲ್ಲಿನದು, ೧೨ ಘೂಟು ಉದ್ದವಾಗಿದೆ. ಅದರೊಳಗಿನ ಪೂರ್ಣ ಅಸ್ಥಿಪಂಜರವು ಗಿಡ್ಡ ಜಾತಿಯ ಮನುಷ್ಯನದಾಗಿರದೆ ಬಹಳ ಎತ್ತರವಾದ ಮನುಷ್ಯನದಾಗಿದೆ. ಮತ್ತು ಸಮಾಧಿಮಾಡುವ ಪೂರ್ವದಲ್ಲಿ ಈಗ ಉತ್ತರಕ್ಕೆ ತಲೆ ಮಾಡುವ ಪದ್ಧತಿಯಿದ್ದಂತೆ ಸಮಾಧಿಯೊಳಗಿನ ಆ ಶವದ ತಲೆಯು ಪೂರ್ಣವಾಗಿ ಉತ್ತರಕ್ಕೆ ಆಗುವಂತೆ ದಕ್ಷಿಣೋತ್ತರವಾಗಿ ಶವವು ಇಡಲ್ಪಟ್ಟಿದೆ. ಮೃತನಿಗಾಗಿ ಶ್ಮಶಾನದಲ್ಲಿ ಜಲಕುಂಭವನ್ನು ಕೊಡುವ ಪದ್ಧತಿಯು ಈಗಲೂ ಇರುವಂತೆ ಅಸ್ಥಿ ಪಂಜರದ ಬಳಿಯಲ್ಲಿ ಆ ಪ್ರಕಾರ ಮಣ್ಣಿನ ಬಿಂದಿಗೆಯು ದೊರೆತಿದೆ. ಈ ಮಣ್ಣಿನ ಪಾತ್ರೆಯು ಕೈಯಿಂದ ಮಾಡಿದ್ದಲ್ಲ. ಕುಂಬಾರನ ತಿಗುರಿಯಮೇಲೆ ಮಾಡಿದ್ದು; ಮತ್ತು ಅತ್ಯಂತ ಸುಂದರವಾಗಿ ನಿರ್ಮಿತವಾಗಿದೆ. ಈ ಅಸ್ಥಿ ಪಂಜರದ ಬಳಿಯಲ್ಲಿ ಒಂದು ಸಣ್ಣ ಮಣ್ಣಿನ ಪಾತ್ರೆಯಲ್ಲಿ ೭ ಇಂಚು ಉದ್ದವಾದ ಹಸರು ಕಾಜಿನ ಪಾತ್ರೆಯೊಂದು ದೊರೆತಿದೆ. ಇದರಿಂದ ಅತಿ ಪ್ರಾಚೀನ ಯುಗದಲ್ಲಿ ಹಿಂದುಸ್ತಾನದಲ್ಲಿ ಕಾಜು ಪ್ರಚಾರದಲ್ಲಿತ್ತೆಂದು ಕಂಡುಬರುವದು. ಈಜಿಪ್ತ ಬಾಬಿಲಾನಗಳ ಹೊರತು ಎಲ್ಲಿಯೂ ಈ ಪ್ರಾಚೀನಕಾಲದಲ್ಲಿ ಕಾಜು ಬಳಕೆಯಲ್ಲಿರಲಿಲ್ಲವೆಂದು ಜನರು ಹೇಳುತ್ತಿದ್ದರು. ಆದರೆ ಈಗ ಹಾಗೆ ಹೇಳಲು ಬರುವಂತಿಲ್ಲ. ಇತಿಹಾಸ ಯುಗದ ಪೂರ್ವಯುಗದಲ್ಲಿ ಮತ್ತು

ಅದಕ್ಕೂ ಪ್ರಾಚೀನ ಕಾಲದಲ್ಲಿ ಕ್ರಮವಾಗಿ ನಾಗರಿಕತೆಯನ್ನು ಹೊಂದುತ್ತ ನಡೆದಿದ್ದ ಜನರ ವಂಶಜರೇ ಐತಿಹಾಸಿಕ ಯುಗದ ಆರ್ಯರು ಅಹುದು ಎಂಬ ಮಾತನ್ನು ನಿಸ್ಸಂದೇಹವಾಗಿ ಹೇಳುವಷ್ಟು ಮಟ್ಟಿಗೆ ಭೂಸ್ತರದೊಳಗಿನ ಅಸ್ಥಿಪಂಜರಗಳ ಪರೀಕ್ಷೆಯು ಇನ್ನೂ ಆಗಿಲ್ಲ. ಈಗ ಉಲ್ಲೇಖಿಸಿದ ಪ್ರಮಾಣಗಳಿಗೂ ಬೇರೆ ಪ್ರಮಾಣಗಳನ್ನೂ ಹೊಂದಿಸಿ ನೋಡಲು ಯಾವ ಸಿದ್ಧಾಂತಕ್ಕೆ ಬರಬೇಕಾಗುವದೆಂಬದನ್ನು ಇನ್ನೊಮ್ಮೆ ವಿಚಾರ ಮಾಡುವೆವು.

---

## ಪ್ರಕಟನೆ. ೧.

ಮಹಮ್ಮಡನ್ ಬರಸರೀಫಂಡ ಸ್ಕಾಲರಶಿಪ್.

**ದಕ್ಷಿಣಭಾಗ.**

ನಂ. 53—S—7062.

೧ ಧಾರವಾಡ ಜಿಲ್ಲೆಯ ಮಹಮ್ಮಡನ್ ಬರಸರೀಫಂಡ ಸ್ಕಾಲರಶಿಪ್ ಪರೀಕ್ಷೆಯು ೧೯೨೭ನೇ ಮಾರ್ಚ ತಿಂಗಳ ೭, ೮, ೯ನೇ ತಾರೀಖುಗಳಲ್ಲಿ (ಸೋಮವಾರ, ಮಂಗಳವಾರ, ಬುಧವಾರ) ಧಾರವಾಡ ಹಾಯಸ್ಕೂಲಿನಲ್ಲಿ ಮಧ್ಯಾಹ್ನದ ೧೨ ಗಂಟೆಗೆ ಸರಿಯಾಗಿ ಆಗುವದು.

೨ ಈ ಸ್ಕಾಲರಶಿಪ್ಪು ಧಾರವಾಡ ಜಿಲ್ಲೆಯೊಳಗ ಯಾವನಾದರೊಬ್ಬ ಉಮೇದುವಾರನಿಗೆ ಸಿಗುವದು. ಆದರೆ ಅವನು ಇದೇ ಜಿಲ್ಲೆಯಲ್ಲಿ ವಾಸವಾಗಿದ್ದು ಸರಕಾರೀ ಸಾಲೆಯಲ್ಲಿ ಕಲಿಯುವವನೂ ಇಂಗ್ಲಿಷ ಸಾಲೆಯಲ್ಲಿ ಫಿ ಕೊಟ್ಟು ಕಲಿಯಲಾರದಷ್ಟು ಬಡವನೂ ಎಂಬ ಬಗ್ಗೆ ಇಬ್ಬರು ಪ್ರಸಿದ್ಧ ಗೃಹಸ್ಥರ ಸರಟಿಫಿಕೇಟ ಹೊಂದವನಿರಬೇಕು.

೩ ಪರೀಕ್ಷೆಯು ಕನ್ನಡದಲ್ಲಿ ಆಗುವದು ಆದರೆ ಉರ್ದುದಲ್ಲಿ ಸಹ ಉಮೇದವಾರರು ಪರೀಕ್ಷೆಯನ್ನು ಕೊಡಬಹುದು.

೪ ಪರೀಕ್ಷೆಯು ಒಂದು ಕಮೀಟಿಯ ಮುಖಾಂತರ ತೆಗೆದುಕೊಳ್ಳಲ್ಪಡುವುದು ಮತ್ತು ಧಾರವಾಡ ಹಾಯಸ್ಕೂಲ ಹೆಡ್ಡ ಮಾಸ್ತರರು ಅದರ ಅಧ್ಯಕ್ಷರಿರುವರು ಅರ್ಜಿಗಳನ್ನು ಮಿಡ್ಲಸ್ಕೂಲ ಸ್ಕಾಲರ್‌ಶಿಪ್ ಪರೀಕ್ಷೆಗೋಸ್ಕರ ಮಾಡುವ ಫಾರ್ಮಿನ ಮೇಲೆ ಮಾಡಬೇಕು; ಆದರೆ ಅವಶ್ಯವಿದ್ದಲ್ಲಿ ಫಾರ್ಮಿನಲ್ಲಿ ದುರಸ್ತಿಯನ್ನು ಮಾಡತಕ್ಕದ್ದು. ಫಾರ್ಮಗಳು ಅಧ್ಯಕ್ಷರ ಕಡೆಗೆ ಬೆಲೆಯಿಲ್ಲದೆ ಸಿಗುವವು. ಅರ್ಜಿಗಳನ್ನು ೧೯೨೭ನೇ ಫೆಬ್ರುವರಿ ೭ನೇ ತಾರೀಖಿನೊಳಗಾಗಿ ಅಧ್ಯಕ್ಷರಿಗೆ ಮುಟ್ಟುವಂತೆ ಕಳಿಸತಕ್ಕದ್ದು. ಅನಂತರ ಬಂದ ಅರ್ಜಿಗಳನ್ನು ಹಿಡಿಯಲಕ್ಕಿಲ್ಲ.

೫ ಮಿಡ್ಲ ಮತ್ತು ಸ್ಪೆಶಲ್ ಸ್ಕಾಲರ್‌ಶಿಪ್ ಪರೀಕ್ಷೆಯ ಎಲ್ಲ ನಿಯಮಗಳು ಈ ಪರೀಕ್ಷೆಗೆ ಲಾಗು ಇರುತ್ತವೆ; ಆದರೆ ಫಿ ಮಾತ್ರ ಈ ಪರೀಕ್ಷೆಗೆ ಇರುವದಿಲ್ಲ.

ಧಾರವಾಡ
೨೫ ನೇ ಡಿಸಂಬರ ೧೯೨೬

H. A. Sadarangani.
ಆಕ್ಟಿಂಗ ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

Reg. No. B 1445.

# ಕನ್ನಡ ಶಾಲಾಪತ್ರಿಕ

# Kannada Shala Patraka

JANUARY 1927

ಸಂಪಾದಕ — ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ

ಸಂಪುಟ [illegible], ಜನವರಿ ೧೯[illegible]. ಸಂಚಿಕೆ ೧೦

## ವಿಷಯಾನುಕ್ರಮಣಿಕೆ


| | | |
|---|---|---|
| ೧ | [illegible]ಯ ಪಾ[illegible]ಕ ಶಿಕ್ಷಣ | ೧—೭ |
| ೨ | ಪ್ರಾಥಮಿಕ ಶಾಲೆಯ ಅಧಿ[illegible]ಬ್ಯಾನಿಂಗ ಸ್ಕೂಲು ಸಹಿಸ್ಥಳ[illegible]ನ ದಲಕ್ಕು ಬಾಂದದು[illegible] | ೪—೯ |
| ೩ | ಪ್ರೈ. ಸ್ಕೂ. [illegible] ಫಾಸದ ಕೋಚಿಮೆ | ೯—೧೩ |
| ೪ | ಧಾರವಾಡ ಟ್ರೈ[illegible] ವಾರ್ಷಿಕ ಪರೀಕ್ಷೆಯ ಪರಿ | ೧೩—೧೫ |
| ೫ | ಗ್ರಂಥವಿಮರ್ಶೆ | ೧೫—೧೬ |
| ೬ | ಉದ್ಯೋಗವಿಚ್ಛುವರು ಏನು ಮಾಡತಕ್ಕದ್ದು | ೧೬—೧೮ |
| ೭ | ಪತ್ರಗಳ ಸಾರಾಂಶ | ೧೮—೨೧ |
| ೮ | ಪ್ರಕಟನೆ | ೨೧—೨೪ |
| ೯ | ಹಿಂದುಸ್ತಾನದ ಇತಿಹಾಸ | ೨೧—೨೮ |


Printed by M. K. Joshi at the Karnatak Printing Works, Dharwar
Published by H. G. Deshpande, B. A.,
Head-master, Training College for Men, Dharwar, at his [illegible]ce

ಶಾಲಾಪತ್ರಕದ ಹೊಸವರ್ಷವು ಎಪ್ರಿಲ್ ತಿಂಗಳಿನಿಂದ ಪ್ರಾರಂಭವಾಗಿ
ಪ್ರತಿವರ್ಷ ವರ್ಗಣಿಯ ಹಣವನ್ನು ಮುಂಗಡವಾಗಿಯೇ ವಸೂಲ ಮಾಡುವ
ಇರುವದು. ಅದರಿಂದ ಎಲ್ಲ ಆಫಿಸರರಿಗೆ ಬಿಲ್ಲು ಹಾಗು ಪಾವತಿಗಳನ್ನು ವ
ಕಳಿಸಿರುತ್ತದೆ. ಕೆಲವರಿಗೆ ೨-೩ ಸಾರೆ ರಿವಾಯಂಡರ ಸಹ ಕಳಿಸಿರುವದು.
ಖಾಸಗೀ ಜನರಿಗೆ ಪತ್ರದ್ವಾರದಿಂದ ತಿಳಿಸಿರುತ್ತದೆ. ಹೀಗಿದ್ದು ಎಷ್ಟೋ ಜ
ಯಿಂದ ೧೯೨೬-೨೭ನೇ ವರ್ಷದ ವರ್ಗಣೀ ಹಣವು ಇನ್ನೂ ಬಂದಿರುವದಿಲ್ಲ.
ಹಣವು ಬಾಕಿ ಉಳಿದಿರುವದೋ ಅವರು ೧೯೨೭ನೇ ಮಾರ್ಚ ೩೧ನೇ ತಾ
ತಮ್ಮ ಹಣವನ್ನು ಕಳಿಸಬೇಕಾಗಿ ವಿನಂತಿ ಅದೆ.

ಹೊಸ ವರ್ಗಣೀದಾರರಾಗಲಿಚ್ಛಿಸುವವರು ವ್ಹಿ. ಪಿ. ಯಿಂದ ಅಂಕವನ್ನು
೨ರೂ. ಮುನಿ ಆರ್ಡರ ಮಾಡಬೇಕು. ಅದರಿಂದ ಉಭಯತರಿಗೂ ಲಾಭವಾ

—ಸಂ. ಕ. ಶಾ ಪ.

## ಜಾಹೀರಾತು.

ಕನ್ನಡ ೬ನೆಯ ಇಯತ್ತೆಗಳ ಮತ್ತು ವ್ಹ-ಫಾ-ಪರೀಕ್ಷೆಯ
ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ

**ಏತದ್ದೇಶೀಯ ಸೋಪಪತ್ತಿಕ ಜಮಾ ಖರ್ಚಿನ ಪದ್ಧತಿ.**

ಗ್ರಂಥಕರ್ತರು:—ಓಂಕಾರ ಬಾಳಕೃಷ್ಣ ಬೋಧ

ಜಮಾಖರ್ಚಿನ ವಿಷಯವು ತಲೆಬೇಸರಿಕೆಯಾಗಿದ್ದರೂ ಈ ಪುಸ್ತಕವನ್ನು
ವದಕ್ಕೆ ಹುರುಪು ಹುಟ್ಟುವದು; ಇದಲ್ಲದೆ ಈ ಪುಸ್ತಕವು ಹೊಸ ಶಿಕ್ಷಣ ಕ್ರಮ
ಸರಿಸಿ, ಸುಲಭರೂಪದಿಂದ ರಚಿಸಲ್ಪಟ್ಟಿರುವದು. ಅದರಿಂದ ಇದು ವಿದ್ಯಾರ್ಥಿಗ
ಶಿಕ್ಷಕರಿಗೂ ಬಲು ಉಪಯುಕ್ತವಾಗಿರುವದು. ಈ ಮಾತಿನ ಮನವರಿಕೆಯ
(೧೯೨೬ಇಸ್ವಿಯ) ಜೂನ ತಿಂಗಳ ಶಾಲಾಪತ್ರಕದಲ್ಲಿ, ಜುಲೈ ತಿಂಗಳ ಸುಧಾರ
ಈ ಪುಸ್ತಕದ ಸಂಬಂಧವಾಗಿ ಪ್ರಕಟಿಸಲ್ಪಟ್ಟಿರುವ ಅಭಿಪ್ರಾಯಗಳನ್ನು ಓದಬಾ
ಅಂಗೈ ನೋಡಿಕೊಳ್ಳುವದಕ್ಕೆ ಕನ್ನಡಿಯೇತಕ್ಕೆ? ಪುಸ್ತಕ ತರಿಸಿ ನೋಡಿದರೆ ತ
ತಿಳಿಯುವದು. ಇದು "ಟಿಕ್ಸ್ಚ ಬುಕ್ಕು" ಎಂದು ಮಂಜೂರಾಗಿರುವದು. ಬೆಲೆ ೧
ಬುಕ್ ಸೆಲ್ಲರರಿಗೂ ಶಿಕ್ಷಕರಿಗೂ ಹೆಚ್ಚು ಪ್ರತಿಗಳನ್ನು ತೆಗೆದುಕೊಂಡಲ್ಲಿ ಯೋಗ್
ಶನ್ನು ಕೊಡಲ್ಪಡವದು.

ಸಿಗುವ ಸ್ಥಳ

೧ ಚಿದಂಬರ ಓಂಕಾರ ಬೋಧೆ ಹೆಡ್‌ಮಾಸ್ತರ ಶಾಲಾ ದೇವಲತ್ತಿ. ತ
ಖಾನಪೂರ ಜಿ. ಬೆಳಗಾಂವ.

೨ ದತ್ತಾಜಿರಾವ ಸಾವಂತ ರಾಮತತ್ವಪ್ರಕಾಶ ಬುಕ್‌ಡಿಪೊ ಬೆಳಗಾವ.

೩ ಮಂತರ ಸುಕ್ಷ ಭಾಂಡಾರ ಧಾರವಾಡ.

ಕನ್ನಡ

# ಶಾಲಾಪತ್ರಿಕೆ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಪುಟ ೬೩ | ಜನವರಿ. ೧೯೨೭. | ಸಂ. ೧೦.

## ಬಡೋದೆಯ ಪ್ರಾಥಮಿಕ ಶಿಕ್ಷಣ.

ಈ ಸಂಸ್ಥಾನದಲ್ಲಿ ಒತ್ತಾಯದ ಪ್ರಾ. ಶಿ. ವು ೧೯೦೬ನೇ ಇಸವಿಯಲ್ಲಿ ಪ್ರಾರಂಭಿಸಲ್ಪಟ್ಟಿತು. ಮೊದಲಿನ ೧೦ ವರ್ಷಗಳ ಅವಧಿಯಲ್ಲಿ ೬ನೇ ವರ್ಷದಿಂದ ೧೨ವರ್ಷದ ವಯಸ್ಸಿನಲ್ಲಿದ್ದ ಎಲ್ಲ ಬಾಲಕರೂ ೬ರಿಂದ ೧೮ವರ್ಷದ ಬಾಲಿಕೆಯರೂ ಕಲಿಯಬೇಕೆಂಬ ನಿರ್ಬಂಧವಿತ್ತು. ಈ ಕಾಲದಲ್ಲಿ ಒತ್ತಾಯದ ನೇಮವನ್ನು ಸರಿಯಾಗಿ ಪಾಲಿಸಿದ್ದರಿಂದ ೧೬ರಲ್ಲಿ ೩೦೪೪ ಶಾಲೆಗಳಿದ್ದು ೨ ಲಕ್ಷ ೩೯ ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿರುವರು. ಒಟ್ಟು ವೆಚ್ಚವು ೧೪ ಲಕ್ಷ ೬೫ ಸಾವಿರ ರು. ಇತ್ತು. ಆದರೆ ಆ ವರ್ಷವೇ ಒತ್ತಾಯದ ಶಿಕ್ಷಣದ ವಿಷಯವನ್ನು ಪರೀಕ್ಷಿಸುವದಕ್ಕಾಗಿ ಒಂದು ಕಮಿಟಿಯು ನೇಮಿಸಲ್ಪಟ್ಟಿತು. ಈ ಕಮಿಟಿಯವರ ಶೋಧದಿಂದ ಎಷ್ಟೋ ಶಾಲೆಗಳಲ್ಲಿ ಸಾಕಷ್ಟು ಬಾಲಕರಿಲ್ಲದೂ, ಬಹಳ ದಿವಸ ಗೈರಹಾಜರಿದ್ದ ಬಾಲಕರ ಹೆಸರನ್ನಿಟ್ಟು ಹುಡುಗರ ಸಂಖ್ಯೆಯನ್ನು ಬೆಳಿಸಿದ್ದೂ, ೬ನೇ ಇಯತ್ತೆ ಪಾಸಾಗದ ಅನನುಭವಿಕ ಶಿಕ್ಷಕರನ್ನು ಎಷ್ಟೋ ಶಾಲೆಗಳಿಗೆ ನೇಮಿಸಿದ್ದೂ ಕಂಡು ಬಂದದರಿಂದ ಹೆಸರಿಗೆ ಮಾತ್ರ ನಡೆದಂಥ ಶಾಲೆಗಳನ್ನು ಬಂದು ಮಾಡಬೇಕಾಯಿತು. ಆದದರಿಂದ ಹೊರಗಿನಿಂದ ನೋಡುವವರಿಗೆ ಪ್ರಾ. ಶಿ. ದ ಪ್ರಗತಿಯು ಕುಗ್ಗಿದಂತೆ ಕಂಡು ಬಂತು. ಆದರೆ ನಿಜವಾದ ವಸ್ತುಸ್ಥಿತಿಯನ್ನು ನಿರೀಕ್ಷಿಸಿದಲ್ಲಿ ಹೀಗೆ ಮಾಡಿದ್ದೇ ಸರಿಯಾಯಿತೆಂದು ತಿಳಿಯುವದು. ೧೯೨೬ ಶಾಲೆಗಳ ಸಂಖ್ಯೆಯು ೩೨೨೪ ಇದ್ದು ವಿದ್ಯಾರ್ಥಿಗಳ ಸಂಖ್ಯೆಯು ೧,೯೬,೧೧೪ ಇತ್ತು. ಅಂದರೆ ಈಚೆಯ ೧೦ ವರ್ಷಗಳಲ್ಲಿ ಶಾಲೆಗಳ ಸಂಖ್ಯೆಯು ೬೬೦ ರಿಂದಲೂ ವಿದ್ಯಾರ್ಥಿಗಳ ಸಂಖ್ಯೆಯು ೪೩ ಸಾವಿರದಿಂದಲೂ ಕಡಿಮೆಯಾಯಿತು. ಹೀಗೆ ಪ್ರಾ. ಶಿ. ದ ಪ್ರಗತಿಯು ಹಿಮ್ಮೆಟ್ಟಿದ್ದರಿಂದ ೧೯೨೬ ರ ಕೊನೆಗೆ ಇದರ ಕಾರಣಗಳನ್ನು

ಶೋಧಿಸುವದಕ್ಕಾಗಿ ಶಿಕ್ಷಣ ಮಂತ್ರಿಗಳಾದ ರಾ. ಬ. ಗೋವಿಂದ ಭಾಯಿ ದೇಸಾಯಿ ಇವರಿಗೆ ಮಹಾರಾಜರು ಅಪ್ಪಣೆ ಮಾಡಿದರು. ಶಿಕ್ಷಣ ಮಂತ್ರಿಗಳು ವಸ್ತುಸ್ಥಿತಿಯನ್ನ ಸೂಕ್ಷ್ಮವಾಗಿ ಅವಲೋಕಿಸಿ ಶಿಕ್ಷಣದ ಅವನತಿಯ ಕಾರಣಗಳನ್ನು ಕಂಡು ಹಿಡಿದ ಸವಿಸ್ತಾರವಾದ ವರದಿಯನ್ನು ಪ್ರಸಿದ್ಧಪಡಿಸಿದ್ದಾರೆ.

ಆ ಕಾರಣಗಳು ಯಾವವೆಂದರೆ:—

ುವದು. ಈ ಕಟ್ಟಡವು ಬಹು ವಿಶಾಲವಾಗಿದ್ದು ಅಲ್ಲಿ ಉಳ್ಳನು ವಾಚನಾಲಯವು ುವದು. ಹಿಂದಕ್ಕೆ ಪ್ರಸಿದ್ಧ ಶಾಸ್ತ್ರಜ್ಞರಾದ ಟಿ. ಕೆ. ಗಜ್ಜರ ಇವರ ಅಣ್ಣನ ಮಗನು ಕ್ಲಬ್ಬಿನ ಸೆಕ್ರೆಟರಿಯಾಗಿರುವನು. ಇದೇ ಸಮಯಕ್ಕೆ ಅಲ್ಲಿ ನೇಕನಾಮದಾರ ಸ್ತ್ರಿಯವರಿಗೆ ಮಾನಪತ್ರವನ್ನು ಕೊಡುವ ಸಮಾರಂಭವು ಜರಗುವದಿದ್ದದರಿಂದ ಆ ಸಮಾರಂಭಕ್ಕೆ ನಿಂತು ಹೋಗಬೇಕೆಂದು ಸೆಕ್ರೆಟರಿಯವರು ತಿಳಿಸಿದ್ದರಿಂದ ಅಲ್ಲಿ ುವು ಹೊತ್ತು ಕೂತೆವು. ನಾಮ. ಶಾಸ್ತ್ರಿಯವರು ಆಫ್ರಿಕಾಕ್ಕೆ ಶಿಷ್ಟ ಮಂಡಳದ ಸಭಾ ನರಾಗಿ ಹೋಗುವನರಿದ್ದದರಿಂದ ಮಹಾತ್ಮಾ ಗಾಂಧಿಯವರಿಗೆ ಬಿಟ್ಟಿಯಾಗಿ ಅವರ ಶೋಚನೆಯನ್ನು ತಿಳಿದುಕೊ ಳ್ಳಲಿಕ್ಕೆ ಅಹಮ್ಮದಾಬಾದಕ್ಕೆ ಬಂದಿದ್ದರು. ನಾಮ. ಸ್ತ್ರಿಯವರು ಬೇಸೆಯಿಂದ ಹಣ್ಣಾಣದಂತೆ ಕಂಡುಬಂದರು. ಆದರೂ ಅವರ ವಾಚಾ ಕ್ತಿಯು ಕಡಿಮೆಯಾಗಿರಲಿಲ್ಲ. ಅಹಮ್ಮದಾಬಾದದ ವರ್ತಕ ರಾಜರಾದ ಮಂಗಲದಾಸ ರಿಧರಲಾಲ ಇವರು ಮಾನಪತ್ರವನ್ನು ಓದಿ ಅವನ್ನು ಬೆಳ್ಳಿಯ ಕರಡಿಗೆಯಲ್ಲಿ ಹಾಕಿ ಸ್ತ್ರಿಗಳಿಗೆ ಕೊಟ್ಟರು. ಮತ್ತು ಗೋಪಾಲ ಕೃಷ್ಣ ಗೋಖಲೆ ಯವರಿಂದ ಸ್ಥಾಪಿಸ ಟ್ಟ ಪುಣೆಯ ಸರ್ವಂಟ್ ಆಫ್ ಇಂಡಿಯಾ ಎಂಬ ಸಂಘದ ಸಹಾಯಾರ್ಥವಾಗಿ ೦೦೦ ರೂ. ಗಳ ಒಂದು ಚೆಕ್ಕನ್ನು ಕೊಟ್ಟರು. ನಾ. ಶಾಸ್ತ್ರಿಗಳು ಅದನ್ನು ಸ್ವೀಕರಿಸಿ ಹಮ್ಮದಾಬಾದದ ನಾಗರಿಕರ ಆಭಾರವನ್ನು ಮನ್ನಿಸಿದರು.

**ಸತ್ಯಾಗ್ರಹಾಶ್ರಮ**—ಮಹಾತ್ಮಾ ಗಾಂಧಿಯವರ ಈ ಆಶ್ರಮವು ಊರಿಂದ ಮೈಲುಗಳ ಮೇಲೆ ಸಾಬರಮತಿಯ ದಂಡೆಗೆ ಇರುವದು. ಈ ಆಶ್ರಮವು ರಾಜ ಮಾರ್ಗದ ಎರಡೂ ಬದಿಗೆ ಹಬ್ಬಿರುವದು. ಇದರ ವಿಸ್ತಾರವು ೫೦–೬೦ ಎಕರೆಗಳಾಗ ುಹುದು. ಅದರಲ್ಲಿ ಹೊಲಗಳೂ, ತೋಟಗಳೂ, ವಿದ್ಯಾರ್ಥಿಗೃಹವೂ, ಕಾರ್ಯಾಲಯ ಗಳೂ, ಪುಸ್ತಕಾಲಯವೂ, ಮಹಾತ್ಮರ ಮನೆಯೂ ಇರುವವು. ಆಶ್ರಮದಲ್ಲಿ ೨೫೦ ನರಿರುವರು. ನೂಲುವದು, ನೇಯುವದು, ಒಕ್ಕಲತನ, ತೋಟಮಾಡುವದು ಇವೇ ಆಶ್ರಮವಾಸಿಗಳ ಉದ್ಯೋಗಗಳು. ಬೇಕಾದವರು ಈ ಆಶ್ರಮದೊಳಗೆ ಹೋಗಿ ಎಲ್ಲ ಸಂಗತಿಗಳನ್ನು ನೋಡಬಹುದು. ಬಾಗಿಲಿಗೆ ಸಮೀಪವಾಗಿ ಆಶ್ರಮದ ಕಚೇರಿ ಇರುವದು. ಅಲ್ಲಿ ಹೋಗಿ ನಾವು ಸೆಕ್ರೆಟರಿಯವರನ್ನು ಕೇಳಲು ಅವರು ಒಬ್ಬ ಪ್ರೌಢ ವಿದ್ಯಾರ್ಥಿಯನ್ನು ನಮ್ಮ ಸಂಗಡ ಕಳಿಸಿಕೊಟ್ಟರು. ಆತನು ಹಿಂದಿಯಲ್ಲಿ ಎಲ್ಲ ಸಂಗ ತಿಗಳನ್ನು ಹೇಳುತ್ತಿದ್ದನು,

**ಮಿಸ್ ಸ್ಲೇಡ**:—ಒಳಗೆ ಹೋಗಲು ಮಿಸ್-ಸ್ಲೇಡ ಎಂಬ ಇಂಗ್ಲಿಷ ಯುವ ತಿಯು ಚಾಪೆಹೆಣೆಯುವ ಕೆಲಸವನ್ನು ಮಾಡುತ್ತಿದ್ದಳು. ಈಕೆಯ ತಂದೆಯು ಇಂಗ್ಲಂ ಡದ ನೌಕಾಸೇನೆಯ ಒಬ್ಬ ಸೇನಾಪತಿ ( ಆಡ್‌ಮಿರಲ್ ) ಯಾಗಿರುವನು. ಅರಳೆ ುನ್ನು ಹಿಂಜಿ ಹೊಡೆದು ಕಸತೆಗೆಯುವಾಗ ಈ ಪ್ರಕಾರದ ಚಾಪೆಯನ್ನು ಹಾಸಿ

ಅದರಮೇಲೆ ಅರಳಿಯನ್ನು ಹೊಡೆಯುವರು. ಈ ಚಾಪೆಯ ಕಡ್ಡಿಗಳನ್ನು ದೂರ ದೂರ ಕಟ್ಟುವುದರಿಂದ ಎತ್ತಿದ ಕೂಡಲೆ ಕಸವು ಕೆಳಗೆ ಬೀಳುವದು. ಅಲ್ಲಿಯೇ ಮಹಾತ್ಮಾ ಗಾಂಧಿಯವರ ಪತ್ನಿ ಕಸ್ತೂರಿಬಾಯಿಯವರು ಚಾಪೆ ಹೆಣೆಯಲಿಕ್ಕೆ ಹೇಳುತ್ತಿದ್ದರು. ಮಿಸ್-ಸ್ಲೇಡ ಇವಳಿಗೆ ಆಶ್ರಮದಲ್ಲಿ ಮೀರಾಬಾಯಿ ಎಂಬ ಅಭಿಧಾನವು ಕೊಡಲ್ಪಟ್ಟಿದೆ. ಮೀರಾಬಾಯಿಯು ತನ್ನ ದೇಶದ ಉಡುಪನ್ನು ಬಿಟ್ಟು ನಮ್ಮಲ್ಲಿಯ ಹೆಂಗಸರಂತೆ ಸೀರೆ ಕುಪ್ಪಸಗಳನ್ನು ಉಡುತ್ತಾಳೆ. ತಾನೇ ಅಡಿಗೆ ಮಾಡಿ ಕೊಂಡು ಊಟಮಾಡುತ್ತಾಳೆ. ಇದೇ ಕ್ರಮದಿಂದಲೇ ಆಯುಷ್ಯ ವೃದ್ಧಿಯುಂಟಾಗು ವದೆಂಸೂ ಬುದ್ಧಿ ಸಾಮರ್ಥ್ಯವು ಹೆಚ್ಚಾಗುವದೆಂದೂ ಅವಳ ಅಭಿಪ್ರಾಯವು.

**ಮಹಾತ್ಮರ ದರ್ಶನ:**—ನಾವು ಹೋದ ದಿವಸವು ಸೋಮವಾರವಿದ್ದ ರಿಂದ ಮಹಾತ್ಮಾಜಿಯವರು ಮೌನವನ್ನು ತಾಳಿದ್ದರು. ಮತ್ತು ತಮ್ಮ ವಾರಪತ್ರಗಳಿಗೆ ಬರೆಯುವ ಕೆಲಸದಲ್ಲಿ ತೊಡಗಿದ್ದರು. ಒಂದು ವರ್ಷದ ವಿಶ್ರಾಂತಿಯು ದೊರೆತದ್ದರಿಂದ ಅವರು ತೇಜಃಪುಂಜರಾಗಿಯೂ ಚಟುವಟಿಕೆಯುಳ್ಳವರಾಗಿಯೂ ತೋರಿದರು. ಅವರ ಮನೆಯು ಸಾದಾ ಹಂಚಿನ ಚಪ್ಪರದಂತೆ ಇರುವದು. ಮುಂದೆ ಪಡಸಾಲೆ. ಪಡಸಾಲೆಯ ಒಂದು ಬದಿಗೆ ಮಹಾತ್ಮರು ಕೂಡುವ ಕೋಣೆ ಇರುವದು. ಅಲ್ಲಿಯ ಸಾಮಾನುಗಳೆಲ್ಲ ಹಿಂದೂಪದ್ಧತಿಯವು. ಖುರ್ಚಿ ಮೆಜುಗಳ ಗದ್ದಲವಿಲ್ಲ. ಬರೆಯುವಾಗ ಇಳಿಜಾರಾದ ಡೆಸ್ಕನ್ನು ಇಟ್ಟುಕೊಂಡು ಬರೆಯುವರು.

**ನೂಲುವಶಾಲೆ:**—ಆಶ್ರಮದಲ್ಲಿ ವಿಶಾಲವಾದ ನೂಲುವ ಅನೇಕ ಪ್ರಕಾರದ ರಾಟಗಳೂ ನೇಯುವ ವಿಧವಿಧದ ಮಗ್ಗಗಳೂ ಇರುವವು. ಇಲ್ಲಿ ಅನೇಕ ವಿದ್ಯಾರ್ಥಿಗಳು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದರು. ಅಲ್ಲಿ ಜಿನುಗಾದ ನೂಲನ್ನು ತೆಗೆಯುವ ರೂಢಿಯು ಎಷ್ಟೋ ಜನರಿಗಿರುವದು. ನೆಯಿದ ಬಟ್ಟೆಗಳಿಗೆ ಬಣ್ಣವನ್ನೂ ಇಲ್ಲಿಯೇ ಕೊಡುವರು. ಅದರ ಕಾರಖಾನೆಯು ಸಹ ಇಲ್ಲಿರುವದು.

**ಪುಸ್ತಕ ಸಂಗ್ರಹ:**—ಆಶ್ರಮದಲ್ಲಿ ಒಂದು ಉತ್ತಮವಾದ ಪುಸ್ತಕ ಸಂಗ್ರಹವಿರುವದು. ಅದರಲ್ಲಿ ಮರಾಠಿ, ಗುಜರಾಥಿ, ಹಿಂದಿ, ಸಂಸ್ಕೃತ, ಇಂಗ್ಲಿಷ ಗ್ರಂಥಗಳಿರುವವು. ಈ ವಾಚನಾಲಯವು ಒಂದು ದೊಡ್ಡ ನೆಲಮನೆಯಲ್ಲಿರುವದು. ಅಲ್ಲಿ ಹವೆಯೂ ಬೆಳಕೂ ಸಾಕಷ್ಟು ಇರುವದು. ಅದರ ಮೇಲೆ ನೂಲುವದನ್ನು ಕಲಿಸುವ ವರ್ಗವಿರುವದು.

**ತೋಟದ ಮಟ್ಟಿ:**—ಆಶ್ರಮದೊಳಗಿನ ತೋಟಕ್ಕೆ ನೀರು ಪೂರೈಸಲಿಕ್ಕೆ ಬಾವಿಗೆ ಮಟ್ಟಿ ಹಚ್ಚಿರುವರು. ಈ ಮಟ್ಟಿಯನ್ನು ಮದ್ರಾಸದ ಒಬ್ಬ ರಾಮಚಂದ್ರವ್ ಎಂಬ ಗೃಹಸ್ಥರು ಮಾಡಿರುವರು. ಈ ಮಟ್ಟಿಯಿಂದ ನಮ್ಮಲ್ಲಿಯ ತೊಗಲಿನ ಮಟ್ಟಿಯ ಇಮ್ಮಡಿ ನೀರು ಬರುವದು. ಈ ಮಟ್ಟಿಯು ಕಬ್ಬಿಣದ್ದು. ಅದರ ಸಾಮಾ

ನುಗಳೂ ಕಬ್ಬಿಣವವು. ಜಗ್ಗುವಷ್ಟಕ್ಕೆ ಒಂದು ಕೋಣವು ಸಾಕು. ಬಾರೀ ಹೊಳೆಯ ಮೇಲೆ ಕಬ್ಬಿಣದ ರೀಲು ಹಾಕಿ ಮೇಲೆ ೪ ಗಾಲಿಗಳುಳ್ಳ ಒಂದು ದಪ್ಪ ಹಲಿಗೆಯನ್ನು ಹಾಕಿರುವರು. ಮಟ್ಟಿಯಲ್ಲಿ ನೀರು ತುಂಬಿದ ಕೂಡಲೆ ಕೋಣವು ಹೋಗಿ ಆ ಹಲಿಗೆಯ ಮೇಲೆ ನಿಲ್ಲುವದು. ಕೋಣದ ಭಾರದಿಂದ ಮಟ್ಟಿಯು ಕೆಳಗೆ ಹೋಗುವದು. ಈ ಮಟ್ಟಿಯ ಬೆಲೆ ೨೦೦ ರೂಪಾಯಿ.

**ಸ್ವಚ್ಛತೆ**:—ಆಶ್ರಮದಲ್ಲಿ ಸ್ವಚ್ಛತೆಯಬಗ್ಗೆ ಆಸ್ಥಾಪೂರ್ವಕವಾದ ಲಕ್ಷ್ಯವು ಪೂರೈಸಲ್ಪಡುತ್ತದೆ. ಮನೆಗಳನ್ನೂ ಮಾರ್ಗಗಳನ್ನೂ ಉಡುಗುವ ಕೆಲಸವು ಆಶ್ರಮವಾಸಿಗಳದು. ಅವರು ಸರತಿಯಂತೆ ಈ ಕೆಲಸವನ್ನು ಮಾಡುವರು. ಮಲದ ಮನೆಯ ವ್ಯವಸ್ಥೆಯನ್ನು ಸಹ ಅವರೇ ಮಾಡಬೇಕಾಗುವದು. ಹೊಲೆಯರು ಅಥವಾ ಭಂಗಿಗಳು ಇಲ್ಲಿ ಬರುವದೇ ಇಲ್ಲ. ಮಲದ ಮನೆಯಲ್ಲಿ ಮಲಕ್ಕೊಂದು ಮೂತ್ರಕ್ಕೊಂದು ಹೀಗೆ ಬೇರೆ ಬೇರೆ ಬಕೆಟುಗಳನ್ನು ಹಿಂದು ಮುಂದೆ ಇಡುವರು. ಮಲವಿಸರ್ಜನವಾದ ನಂತರ ಎರಡೂ ಬಕೆಗಟುಗಳಲ್ಲಿ ಮಣ್ಣು ಹಾಕುವರು. ಮಣ್ಣಿನ ಬುಟ್ಟಿಯೂ ಮಣ್ಣು ಹಾಕಲಿಕ್ಕೆ ಒಂದು ಅಗಲವಾದ ಮುಗುಚುವ ಕೈಯೂ ಇರುವವು. ಪ್ರತಿ ದಿವಸ ಬೆಳಿಗ್ಗೆ ಈ ಬಕೆಟ್ಟುಗಳನ್ನೆಲ್ಲ ಒಯ್ದು ತೋಟದಲ್ಲಿ ತಗ್ಗು ಮಾಡಿ ಮಲವನ್ನು ಹಾಕುವರು. ಆದದರಿಂದ ಯಾವ ಪ್ರಕಾರದ ದುರ್ಗಂಧವೂ ಬರುವದಿಲ್ಲ.

**ಗುಜರಾಥ ಕಾಲೇಜ**:—ಉಚ್ಚ ಶಿಕ್ಷಣವನ್ನು ಕೊಡುವ ಈ ವಿದ್ಯಾಲಯವು ಸಾಬರಮತಿಯ ಆಚೆಗೆ ಇರುವದು. ಇಲ್ಲಿ ಬಿ. ಎ. ಬಿ. ಎಸ್. ಸಿ. ಪರೀಕ್ಷೆಗಳ ಅಭ್ಯಾಸವು ನಡೆಯುವದು. ವಿಶಾಲವಾದ ದೊಡ್ಡ ದೊಡ್ಡ ಕಟ್ಟಡಗಳು ಅನೇಕವಿರುವವು. ಅಲ್ಲಿಯ ಪಾರ್ಸೀ ಭಾಷೆಯ ಪ್ರೊಫೆಸರರಾದ ಮಿ. ಶೇಕ ಎಂಬವರು ನಮ್ಮ ಶಿಷ್ಯರಾದ್ದರಿಂದ ಅಲ್ಲಿಯ ಎಲ್ಲ ಪ್ರೊಫೆಸರರ ಪರಿಚಯ ಮಾಡಿಕೊಟ್ಟರು. ಪ್ರೊ. ದಿವಾಟಿಯಾ ಎಂಬವರು ಇಂಗ್ಲಿಷ ಪ್ರೊಫೆಸರರು. ಇವರು ಕೆಲವು ಕಾಲ ಪ್ರಿನ್ಸಿಪಾಲರಾಗಿದ್ದರು. ಇವರು ನಮ್ಮ ಸ್ವಭಾವದವರಿದ್ದಾರೆ. ಇಲ್ಲಿಯ ಪ್ರಿನ್ಸಿಪಾಲರು ಮಿ. ಫಿಂಡಲೇ ಶಿರಾಸ ಎಂಬ ಅರ್ಥಶಾಸ್ತ್ರಜ್ಞರು. ಇವರು ಹಿಂದಕ್ಕೆ ಮುಂಬೈಯಲ್ಲಿ ಲೇಬರ ಬುರೋದ ಡೈರೆಕ್ಟರರಾಗಿದ್ದರು. ಈ ಕಾಲೇಜವನ್ನು ಕಟ್ಟಲಿಕ್ಕೆ ಇಲ್ಲಿಯ ನವಕೋಟ ನಾರಾಯಣರಾದ ಸರ ಚಿನುಭಾಯಿ ಮಾಧವಲಾಲ ಶೇಟರು ೧೪ ಲಕ್ಷ ರೂ. ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ೧೧ ಲಕ್ಷ ಶಾಸ್ತ್ರಾಲಯಕ್ಕೂ, ೧ ಲಕ್ಷ ಸಿಡೆನಹ್ಯಾಮ ಕ್ಲಾರ್ಕ ವಾಚನಾಲಯಕ್ಕೂ, ೨ ಲಕ್ಷ ಜಾರ್ಜಹಾಲ ಎಂಬ ಸಭಾಗೃಹಕ್ಕೂ ಕೊಟ್ಟಿರುವರು.

**ಟ್ರೇನಿಂಗಕಾಲೇಜ**:—ಈ ಟ್ರೇನಿಂಗಕಾಲೇಜವನ್ನು ಕಟ್ಟಲಿಕ್ಕೆ ಪ್ರೇಮಚಂದ ರಾಯಚಂದ ಎಂಬ ಶ್ರೀಮಂತರು ದುಡ್ಡು ಕೊಟ್ಟಿದ್ದರಿಂದ ಇದಕ್ಕೆ ಅವರ ಹೆಸರನಿಂದಲೇ ಕರೆಯುವರು. ಇಲ್ಲಿ ಸದ್ಯಕ್ಕೆ ೨ ಒಂದನೇ ವರ್ಷದ ವರ್ಗಗಳೂ ೧ ಎರಡನೇ

ವರ್ಷದ ವರ್ಗವೂ ಇರುವವು. ಮಿ. ಚೋಕಶಿ ಎಂಬವರು ಹೆಚ್ಚು ಮೂಲ ರಾಗಿದ್ದಾರೆ
ನಮಲ್ಲಿಯಂತೆ ಗುಜರಾಥದಲ್ಲಿಯೂ ಟ್ರೇಂಡ ಜನರ ಸಂಖ್ಯೆಯು ಪ್ರಾಥಮಿಕ ಶಾ
ಗಳಲ್ಲಿ ೧೦೦ಕ್ಕೆ ೫೦ ಕ್ಕಿಂತ ಹೆಚ್ಚಿನೆ. ಆದ್ದರಿಂದ ಈ ಟ್ರೇ. ಕಾ. ದಲ್ಲಿ ೧ನೇ ವರ್ಷ
ದ ವರ್ಗಗಳನ್ನಿಟ್ಟರೆ ಸಾಕೆಂದು ಮೊದಲು ಗೊತ್ತಾಗಿತ್ತು. ಆದರೆ ಗುಜರಾಥದ ಮು
ಸಿಪಾಲಿಟಿಗಳೂ ಲೋಕಲ್‌ಬೋರ್ಡುಗಳೂ ವಿದ್ಯಾಖಾತೆಯವರಿಗೆ ಒತ್ತಾಯ
ಆಗ್ರಹ ತೋರಿಸಿದ್ದರಿಂದ ೨ನೇ ವರ್ಷದ ವರ್ಗವು ಇಡಲ್ಪಟ್ಟಿತು. ೨ನೇ ವರ್ಷ
ಟ್ರೇಂಡರಿಗೆ ಕೆಲಸ ಕೊಡುವ ಜವಾಬದಾರಿಯನ್ನು ಅವರೇ ಹೊತ್ತಿರುವರು. ಹೀಗೆ
ಅಲ್ಲಿಯ ಮುಖಂಡರಲ್ಲಿ ತಮ್ಮಲ್ಲಿಯ ಸಂಸ್ಥೆಗಳ ಬಗ್ಗೆ ಅಭಿಮಾನವೂ ಪ್ರೇಮವು
ಕಂಡು ಬರುವವು. ಈ ಕಾಲಕ್ಕೆ ಟ್ರೇ. ಕಾ. ದ ಪರೀಕ್ಷೆಯು ನಡೆದಿತ್ತು. ಮುಖ್ಯ
ಶಿಕ್ಷಣ ಪ್ರದರ್ಶನದ ಸಿದ್ಧತೆಯು ಪ್ರಾರಂಭವಾಗಿತ್ತು. ಗುಜರಾಥದ ಜಿಲ್ಲೆಗಳ ಪ್ರಾಥ
ಮಿಕ ಶಿಕ್ಷಣವನ್ನು ಅಲ್ಲಿಯ ಲೋ. ಬೋ. ನವರು ತಮ್ಮ ಕಡೆಗೆ ತೆಗೆದುಕೊಂಡಿಲ್ಲ
ಸರಕಾರದವರು ಮುಂದೆ ಶಿಕ್ಷಣಪ್ರಸಾರದ ಕೆಲಸಕ್ಕೆ ದ್ರವ್ಯಸಹಾಯವನ್ನೂ ಮಾಡುತ್ತೆ
ವೆಂದು ಆಶ್ವಾಸನ ಕೊಡುವ ಹೊರತು ತಾವು ಪ್ರಾಥಮಿಕ ಶಿಕ್ಷಣವನ್ನು ಕೈಕೊಳ್ಳು
ದಿಲ್ಲವೆಂದು ಅಲ್ಲಿಯ ಲೋ. ಬೋ. ನವರ ಅಭಿಪ್ರಾಯವು. ಅಹಮ್ಮದಾಬಾದದ ಡಿ. ಎ
ಇ. ರಾದ ಮಿ ದೇಸಾಯಿ ಎಂಬುವರು ವಿದ್ಯಾರ್ಥಿಗಳ ತೋಂಡೀ ಶಿಕ್ಷಣವನ್ನು ತೆಗೆದ
ಕೊಳ್ಳುತ್ತಿವ್ವರು. ಅಲ್ಲಿ ಕೆಲಹೊತ್ತು ಪಾಠನನ್ನು ನೋಡಿದ ಮೇಲೆ ಪ್ರಾಕ್ಟಿಸಿಂಗ ಸ್ಕೂ
ಲಿಗೆ ಹೋದೆವು. ಎಲ್ಲ ಶಿಕ್ಷಕರ ಪಾಠಗಳನ್ನು ನೋಡಿದೆವು. ಬರಹದ ಕೆಲಸವು
ಚೆನ್ನಾಗಿತ್ತು. ಕೆಳಗಿನ ವರ್ಗಗಳಿಗೆ ಸಹ ವಾಕ್ಯರಚನಾಕ್ರಮದ ಪರಿಚಯ ಮಾ
ಕೊಡಲಿಕ್ಕೆ ಚಿತ್ರಗಳ ಸಹಾಯದಿಂದ ಅವುಗಳ ಸಂಕ್ಷಿಪ್ತ ವರ್ಣನೆಯನ್ನು ಬರೆಯಿಸ
ವರು. ಆರಂಭದಲ್ಲಿಯೇ ವಾಕ್ಯಗಳ ವಾಚನವನ್ನು ಕಲಿಸುವ ಪದ್ಧತಿಯನ್ನು
ಪ್ರಾರಂಭಿಸಿರುವರು. ಅದರ ಒಂದೆರಡು ಪಾಠಗಳನ್ನು ನೋಡಿದೆವು. ಇಲ್ಲಿಯ
ಟ್ರೇ. ಕಾ. ದ ವಿದ್ಯಾರ್ಥಿಗಳ ಸಂಖ್ಯೆಯು ೧೧೦ ಇರುವದು. ಪ್ರಾಕ್ಟಿಸಿಂಗ ಸ್ಕೂಲಿನಲ್ಲಿ
೨೦೦ ಇರುವದು. ಇಲ್ಲಿಯ ಶಾಲಾಪತ್ರಿಕದ ೪೦೦೦ ಪ್ರತಿಗಳು ಖರ್ಚಾಗುತ್ತಿರುವವು
ಇಲ್ಲಿಯ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮಿ. ವಕೀಲರು ಅದರ ಮುಖ್ಯ ಸಂಪಾ
ದಕರು.

ಟ್ರೇ. ಕಾ. ದ ಇವಾರತು ನಮ್ಮಲ್ಲಿಯ ವಿದ್ಯಾರ್ಥಿಗಳ ಸಾಯಿಡಿನಂತೆ ಇರು
ವದು. ನಡುವೆ ಬೈಲು ಪ್ರದೇಶವಿದ್ದು ಮೂರು ಕಡೆಗೆ ಕಟ್ಟಡಗಳಿರುವವು. ಅದರ
ಲ್ಲಿಯೇ ಕಾಲೇಜದ ಮತ್ತು ಪ್ರಾ. ಸ್ಕೂ.ನ ವರ್ಗಗಳನ್ನು ಹಾಕುವರು.

# ಡನ್ಮಾರ್ಕ್‌ದ ಜನರ ಒಕ್ಕಲತನವೂ ಸಹಕಾರಿತೆಯೂ

( ಮೆ. ಸಿ. ಬಿ. ಹೂರಿ ಅಸಿ॥ ರಜಿಸ್ಟ್ರಾರ ದ. ಭಾಗ ಇವರ ಭಾಷಣದ ಸಾರಾಂಶವು )

ಡೆನ್ಮಾರ್ಕ ದೇಶವು ಯುರೋಪಖಂಡದೊಳಗಿನ ಒಂದು ತೀರ ಚಿಕ್ಕದೇಶವು. ದರ ಜನಸಂಖ್ಯೆ ಬರೇ ೩೫ ಲಕ್ಷ; ವಿಸ್ತಾರವು ಸುಮಾರು ನಮ್ಮ ದಕ್ಷಿಣಭಾಗದಷ್ಟು ಗಬಹುದು. ಇದು ಉತ್ತರ ಸಮುದ್ರ ಬಾಲ್ಟಿಕ್ ಸಮುದ್ರಗಳ ನಡುವೆ ಒಂದು ಕ್ಕ ದ್ವೀಪಕಲ್ಪಾಕಾರವಾಗಿದೆ. ದಕ್ಷಿಣದಲ್ಲಿ ಜರ್ಮನಿ, ಎಡಕ್ಕೆ ಬ್ರಿಟಿಶ ದ್ವೀಪಗಳು, ಲಕ್ಕೆ ಸ್ಕ್ಯಾಂಡಿನೇವಿಯಾ ದ್ವೀಪಕಲ್ಪ ಇವು ಈ ಚಿಕ್ಕ ದೇಶವನ್ನು ಸುತ್ತುವರಿದಿರುವು.

ಮುಖ್ಯ ವಿಷಯವನ್ನು ಹೇಳುವದಕ್ಕಿಂತ ಮುಂಚೆ ಈ ದೇಶದ ಪರಿಸ್ಥಿತಿಯನ್ನು ಲಮಟ್ಟಿಗೆ ವಿವರಿಸುವದು ಅವಶ್ಯಕವೆನಿಸುವದು. ಈ ದೇಶವು ಶೀತಕಟಬಂಧದಲ್ಲಿ ವದು. ಬೇಸಿಗೆಯಲ್ಲಿ ೧೮ ತಾಸಿನ ಹಗಲೂ ಚಳಿಗಾಲದಲ್ಲಿ ೧೮ ತಾಸಿನ ರಾತ್ರಿ ೂ ಇರುವವು. ಅಕ್ಟೋಬರದಿಂದ ಏಪ್ರಿಲದವರೆಗೆ ದೇಶದ ಭೂಮಿಯೆಲ್ಲಾ ಬರ್ಫ ಂದ ಮುಚ್ಚಿ ಹೋಗಿರುವದು. ಭೂಮಿಯು ತೀರ ನಿಸ್ಸಾರವಾದದ್ದು; ಜವುಳು ್ರದೇಶವೇ ವಿಪುಲವಾಗಿದೆ. ನಮ್ಮ ದೇಶದಲ್ಲಿ ನಾವು ನೀರಿಗಾಗಿ ಮಳೆಯ ದಾರಿ ುನ್ನು ನೋಡುತ್ತ ಆಕಾಶದಲ್ಲಿ ದೃಷ್ಟಿಯನ್ನಿಟ್ಟಿರುವಂತೆ ಡೆನ್ಮಾರ್ಕದಲ್ಲಿ ಒಕ್ಕಲಿಗರು ಲದೊಳಗಿನ ಜವುಳು (ತೇವು) ಹೇಗೆ ಕಡಿಮೆಮಾಡಬಹುದೆಂಬ ಚಿಂತೆಯಲ್ಲಿ ಅಧೋ ವನರಾಗಿರುವರು. ಇಂಥ ಜವುಳು ಪ್ರದೇಶದಲ್ಲಿ ಹಾಂಸೆಯಂಥ ಪದಾರ್ಥವು ಳೆಯುವದು. ಬೇಸಿಗೆಯಲ್ಲಿ ಆ ನೆಲವನ್ನು ಕಡಿದು ಇಟ್ಟಂಗಿಗಳಂತೆ ಮಾಡಿ ಉರು ಲಕ್ಕಾಗಿ ಉಪಯೋಗಿಸುವರು. ಇಂಥ ಪ್ರತಿಕೂಲವಾದ ಪ್ರಾಕೃತಿಕ ಪರಿಸ್ಥಿತಿಯಿ ುರೂ ಜನರು ತಮ್ಮ ಉದ್ಯೋಗಶೀಲತೆ, ಸಾಹಸ, ಸುಶಿಕ್ಷಣಗಳ ಯೋಗದಿಂದ ೇಶವನ್ನು ಸುಸಂಪನ್ನವಾಗಿ ಮಾಡಿರುವರು.

ಪುರಾತನಕಾಲದಲ್ಲಿ ಡೆನ್ಮಾರ್ಕದ ರಾಜನು ಸಾಮ್ರಾಜ್ಯಾಧಿಪತಿಯೆನಿಸಿಕೊಳ್ಳುತ್ತಿ ುನು. ಕಾಲಾಂತರದಲ್ಲಿ ಈ ಸಾಮಾಜ್ಯದ ಮಿಕ್ಕ ಭಾಗಗಳೆಲ್ಲ ಕೈಬಿಟ್ಟು ಹೋಗಿ ಂದು ನಾಲ್ಕಾರು ಜಿಲ್ಲೆಗಳಷ್ಟು ದೊಡ್ಡ ಪ್ರದೇಶವು ಮಾತ್ರ ಉಳಿದಿರುವದ

ನೆಪೋಲಿಯನ್ ಬೋನಾಪಾರ್ಟನು ಹೂಡಿದ ಮಹಾಸಂಗ್ರಾಮದಲ್ಲಿ ಡೆನ್ಮಾ ರ್ಕವು ಆತನನ್ನು ಅನುಸರಿಸಿತು. ಆ ಮಹಾಯುದ್ಧದ ಪರಿಣಾಮದಲ್ಲಿ ಬ್ರಿಟಿಶರು ಯಶಾಲಿಗಳಾಗಿ ಡೆನ್ಮಾರ್ಕ್‌ಕ್ಕೆ ದೈನ್ಯಾವಸ್ಥೆಯುಂಟಾಗಿತ್ತು. ಮುಂದೆ ಕೆಲ ದಿನಗಳ ಮೇ ಜರ್ಮನಿಯ (ಪ್ರುಶ್ಯಾ) ಸಂಗಡ ಮತ್ತೊಮ್ಮೆ ಯುದ್ಧವಾಗಿ ಅದರ ಅವಸ್ಥೆಯು ೇಷ ಹೀನವಾಯಿತು. ಸುಮಾರು ೪೦ವರ್ಷಗಳ ಹಿಂದೆ ಡೆನ್ಮಾರ್ಕದ ದುರ್ಗ

ವರ್ಷದ ವರ್ಗವೂ ಇರುವವು. ಮಿ. ಚೋಕಶಿ ಎಂಬವರು ಹೆಚ್ಚು ಮಾಡಿ ರಾಗಿದ್ದಾ
ನಮಲ್ಲಿಯಂತೆ ಗುಜರಾಥದಲ್ಲಿಯೂ ಟ್ರೇಂಡ ಜನರ ಸಂಖ್ಯೆಯು ಪ್ರಾಥಮಿಕ ಶಾ
ಗಳಲ್ಲಿ ೧೦೦ಕ್ಕೆ ೫೦ ಕ್ಕಿಂತ ಹೆಚ್ಚಿದೆ. ಆದ್ದರಿಂದ ಈ ಟ್ರೇ. ಕಾ. ದಲ್ಲಿ ೧ನೇ ವಷ
ದ ವರ್ಗಗಳನ್ನಿಟ್ಟರೆ ಸಾಕೆಂದು ಮೊದಲು ಗೊತ್ತಾಗಿತ್ತು. ಆದರೆ ಗುಜರಾಥದ ಮು
ನಿಪಾಲಿಟಿಗಳೂ ಲೋಕಲ್‌ಬೋರ್ಡುಗಳೂ ವಿದ್ಯಾಖಾತೆಯವರಿಗೆ ಒತ್ತಾಯ
ಆಗ್ರಹ ತೋರಿಸಿದ್ದರಿಂದ ೨ನೇ ವರ್ಷದ ವರ್ಗವು ಇಡಲ್ಪಟ್ಟಿತು. ೨ನೇ ವರ್ಷ
ಟ್ರೇಂಡರಿಗೆ ಕೆಲಸ ಕೊಡುವ ಜವಾಬದಾರಿಯನ್ನು ಅವರೇ ಹೊತ್ತಿರುವರು. ಹೀ
ಅಲ್ಲಿಯ ಮುಖಂಡರಲ್ಲಿ ತಮ್ಮ ಲ್ಲಿಯ ಸಂಸ್ಥೆಗಳ ಬಗ್ಗೆ ಅಭಿಮಾನವೂ ಪ್ರೇಮವ
ಕಂಡು ಬರುವವು. ಈ ಕಾಲಕ್ಕೆ ಟ್ರೇ. ಕಾ. ದ ಪರೀಕ್ಷೆಯು ನಡೆದಿತ್ತು. ಮತ
ಶಿಕ್ಷಣ ಪ್ರದರ್ಶನದ ಸಿದ್ಧತೆಯು ಪ್ರಾರಂಭವಾಗಿತ್ತು. ಗುಜರಾಥದ ಜಿಲ್ಲೆಗಳ ಪ್ರಾ
ಮಿಕ ಶಿಕ್ಷಣವನ್ನು ಅಲ್ಲಿಯ ಲೋ. ಬೋ. ನವರು ತನ್ನ್ಮ ಕಡೆಗೆ ತೆಗೆದುಕೊಂಡಿಲ್ಲ
ಸರಕಾರದವರು ಮುಂದೆ ಶಿಕ್ಷಣಪ್ರಸಾರದ ಕೆಲಸಕ್ಕೆ ದ್ರವ್ಯಸಹಾಯವನ್ನಾಡುತ್ತೆ
ವೆಂದು ಆಶ್ವಾಸನ ಕೊಡುವ ಹೊರತು ತಾವು ಪ್ರಾಥಮಿಕ ಶಿಕ್ಷಣವನ್ನು ಕೈಕೊಳ್ಳು
ದಿಲ್ಲವೆಂದು ಅಲ್ಲಿಯ ಲೋ. ಬೋ. ನವರ ಅಭಿಪ್ರಾಯವು. ಅಹಮ್ಮದಾಬಾದದ ಡಿ. ಎ
ಇ. ರಾದ ಮಿ. ದೇಸಾಯಿ ಎಂಬುವರು ವಿದ್ಯಾರ್ಥಿಗಳ ತೋಂಡೀ ಶಿಕ್ಷಣವನ್ನು ತೆಗೆದ
ಕೊಳ್ಳುತ್ತಿದ್ದರು. ಅಲ್ಲಿ ಕೆಲಹೊತ್ತು ಪಾಠವನ್ನು ನೋಡಿದ ಮೇಲೆ ಪ್ರಾಕ್ಟಿಸಿಂಗ ಸೂ
ಲಿಗೆ ಹೋದೆವು. ಎಲ್ಲ ಶಿಕ್ಷಕರ ಪಾಠಗಳನ್ನು ನೋಡಿದೆವು. ಬರಹದ ಕೆಲಸವ
ಚೆನ್ನಾಗಿತ್ತು. ಕೆಳಗಿನ ವರ್ಗಗಳಿಗೆ ಸಹ ವಾಕ್ಯರಚನಾಕ್ರಮದ ಪರಿಚಯ ಮಾ
ಕೊಡಲಿಕ್ಕೆ ಚಿತ್ರಗಳ ಸಹಾಯದಿಂದ ಅವುಗಳ ಸಂಕ್ಷಿಪ್ತ ವರ್ಣನೆಯನ್ನು ಬರೆಯಿಸ
ವರು. ಆರಂಭದಲ್ಲಿಯೇ ವಾಕ್ಯಗಳ ವಾಚನವನ್ನು ಕಲಿಸುವ ಪದ್ಧತಿಯನ್ನು
ಪ್ರಾರಂಭಿಸಿರುವರು. ಅದರ ಒಂದೆರಡು ಪಾಠಗಳನ್ನು ನೋಡಿದೆವು. ಇಲ್ಲಿಯ
ಟ್ರೇ. ಕಾ. ದ ವಿದ್ಯಾರ್ಥಿಗಳ ಸಂಖ್ಯೆಯು ೧೧೦ ಇರುವದು. ಪ್ರಾಕ್ಟಿಸಿಂಗ ಸ್ಕೂಲಿನಲ್ಲಿ
೨೦೦ ಇರುವದು. ಇಲ್ಲಿಯ ಶಾಲಾಪತ್ರಕದ ೪೦೦ ಪ್ರತಿಗಳು ಖರ್ಚಾಗುತ್ತಿರುವವು
ಇಲ್ಲಿಯ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮಿ. ವಕೀಲರು ಅದರ ಮುಖ್ಯ ಸಂಪಾ
ದಕರು.

ಟ್ರೇ. ಕಾ. ದ ಇನ್ನೂರತು ನಮ್ಮ ಲ್ಲಿಯ ವಿದ್ಯಾರ್ಥಿಗಳ ಸಾಯಿಡಿನಂತೆ ಇರು
ವದು. ನಡುವೆ ಬೈಲು ಪ್ರದೇಶವಿದ್ದು ಮೂರು ಕಡೆಗೆ ಕಟ್ಟಡಗಳಿರುವವು. ಅದರ
ಲ್ಲಿಯೇ ಕಾಲೇಜದ ಮತ್ತು ಪ್ರಾ. ಸ್ಕೂ.ನ ವರ್ಗಗಳನ್ನು ಹಾಕುವರು.

# ಡೆನ್ಮಾರ್ಕ್‌ದ ಜನರ ಒಕ್ಕಲತನವೂ ಸಹಕಾರಿತೆಯೂ

( ಮೈ. ಸಿ. ಬಿ. ಹೊರಿ ಅವರು ರಜಸ್ತ್ರಾರ ದ. ಭಾಗ ಇವರ ಭಾಷಣದ ಸಾರಾಂಶವು )

ಡೆನ್ಮಾರ್ಕ್ ದೇಶವು ಯುರೋಪಖಂಡದೊಳಗಿನ ಒಂದು ತೀರ ಚಿಕ್ಕದೇಶವು ದರ ಜನಸಂಖ್ಯೆ ಬರೇ ೩೫ ಲಕ್ಷ; ವಿಸ್ತಾರವು ಸುಮಾರು ನಮ್ಮ ದಕ್ಷಿಣಭಾಗದಷ್ಟು ಗಬಹುದು. ಇದು ಉತ್ತರ ಸಮುದ್ರ ಬಾಲ್ಟಿಕ್ ಸಮುದ್ರಗಳ ನಡುವೆ ಒಂದ ಕ್ಕ ದ್ವೀಪಕಲ್ಪಾಕಾರವಾಗಿದೆ. ದಕ್ಷಿಣದಲ್ಲಿ ಜರ್ಮನಿ, ಎಡಕ್ಕೆ ಬ್ರಿಟಿಶ ದ್ವೀಪಗಳು ಲಕ್ಕೆ ಸ್ಯಾಂಡಿನೇವಿಯಾ ದ್ವೀಪಕಲ್ಪ ಇವು ಈ ಚಿಕ್ಕ ದೇಶವನ್ನು ಸುತ್ತುವರಿದಿರು ವು.

ಮುಖ್ಯ ವಿಷಯವನ್ನು ಹೇಳುವದಕ್ಕಿಂತ ಮುಂಚೆ ಈ ದೇಶದ ಪರಿಸ್ಥಿತಿಯನ್ನು ಲನುಟ್ಟಿಗೆ ವಿವರಿಸುವದು ಅವಶ್ಯಕವೆನಿಸುವದು. ಈ ದೇಶವು ಶೀತಕಟಿಬಂಧದಲ್ಲಿ ುವದು. ಬೇಸಿಗೆಯಲ್ಲಿ ೧೮ ತಾಸಿನ ಹಗಲೂ ಚಳಿಗಾಲದಲ್ಲಿ ೧೮ ತಾಸಿನ ರಾತ್ರಿ ುೂ ಇರುವವು. ಅಕ್ಟೋಬರದಿಂದ ಏಪ್ರಿಲದವರೆಗೆ ದೇಶದ ಭೂಮಿಯೆಲ್ಲಾ ಬರ್ಫ ಂದ ಮುಚ್ಚಿ ಹೋಗಿರುವದು. ಭೂಮಿಯು ತೀರ ನಿಸ್ಸಾರವಾದದ್ದು; ಜವುಳು ್ರದೇಶವೇ ವಿಪುಲವಾಗಿದೆ. ನಮ್ಮ ದೇಶದಲ್ಲಿ ನಾವು ನೀರಿಗಾಗಿ ಮಳೆಯ ದಾರಿ ುನ್ನು ನೋಡುತ್ತ ಆಕಾಶದಲ್ಲಿ ವೃಷ್ಟಿಯನ್ನಿಟ್ಟಿರುವಂತೆ ಡೆನ್ಮಾರ್ಕ್‌ದಲ್ಲಿ ಒಕ್ಕಲಿಗರು ಲದೊಳಗಿನ ಜವುಳು (ತೇವು) ಹೇಗೆ ಕಡಿಮೆಮಾಡಬಹುದೆಂಬ ಚಿಂತೆಯಲ್ಲಿ ಅಧೋ ದನರಾಗಿರುವರು. ಇಂಥ ಜವುಳು ಪ್ರದೇಶದಲ್ಲಿ ಹಾಂಸೆಯಂಥ ಪದಾರ್ಥವು ಳೆಯುವದು. ಬೇಸಿಗೆಯಲ್ಲಿ ಆ ನೆಲವನ್ನು ಕಡಿದು ಇಟ್ಟಂಗಿಗಳಂತೆ ಮಾಡಿ ಉರು ಲಕ್ಕಾಗಿ ಉಪಯೋಗಿಸುವರು. ಇಂಥ ಪ್ರತಿಕೂಲವಾದ ಪ್ರಾಕೃತಿಕ ಪರಿಸ್ಥಿತಿಯ ುರೂ ಜನರು ತಮ್ಮ ಉದ್ಯೋಗಶೀಲತೆ, ಸಾಹಸ, ಸುಶಿಕ್ಷಣಗಳ ಯೋಗದಿಂದ ಶವನ್ನು ಸುಸಂಪನ್ನವಾಗಿ ಮಾಡಿರುವರು.

ಪುರಾತನಕಾಲದಲ್ಲಿ ಡೆನ್ಮಾರ್ಕ್‌ದ ರಾಜನು ಸಾಮ್ರಾಜ್ಯಾಧಿಪತಿಯೆನಿಸಿಕೊಳ್ಳುತ್ತಿ ನು. ಕಾಲಾಂತರದಲ್ಲಿ ಈ ಸಾಮ್ರಾಜ್ಯದ ಮಿಕ್ಕ ಭಾಗಗಳೆಲ್ಲ ಕೈಬಿಟ್ಟು ಹೋಗಿ ಂದು ನಾಲ್ಕಾರು ಜಿಲ್ಲೆಗಳಷ್ಟು ದೊಡ್ಡ ಪ್ರದೇಶವು ಮಾತ್ರ ಉಳಿದಿರುವದು.

ನೆಪೋಲಿಯನ್ ಬೋನಾಪಾರ್ಟನು ಹೂಡಿದ ಮಹಾಸಂಗ್ರಾಮದಲ್ಲಿ ಡೆನ್ಮಾ ರ್ಕವು ಆತನನ್ನು ಅನುಸರಿಸಿತು. ಆ ಮಹಾಯುದ್ಧದ ಪರಿಣಾಮದಲ್ಲಿ ಬ್ರಿಟಿಶರು ಯಶಾಲಿಗಳಾಗಿ ಡೆನ್ಮಾರ್ಕ್‌ಕ್ಕೆ ದೈನ್ಯಾವಸ್ಥೆಯುಂಟಾಗಿತ್ತು. ಮುಂದೆ ಕೆಲ ದಿನಗಳ ಯೇ ಜರ್ಮನಿಯ (ಪ್ರಶ್ಯಾ) ಸಂಗಡ ಮತ್ತೊಮ್ಮೆ ಯುದ್ಧವಾಗಿ ಅದರ ಅವಸ್ಥೆಯು ನ್ನಷ್ಟು ಹೀನಸ್ಥಿತಿಗೆ ಮುಟ್ಟಿತು. ಸುಮಾರು ೪೦ವರ್ಷಗಳ ಹಿಂದೆ ಡೆನ್ಮಾರ್ಕ್‌ದ ದುರ್ಗ

ತಿಯನ್ನು ವರ್ಣಿಸಿ ತೀರುವಂತಿರಲಿಲ್ಲ. ಜನರಿಗೆ ಹೊಟ್ಟೆತುಂಬ ಕೂಳೂ ಮೈತುಂಬ ಬಟ್ಟೆಯೂ ಸಿಗುತ್ತಿದ್ದಿಲ್ಲ. ಅದೇ ಕಾಲಕ್ಕೆ ಆ ದೇಶದಲ್ಲಿ ಒಬ್ಬ ಸತ್ಪುರುಷನು ಆಗಿಹೋದನು. ಅವನು ಇನ್ನು ಮುಂದೆ ನಾವು ನಮ್ಮ ರಾಜ್ಯವನ್ನು ಬೆಳಿಸುವ ಗೋಜಿಗೆ ಹೋಗುವದರಲ್ಲಿ ಏನೂ ಅರ್ಥವಿಲ್ಲ. ಜರ್ಮನಿಯು ಬರ್ಲಿನದಲ್ಲಿ ಕೂತು ತೋಪುಗಳನ್ನು ಹಚ್ಚಿ ನಮ್ಮ ಕೋಪನ ಹೇಗನ(ರಾಜಧಾನಿ)ವನ್ನು ಎರಡೇ ತಾಸುಗಳಲ್ಲಿ ಸುಟ್ಟು ಸೂಳೆ ಮಾಡಿ ಬಿಡಬಹುದು. ಅದರಂತೆ ಇಂಗ್ಲಂಡವು ತನ್ನ ಪ್ರಬಲವಾದ ಹಡಗುಪಡೆಯ ಬಲದಿಂದ ನಮ್ಮ ಅಂಗೈಯಗಲದ ದೇಶವನ್ನು "ಉಫ್" ಎಂದು ಊದಿ ಹಾರಿಸಿಬಿಡಬಹುದು. ಆದ್ದರಿಂದ ನಾವು ಉಳಿದಿರುವ ಈ ನಮ್ಮ ಚಿಕ್ಕನಾಡಿನಲ್ಲಿಯೇ ತಕ್ಕ ಸುಧಾರಣೆಗಳನ್ನು ಮಾಡಿಕೊಂಡು ಸುಖದಿಂದ ಕಾಲಕ್ಷೇಪ ಮಾಡುವ ಮಾರ್ಗಗಳನ್ನು ಹುಡುಕಿಕೊಳ್ಳತಕ್ಕದ್ದು, ಎಂದು ಉಪದೇಶ ಮಾಡಿದನು. ಅಂದಿನಿಂದಲೇ ದೇಶದ ಸುಧಾರಣೆಗೆ ಆರಂಭವಾಯಿತು.

ಯಾವದೊಂದು ದೇಶದ ಸುಧಾರಣೆಯಾಗಬೇಕಾದರೆ ಎಲ್ಲಕ್ಕೂ ಮೊದಲು ಅಲ್ಲಿ ಶಿಕ್ಷಣ ಪ್ರಸಾರವಾಗಬೇಕಾಗುವದು. ನಮ್ಮಲ್ಲಿ ಈಗೀಗ ಹಣೆಯಿಕ್ಕಿ ನೋಡುತ್ತಿರುವ ಒತ್ತಾಯದ ಪ್ರಾಥಮಿಕ ಶಿಕ್ಷಣವು ಆ ದೇಶದಲ್ಲಿ ೪೦ ವರ್ಷಗಳ ಹಿಂದೆಯೇ ಪ್ರಜಾರದಲ್ಲಿ ಬಂದಿರುವದು. ಸಾವಿರದಲ್ಲಿ ಒಬ್ಬಿಬ್ಬರು ಅಶಿಕ್ಷಿತರು ಸಿಕ್ಕರೆ ಸಿಗಬಹುದು. ಅವರೂ ತರುಣರಲ್ಲ; ಬಾಲಕರೂ ಅಲ್ಲ; ಕಲಿಸುವದಕ್ಕೂ ಕಲಿಯುವದಕ್ಕೂ ಸಾಧ್ಯವಿಲ್ಲದ ಹಳ್ಳಿಗಳ ಮೂಲೆಗಳಲ್ಲಿರುವ ಮುಪ್ಪಿನ ಮುದುಕರು. ಮಿಕ್ಕವರೆಲ್ಲರೂ ಸಾಕ್ಷರಿಗಳು; ಸುಶಿಕ್ಷಿತರಾದ ನಾಗರಿಕರು. ಬಾಲಕರಿಗೆ ಶಾಲೆಗಳಿರುವಂತೆ ಪ್ರಬುದ್ಧರಿಗೂ ತಕ್ಕ ಶಾಲೆಗಳಿರುವವು. ಹಗಲು ತಮ್ಮ ಉಪಜೀವನವನ್ನು ಸಾಗಿಸಿಕೊಳ್ಳುವದಕ್ಕಾಗಿ ಕೆಲಸಗಳಲ್ಲಿ ತೊಡಗಿದ ಜನರು ರಾತ್ರಿ ಸಾಲೆಗಳಲ್ಲಿ ಓದಲಿಕ್ಕೆ ಹೋಗುವರು. ಊರೂರಿಗೆ ಪೀಪಲ್ಸ ಹಾಯಸ್ಕೂಲುಗಳೆಂಬ ಶಿಕ್ಷಣ ಸಂಸ್ಥೆಗಳಿರುವವು. ಅರ್ಥಶಾಸ್ತ್ರ, ಸಹಕಾರ, ಕೈಗಾರಿಕೆ, ಚಿತ್ರಕಲೆ, ಸಂಗೀತವಿದ್ಯೆ, ಮುಂತಾದ ಉಪಯುಕ್ತ ಹಾಗು ಲಲಿತಕಲಾ ವಿಷಯಗಳಿಗೆ ಅಲ್ಲಿ ಹೆಚ್ಚು ಮಹತ್ವವಿರುವದು. ಈ ಪೀಪಲ್ಸ ಹಾಯಸ್ಕೂಲುಗಳಿಗೆ ಪ್ರಬುದ್ಧರೂ ಹೋಗುತ್ತಿರುವರು. ಶಿಕ್ಷಣವನ್ನು ಹೊಂದಬೇಕೆಂಬದೇ ಆ ಹಾಯಸ್ಕೂಲಗಳ ವಿದ್ಯಾರ್ಥಿಗಳ ಧ್ಯೇಯವಾಗಿರುವದು. ಆದ್ದರಿಂದ ಅಲ್ಲಿ ಸ್ಕೂಲಗಳಲ್ಲಿ ಪರೀಕ್ಷೆಗಳಿಲ್ಲ. ವಿಸ್ತಾರನೂನದಿಂದ ಕೇವಲ ನಮ್ಮ ದಕ್ಷಿಣಭಾಗದಷ್ಟಿರುವ ಆ ದೇಶದಲ್ಲಿ ನಮ್ಮ ಪುಣೆಯ ಅಗ್ರಿಕಲ್ಚರ ಕಾಲೇಜದಂಥ ೪೩ ಕಾಲೇಜಗಳಿರುವವು! ಇದೊಂದೇ ಮಾತಿನಿಂದ ಆ ದೇಶದಲ್ಲಿ ಶಿಕ್ಷಣ ಸೌಕರ್ಯಗಳು ಎಷ್ಟು ವಿಪುಲವಾಗಿರುವವೆಂಬದರ ಕಲ್ಪನೆಯಾಗಬಹುದು. ಈ ಕಾಲೇಜುಗಳಲ್ಲಿಯೂ ಪರೀಕ್ಷೆಗಳಿರುವದಿಲ್ಲ.

೨೪ ದಿನಗಳಿಂದ ೩ ತಿಂಗಳು, ೬ ತಿಂಗಳು, ೧ ವರ್ಷ ಹೀಗೆ ಮೂರು ವರ್ಷಗಳವರೆಗಿನ ಅಭ್ಯಾಸ ಕ್ರಮವಿರುವದು. [illegible]

್ಯವಾದ ವಿಷಯಗಳನ್ನು ಆರಿಸಿಕೊಂಡು ಆವಶ್ಯಕವೆನಿಸುವಷ್ಟು ಕಾಲಾವಧಿಯವ
ಿ ಅಲ್ಲಿ ಉಳಿದು ಶಿಕ್ಷಣವನ್ನು ಹೊಂದಿ ತಮ್ಮ ತಮ್ಮ ಉದ್ಯೋಗಕ್ಕೆ ತಿರುಗಿ ಹೋ
ವರು. ಹೆಂಗಸರಿಗೂ ಗಂಡಸರಿಗೂ ಕೂಡಿಯೇ ಶಿಕ್ಷಣ ಸಾಗಿಸುವ ಯೋಜನೆಯೂ
ರಿ ಬೇರೆಯಾಗಿ ವರ್ಗಗಳನ್ನೂ ಅಭ್ಯಾಸ ಕ್ರಮವನ್ನೂ ಕಲ್ಪಿಸಿ ಅಭ್ಯಾಸ ನಡಿಸುವ
ವಸ್ಥೆಯೂ ಇರುವವು. ಆ ದೇಶದೊಳಗಿನ ಪ್ರತಿಯೊಬ್ಬ ಒಕ್ಕಲಿಗನಿಗೆ ಇಂಥ
ಾಮಿಯಲ್ಲಿ ಇಂಥದೇ ಬೆಳೆ ಇಂಥಿಂಥ ಕಾರಣಗಳ ಸಲುವಾಗಿ ಚನ್ನಾಗಿ ಬರುವ
ುಬದನ್ನು ಶಾಸ್ತ್ರೀಯವಾಗಿ ಹೇಳಲಿಕ್ಕೆ ಬರುತ್ತಿರುವದು. ಯಾವ ಯಾವ ದೇಶಗಳಲ್ಲಿ
ುಥೆಂಥ ಹವೆ ನೀರು ಭೂಮಿ ಇವುಗಳ ಸೌಕರ್ಯದ ಮೂಲಕ ಎಂಥೆಂಥ ಬೆಳೆಗಳು
ುವವು? ಎಲ್ಲಿ ಯಾವ ಸಾಮಾನುಗಳಿಗೆ ಗಿರಾಕಿಗಳಿರುವವು? ಎಲ್ಲಿ ಯಾವ ಸಾಮಾನು
ಗ್ಗವಾಗಿ ದೊರೆಯುವದು ? ಎಂಬದನ್ನಾದರೂ ತಟ್ಟನೇ ಹೇಳುವಷ್ಟು ಭೂಗೋಲ
ಜ್ಞಾನ ಅವರಿಗಿರುವದು. ಆದರೆ ನಮ್ಮ ದೇಶದ ಒಕ್ಕಲಿಗರಿಗೆ ತಮ್ಮ ಹಿರಿಯರನ್ನು
ುಸರಿಸುವದರ ಹೊರತಾಗಿ ಏನೂ ಗೊತ್ತಿರುವದಿಲ್ಲ. ನಮ್ಮ ದೇಶದಂತೆ ಈ
ಶದಲ್ಲಿಯೂ ಒಕ್ಕಲತನವೇ ಜನರ ಮುಖ್ಯ ಜೀವನೋಪಾಯವು. ನೂರರಲ್ಲಿ
ು ಜನರು ಒಕ್ಕಲಿಗರು. ಜನರ ಜೀವನ ಕ್ರಮವು ಬಹು ಕಷ್ಟತರವಾಗಿರುವದು.
ುಮ್ಮಲ್ಲಿ ನಾಲ್ಕು ದುಡ್ಡು ಇದ್ದರೆ ಹೇಗಾದರೂ ಒಂದು ದಿನವನ್ನು ಕಳೆಯಬಹುದು;
ುರಿಯ ಮೇಲಾದರೂ ಮಲಗಿ ಬೆಳಗು ಮಾಡಬಹುದು. ಆದರೆ ಯುರೋಪ
ಖಂಡದೊಳಗಿನ ದೇಶಗಳಲ್ಲಿ ಆ ಸ್ಥಿತಿಯಿಲ್ಲ. ಇಂಗ್ಲಂಡದಲ್ಲಿ ಒಬ್ಬ ತೀರ ಬಡವನು
ುದು ರಾತ್ರಿಯನ್ನು ಕಳೆಯುಬೇಕಾದರೆ ಬರೇ ಮಲಗಿದ ಸ್ಥಳಕ್ಕೆ ನಾಲ್ಕಾಣೆ ಬಾಡಿಗೆ
ುಡಬೇಕಾಗುವದು. ಡೆನ್ಮಾರ್ಕ್‌ದಲ್ಲಿ ಇಷ್ಟಕ್ಕೆ ಏನಿಲ್ಲೆಂದರೂ ೭–೮ ಆಣೆ ಬೀಳು
ುವು. ತೀರ ಕಡಿಮೆಯೆಂದರೆ ೩ ರೂಪಾಯಿಗಳ ಹೊರತು ಒಂದು ದಿನವನ್ನು ಕಳೆ
ುವದು ಅಸಾಧ್ಯವಾಗುವದು. ನಮ್ಮ ದೇಶದಲ್ಲಿ ಬೈಲಲ್ಲಿ ಮಲಗಿ ಬೆಳಗು ಮಾಡು
ುತೆ ಆದೇಶದಲ್ಲಿ ಯತ್ನಿಸಿದರೆ ರಾತ್ರಿಯನ್ನು ಕಳೆಯುವದರ ಬದಲು ಚಳಿಯಿಂದ
ಮೋನಿಯಾ ವಿಕಾರವಾಗಿ ಪ್ರಾಣವನ್ನೇ ಕಳೆದುಕೊಳ್ಳಬೇಕಾಗುವದು. ಇಂಥ
ುಹರ್ಷತೆಯ ಸ್ಥಿತಿಯಿದ್ದರೂ ಅಲ್ಲಿಯ ಎಲ್ಲ ಜನರು ಸುಖದಿಂದ ಕಾಲಕಳೆಯುತ್ತಿ
ುವದು ನಮಗೆ ಆಶ್ಚರ್ಯದ ವಿಷಯವಾಗಿದೆ. ಆ ದೇಶದಲ್ಲಿ ಭಿಕ್ಷುಕರೇ ಇಲ್ಲವೆಂ
ರೂ ಸಲ್ಲುವದು. ಭಿಕ್ಷಾವೃತ್ತಿಯು ತೀರ ಪಾಪ ಜೀವನವೆನಿಸುವದು, ನಮ್ಮಲ್ಲಿಯಂತೆ
ುಡಿ ಬೇಡುವ ಕರಟಕ ವೃತ್ತಿಯು ಕಾಯದೆಯಿಂದ ಅಪರಾಧವೆನಿಸುವದು. ಸರ್ವೃ
ಯಿಂದ ನಡೆದು ದೈವಯೋಗದಿಂದ ದುರವಸ್ಥೆಯನ್ನು ಹೊಂದಿದ ಅನಾಥರಿಗೆ
ರಕಾರದ ಅನಾಥಾಲಯದಲ್ಲಿ ಆಶ್ರಯವು ದೊರೆಯುವದು. ಸ್ಥಾನಿಕ ಮುನಿಸಿಪಾಲಟಿ
ಳು ಇಂಥ ಅನಾಥಾಲಯಗಳನ್ನು ಸ್ಥಾಪಿಸಿ ಅವರಿಗೆ ಎಲ್ಲ ಬಗೆಯ ಸುಖಸಾಮಗ್ರಿ
ಳನ್ನು ಪೂರೈಸಿ ಕೊಡುತ್ತಿರುವವು. ಇಂಥ ಅನಾಥಾಲಯಗಳಲ್ಲಿರುವವರಿಗೂ ಕೂಡ

ಜರ್ಮನಿ ಮುಂತಾದ ದೇಶಗಳಲ್ಲಿ ನಡೆಯುವ ಗಾಯನ ವಾದನಾದಿ ವಿಲಾಸದ ವಿಷಯಗಳನ್ನು ವಾಯರಲೆಸ್‌ದ ಸಹಾಯದಿಂದ ಆಯಾ ಸ್ಥಳಗಳಲ್ಲಿಯೇ ಒದಗಿಸಿಕೊಡುವ ಯೋಜನೆಯಿರುವದೆಂದಮೇಲೆ ೫ ಅನಾಥಾಲಯಗಳೊಳಗಿನ ನಿರಾಶ್ರಿತರ ಸ್ಥಿತಿ ಎಷ್ಟು ವಿಧದ ಸೌಕರ್ಯಗಳಿಂದ ಯುಕ್ತವಾಗಿರುವದೆಂಬದನ್ನು ತರ್ಕಿಸಬಹುದು.

ಡೆನ್ಮಾರ್ಕ್‌ದೇಶದೊಳಗಿನ ಒಕ್ಕಲಿಗರು ಸುಶಿಕ್ಷಿತರಾಗಿರುವರು ; ಸುಶೀಲರಾಗಿರುವರು; ಸಂಪನ್ನರಾಗಿರುವರು; ಯಾವ ವಿಧದ ವಿಶಾಸ ಸಾಮಗ್ರಿಗಳಿಗೂ ಅವರಿಗೆ ಕೊರತೆಯಿರುವದಿಲ್ಲ. ಸುಮಾರು ಮೂರು ಎಕರೆ ಜಮೀನುಳ್ಳ ಒಬ್ಬ ಒಕ್ಕಲಿಗನ ಸ್ಥಿತಿಯು ನಮ್ಮ ದೇಶದೊಳಗಿನ ೩೦೦ ಎಕರೆ ಹೊಲವುಳ್ಳ ಜಮೀನದಾರನಿಗಿಂತಲೂ ಹೆಚ್ಚು ಒಳ್ಳೆಯದಾಗಿರುವದೆಂದು ಹೇಳಬಹುದು. ನಮ್ಮಲ್ಲಿಯ ಒಕ್ಕಲಿಗರಿಗೆ ಹೆಚ್ಚು ಹೆಚ್ಚು ಹೊಲಮನೆಗಳಿದ್ದಂತೆ ಅವುಗಳ ಹಿಂದೆ ಹೆಚ್ಚು ಹೆಚ್ಚು ಭಾರವಾದ ಸಾಲದ ಹೊರೆಯೂ ಇದ್ದೇ ಇರುವದು. ಅಲ್ಲಿಯ ಒಕ್ಕಲಿಗರ ಮನೆಗಳು ಅವರವರ ಹೊಲದ ನಡುವೆಯೇ ಇರುವವು. ಅಲ್ಲಿಯೇ ಅವನು ತನ್ನ ದನಕರುಗಳನ್ನು ಇಟ್ಟುಕೊಂಡು ಹೊಲದ ಕೆಲಸವನ್ನು ಸಾಗಿಸುತ್ತಿರುವನು. ಅವರ ಹೊಲಗಳು ಅಲ್ಲೊಂದು ಇಲ್ಲೊಂದು ಹೀಗೆ ವಿಭಾಗವಾಗಿರುವದಿಲ್ಲ. ಸುಮಾರು ಮೂರು ಎಕರೆ ಜಮೀನಿರುವ ಒಕ್ಕಲಿಗನಿಗೆ ಅಡ್ಡಾಡುವದಕ್ಕೆ ಕುದುರೆಯ ಗಾಡಿಯಿರುವದು. ಇರುವದಕ್ಕೆ ಪ್ರಶಸ್ತವಾದ ಬಂಗಲೆಯಿರುವದು. ಮನೆಯೊಳಗೆ ಒಂದು ಚಿಕ್ಕವಾಚನಾಲಯವಿರುವದು. ನಡುಮನೆಯು ಬೆಲೆಯುಳ್ಳ ಮೇಜು ಕುರ್ಚಿ ಮುಂತಾದ ಉಪಕರಣಗಳಿಂದಲೂ ಸುಂದರವಾದ ಚಿತ್ರಗಳಿಂದಲೂ ಸುಶೋಭಿತವಾಗಿರುವದು. ವಿನೋದಕ್ಕಾಗಿ ೩೦೦–೪೦೦ ರೂ. ಬೆಲೆಬಾಳುವ ಹಾರ್ಮೊನಿಯಮ್ ಮುಂತಾದ ಎಲ್ಲ ವಿಲಾಸದ ಸಾಮಗ್ರಿಗಳಿರುವವು.

ಹಿಂದೆ ಹೇಳಿದಂತೆ ಪ್ರಾಕೃತಿಕ ಪರಿಸ್ಥಿತಿಯು ಪ್ರತಿಕೂಲವಾಗಿದ ರೂ ಡೆನ್ಮಾರ್ಕ್ ದೇಶದೊಳಗಿನ ಜನರ ಸ್ಥಿತಿಯು ಈ ರೀತಿ ಉತ್ತಮೋತ್ತಮವಾಗಿರುವದಕ್ಕೆ ಕಾರಣಗಳೇನೆಂಬದನ್ನು ಇನ್ನು ಮುಂದೆ ಹೇಳುವ ಸಂಗತಿಗಳಿಂದ ಅರಿತುಕೊಳ್ಳಬಹುದು.

ಒಕ್ಕಲಿಗರ ಸ್ಥಿತಿಯು ಸುಧಾರಿಸುವದಕ್ಕೆ ಸುಶಿಕ್ಷಿತತೆಯ ಜೊತೆಗೆ ಶಾಸ್ತ್ರೀಯ ಜ್ಞಾನವೂ ತಕ್ಕ ಭಾಂಡವಲವೂ ಬೇಕಾಗುವವು. ಮತ್ತು ಒಕ್ಕಲಿಗರು ಹುಟ್ಟಿಸುವ ಸಾಮಗ್ರಿಗಳನ್ನು ಆದಷ್ಟು ಹೆಚ್ಚು ಬೆಲೆಗೆ ಮಾರಿ ಬಂದದ್ದನ್ನೆಲ್ಲಾ ಅವರೇ ಹೊಂದುತ್ತಿರಬೇಕು. ಮತ್ತು ಒಕ್ಕಲತನಕ್ಕೆ ಬೇಕಾಗುವ ಕುದುರೆ ಗಳೇದಸಾಮಾನು ಮುಂತಾದ ಸಾಮಗ್ರಿಗಳನ್ನು ಆದಷ್ಟು ಕಡಿಮೆ ಬೆಲೆಗೆ ದೊರಕಿಸಿಕೊಳ್ಳಲು ಸಮರ್ಥರಾಗಬೇಕಾಗುವದು. ಈ ವಿಷಯಗಳನ್ನು ಡೆನ್ಮಾರ್ಕ್‌ದೇಶದಲ್ಲಿ ಯಾವರೀತಿಯಾಗಿ ಪೂರೈಸಿಕೊಳ್ಳುವರೆಂಬದನ್ನು ಕ್ರಮದಿಂದ ವಿವೇಚಿಸುವ.

ನಮ್ಮ ದೇಶದಲ್ಲಿ ಒಕ್ಕಲಿಗರು ಹೊಲವಲ್ಲಿ ಬಿತ್ತಿ ಬೆಳೆಯುವ ಹತ್ತಿ ಧಾನ್ಯಗಳು ಎಣ್ಣೆಯ ಕಾಳುಗಳು ಇವೇ ಅವರ ಮುಖ್ಯ ಉತ್ಪನ್ನಗಳು. ಅವಕ್ಕೆ ಸಂಬಂಧಿಸಿದ ಉಪವಿಷಯಗಳ ಜೋಡಣೆಯು ಅವರಿಗೆ ಎಷ್ಟು ಮಾತ್ರವೂ ಇರುವದಿಲ್ಲ. ಆದರೆ ಡೆನ್ಮಾರ್ಕ್‌ದೇಶದಲ್ಲಿ ಒಕ್ಕಲಿಗರು ಸುಶಿಕ್ಷಿತರೂ ಶಾಸ್ತ್ರೀಯಜ್ಞಾನ ಸಂಪನ್ನರೂ ಆಗಿರುವದರಿಂದ ಅವರು ಈ ಎಲ್ಲ ಉಪವಿಷಯಗಳನ್ನು ಸುವ್ಯವಸಿತವಾಗಿ ಸಾಗಿಸಿಕೊಳ್ಳುವರು. ಹೊಲಗಳಲ್ಲಿ ಬಿತ್ತಿ ಬೆಳೆದ ಬೆಳಸುಗಳೊಂದೇ ಅವರ ಉತ್ಪನ್ನವಲ್ಲ. ಅವರು ದನಗಳನ್ನೂ ಹಂದಿಗಳನ್ನೂ ಕೋಳಿಗಳನ್ನೂ ಜೇನುಹುಳಗಳನ್ನೂ ಆ ಹೊಲದಲ್ಲಿಯೇ ಸಾಕುವರು. ದನಗಳಿಂದ ಬೆಣ್ಣೆಯೂ ಹಂದಿಗಳಿಂದ ಮಾಂಸವೂ ಕೋಳಿಯಿಂದ ತತ್ತಿಗಳೂ ಜೇನುಹುಳಗಳಿಂದ ತುಪ್ಪವೂ ಅವರಿಗೆ ದೊರೆಯುವವು. ಅವುಗಳನ್ನು ಅವರು ವ್ಯವಸ್ಥಿತರೀತಿಯಿಂದ ಪರದೇಶಗಳಿಗೆ ಕಳುಹಿಸಿ ಹಣಗಳಿಸುವರು.

ಪ್ರತಿಯೊಬ್ಬ ಒಕ್ಕಲಿಗನು ೪।೫ ಆಕಳುಗಳನ್ನು ಸಾಕುವನು. ಅವುಗಳ ಜೋಪಾನವನ್ನು ಶಾಸ್ತ್ರೀಯ ರೀತಿಯಿಂದ ಮಾಡುವದರಿಂದ ಒಂದೊಂದು ಆಕಳು ೨।೩ ಬಕೆಟ್ಟು ಹಾಲು ಹಿಂಡುವದು. ನಾವು ಹಿಂದುಗಳು ೩೩ ಕೋಟಿ ದೇವತೆಗಳು ಆಕಳಿನಲ್ಲಿ ವಾಸಿಸುವವೆಂದು ತಿಳಿದು ಆಕಳನಿಷಯಕ್ಕೆ ಪೂಜ್ಯಬುದ್ಧಿಯುಳ್ಳವರಾವರೂ, ನಮ್ಮಲ್ಲಿರುವ ಆಕಳಗಳು ಬಡಕವಾಗಿದ್ದು ತೀರ ಸ್ವಲ್ಪ ಹಾಲು ಹಿಂಡುತ್ತವೆ. ಡೆನ್ಮಾರ್ಕ್‌ದ ಜನರು ಆಕಳುಗಳು ಪೂಜ್ಯವಾದವೆಂಬ ಭಾವನೆಯನ್ನು ಕೃತಿಯಿಂದ ತೋರಿಸುತ್ತಿರುವರು. ದನಗಳ ಕುಲಪರಂಪರೆಯನ್ನು ನೋಡಿ ಅವುಗಳ ಬೆಲೆಕಟ್ಟುವರು. ನುತ್ತು ಉತ್ತಮವರ್ಗದ ಹೋರಿಯಿಂದಲೇ ಹೊಸ ಪೀಳಿಗೆಯಾಗುವ ವ್ಯವಸ್ಥೆಯನ್ನು ಮಾಡುವರು. ಕಡಿಮೆ ತರದ ಹೋರಿಗಳಿಂದ ಆಕಳು ಗಬ್ಬವಾಗದಂತೆ ಬಹು ಎಚ್ಚರದಿಂದ ನೋಡಿಕೊಳ್ಳುವರು. ಉತ್ತಮವರ್ಗದ ಒಂದೊಂದು ಹೋರಿಯ ಬೆಲೆಯು ೫೦,೦೦೦ ರೂಪಾಯಿಗಳ ವರೆಗೆ ಇರುವದು. ಒಂದೊಂದು ಹಳ್ಳಿಯಲ್ಲಿ ಒಂದೊಂದು ಡೇರಿಸಂಘವಿರುವದು. ಆ ಹಳ್ಳಿಯಲ್ಲಿ ಹಿಂಡುವ ಎಲ್ಲ ದನಗಳ ಹಾಲನ್ನು ಆ ಡೇರಿಯಲ್ಲಿ ಒಯ್ದು ಕೊಡುವರು. ಅಲ್ಲಿ ಯಂತ್ರದ ಸಹಾಯದಿಂದ ಬೆಣ್ಣೆಯನ್ನು ತೆಗೆಯುವರು. ಆ ಬೆಣ್ಣೆಯನ್ನು ಇಂಥ ಹಲವು ಹಳ್ಳಿಗಳ ಕೇಂದ್ರವಲ್ಲಿರುವ ಮತ್ತೊಂದು ಯೂನಿಯನ್ ಸಂಘಕ್ಕೂ ಅಲ್ಲಿಂದ ಮಾಧ್ಯವರ್ತಿ ಸಂಘಕ್ಕೂ ನಂತರ ಇಂಗ್ಲಂಡ ಮುಂತಾದ ಪರದೇಶದ ಹಳ್ಳಿಗೂ ಕಳುಹಿಸಿ ಅಲ್ಲಿರುವ ಆಯಾ ಸಂಘಗಳ ಶಾಖೆಗಳ ಮುಖಾಂತರವಾಗಿ ಮಾರುವರು. ಇದರಿಂದ ಇಂಗ್ಲಂಡದ ಸಾವುಕಾರನು ತನ್ನ ಕುಟುಂಬಕ್ಕಾಗಿ ಕೊಂಡು ಕೊಂಡ ಬೆಣ್ಣೆಯ ಬೆಲೆಯ ಬಹುದೊಡ್ಡ ಭಾಗವು ನಟ್ಟಿಗೆ ಡೆನ್ಮಾರ್ಕ್‌ದೊಳಗಿನ ಒಕ್ಕಲಿಗನ ಕಿಸೆಗೆ ಹೋಗಿ ಬೀಳುವದು. ಡೆನ್ಮಾರ್ಕ್‌ದಿಂದ ಇಂಗ್ಲಂಡಕ್ಕೆ ಕಳುಹಿಸುವ ವೆಚ್ಚದ ಸಲುವಾಗಿ ಮಾತ್ರ ಕೆಲವೊಂದು ಭಾಗವು ಜೋಗುವದು. ನಮ್ಮ

ದೇಶದಲ್ಲಿ ಈ ಸ್ಥಿತಿಯಿಲ್ಲ. ಒಕ್ಕಲಿಗನು ಬೆಳೆದ ಬೆಳೆಯ ಬೆಲೆಯಲ್ಲಿ ದೊಡ್ಡ ಭಾಗ ಒಕ್ಕಲಿಗರ ಬದಲಾಗಿ ನಡುವಿನ ವ್ಯಾಪಾರಿಗಳ ಪಾಲಿಗೆ ಹೋಗಿ ಬಿಡುವದ ಉದಾ :—ಧಾರವಾಡ ಜಿಲ್ಲೆಯೊಳಗಿನ ಒಂದು ಹಳ್ಳಿಯಲ್ಲಿ ಒಬ್ಬ ಒಕ್ಕಲಿಗ ಬೆಳೆದ ಹತ್ತಿಯು ಮಾಂಚೆಸ್ಟರದಲ್ಲಿ ಕೆಲವೊಂದು ರಕಮಿಗೆ ಮಾರುವದೆಂದು ತಿಳಿದ ಅದರೊಳಗಿನ ಬಹುದೊಡ್ಡ ಭಾಗವು ಇಂಗ್ಲಂಡ, ಮುಂಬಯಿ, ಹುಬ್ಬಳ್ಳಿಗಳೊಳಗಿ ಸಾವುಕಾರರು ಹಾಗೂ ಹಳ್ಳಿಗಳೊಳಗಿನ ದಲಾಲರು ಇವರ ಪಾಲಿಗೆ ಹೋಗಿ ಬಿಡ ವದು.

ನಮ್ಮ ದೇಶದಲ್ಲಿ ಹುಡುಗರಿಗೆ ಕುಡಿಯಲಿಕ್ಕೆ ಹಾಲು ದೊರೆಯುವದಿಲ್ಲ ದೊಡ್ಡ ಶಹರಗಳಲ್ಲಿ ಗೌಳಿಗರು ಮೋಸಮಾಡಿ ಬೆಣ್ಣೆ ತೆಗೆದು ಮಿಕ್ಕುಳಿದ ಹಾಲುಗಳನ್ನ ಮಾರುತ್ತಿರುವರು. ಇಂಥ ಹಾಲು ಕೂಡ ಸಾಮಾನ್ಯರಿಗೆ ದುರ್ಮಿಲ ವಾಗಿರುವವ ಆದರೆ ಡೆನ್ಮಾರ್ಕದಲ್ಲಿ ಇಂಥ ಬೆಣ್ಣೆ ತೆಗೆದ ಹಾಲನ್ನು ಹಂದಿಗಳಿಗೆ ಹಾಕುವರು ಈ ಹಾಲಿನಿಂದ ಹಂದಿಗಳು ಪುಷ್ಟವಾಗಿ ಬೆಳೆಯುವವು. ಹಂದಿಗಳನ್ನು ಅವುಗ ತೂಕದಿಂದ ಬೆಲೆಕಟ್ಟುವರು. ಒಂದು ಹಂದಿಗೆ ಸುಮಾರು ೫೫ ಪೌಂಡು ಬೆಲೆಬರ ವದು. ಡೆನ್ಮಾರ್ಕದ ಒಕ್ಕಲಿಗರು ತಮ್ಮ ಸರಕುಗಳನ್ನು ಎಷ್ಟು ಕುಶಲತೆಯಿಂ ಮಾರುವರೆಂಬದನ್ನು ಈ ಕೆಳಗೆ ಹೇಳುವ ಸಂಗತಿಯಿಂದ ತಿಳಿಯಬಹುದು. ಅಲ್ಲಿಯ ಒಕ್ಕಲಿಗರಿಗೆ ಎಲ್ಲಿ ಎಂಥ ಸಾಮಾನುಗಳ ಬೇಡಿಕೆಯಿರುವದೆಂಬದರ ಅರಿವು ಚನ್ನಾ ಇರುವದು. ಒಂದು ಹಂದಿಯನ್ನು ಕೊಯ್ದರೆ ಅದರ ಕಾಲಿನಂಥ ಕನಿಷ್ಠ ಭಾಗ ಮಾಂಸವನ್ನು ಆಫ್ರಿಕದಂಥ ಬಡದೇಶಕ್ಕೆ ಕಡಿಮೆ ಬೆಲೆಗೆ ಕಳುಹಿಸುವರು. ಧಡ ಬೆಲೆ ಬಾಳುವ ಮಾಂಸವನ್ನು ಇಂಗ್ಲಂಡದಂಥ ಶ್ರೀಮಂತ ದೇಶಕ್ಕೂ ತಲೆಯ ಕಡೆಯ ಮಧ್ಯಮಶರದ ಮಾಂಸವನ್ನು ಜರ್ಮನಿಯಂಥ ಮಧ್ಯಮ ವರ್ಗದ ದೇಶಕ್ಕೂ ಕಳುಹಿ ಸುವರು. ಒಂದು ಕೋಳಿಯ ತತ್ತಿಯನ್ನು ಪರದೇಶಕ್ಕೆ ಕಳುಹಿಸುವದಾದರೆ ಅದನ್ನು ಮೊದಲು ಶಾಸ್ತ್ರೀಯರೀತಿಯಿಂದ ಪರೀಕ್ಷಿಸಿ ಒಂದು ಪೆಟ್ಟಿಗೆಯಲ್ಲಿ ಹಾಕಿ ಅದರ ಸಂ ಡ ಒಂದು ನಂಬರಿನ ಚೀಟಿಯನ್ನು ಇಟ್ಟು ಅದರಲ್ಲಿ ಈ ತತ್ತಿಯು ಕೆಟ್ಟದಿದ್ದರೆ ಅದರ ಬೆಲೆಯನ್ನು ತಿರುಗಿ ಕೊಡುವೆನೆಂದು ಬರೆದಿರುವರು. ಲಂಡನ್ನದೊಳಗಿನ ಪೇಟೆಯಲ್ಲಿ ಈ ತತ್ತಿಯನ್ನು ಕೊಂಡವನು ಈ ತತ್ತಿಯು ಕೆಟ್ಟಿರುವದೆಂದು ತಿಳಿದುಬಂದ ಅದರ ಸಂಗಡ ಇರುವಚೀಟಿಯನ್ನು ತಿರುಗಿಕಳುಹಿಸಿದರೆ ಡೆನ್ಮಾರ್ಕದೊಳಗಿನ ಯಾವ ಹಳ್ಳಿಯ ಒಕ್ಕಲಿಗನು ಈ ತತ್ತಿಯನ್ನು ಕಳುಹಿಸಿದ್ದನೊ ಅವನು ದಂಡಕ್ಕೆ ಪಾತ್ರನಾಗ ವನು. ಮತ್ತು ಆ ತತ್ತಿಯ ಬೆಲೆಯು ತಿರುಗಿ ಲಂಡನ್ನ ದೊಳಗಿನ ಗಿರಾಕಿಗೆ ಮುಟ್ಟಿಸಲ್ಪ ಡುವರು. ಹೀಗೆ ಭದ್ರವಾದ ಸತ್ಯತೆಯ ಮೇಲೆ ಡೆನ್ಮಾರ್ಕದ ವ್ಯಾಪಾರದ ಕಟ್ಟಡವ ನಿಂತಿರುವದು. ೪೦ ವರ್ಷಗಳಹಿಂದೆ ಇಂಗ್ಲಂಡಕ್ಕೆ ಬೇಕಾಗುವ ಮಾಂಸ, ಬೆಣ್ಣೆ, ತತ್ತಿ ಇವುಗಳನ್ನೆಲ್ಲ ಅಯರ್ಲಂಡವು ಪೂರೈಸುತ್ತಿತ್ತು. ಆದರೆ ಈಗ ಸುವ್ಯವಸ್ಥೆ

ಸತ್ಯತೆ, ಸಹಕಾರ ಇವುಗಳ ಸಹಾಯದಿಂದ ಈ ಎಲ್ಲ ವ್ಯಾಪಾರವನ್ನು ಡೆನ್ಮಾರ್ಕ್‌ವು ಆಕ್ರಮಿಸಿ ಅಯರ್ಲಂಡವನ್ನು ಮೂಲೆ ಗೊತ್ತಿರುವದು.

ನಾವು ಎಂದೂ ಕಾಣದೆ ಇದ್ದ ಒಂದು ವ್ಯವಸಾಯದಿಂದ ಡೇನ ಜನರು ಹಣ ಗಳಿಸುವರು. ಈ ದೇಶದ ಪೇಟೆಗಳಲ್ಲಿ ಜೇನು ನೊಣಗಳು ಮಾರಲಿಕ್ಕೆ ದೊರೆಯುವವು. ಕೃತ್ರಿಮ ಜೇನು ಹುಟ್ಟುಗಳನ್ನೂ ಮಾರಲಿಕ್ಕೆ ಇಟ್ಟಿರುವರು. ಜನರು ಇವುಗಳನ್ನು ಕೊಂಡು ಕೊಂಡು ಜೇನು ತುಪ್ಪವನ್ನು ಸಂಗ್ರಹಿಸಿ ಅದರಿಂದ ಹಣ ಸಂಪಾದಿಸುವರು. ಚಳಿಗಾಲದಲ್ಲಿ ಈ ಜೇನುನೊಣಗಳು ಸ್ತಬ್ಧ ಸ್ಥಿತಿಯಲ್ಲಿರುವವು. ಬೇಸಿಗೆಯಲ್ಲಿ ತುಪ್ಪವನ್ನು ಕೂಡಿಸುವವು. ಈ ನೊಣಗಳು ಏಳೇಳು ಮೈಲುಗಳ ವರೆಗೆ ಹೋಗಿ ಸಂಚರಿಸಿ ಮಧುವನ್ನು ಸಂಗ್ರಹಿಸಿ ತಿರುಗಿ ತಮ್ಮ ಸ್ಥಳಕ್ಕೆ ಬರುವವು !

ಡೇನ ಜನರು ಉದ್ಯೋಗಶೀಲರಾಗಿದ್ದಂತೆ ನ್ಯಾಯ ಪ್ರಿಯರೂ ಆಗಿರುವರು. ನಾಗರಿಕತೆಯ ಉಚ್ಚಸ್ಥಿತಿಯನ್ನು ಇವರಲ್ಲಿ ನಾವು ಕಾಣಬಹುದು. ಈಗ ನಮ್ಮ ದೇಶದಲ್ಲಿ ದೇಸಾಯಿ, ದೇಶಪಾಂಡೆ, ಗೌಡ, ಕುಲಕರ್ಣಿ ಮುಂತಾದ ವತನದಾರರಿರುವಂತೆಯೇ ಹಿಂದೆ ಡೆನ್ಮಾರ್ಕ್‌ದಲ್ಲಿಯೂ ಇದ್ದರು. ಒಕ್ಕಲಿಗರು ದುಡಿದು ಬಿತ್ತಿ ಬೆಳೆದ ತಮ್ಮ ಶ್ರಮದ ಪ್ರತಿಫಲವನ್ನು ಈ ವತನದಾರರಿಗೆ ಕೊಡಬೇಕಾಗುತ್ತಿತ್ತು. ಇದು ಅನ್ಯಾಯವೆಂದು ತಿಳಿದು ಬಂದದ್ದರಿಂದ ಎಲ್ಲ ಪ್ರಜೆಗಳ ಸಮ್ಮತಿಯಿಂದ ಸರಕಾರದವರು ಕಾಯದೆ ಮಾಡಿ ಈ ವತನದಾರರಿಗೆ ಕೆಲವು ಬಾಂಡುಗಳನ್ನು ಕೊಡುವದನ್ನು ಗೊತ್ತು ಮಾಡಿ ಆ ಹಣದ ಬಡ್ಡಿಯ ಸಲುವಾಗಿ ವರ್ಷಕ್ಕೆ ಇಂತಿಷ್ಟು ಹಣವನ್ನು ಸರಕಾರದವರೇ ಯಜಮಾನರಿಗೆ ಮುಟ್ಟಿಸಿದರೆ ತೀರಿತೆಂದು ನಿರ್ಣಯಿಸಿದರು. ಇದರಿಂದ ಆ ದೇಶದ ವತನದಾರರ ಔದಾರ್ಯವು ಎಷ್ಟೆಂಬದು ವ್ಯಕ್ತವಾಗುವದು. ಮತ್ತು ಇದರಿಂದ ದೇಶದಲ್ಲಿ ಅತಿ ಶ್ರೀಮಂತರೂ ತೀರಬಡವರೂ ಇಲ್ಲದಂತಾಗಿ ದೇಶದ ಸಂಪತ್ತು ಎಲ್ಲ ಪ್ರಜೆಗಳಲ್ಲಿ ಹಂಚಿ ಹೋಗಿ ಎಲ್ಲರೂ ಸುಖಿಗಳಾಗಲಿಕ್ಕೆ ಅನುಕೂಲವಾಯಿತು.

ಈ ದೇಶದಲ್ಲಿ ನಿರುದ್ಯೋಗಿಗಳಿಲ್ಲ. ದುಡಿದು ಜೀವಿಸುವವರು ಕನಿಷ್ಠರೆಂಬ ಭಾವನೆಯು ಈ ಜನರಲ್ಲಿ ಎಷ್ಟು ಮಾತ್ರವೂ ಇರುವದಿಲ್ಲ. ದುಡಿದು ಜೀವಿಸುವವನಿಗೆ ನಾಲ್ಕು ಜನರಲ್ಲಿ ಸರಿಯಾದ ಮನ್ನಣೆಯು ದೊರೆಯುವದು.

ಡೇನ ಜನರ ದಾಯ ವಿಭಾಗಕ್ರಮವು ನಮ್ಮ ದೇಶಕ್ಕಿಂತ ಭಿನ್ನವಾಗಿರುವದು. ಒಬ್ಬ ತಂದೆಗೆ ಇಬ್ಬರು ಹೆಣ್ಣುಮಕ್ಕಳೂ ಇಬ್ಬರು ಗಂಡುಮಕ್ಕಳೂ ಇದ್ದರೆ ಆ ನಾಲ್ಕೂ ಜನರು ತಂದೆಯ ಆಸ್ತಿಗೆ ಸಮಾನ ಹಕ್ಕುದಾರರು. ಆದರೆ ನಮ್ಮ ದೇಶದಲ್ಲಿರುವಂತೆ ಕುಟುಂಬದ ಹೊಲಮನೆಗಳನ್ನು ಇವರು ಹರಿದು ಹಂಚಿಕೊಳ್ಳಲಿಕ್ಕೆ ಬರುವದಿಲ್ಲ. ಹೊಲಮನೆಗಳ ಬೆಲೆ ಕಟ್ಟಿ ಅವರಲ್ಲಿ ಒಕ್ಕಲತನದ ವಿಷಯವಾಗಿ ವಿಶೇಷ ಆಸ್ಥೆಯುಳ್ಳವನು [illegible] ಕೊಟ್ಟು ಬಿಡುವರು ಮತ್ತು ಅವನು ಉಳಿದ ಮೂವರಿಗೆ

ಅವರವರ ಪಾಲಿಗೆ ಬರುವಷ್ಟು ಹಣವನ್ನು ಕೊಡವನು. ಅವನಲ್ಲಿ ಆ ಕಾಲಕ್ಕೆ ಅಷ್ಟು ಹಣವಿಲ್ಲದಿದ್ದರೆ ಸಹಕಾರೀ ಬ್ಯಾಂಕುಗಳಲ್ಲಿ ಅವನಿಗೆ ಆ ಹಣವು ಸಾಲವಾಗಿ ದೊರೆಯುವದು. ಒಬ್ಬ ಕುಟುಂಬಿಕನು ತನ್ನ ಆಸ್ತಿಯೊಳಗಿನ ಒಂದು ಭಾಗವನ್ನು ಇನ್ನೊಬ್ಬನಿಗೆ ಮಾರಲಿಕ್ಕೆ ಬರುವದಿಲ್ಲ. ಇಡೀ ಹೊಲವನ್ನೂ ಅದಕ್ಕೆ ಸಂಬಂಧಿಸಿದ ಮನೆಯನ್ನೂ ಕೂಡಿಯೇ ಮಾರಲಿಕ್ಕೆ ಕೊಡಬೇಕಾಗುವದು.

ದೇನ್ಮಾರ್ಕ್‌ದೊಳಗಿನ ಸಹಕಾರೀ ಬ್ಯಾಂಕುಗಳು ಅತ್ಯುತ್ತಮ ಸ್ಥಿತಿಯಲ್ಲಿರುವವು. ಇಷ್ಟು ಸಣ್ಣ ದೇಶದಲ್ಲಿ ೪–೫ ಕೋಟಿ ರೂಪಾಯಿಯ ವ್ಯವಹಾರ ಮಾಡುವ ೧೩ ಬ್ಯಾಂಕುಗಳಿರುವವು. ಒಕ್ಕಲತನದಲ್ಲಿ ಮನಸ್ಸು ಹಾಕಿ ಸಾಕಷ್ಟು ಶಾಸ್ತ್ರಜ್ಞಾನವನ್ನು ಪಡೆದವನೂ ಸಜ್ಜನನೂ ಎಂಬ ಸರ್ಟಿಫಿಕೇಟುಳ್ಳ ಮನುಷ್ಯನಿಗೆ ಹೊಲಮನೆಗಳನ್ನು ಕೊಂಡುಕೊಳ್ಳುವದಕ್ಕೆ ಬೇಕಾಗುವ ಎಲ್ಲ ಹಣವನ್ನು ಸಹಕಾರಿ ಬ್ಯಾಂಕುಗಳ ಜಾಮೀನಿನ ಅವಶ್ಯಕತೆಯಿಲ್ಲದೆ ಕೊಡುವವು. ಈ ಬ್ಯಾಂಕುಗಳಿಗೆ ಅವನು ಕೊಂಡುಕೊಳ್ಳುವ ಹೊಲಮನೆಗಳನ್ನು ಒತ್ತಿ ಬರೆದು ಕೊಡಬೇಕಾಗುವದು. ಬಡ್ಡಿಯು ದರವು ತೀರ ಕಡಿಮೆ ಯಿರುವದು. ಅಂದರೆ ನೂರಕ್ಕೆ ವರ್ಷಕ್ಕೆ ೩–೪ ರೂ. ಮಾತ್ರ ಇರುವದು ಮತ್ತು ಸಾಲವು ೫೦–೬೦ ವರ್ಷಗಳ ಅವಧಿಯದಿರುವದು. ಇದರಿಂದ ಒಕ್ಕಲಿಗರಿಗೆ ಬೇಕಾದ ಭಾಂಡವಲವು ನಿರಾಯಾಸವಾಗಿ ದೊರೆಯುವದು. ಹೊಲದ ಕೆಲಸಗಳಿಗೆ ಬೇಕಾಗುವ ಕುದುರೆಗಳನ್ನೂ ಒಕ್ಕಲತನದ ಉಪಕರಣಗಳನ್ನೂ ಕೊಂಡುಕೊಳ್ಳುವದಕ್ಕೆ ಸಹಕಾರೀ ಬ್ಯಾಂಕುಗಳು ಹಣ ಪೂರೈಸುವವು. ಕುದರೆಯ ಲಾಯಿಫ ಇನ್‌ಶುರೆನ್ಸ ಮಾಡಿ ಆ ಸರ್ಟಿಫಿಕೇಟನ್ನು ಹಾಜರ ಮಾಡಿದರೆ ತೀರಿತು ಸಾಲವು ದೊರೆಯುವದು.

ಈ ಪ್ರಕಾರ ವಿದ್ಯಾಪ್ರಸಾರವಾಗಿ, ಸಾಕಷ್ಟು ಭಾಂಡವಲವು ದೊರೆದು, ಒಕ್ಕಲಿಗರು ಬೆಳಿಸುವ ಬೆಳೆಗಳಿಗೆ ಯೋಗ್ಯ ಬೆಲೆಯು ದೊರೆಯುವದಲ್ಲದೆ ಅವರಿಗೆ ಬೇಕಾಗುವ ಮಿಕ್ಕ ಸಾಮಾಗ್ರಿಗಳನ್ನು ಯೋಗ್ಯ ಬೆಲೆಗೆ ದೊರಕಿಸಿ ಕೊಡುವ ಕಾರ್ಯವನ್ನು ಕೂಡ ಸಹಕಾರೀ ಸಂಘಗಳು ಮಾಡುತ್ತಿರುವವು. ತಮ್ಮ ದೇಶಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸಹಕಾರೀ ಸಂಘಗಳ ಮುಖಾಂತರವಾಗಿ ಹಡಗುಗಳಲ್ಲಿ ತುಂಬಿ ತರಿಸಿಕೊಂಡು ಆ ಸಂಘಗಳ ಶಾಖೆಗಳ ಮೂಲಕ ಚಿಕ್ಕಪುಟ್ಟ ಹಳ್ಳಿಗಳಿಗೂ ಬೇರೆ ಬೇರೆ ಒಕ್ಕಲಿಗರಿಗೂ ಯೋಗ್ಯ ಬೆಲೆಗೆ ಮುಟ್ಟಿಸುವ ಯೋಜನೆಯಿರುವದು. ಈ ದೇಶದಲ್ಲಿ ಹಣದ ವ್ಯವಹಾರದ ಸಂಘಗಳೂ ಸಾಮಾನುಗಳನ್ನು ಕೊಡುಕೊಳ್ಳುವ ಸಂಘಗಳೂ ಇರುವಂತೆ ಜನರ ನಿತ್ಯದ ಜೀವನಕ್ರಮಕ್ಕೆ ಆವಶ್ಯಕವಾಗಿರುವ ಉದ್ಯೋಗ ಮಾಡುವ ಜನರ ಸಂಘಗಳೂ ಇರುವವು. ಉದಾ:–ಹಜಾಮರ ಸಂಘ, ಅಗಸರ ಸಂಘ, ಇತ್ಯಾದಿ. ನಾಟಕ ಗೃಹಗಳು ಸಿನಿಮಾ ಥಿಯೇಟರುಗಳು ಮುಂತಾದವು ಕೂಡ ಸಹಕಾರೀ ತತ್ವವನ್ನು ಅನುಸರಿಸಿ ನಡೆಸಲ್ಪಡುವವು.

ಡೆನ್ಮಾರ್ಕ್‌ದೇಶವು ಒಕ್ಕಲಿಗರ ದೇಶವಾಗಿರುವದರಿಂದ ಅಲ್ಲಿಯ ಸರಕಾರದಲ್ಲಿ ಕ್ಕಲಿಗರೇ ಪ್ರಾಮುಖ್ಯವಾದ ಅಂಗವಾಗಿರುವರು. ಅವರು ತಮಗೆ ಅನುಕೂಲ ಾದ ಕಾಯದೆಗಳನ್ನು ಆಗಾಗ ಅಮಲಿನಲ್ಲಿ ತರುತ್ತಿರುವರು. ಕೋಪನ ಹೇಗನ ಂದ ಇಂಗ್ಲಂಡಕ್ಕೆ ಹನ್ನೆರಡು ತಾಸಿನಲ್ಲಿ ನರಕನ್ನು ಒಯ್ದು ಮುಟ್ಟಿಸುವ ಹಾಗು ರು ಗಿ ತರುವ ಯೋಜನೆಯಿರುವದು. ರೇಲ್ವೆ ಕಂಪನಿಗಳ ಶೇಅರುದಾರರಿಗೆ ಗಂಂಕ್ಕೆ ೧ ರಂತೆ ಮಾತ್ರ ಲಾಭವು ಹಂಚಲ್ಪಡುವದು. ಮಿಕ್ಕ ಹಣವೆಲ್ಲ ಪ್ರಜಾಹಿತಕ್ಕೆ ಹಾಕಲ್ಪ ತುವದರಿಂದ ತೀರಸ್ವಲ್ಪ ಬಾಡಿಗೆಯನ್ನು ಕೊಟ್ಟು ಸರಕುಗಳನ್ನು ಕಳುಹಿಸಲಿಕ್ಕೂ ತರಿಸ ಿಕ್ಕೂ ಅನುಕೂಲವಾಗಿರುವದು. ಸರಕಾರಕ್ಕೆ ದಂಡಿನ ವೆಚ್ಚವು ತೀರ ಕಡಿಮೆ ಇರು ತದು. ಡೇನ ಜನರು ಶಾಂತತಾ ಪ್ರಿಯರು. ಅವರಿಗೆ ಯುದ್ಧದಲ್ಲಿ ಎಷ್ಟೂ ಆದರವಿಲ್ಲ. ೞದರಿಂದ ಅವರು ತಮ್ಮ ದೇಶದ ದಂಡನ್ನು ದಿನದಿನಕ್ಕೆ ಕಡಿಮೆನೂಡುತ್ತಾ ಬಂದಿರು ತರು. ಲೊನ್ನಿನ ಲೀಗ ಆಫನೇಶನ್ನಿನ (ರಾಷ್ಟ್ರಸಂಘದ) ಯೋಜನೆಯಿಂದ ಡೇನ ಜನ ರಿಗೆ ಅತ್ಯಾನಂದವಾಗಿರುವದು. ಅವರು ತಮ್ಮ ದೇಶದ ಸೈನ್ಯದ ಸಂಖ್ಯೆಯನ್ನು ತೀರ ಕಡಿಮೆಮಾಡಿ ಆ ಹಣವನ್ನೆಲ್ಲ ದೇಶದ ಸುಧಾರಣೆಗೆ ವೆಚ್ಚಮಾಡಹತ್ತಿರುವರು.

ಒಟ್ಟಿನಮೇಲೆ ಸುಶಿಕ್ಷಿತತೆ, ಸತ್‌ಶೀಲ, ಸದುದ್ಯೋಗ, ಸಹಕಾರ ಇವುಗಳ ಬಲದಿಂದ ಡೇನ ಜನರು ತಮಗೆ ತೀರ ವಿರುದ್ಧವಾದ ಪ್ರಾಕೃತಿಕ ಸ್ಥಿತಿಯಲ್ಲಿಯೂ ತಮ್ಮ ದೇಶ ವನ್ನು ಸುಸಂಪನ್ನವಾಗಿ ಮಾಡಿಕೊಂಡು ಸುಖದಿಂದ ಜೀವಿಸುತ್ತಿರುವರು. ಸಾರ ವಾತ್ತಾದ ಭೂಮಿ ಅನುಕೂಲವಾದ ಹನೆ ನೀರಿನ ಸೌಮ್ಯಾದ್ಧಿ ಇವುಗಳಿಂದ ಸುವರ್ಣ ಭೂಮಿಯೆನಿಸಿ ಕೊಂಡಿರುವ ನಮ್ಮ ದೇಶದಲ್ಲಿ ನಾವು ಅವರನ್ನು ಅನುಕರಣಮಾಡಿ ನಡೆ ದರೆ ಎಷ್ಟುಸುಖಿಗಳಾಗಬಹುದೆಂಬದನ್ನು ಹೇಳುವಕಾರಣವಿಲ್ಲ. ಈ ಕಾರ್ಯದ ಮುಖ್ಯ ಭಾಗವು ಶಿಕ್ಷಕ ವರ್ಗದ ಪ್ರಯತ್ನವನ್ನು ಅವಲಂಬಿಸಿದೆ.

---

## ಮುಲ್ಕೀಪರೀಕ್ಷೆಯ ಕ್ಲಾಸಿನ ಬಗ್ಗೆ ಲಕ್ಷದಲ್ಲಿಡತಕ್ಕ ಕೆಲವು ಸಂಗತಿಗಳು.

ಪ್ರತಿವರ್ಷ ಮುಲ್ಕೀಪರೀಕ್ಷೆಯಲ್ಲಿ ಸುಮಾರು ೫ವಿದ್ಯಾರ್ಥಿಗಳು ನಾಪಾಸಾಗುವದು ಎಲ್ಲರ ಅನುಭವದ ಸಂಗತಿಯಾಗಿದೆ. ಇದರ ಕಾರಣವನ್ನು ಪರಿಶೋಧಿಸಿದರೆ ವಿದ್ಯಾರ್ಥಿ ಗಳ ಬರೆಯುವ ಪದ್ಧತಿ, ವಿಷಯಗಳ ಬಗ್ಗೆ ಅಜ್ಞಾನ ಇವೇ ಇರುವವೆಂದು ಬೇರೆ ಹೇಳ ಬೇಕಾಗಿಲ್ಲ. ಇದರ ವಿಷಯವಾಗಿ ಇಲ್ಲಿ ವಿವೇಚನೆ ಮಾಡಿದರೆ ಸಹವ್ಯನಹಾಯಿಗ ಳಿಗೆ ಏನಾದರೂ ಲಾಭವಾದೀತೆಂಬ ಭರವಸೆಯಿಂದ ಈ ಲೇಖನವನ್ನು ಬರೆದಿರುವೆನು. ಪ್ರಶ್ನಪರೀಕ್ಷಕರೆಲ್ಲರೂ ಪರೀಕ್ಷೆಯಾಗಿ ಪೇಪರುಗಳನ್ನು ತಪಾಸಿಸಿದ ಬಳಿಕ ತಮ್ಮ ತಮ್ಮ ಪೇಪರುಗಳಲ್ಲಿ ಕಂಡುಬರುವ ದೋಷಗಳನ್ನು ರಿಪೀ ನ ಮುಖಾಂತರ ಪ್ರಸಿದ್ಧ

ಮೂಡುತ್ತ ಬಂದಿದ್ದರೆ ನಮ್ಮೆಲ್ಲರಿಗೂ ಬಹಳೇ ಉಪಯೋಗವಾಗುತ್ತಿತ್ತು. ಇನ್ನಾದರೂ ಹಾಗೆ ಮಾಡಿದಲ್ಲಿ ಕಲಿಸುವ ಮಾಸ್ತರರಿಗೂ ವಿದ್ಯಾರ್ಥಿಗಳಿಗೂ ಬಹಳೇ ಸಹಾಯಮಾಡಿದಂತಾಗುವದಲ್ಲದೆ ತಮಗೂ ಸುಲಭವಾಗುವದು. ಹೋದ ವರ್ಷ ವಿಜಯ ಪತ್ರದಲ್ಲಿ ನಿಬಂಧ ಬರಹದಲ್ಲಿ ಕೆಲವು ವಿದ್ಯಾರ್ಥಿಗಳು ಬರೆದ ಅಪದ್ಧ ಸಂಗತಿಗಳ ಬಗ್ಗೆ ಅಪಹಾಸ್ಯಕಾರಕವಾದ ಟೀಕೆಗಳನ್ನು ಯಾರೋ ಮಾಡಿದ್ದರು. ನಾವು ಅವರ ಉಪಕಾರವನ್ನು ಸ್ಮರಿಸದೆ ಇರಲಾರೆವು. ಈ ವರ್ಷದ ಪರೀಕ್ಷೆಯು ಪ್ರಾರಂಭವಾಗುವ ಪೂರ್ವದಲ್ಲಿಯೇ ಎಲ್ಲ ಶಾಲೆಗಳ ಮಾಸ್ತರರಿಗೂ ಕೆಳಗೆ ಬರೆದ ಸಂಗತಿಗಳು ತಿಳಿದು ಅದಷ್ಟು ಅವುಗಳನ್ನು ತಿದ್ದಲಿಕ್ಕೆ ಪ್ರಯತ್ನಮಾಡುವರೆಂದು ತುಂಬಾ ನಂಬಿ ನನ್ನ ಕೆಲವು ಅನುಭವವನ್ನೂ ನಮ್ಮ ಶಾಲೆಯ ಪ್ರಿಲಿಮ್ಸರೀ ಪರೀಕ್ಷೆಯಲ್ಲಿ ಕಂಡುಬಂದ ಕೆಲವು ದೋಷಗಳನ್ನೂ ಇದರಡಿಯಲ್ಲಿ ಬರೆದಿರುವೆನು. ತಮಗೆ ಮಾನ್ಯಕಂಡದ್ದನ್ನು ಗ್ರಹಣ ಮಾಡಬೇಕೆಂದು ಬೇಡುವೆನು. ಇನ್ನೂ ಹೆಚ್ಚು ಅನುಭವವುಳ್ಳ ಶಿಕ್ಷಕರು ತಮ್ಮ ಅನುಭವದ ಲಾಭವನ್ನು ಮಾಡಿಕೊಡಬೇಕೆಂದು ಅವರಿಗೆ ನನ್ನ ಆಗ್ರಹದ ವಿನಂತೀ ಸೂಚನೆಯದೆ.

ಮು. ಪ. ಯ ಕ್ಲಾಸನ್ನಿಡುವ ಮಾಸ್ತರರಿಗೆ ಎರಡು ವಿನಂತೀ ಶಬ್ದಗಳು:— ಎಷ್ಟೋ ಶಾಲೆಗಳ ಮಾಸ್ತರರು ಮುಲ್ಕೀ ಪರೀಕ್ಷೆಯ ಕ್ಲಾಸನ್ನಿಡದಿರುವದು ಅಗೌರವವೆಂದು ತಿಳಿದು ಒಂದೆರಡು ವಿದ್ಯಾರ್ಥಿಗಳಿದ್ದಾಗ್ಯೂ ಅಲ್ಲಿ ಕ್ಲಾಸನ್ನಿಡುತ್ತಾರೆ. ಮೊದಲಿನಂತೆ ಕೆಳವಯಸ್ಸಿನ ನಿಯಮವಿಲ್ಲದ್ದರಿಂದ ಹೆಚ್ಚು ವಿಚಾರದ ವಿಷಯವನ್ನು ಗ್ರಹಣ ಮಾಡಲಾರದಂಥ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚಿರುತ್ತದೆ. ಪರೀಕ್ಷೆಯ ಪ್ರಶ್ನಗಳು ಮಾತ್ರ (ಗಣಿತದ ಹೊರ್ತು) ಹೆಚ್ಚು ಅವಾಢವ್ಯವಾದವುಗಳಿರುತ್ತವೆ. ಪರೀಕ್ಷೆಗೆ ಈಗ ಅಷ್ಟು ಮಹತ್ವವೂ ಇಲ್ಲ. ಉತ್ತಮ ವಿದ್ಯಾರ್ಥಿಗಳು ಇಂಗ್ಲಿಷ ಶಾಲೆಗಳಿಗೆ ಹೋಗಿ ಬಿಡುವರಾದ್ದರಿಂದ ಆದಷ್ಟು ಮಧ್ಯಮ, ಕನಿಷ್ಠ ತರಗತಿಯವರೇ ಈ ಕ್ಲಾಸಿಗೆ ಉಳಿಯುವರು. ಇಂಥ ಸ್ಥಿತಿಯಲ್ಲಿ ಮಾಸ್ತರನು ಕ್ಲಾಸನ್ನಿಟ್ಟರೆ ಅವರ ಸಂಗಡ ಹೆಚ್ಚು ಶ್ರಮವನ್ನು ತೆಗೆದುಕೊಂಡರೇನೇ ಹೊರ್ತು ವಿದ್ಯಾರ್ಥಿಗಳು ಪರೀಕ್ಷೆಗೆ ಕೂಡ್ರಲಿಕ್ಕೆ ಯೋಗ್ಯರಾಗಲಾರರು. ಒಂದೆರಡು ವಿದ್ಯಾರ್ಥಿಗಳುಳ್ಳ ಕ್ಲಾಸಿನ ಸಲುವಾಗಿ ಹೆಚ್ಚು ದುಡಿಯಲಿಕ್ಕೆ ಮನಸ್ಸಾಗುವದಿಲ್ಲ. ನೀಲೆ ಹೇಳಿದ ಶಾಲೆಯ ಮಾಸ್ತರರು ಈ ಸಂಗತಿಯನ್ನು ಲಕ್ಷಕ್ಕೆ ತಂದು ಸ್ವಲ್ಪ ವಿದ್ಯಾರ್ಥಿಗಳ ಸಲುವಾಗಿ ಒಂದು ಕ್ಲಾಸನ್ನಿಟ್ಟು ಇಡೀ ಶಾಲೆಯ ಸ್ಥಿತಿಗೆ ಕುಂದು ತಂದುಕೊಳ್ಳುವದಕ್ಕಿಂತ ಆ ಕ್ಲಾಸನ್ನೇ ಬಿಟ್ಟು ಅದೇ ವೇಳೆಯನ್ನು ತಮ್ಮ ಶಾಲೆಯ ಉಳಿದ ಕ್ಲಾಸಿನ ಸುಧಾರಣೆಯಲ್ಲಿ ವೆಚ್ಚಮಾಡಿದರೆ ಉಭಯತರಿಗೂ ಹಿತವಾಗುವದಲ್ಲದೆ ಶಾಲೆಯ ಗೌರವವೂ ಹೆಚ್ಚುತ್ತದೆ. ಊರವರ ಆಗ್ರಹದಿಂದ ಈ ಕ್ಲಾಸನ್ನಿಡಬೇಕಾಗುವದೆಂದು ಕೆಲವರು ಸಂಕೋಚಪಡಬಹುದು. ಮೇಲೆ ಹೇಳಿದಂತೆ ಅವರಿಗೆ ಚನ್ನಾಗಿ ಮನವರಿಕೆ ಮಾಡಿಕೊಟ್ಟಲ್ಲಿ ಅವರಾದರೂ ಆಗ್ರಹಮಾಡ

ವರಿಂದು ನನ್ನ ಅನುಭವದಿಂದ ಗೊತ್ತಾಗಿದೆ. ಇಂಥ ಶಾಲೆಯ ವಿದ್ಯಾರ್ಥಿಗಳು
ತ್ತರಿದ್ದ ದೊಡ್ಡ ಶಾಲೆಗಳಿಗೆ ಹೋದರೆ ಅಲ್ಲಿ ಈ ಹುಡುಗರ ಸಂಖ್ಯೆಯು ಬೆಳೆದು
ಲ್ಲಿಯು ಮ್ಯಾಸ್ತರರಿಗೂ ವಿದ್ಯಾರ್ಥಿಗಳಿಗೂ ಉನೋದು ಹೆಚ್ಚಾಗಿ ಕೆಲಸವು ಚನ್ನಾಗಿ
ಗುವದೆಂಬದರಲ್ಲಿ ಸಂದೇಹವೇತರದು ! ಇಂಥ ದೊಡ್ಡ ಶಾಲೆಯ ಮಾಸ್ತರರು ಈ
ಕ್ಲಾಸಿನ ಬಗ್ಗೆ ವ್ಯವಸ್ಥೆಮಾಡಿದಾಗ ಕೆಳಗೆ ವಿವರಿಸಿದ ಸಂಗತಿಗಳ ಕಡೆಗೆ ಲಕ್ಷಕೊಡ
ಬೇಕೆಂದು ನನ್ನ ಆಗ್ರಹದ ವಿನಂತಿಯುವೆ. ಪ್ರತಿವಾರಕ್ಕೊಮ್ಮೆ ಬೇರೆ ಬೇರೆ ವಿಷಯ
ಗಳಲ್ಲಿ ಲೇಖೀ ಪರೀಕ್ಷೆಯನ್ನು ತೆಗೆದುಕೊಂಡು ಅದರದೊಂದು ಲೀಷ್ಟನ್ನಿಟ್ಟು ಅದರಲ್ಲಿ
ಈ ವಿದ್ಯಾರ್ಥಿಗಳ ಗುಣಗಳನ್ನು (ಮಾರ್ಕುಗಳನ್ನು) ತುಂಬುತ್ತಾ ಹೋಗಬೇಕು.
ಅಂದರೆ ಇದರ ಉಪಯೋಗವನ್ನು ಪ್ರಿಲಿಮ್ಸರೀ ಪರೀಕ್ಷೆಯಲ್ಲಿ ಮಾಡಿಕೊಳ್ಳಲಿಕ್ಕೆ ಅನು
ಕೂಲವಾಗುತ್ತದೆ. ಜಿಲ್ಲಾಶಿಕ್ಷಕ ಸಂಘದವರು ಪ್ರಿಲಿಮ್ಸರೀ ಪರೀಕ್ಷಾಕಮೀಟಿಯನ್ನು
ಸ್ಥಾಪಿಸಿಕೊಂಡು ಅದರ ಮುಖಾಂತರವಾಗಿ ಅನುಭವಿಕ ಮಾಸ್ತರರಿಂದ ಉತ್ತಮ
ಪ್ರಶ್ನಗಳನ್ನು ತರಿಸಿಕೊಂಡು ಮುದ್ರಿಸಬೇಕು. ನಂತರ ಇಡೀ ಜಿಲ್ಲೆಯಲ್ಲಿ ಒಂದೇ
ದಿವಸವೇ ಪರೀಕ್ಷೆಯು ಪ್ರಾರಂಭವಾಗುವಂತೆ ಒಂದು ದಿವಸ ನಿಯಮಿಸಿ ಪ್ರಸಿದ್ಧ
ಮಾಡಬೇಕು. ಮುದ್ರಿಸಿದ ಎಲ್ಲ ಪ್ರಶ್ನಕಾಗದಗಳನ್ನು ಆ ಆ ತಾಲೂಕಸಂಘಗಳ
ಮುಖಾಂತರವಾಗಿ ನಿಯಮಿತ ವೇಳೆಯೊಳಗಾಗಿ ಮುಟ್ಟುವಂತೆ ಎಲ್ಲ ಶಾಲೆಗಳಿಗೆ ಕಳಿಸ
ಬೇಕು. ಈ ಕೆಲಸಗಳಲ್ಲಿ ಪ್ರಶ್ನಗಳು ಔಟಾಗದಂತೆ ಪಾತ್ರ ವ್ಯವಸ್ಥೆ ಇರಬೇಕೆಂದು
ಬೇರೆ ಹೇಳಲವಶ್ಯವಿಲ್ಲ. ಪ್ರಿ. ಪರೀಕ್ಷೆಯಾದನಂತರ ಆ ಆ ಶಾಲೆಗಳ ಮಾಸ್ತರರು ತಮ್ಮ
ತಾಲೂಕ ಸಂಘಗಳು ನಿಯಮಿಸಿದ ಪರೀಕ್ಷಕರ ಕಡೆಗೆ ಉತ್ತರದ ಕಾಗದಗಳನ್ನು ಕಳಿ
ಸಬೇಕು. ಅವು ತಪಾಸಾದ ಬಳಿಕ ಪುನಃ ನಿಮ್ಮ ಲ್ಲಿಗೆ ಅವರು ಕಳಿಸುವಂತೆ ವ್ಯವಸ್ಥೆ
ಯನ್ನಿಟ್ಟುರಬೇಕು. ಆ ಮೇಲೆ ಪ್ರಿ. ಪರೀಕ್ಷೆಯಲ್ಲಿ ಪಾಸಾದವರಿಗೇನೇ ಸರ್ಟೀಫೀಕಿಟು
(ಅರ್ಜಿಗಳನ್ನು) ಕೊಡಬೇಕು. ಹೀಗೆ ವ್ಯವಸ್ಥೆಯಾದಲ್ಲಿ ಸುಸಂಘಟಿತ ರೀತಿಯಿಂಪ ಕೆಲ
ಸವು ನಡೆದು ನಾಪಾಸಿನ ಪ್ರಮಾಣವು ಕಡಿಮೆಯಾಗಿ ಎಲ್ಲರಿಗೂ ಹಿತವಾಗಬಹುದು.

ಇನ್ನು ಮು. ಪರೀಕ್ಷೆಯ ವಿಷಯಗಳ ಬಗ್ಗೆ ಸ್ವಲ್ಪ ಆಲೋಚಿಸೋಣ. ಡೆ॥ ಎ॥
ಇ॥ ಸಾ॥ ರಾದ ಮೆ॥ ಜಮಖಂಡಿಯವರು ನಮ್ಮ ಶಾಲೆಗೆ ಪರೀಕ್ಷೆಗೆ ಬಂದಾಗ್ಗೆ "ಪ್ರತಿ
ಯೊಂದು ಶಾಲೆಯಲ್ಲಿ ಭಾಷಾ, ನಿಬಂಧ ಈ ಎರಡು ವಿಷಯಗಳ ಸ್ಥಿತಿಯು ಸಮಾ
ಧಾನಕರವಾಗಿರುವದಿಲ್ಲ"ವೆಂದು ಆಡಿತೋರಿಸಿದರು. ಈ ಸಂಗತಿಯು ನಿಜವಿದ್ದರೂ
ಇಂಥ ದೋಷದಿಂದಲೇ ಹೀಗಾಗಿರುವದೆಂದು ನಿರ್ಣಯಿಸುವದು ನಮ್ಮ ಕರ್ತವ್ಯವಲ್ಲ.
ಶಕ್ಯವಿದ್ದಷ್ಟು ಸುಧಾರಿಸಿ ತೋರಿಸಲಿಕ್ಕೆ ಪ್ರಯತ್ನಮಾಡಬೇಕು. ಬಹುತರವಾಗಿ ಎಲ್ಲ
ವಿಷಯಗಳ ಪ್ರಶ್ನಗಳು (ಅವುಗಳಲ್ಲಿ ಇತಿಹಾಸ, ಭೂಗೋಲ, ನಿಬಂಧ) ಸದ್ಯದ ವ್ಯವಹಾರ
ಗಳನ್ನನುಸರಿಸಿಯೇ ಆರಿಸಲ್ಪಟ್ಟಿರುತ್ತವೆ. ಆದ್ದರಿಂದ ನಾವಾದರೂ ಅಂಥ ವಿಷಯಗ
ಳನ್ನು ಸರಿಯಾಗಿ ಹೊಗಬೇಕು. ಗಣಿತ ವಿಷಯದಲ್ಲಿ ಮುರಕೊಳ್ಳುವ ಬಡ್ಡಿ, ತೇವು ಈ

ಲಿಕ್ಕಗಳು ಪ್ರತ್ಯಕ್ಷವಿಲ್ಲದಿದ್ದರೂ, ಅವು ಕ್ಯಾಶ ಸರ್ಟಿಫಿಕೇಟು, ವಾರಬಾಂಡ ಇವುಗ
ಳಿಂದ ಯುಕ್ತವಾದ ಉದಾಹರಣೆಗಳ ಮುಖಾಂತರ ಪ್ರಶ್ನಗಳಲ್ಲಿ ಕಂಗೊಳಿಸುತ್ತವೆ.
ಇನ್ನೊಂದು ಸಂಗತಿ ಏನಂದರೆ– ಮುಲ್ಕೀ ಪರೀಕ್ಷೆಯಲ್ಲಿ ವಿಧುಲ್ಪ ಮ್ಮಾಡುವ ಎಲ್ಲ
ನಿಯಮಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿರಬೇಕು. ಒಂದೊಂದು ಭಾಗದಲ್ಲಿ ೨–೩
ವಿಷಯಗಳ ಸಮಾವೇಶವಾಗುವದು. ಅಂಥ ಪ್ರಸಂಗದಲ್ಲಿ ಪ್ರತಿಯೊಂದು ವಿಷಯದಲ್ಲಿ
೫ ಗುಣಗಳನ್ನು ದೊರಕಿಸಿದರೂ, ವಟ್ಟಿನ ಮೇಲೆ ೫ ಗುಣಗಳನ್ನು ದೊರಕಿಸಿದರೇ
ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಂತಾಗುವದೆಂಬ ಮಾತು ಅವರಿಗೆ ಮನದಟ್ಟಾಗಿಸ
ಬೇಕು.

ವಿದ್ಯಾರ್ಥಿಗಳಿಂದ ಕೆಲವು ಸಾಮಾನ್ಯ ಸಹಜ ದೋಷಗಳು ಘಟಿಸುತ್ತಿರುತ್ತವೆ.
ಕಾರಣ ಅವುಗಳನ್ನು ತಿದ್ದಲಿಕ್ಕೆ ಮಾಸ್ತರನು ಯಾವಾಗಲೂ ಪ್ರಯತ್ನಮಾಡತಕ್ಕದ್ದು.
ಅವು ಯಾವವೆಂದರೆ :—

(೧) ಎಷ್ಟೋ ವಿದ್ಯಾರ್ಥಿಗಳ ವಾಕ್ಯರಚನೆಯು ಬಹಳೇ ಅಪದ್ಧವಿರುತ್ತದೆ.
ಅಲ್ಪಪ್ರಾಣಕ್ಕೆ ಮಹಾಪ್ರಾಣ, ಮಹಾಪ್ರಾಣಕ್ಕೆ ಅಲ್ಪಪ್ರಾಣ, (ನಿಭಂದ, ಸುದ್ದ)
ಅವಶ್ಯವಿಲ್ಲದಲ್ಲಿ ವತ್ತು ಕೊಡೋಣ, ಇದ್ದಲ್ಲಿ ಬಿಡೋಣ, ಕೆಲವು ಪಾರಿಭಾಷಿಕ ಶಬ್ದ
ಗಳನ್ನು ರೂಢಿಮಾಡದಿರುವದು, (ಪ್ರಕೃತಿ, ಬಹುವ್ರಿವಿ, ಶಾಸ್ತ್ರವಿಷಯ.)

(೨) ವೇಳೆಯ ಮಹತ್ವವನ್ನರಿಯದಿರುವದು. ಒಂದೇ ಕಾಗದದಲ್ಲಿ ಎರಡ
ವಿಷಯಗಳ ಪ್ರಶ್ನಗಳನ್ನು ಕೊಟ್ಟಾಗ ಒಂದೇ ವಿಷಯದ ಮೇಲೆ ಜೋರುಕೊಟ್ಟು
ಮತ್ತೊಂದು ವಿಷಯವನ್ನು ಸಾಕಷ್ಟು ಬರೆಯುವದಿಲ್ಲ. ಪ್ರತಿಯೊಂದು ಪ್ರಶ್ನಕ್ಕೆ ಕೊ
ಯಬೇಕಾದ ವೇಳೆಯ ಅಂದಾಜನ್ನು ಮಾಡಿಕೊಳ್ಳುವದಿಲ್ಲ. ಮೊದಲು ಕಠಿಣ ಪ್ರಶ್ನ
ಗಳಿಗೆ ಕೈಹಾಕುವರು. ಅಥವಾ ಸುಮ್ಮನೇ ನೋಡುತ್ತ ಕುಳಿತುಕೊಳ್ಳುವರು.

(೩) ಪ್ರಶ್ನಗಳಿಗೆ ಸಮಾಧಾನಕಾರಕ ಉತ್ತರಗಳನ್ನು ಕೊಡುವವರು ಬಹು
ಜನರಿಲ್ಲ. ಉದಾಹರಣಾರ್ಥವಾಗಿ "ಅಹಲ್ಯಾಬಾಯಿಯ ಗುಣವರ್ಣಿಸಿರೆಂದು" ಕೇಳಿ
ದಾಗ ಇಡೀ ಚರಿತ್ರೆಯನ್ನೇ ಬರೆಯೋಣ. ಅದರಂತೆ ರನ್ನನ ಸಂಕ್ಷಿಪ್ತ ಚರಿತ್ರೆ
ಯನ್ನು ಬರೆಯಿರೆಂದು ಹೇಳಿದಾಗ ನಾಲ್ಕೇ ಸಾಲಿನಲ್ಲಿ ಇಡೀ ಚರಿತ್ರೆಯನ್ನು ಮುಗಿಸಿ
ಬಿಡೋಣ. ಅಥವಾ ಆ ಚರಿತ್ರೆಯ ಪೂರ್ವ ಪೀಠಿಕೆಯಲ್ಲಿಯೇ ಹೆಚ್ಚು ವೇಳೆಕಳೆ
ಯೋಣ. ಕಡೆಗೆ ಏನಾದರೂ ಸುಳ್ಳೇ ಬರೆಯೋಣ.

(೪) ತಮಗೆ ಪರೀಕ್ಷೆಯ ಕಾಲಕ್ಕೆ ಅವಶ್ಯವಿರುವ ಎಲ್ಲ ಉತ್ತಮ ಉಪಕರಣ
ಗಳನ್ನು ಸಂಗ್ರಹಿಸದಿರೋಣ. ಉದಾ :—ತುದಿಮಂಡಾದ ಕಂಪಾಸು, ಟೊಕ್ಕು, ಮಸಿ
ಇಂಗದ ಒತ್ತಖರಡು ಇ.

(೫) ವಿರಾಮ ಚಿನ್ಹಗಳನ್ನು ಬೇಕು ಬೇಕಾದಲ್ಲಿ ಉಪಯೋಗಿಸುವದು. ನ್ಸ್ಕರವಾಚಕಕ್ಕೆ ಪ್ರಶ್ನಾರ್ಥಕ, ಅಲ್ಪವಿರಾಮಕ್ಕೆ ಅರ್ಧವಿರಾಮ ಇ.

(೬) ಬರೆದ ಪ್ರಶ್ನಗಳ ಉತ್ತರಗಳನ್ನು ಪುನಃ ಓದಿಕೊಳ್ಳದಿರುವದು. ಹೀಗಾಗಿ ಫ್ಟ್ರೀ ವಿದ್ಯಾರ್ಥಿಗಳು ಪಾಸಾಗುತ್ತೇವೆಂಬ ಮನನಂಬಿಗೆಯುಳ್ಳವರಾದಾಗ್ಯೂ ನಾಪಾ ಗುವರು. ಒಂದಕ್ಕೊಂದು ಉತ್ತರಗಳು ಬಿದ್ದ ಉದಾಹರಣೆಗಳಿಷ್ಟೋ ಕಂಡು ಬಂದಿರುವವು. ಗಣಿತ, ಭೂಮಿತಿಗಳಲ್ಲಂತೂ ಇದರ ಅವಶ್ಯಕತೆಯು ಬಹಳ.

(೭) ಬರೆಯಲಿಕ್ಕೆ ಕೂಡುವಾಗ ಮೊಣಕಾಲನ್ನು ಮೇಲಕ್ಕೆವಾಡಿಕೊಂಡು ಕೂಡುವದು ಅಥವಾ ಅತಿ ಬಗ್ಗಿಕೂಡುವದು. (ಮೊದಲಿನ ಪದ್ಧತಿಯಿಂದ ಅಕ್ಷರಗಳು ಸ್ಪಷ್ಟವಾಗದೆ ಬರಹವು ತೀವ್ರವಾಗಿ ಸಾಗಲಾರದು. ಟಾಕಿನಿಂದ ಮಸಿಯು ಸಾಕಷ್ಟು ಇಳಿಯುವದಿಲ್ಲ.) ತಿನೇ ಪದ್ಧತಿಯಿಂದ ನಡಸೋತು ಬೇಸರಬರುವದು. ಕಾರಣ ಹಲಿಗೆಯಮೇಲೆ ತೊಡೆಕಾಕಿಕೊಂಡು ಕುಳಿತುಕೊಳ್ಳುವದೇ ಉತ್ತಮ. ಮೊದಲು ಹೇಳಿದ್ದ ಸೂಚನಾ ಪೇಪರವನ್ನು ಚನ್ನಾಗಿ ಓದಿ ತಿಳಕೊಳ್ಳದಿರುವದು. ಇ.

(೮) ಒಂದು ಪ್ರಶ್ನದಲ್ಲಿಯ ಕೆಲವು ಭಾಗ ತಿಳಿಯದಿದ್ದಲ್ಲಿ ಇಡೀ ಪ್ರಶ್ನಕ್ಕೇನೇ ಉತ್ತರಬರೆಯದಿರೋಣ. ಯಾವದೊಂದು ಚರಿತ್ರೆಯಲ್ಲಿ ಯಾವದೊಂದು ಭಾಗ ತಿಳಿಯದಿದ್ದಲ್ಲಿ ಇಡೀ ಚರಿತ್ರೆಯನ್ನೇ ಬರೆಯದೆ ಬಿಡುವದು. ಸ್ಪಷ್ಟೀಕರಣ ವಾಕ್ಯಗಳಲ್ಲಿ ಒಂದು ಬರದಿದ್ದರೆ ಎಲ್ಲವನ್ನು ಬಿಟ್ಟುಬಿಡೋಣ. ಇ.

ಮುಖ್ಯ ವಿಷಯಗಳಲ್ಲಿರುವ ಮುಖ್ಯ ದೋಷಗಳು :—

ಗಣಿತ :—ಸ್ಪಷ್ಟವಾಗಿ ಬರೆದಿರುವದಿಲ್ಲ. ಏಕೇರೀ ಇಷ್ಟರಾಸಿಗಳಲ್ಲಿ ಕಲ್ಪಿಸಿ ಕೊಂಡ ಅಂಕೆಗಳನ್ನು ಮೊದಲು ಬರೆಯದೆ ಹಾಗೇ ಲೆಕ್ಕಮಾಡೋಣ. ಕ್ಷೇತ್ರಫಲ ಗಳಲ್ಲಿ ಕೇವಲ ಗುಣಾಕಾರ ಭಾಗಾಕಾರಗಳಿಂದಲೇ ಸಾಗಿಸೋಣ. ಉದಾ. ಘ. ಫ. ÷ ಳ ಕ್ಷೆ. ಫ. = ೨′ ಹೀಗೆ ಬರೆಯದೆ ಲ × ಫ್ಲ ಅಂತಾ ಬರೆಯುವರು. ಇ.

ಭೂಮಿತಿ :—ಯಾಕಂದರೆ, ಅದ್ದರಿಂದ ಈ ಶಬ್ದಗಳ ಚಿನ್ಹಗಳನ್ನು ಉಪಯೋ ಗಿಸುವದರಲ್ಲಿ ಜಾಗ್ರತೆಪಡುವದಿಲ್ಲ. ಕೆಲವರಂತೂ ಕೋನ, ಭುಜಗಳ ಹೆಸರನ್ನು ಅಕ್ಷ ರದಿಂದ ಹೇಳದೆ ಈ ಭುಜ, ಈ ಕೋನಅಂತ ಬರೆಯುವರು. ಪ್ರಮಾಣಕ್ಕೆ ಸರಿಯಾಗಿ ಆಕೃತಿಗಳನ್ನು ಹಾಕಿರುವದಿಲ್ಲ.

ಭಾಷಾ :—ವ್ಯಾಕರಣದ ವಿಷಯಕ್ಕಂತೂ ಬಹಳೇ ಗೊಂದಲವಿರುವದು. ವಾಕ್ಯವಿಭಜನೆಯನ್ನು ಮಾಡುವವರಂತೂ ಬಹುಕಡಿಮೆಯಿರಬಹುದೆಂದು ನನ್ನ ನಂಬಿಗೆ. ಪೂರ್ವಾಪರಸಂದರ್ಭ, ಸ್ಪಷ್ಟೀಕರಣವಾಕ್ಯ ಇವುಗಳ ಪ್ರಶ್ನಗಳಿಗೆ ಸಾಕಷ್ಟು ಉತ್ತರ ಮಾಡದೆ ಬಿಡತೇ ಬೆಲ್ಲ ಬರೆಯೋಣ, । ಅಳುಪ ಪರವಧುಗಧೋಗತಿ । ಈ ಪದ್ಯದ

ಪೂರ್ವಾಪರಸಂದರ್ಭಕೇಳಿದರೆ ರಾಮರಾವಣರ ವಂಶಾವಳಿಯನ್ನು ಸಾರೋಣ, ಕೋ
ದೆವ್ವಗಳ ವಿಷಯಕ್ಕೆ ಕೇಳಿದಾಗ " ಹಗಲಲ್ಲಿ ಸತ್ತವರ ಎಲವುಗಳು ರಾತ್ರಿ ಹೊ
ಯುತ್ತವೆ." ಹೀಗೆ ಉತ್ತರಬರೆಯೋಣ, ಎಷ್ಟೋ ವ್ಯಾಕರಣ ನಿಯಮಗಳನ್ನು ಕೇ
ದಾಗ ಉದಾಹರಣೆಗಳನ್ನು ಕೊಡದೆ ಬರೆಯೋಣ, ಮೊದಲಾದ ದೋಷಗಳು ಕಂ
ಬಂದಿರುವವು.

ನಿಬಂಧಃ–ಅಪರಿಚಿತ ನಿಬಂಧಗಳನ್ನು ಸಮಂಜಸವಾಗಿ ಬರೆಯುವವರಂತೂ ಬಹ
ವಿರಲ. ಪರಿಚಿತವಾದದ್ದಿದ್ದರೂ ವಿರಾಮಚಿನ್ಹಗಳ ದುರುಪಯೋಗ, ಅಪದ್ಧ ವಾಕ್ಯ
ಅಸ್ಪಷ್ಟ ಅಕ್ಷರ, ಅಶುದ್ಧ ಬರಹ ಮೊದಲಾದ ದೋಷಗಳು ದೃಷ್ಟಿಗೋಚರವಾಗುವವ
ಎಷ್ಟೋ ಹುಡುಗರು ನಕಲುಮಾಡುವದರಲ್ಲಿಯೇ ವೇಳಿಕಳೆದು ಮುಂದೆ ಅರ್ಧನಿಬಂ
ವನ್ನು ಬರೆದು ಬರುವರು. ಸದ್ಯದ ಸ್ಥಿತಿಯನ್ನು ವರ್ಣನೆಮಾಡುವ ನಿಬಂಧಗಳ
ಪರೀಕ್ಷೆಗೆ ಬೀಳುವದೇ ಬಹಳ. ಈ ವರ್ಷದ ಪರಿಸ್ಥಿತಿಗೆ ಅನುಸರಿಸಿ ನೋಡಿದರೆ (೧
ಮೋಟಾರುಗಳಿಂದಾಗುವ ಲಾಭಹಾನಿಗಳು (೨) ಒಕ್ಕಲತನ (೩) ಶೇತಕೀ ಸೊಸಾ
ಯಿಟಿ. ಇವ್ರಗಳ ದಳಣವಳಣವೇ ಹೆಚ್ಚಾಗಿರುವದು.

ಮೇಲಿನ ಲೇಖವು ಅಷ್ಟು ಮಹತ್ವದ್ದಲ್ಲದಿದ್ದರೂ ಅಲಕ್ಷದಿಂದ ಮಹತ್ವದಾ
ಪರಿಣಮಿಸಿವ್ದರಿಂದ ಪ್ರಸಿದ್ಧಿಸಿರುವೆನು. ಇದರಲ್ಲಿಯ ಗುಣದೋಷಗಳ ವಿವೇ
ಯನ್ನು ಮಾಡಿದವರಿಗೆ ತುಂಬಾ ಋಣಿಯಾಗುವೆನು.

ಗೋ. ವೆ. ಮುಗದ.

ಹೆ. ಮಾ. ಇಂಗಳಗಿ ತಾ॥ ಬಂಕಾಪು

---

# ರಾಷ್ಟ್ರಕೂಟರು

( ಲೇಖಕ:— ಪಂಡಿತ ಕೇಶವ ಶರ್ಮಾ, ಗಲಗಲಿ )

ರಟ್ಟ ಶಬ್ದವು ಸ್ಕಂದ ಪುರಾಣದಲ್ಲಿ ಬಂದಿರುತ್ತದೆ. ಈ ಶಬ್ದವು ರಾಷ್ಟ್ರಕೂಟ
ಪರ್ಯಾಯ ನಾಮವೆಂದು ಕೆಲವು ಸಂಶೋಧಕರ ಅಭಿಪ್ರಾಯವದೆ. ಚಂದ್ರವಂಶದ
ತ್ಯಕಿ ಶಾಖೆಯಲ್ಲಿ 'ರಟ್ಟಾ'ಯೆಂಬ ರಾಜಕನ್ಯೆಯು ಇದ್ದು, ಅವಳ ಮಗನೇ ರಾಷ್ಟ್ರಕೂ
ನೆಂಬವನು; ಇವನಿಂದಲೇ ಈ ಕುಲಕ್ಕೆ 'ರಾಷ್ಟ್ರಕೂಟ'ವೆಂಬ ಅಭಿಧಾನವು ಬಂದಿತೆಂ
ಕೆಲವರು ಹೇಳುತ್ತಾರೆ. 'ರಾಷ್ಟ್ರದ ಕೂಟರು' ಅಂದರೆ ಅಧಿಕಾರಿಗಳು ಎಂಬ ವ್ಯುತ್ಪ
ಯಿಂದ ರಾಷ್ಟ್ರಕೂಟರೆಂಬ ಪದವು ಉಂಟಾಯಿತೆಂದು ಕೆಲವರ ಅಭಿಪ್ರಾಯವದೆ. 'ದೇ
ಮುಖ' ಶಬ್ದವು ವಸೂಲಿಯ ಅಧಿಕಾರಿಗೂ, ಅವರ ಕೈಕೆಳಗಿನ ಕಾರಕೂನನಿಗೆ ದೇ

ಡೆ ಶಬ್ದವೂ ರೂಢವಾಗಿರುವಂತೆ, ಮತ್ತು 'ನಾಯಕ' ಶಬ್ದವು 'ಅಧಿಕಾರಿ' ರೆ, ಎಂಬರ್ಥವನ್ನು ತೋರಿಸುವಂತೆ, ರಾಷ್ಟ್ರಕೂಟ ಶಬ್ದವೂ ನಾಡಿಗರಂತೆ ಅಧಿ ವಾಚಕವಾಗಿರುತ್ತದೆಂದು ಹೇಳುತ್ತಾರೆ. ಡಾ. ಬುರ್ನೆಲ್ ಎಂಬವರು ರಾಷ್ಟ್ರ ರು ಈಗ ಕರ್ನಾಟಕದಲ್ಲಿ ಪ್ರಸಿದ್ಧವಾಗಿದ್ದ 'ರಡ್ಡೀ' ಕುಲದವರೆಂದೇ ಹೇಳು ೆ. ಡಾ. ಫ್ಲೀಟರು ತಮ್ಮ ಕನ್ನಡ ಜಿಲ್ಲೆಗಳ 'ರಾಜವಂಶಾವಳಿಯಲ್ಲಿ' ದಕ್ಷಿಣ ುಸ್ತಾನದಲ್ಲಿ ರಾಷ್ಟ್ರಕೂಟರ ಹೆಗ್ಗುರುತುಗಳು ಕಂಡುಬರುವದಿಲ್ಲಾದಕಾರಣ, ರು ಮೂಲತಃ 'ಔತ್ತರಾಹ'ರೆಂದು ಅಭಿಪ್ರಾಯಪಡುತ್ತಾರೆ. ರಾಷ್ಟ್ರಕುಂಡ ಶಬ್ದವು ್ರಕೂಟದ ಅಪಭ್ರಂಶವೆಂದು 'ಶಿವಾನಂದ ಯೋಗೀಶ್ವರ'ನ ಮರಾಠಿ ವಂಶಾವಳಿ ್ಲ ಹೇಳಲ್ಪಟ್ಟಿದೆ. ರಾಷ್ಟ್ರಕೂಟರ ಉತ್ಪತ್ತಿಯು ಸಾಧಾರಣವಾಗಿ ಯದುಕುಲದಿಂದ ಟಾಯಿತೆಂದು ತಿಳಿಯಲ್ಪಡುತ್ತದೆ. ಅರ್ಥಾತ್ ಇವರು ಚಂದ್ರವಂಶದವರೆಂದು ಲ್ಪಡುತ್ತಾರೆ. ರಾಷ್ಟ್ರಕೂಟರು ಕರ್ನಾಟದಲ್ಲಿ ಆಳಿದ ಅರಸರಲ್ಲಿ ಪ್ರಖ್ಯಾತರಾ ರು.

ಇವರ ರಾಜಧಾನಿ **ಮಳಖೇಡ** ಇದು ನಿಜಾಮನ ರಾಜ್ಯದಲ್ಲಿರುವದು. ಇದಕ್ಕೆ 'ಮಾನ್ಯಖೇಟ'ವೆಂಬ ಹೆಸರಿತ್ತು. ಈ ಪಟ್ಟಣವನ್ನು ಯಾರು ಕಟ್ಟಿಸಿದರೆಂಬ ಬಗ್ಗೆ ತರಲ್ಲಿ ಮತಭೇದವಿರುತ್ತದೆ. ಡಾ. ಭಾಂಡಾರಕರರು ಡಾ. ಫ್ಲೀಟರು, ಇದನ್ನು ತುಂಗನೇ ಕಟ್ಟಿಸಿದನೆಂದು ಹೇಳುವರು. ಆದರೆ ಈ ಅಭಿಪ್ರಾಯವು ಸರಿಯಾದ ್ಲ ಇದನ್ನು ರಾವಬಾಹದ್ದೂರ ಚಿಂತಾಮಣರಾವ ವೈದ್ಯರು ಆಕ್ಷೇಪಾರ್ಹವೆಂದು ೆ ಅವೋಘ ವರ್ಷನ ತಂದೆಯಾದ ಗೋವಿಂದನೇ ಆ ಪಟ್ಟಣದಲ್ಲಿ ತನ್ನ ಸ್ಥಾನ ್ನ ಮಾಡಿಕೊಂಡನೆಂದು ಹೇಳುತ್ತಾರೆ. ಪ್ರೊ. ಪಾಠಕರೂ ನೃಪತುಂಗನಿಗಿಂತ ದಲೇ ಈ ಪಟ್ಟಣವು ಇತ್ತೆಂದು ಹೇಳಿ ಡಾ. ಭಾಂಡಾರಕರರು ಮಾಡಿದ ಶ್ಲೋ ಅರ್ಥವನ್ನು ಬೇರೆ ರೀತಿಯಾಗಿ ಮಾಡಿದ್ದಾರೆ. ಪಾಠಕರ ಅಭಿಪ್ರಾಯವೇನಂ

**तत्सूनुरानतनृपो नृपतुंग देवः ।**
**सोऽभूत् स्वसैन्य मरभंगुरिता हिराजः ।**
**यो मान्यखेट ममरेंद्र पुरोपहासि ।**
**गीर्वाणगर्वमिव खर्वयितुं व्यधत्त ॥**

His son, to whom kings bowed, and who tortured the king of ents by the neavy mass, was that lord ನೃಪತುಂಗ+

ವಿಷಾದದ ಬಗೆ ಕವಿರಾಜ ಮಾರ್ಗದ ಪಾಠಕರ ಇಂಗ್ಲಿಷ ಪ್ರಸ್ತಾವನೆ ಪುಟ ೧೦೯ನೇ ನೋಡಿರಿ.

ಇದು ಕರ್ಹಾಡ ದಾನಪತ್ರದಲ್ಲಿರುವ ಪದ್ಯವು. 'ಮಾನ್ಯಖೇಟಂ ಅಮರೇಂದ್ರ ಪುರೋಪಹಾಸಿವ್ಯಧತ್ತ' ಮಳಖೇಡವನ್ನು ಇಂದ್ರನ ಪಟ್ಟಣಕ್ಕೆ (ಅಮರಾವತಿ) ಉಪಹಾಸ ಮಾಡುವಂತೆ ನೂಡಿದನು. ಎಂದರೆ ಅರ್ಥವು ಸರಿಯಾಗಿ ಆಗುವದು. 'ವ್ಯಧತ್ತ' ಎಂದರೆ ಸ್ಥಾಪಿಸಿದನು, (founded) ಎಂದು ಭಾಂಡಾರಕರರು ಅರ್ಥಮಾಡಿರುವದು ಸರಿಯಾಗಿ ಆಗುವದಿಲ್ಲ. ಆದುದರಿಂದ ನೃಪತುಂಗನಿಗಿಂತ ಮೊದಲೇ ಈ ಪಟ್ಟಣವನ್ನು ಕಟ್ಟಿರಬೇಕು.

ರಾಷ್ಟ್ರಕೂಟದ ವಂಶದ ೨ನೆಯ ಕರ್ಕರಾಜನ ದಾನಪತ್ರದಲ್ಲಿಯೂ, 'ಆಸೀದಿಂದ್ರ ಪುರಾಧಿಕಂ ಪುರವರಂ ಶ್ರೀಮಾನ್ಯ ಖೇಟಾಭಿದಂ' ಎಂದು ಈ ಪಟ್ಟಣದ ಐಶ್ವರ್ಯವು ದೇವತೆಗಳ ಒಡೆಯನ ಪಟ್ಟಣಕ್ಕಿಂತ ಹೆಚ್ಚಾಗಿತ್ತೆಂದು ವರ್ಣನೆಯಿರುವದು. ಮು. ವಿನ್ಸೆಂಟ ಸ್ಮಿಥ್ ರೂ, ರಾವಬಹದ್ದೂರ ಚಿಂತಾಮಣರಾಯರೂ ಈ ಅರಸರ ವಂಶಾವಳಿಯನ್ನು ತಮ್ಮ ಪುಸ್ತಕಗಳಲ್ಲಿ ಕೊಟ್ಟಿರುವರು. ವಂಶಾವಳಿಯನ್ನು ಕಡೆಗೆ ಕೊಟ್ಟಿದ್ದೇವೆ. ೧ನೆಯವನು ದಂತಿವರ್ಮನು, ೨ನೆಯವನು ಇಂದ್ರನು, ಅವನ ಮರಿಮಗನು ಮತ್ತೆ ಇಂದ್ರನು. ಈ ಇಂದ್ರರಾಜನ ಹೆಂಡತಿಯು ಚಾಲುಕ್ಯ ವಂಶದಳೆಂದು ತಿಳಿದು ಬರುತ್ತದೆ. ('ರಾಜ್ಞೀ ಸೋಮಾನ್ವಯಾ ತಸ್ಯ ಪಿತೃತಶ್ಚಶಾಲಿಕ್ಯಜಾ!') ಇಂದ್ರರಾಜನ ತರುವಾಯ ಚಾಲುಕ್ಯರೊಡನೆ ಸ್ನೇಹವು ಉಳಿಯಲಿಲ್ಲ, ರಾಷ್ಟ್ರಕೂಟರ ಉಪಲಬ್ಧವಾದ ಲೇಖಗಳಲ್ಲಿ ಸಾಮನಗಡ ತಾಮ್ರಪಟವೇ ಪ್ರಾಚೀನವಾದದ್ದು. ಈ ಲೇಖವು ದಂತಿದುರ್ಗನ ಕಾಲದಲ್ಲಿ ಅಂದರೆ ೭೫೩ A. D. ಯಲ್ಲಿ ಬರೆಯಲ್ಪಟ್ಟಿರುವದು. ದಂತಿದುರ್ಗನಿಗಿಂತ ಮೊದಲು ಮೂವರು ರಾಜರು ಆಗಿಹೋದರೆಂದೂ ಒಬ್ಬರ ಕಾಲವನ್ನು ಸು. ೨೫ ವರುಷ ಹಿಡಿದರೆ ಗೋವಿಂದರಾಜನ ಕಾಲವು ಇ. ಸ. ೬೭೦, ಇಂದ್ರರಾಜನ ಕಾಲವು ಇ. ಸ. ೬೮೫ ಆಗುವದೆಂದೂ ಚಿಂತಾಮಣರಾಯರ ಅಭಿಪ್ರಾಯವಿರುತ್ತದೆ.

+ ದಂತಿದುರ್ಗ ರಾಜ್ಯವು ನರ್ಮದೆಯಿಂದ ತುಂಗಭದ್ರೆಯವರೆಗೆ ಹಬ್ಬಿತ್ತು. ಇವನ ಮಗನಾದ ಯುವರಾಜ ಗೋವಿಂದನ ಆಲಾಸಲೇಬದಲ್ಲಿ ದಂತಿರಾಜನು ಕಾಂಚೀ, ಕೇರಲ, ಚೋಳ, ಶ್ರೀ ಹರ್ಷ, ವಜ್ರಟ ಮೊದಲಾದವರ ಮೇಲೆ ಪ್ರಭುತ್ವವನ್ನು ನಡೆಯಿಸಿದ ಚಾಲಕ್ಯ ರಾಜ್ಯವನ್ನು ಗೆದ್ದನೆಂದು ಹೇಳಿದೆ. ಚಾಲುಕ್ಯ ಪರಾಭವದ ವರ್ಣನೆಯು ಸಾಮನಗಡ ಲೇಖವಲ್ಲಿಯೂ ಇರುವದು. ದಂತಿರಾಜನು ಚಾಲುಕ್ಯಾಧಿಪತಿಯಾದ ವಲ್ಲಭರಾಜನನ್ನು ಗೆದ್ದು 'ರಾಜಾಧಿರಾಜ ಪರಮೇಶ್ವರ'ನೆಂಬ ಬಿರುದನ್ನು ಪಡೆದನು.

+ ಇವನು ಇಂದ್ರರಾಜ ಹಾಗು ಚಾಲುಕ್ಯಕುಲ ಪ್ರಸೂತಿಯಾದ ರಾಜ್ಞಿ (ಇಂದ್ರನ ಹೆಂಡತಿ) ಇವರ ಮಗನು.

ವಲ್ಲಭ ರಾಜನೆಂದರೆ ಚಾಲುಕ್ಯಕುಲದ ಕಡೆಯ ಅರಸನಾದ ಕೀರ್ತಿವರ್ಮನೇ ಎಂದು ವಿದ್ವಾಂಸರ ಅಭಿಪ್ರಾಯವಿರುವದು.

ದಂತಿ ವರ್ಮನನ್ನು ಅವನ ಕಕ್ಕನಾದ ಕೃಷ್ಣನು ಕೊಂದನೆಂದು ಹೇಳುತ್ತಾರೆ. ಬಡೋದೆಯ ದಾನಪತ್ರದಲ್ಲಿ ಇದಕ್ಕೆ ಸ್ವಲ್ಪನುಟ್ಟಿಗೆ ಆಧಾರವೂ ಸಿಗುವದು. ಕೃಷ್ಣ ರಾಜನು ಒಬ್ಬ ಅನ್ಯಾಯ ವರ್ತನೆಯುಳ್ಳ ಅಪ್ತನ ನಾಶವನ್ನು ಮಾಡಿ, ಪ್ರಜರ ಹಿತ ಕ್ಕೋಸ್ಕರ ರಾಜ್ಯದ ಸೂತ್ರಗಳನ್ನು ತನ್ನಕೈಯಲ್ಲಿ ತಕ್ಕೊಂಡನು. 'ವ್ಹಿನ್ಸೆಂಟಸ್ಮಿಥ್' ಇವರು ತಮ್ಮ ಇತಿಹಾಸನ ಷಿಲಟನೇ ಪುಟದಲ್ಲಿ "Dantidurga, the Rastrakut, after his occupation of Vatapi (ಬಾದಾಮಿ) effected other conquests, but becoming unpopular was deposed by his uncle Krisna I." ಇವನು ಲೋಕಪ್ರೀಯನಾಗಿರಲಿಲ್ಲವೆಂದು ಹೇಳುವರು.

ರಾಜನು ಪ್ರಜಾರಂಜನಲಬ್ಧವರ್ಣನಾಗಿದ್ದರೇ ಅವನ ರಾಜ್ಯವು ಸುಖಾವಹ ನಾಗುವದು. ಹಾಗಿಲ್ಲದಿದ್ದರೆ ರಾಜನಿಗೆ ಆಪತ್ತಿ ಕಟ್ಟಿಟ್ಟಿರುವದು. ದಂತಿದುರ್ಗನು ಪರಾಕ್ರಮಿಯಾಗಿದ್ದರೂ ಪ್ರಜಾರಂಜನವನ್ನು ಮಾಡಲಿಲ್ಲವಾಗಿ ತೋರುವದು. ಆದು ದರಿಂದಲೇ ಅವನು ತನ್ನ ಕಕ್ಕನಾದ ಕೃಷ್ಣನಿಂದ ಪದಚ್ಯುತನಾಗಿ ನಾಶವಾಡಿಸಲ್ಪಟ್ಟಿರಬೇಕು. ಈ ಗುಪ್ತ ಸಂಗತಿಯ ಉಲ್ಲೇಖವು ಸ್ಪಷ್ಟವಾಗಿ ತಾಮ್ರಪಟ್ಟದಲ್ಲಿಲ್ಲ. ರಾಜರೊಳಗಿನ ಹುಳುಕುಗಳನ್ನು ಮುಚ್ಚಿಡುವ ಪ್ರವೃತ್ತಿಯು ಸ್ವಾಭಾವಿಕವಾಗಿರುವದು.

ದಂತಿದುರ್ಗನ ತರವಾಯ ಬಂದ ಕೃಷ್ಣರಾಜನು ಚಾಲುಕ್ಯರನ್ನು ಮತ್ತೆ ಗೆದ್ದನು. ರಾಧನಪುರಲೇಖದಲ್ಲಿ ಚಾಲುಕ್ಯರ ವೈಭವವನ್ನು ಸ್ವಲ್ಪಕಾಲದಲ್ಲಿ ನಷ್ಟಪಡಿಸಿದನೆಂದು ಉಲ್ಲೇಖವಿರುವದು. ಪ್ರಸಿದ್ಧವಾದ ವೇರೂಳದ ಕೈಲಾಸೇಶ್ವರನ ಮಂದಿರವನ್ನು ಕಟ್ಟಿಸಿದವನು ಇವನೇ. ತಿನೇ ಕರ್ಕ ರಾಜನ ದಾನಪತ್ರದಲ್ಲಿ 'ಕೃಷ್ಣರಾಜನ ಯಶಸ್ಸು ಹದಿನೆಂಟು ಆಲಯಗಳ ರೂಪದಿಂದ ಮೂರ್ತಿಮಂತವಾಗಿ ನಿಂತಿರುತ್ತದೆ'ಂದು ವರ್ಣನೆಯಿರುವದು. * ಕರ್ಕರಾಜ ಮಹೀಪತಿಯ ದಾನಪತ್ರದಲ್ಲಿ ಇದರ ಸುಂದರವಾದ ವರ್ಣನೆಯಿರುವದು.

"ಏಲಾಪುರಾಜಲ ಗತಾದ್ಭುತ ಸನ್ನಿವೇಶಂ ।
ಯದ್ವೀಕ್ಷ್ಯ ವಿಸ್ಮಿತ ವಿಮಾನಚರಾಮರೇಂದ್ರಾಃ ॥

---

* ನಿರ್ಣಯಸಾಗರದಿಂದ ಮುದ್ರಿತವಾದ ಪ್ರಾಚೀನ ಲೇಖನಮಾಲೆ ಪುಟ ೫೫

ತಸ್ಮಿನ್ಪುತ್ರೇ ಚ ತಸ್ಮಿನ್ಕೃತ್ಯ: । ಪಿತೃಭ್ರೇವೋऽಮುದಿಹ ಕೃಷ್ಣರಾಜ:
ಅಕಾರಿಷೀದ್ಯೋ ಬಹುರತ್ನರೂಪಂ । ಪ್ರತ್ಯಕ್ಷತಾಂ ಯೇನ ಯಶೋ ವಿಭುತ್ವಂ ।

ಏತತ್ ಸ್ವಯಂಭು, ಶಿವಧಾಮ, ನಕೃತ್ರಿಮೇಶ್ರೀಃ ।
ದೃಷ್ಟ್ವೇದೃಶೀತಿ ಸತತಂಬಹುಚರ್ಚಯಂತಿ ॥"

ಯಾವಕಾಲದಲ್ಲಿ ವಿಮಾನಚಾರಿಗಳಾದ ದೇವತೆಗಳು ಇದನ್ನು ನೋಡಿದರೋ, ಆಶ್ಚರ್ಯದಿಂದ ಧಕ್ಕರಾಗಿ ಚರ್ಚಿಸ ಹತ್ತಿದರು. "ಈಶ್ವರ ಸತ್ತೆಯಿಂದ ಈ ಗುಡಿಯು ಸ್ವಯಂನಿರ್ಮಿತವಾಗಿರಬೇಕು; ಇಂತಹ ಮನೋಹರತ್ವವು ಮಾನವೀಯ ಕೃತಿಯಲ್ಲಿ ಎಲ್ಲಿಂದ ಬರಬೇಕು!" ಕೆಳಗಿನ ಪದ್ಯಗಳಾದರೂ ಕನ್ನಡಿಗರು ನೆನಪು ಇಡುವದಕ್ಕೆ ಯೋಗ್ಯವಾಗಿವೆ.

ಭೂಯಸ್ತಥಾ ವಿಧಕೃತೌ ವ್ಯವಸಾಯಹಾನಿಃ ।
ಏತನ್ಮಯಾ ಕಥನುಹೋಕೃತ ಮಿತ್ಯಕಸ್ಮಾತ್ ॥
ಕರ್ತಾಪಿಯಸ್ಯಖಲು ವಿಸ್ಮಯಮಾಪಶಿಲ್ಪೀ ।
ತನ್ನಾಮ ಕೀರ್ತನಮಕಾರ್ಯತಯೇನರಾಜ್ಞಾ ॥

ಈ ಮಂದಿರವನ್ನು ವಿರಚಿಸಿದ ಶಿಲ್ಪಿಯೇ ತಾನು, ಇದನ್ನು ತಾನೇ ಹೇಗೆ ನಿರ್ಮಿಸಿದೆನೆಂದು ನೋಡಿ ಆಶ್ಚರ್ಯಪಟ್ಟನಂತೆ, ಆ ಶಿಲ್ಪಿಯ ಸನ್ಮಾನವನ್ನು ಕೃಷ್ಣರಾಜನು ಯೋಗ್ಯವಾಗಿ ಮಾಡಿದನು.

"ಗಂಗಾಪ್ರವಾಹ, ಹಿಮದೀಧಿತಿ ಕಾಲಕೂಟೈಃ ।
ಅತ್ಯದ್ಭುತಾಭರಣಕೈಃ ಕೃತ ಮಂಡನೋಪಿ ॥
ಮಾಣಿಕ್ಯ ಕಾಂಚನಪುರಃಸರಸರ್ವಭೂತ್ಯಾ ।
ತತ್ರಸ್ಥಿತಃ ಪುನರ ಭೂಷ್ಯತಯೇನ ಶಂಭುಃ ॥"

ಶುಭ್ರವಾದ ಗಂಗೆಯ ನಿರ್ಮಲವಾದ ಪ್ರವಾಹವು, ಚಂದಿರನು, ಕಾಲಕೂಟವೆ ಮೊದಲಾದ ಅಲಂಕಾರಗಳಿಂದ ಈಶ್ವರನು ಅಲಂಕೃತನಾಗಿದ್ದರೂ ಮತ್ತೆ ಅವನ (ಶಿವನು) ಕೃಷ್ಣರಾಜನಿಂದ ರತ್ನಗಳು, ಸೌವರ್ಣಾಲಂಕಾರಗಳು ಇವುಗಳಿಂದ ಪುನ ಭೂಷಿಸಲ್ಪಟ್ಟನು.

ಗತವೈಭವದ ದರಿದ್ರ ಕರ್ನಾಟಕಕ್ಕೆ ಇದೀಗ ಅತಿಶಯೋಕ್ತಿ ತೋರಿದರೂ ಕನ್ನಡಿಗರ ಮೊದಲಿನ ಐಸಿರಿಯನ್ನು ನೆನಿಸಿಕೊಂಡರೆ ಇದೇನು ಅತಿಶಯೋಕ್ತಿಯಲ್ಲ ವಾಸ್ತವಿಕವಾದ ಸಂಗತಿಯು ಯಥಾರ್ಥವಾದ ಚಿತ್ರವೇ ಎಂದು ತೋರದಿರಲಾರದು

ವೇರೂಳವು ನಿಜಾಮು ಇಲಾಖೆಯಲ್ಲಿ ಕನ್ನಡವೆಂಬ ತಾಲೂಕಿನಲ್ಲಿರುವದು (N- bat -2ಃ-2′ long 75°-14′) ಬಂಡೆಗಲ್ಲಿನಲ್ಲಿ ಕೊರೆವ ಗುಡಿಗಳಲ್ಲಿದು ಅತ್ಯಂತ ಸೌಂದರ್ಯದಿಂದ ತುಂಬಿ ತುಳುಕುವದು. ಡಾ. ಬುರ್ಗೆಸ್ ಎಂಬವರೂ. ಮಿ. ಫರ್ಗ

ಸನ್ ಎಂಬವರೂ ಇದನ್ನು ಅಧಿಕಾರಯುಕ್ತವಾಣಿಯಿಂದ ಬಣ್ಣಿಸಿದ್ದಾರೆ. ಮಹಾಶ
ಯರಾದ ಆಲೂರ ಇವರು ತಮ್ಮ ಗತವೈಭವದಲ್ಲಿ ಗುಡಿಗಳ ಸಾಲಿನಲ್ಲಿರುವ ಒಂದು
ಗುಡಿಯಲ್ಲಿ ಒಂದು ಕನ್ನಡ ಶಿಲಾಲೇಖವು ತಮ್ಮ ಕಣ್ಣಿಗೆ ಬಿತ್ತೆಂದು * ಬರೆದಿರುವರು.
ಅದನ್ನು ಅವರು ತಕ್ಕೊಂಡು ಮುದ್ರಿಸಿದ್ದರೆ, ಕನ್ನಡ ನಾಡಿಗೆ ಉಪಕಾರವಾಗು
ತ್ತಿತ್ತು.

ಈ ಶುಭ ತುಂಗನ ತುರಂಗಮಗಳು ಎಬ್ಬಿಸಿದ ಧೂಳಿಯಿಂದ ಗ್ರೀಷ್ಮಕಾಲವೂ
ಕೂಡ ವರ್ಷಾಕಾಲದಂತೆ ಭಾಸವಾಗುತ್ತಿತ್ತಂತೆ. ಇವನು ಭುಜಬಲದ ಸೊಕ್ಕಿನಿಂದ
ಉಬ್ಬಿದ ರಾಹಪ್ಪನನ್ನು ಸಮರದಲ್ಲಿ ಗೆದ್ದು ರಾಜಾಧಿರಾಜ ಪರಮೇಶ್ವರತ್ವವನ್ನು ಪಡೆ
ದನು. †

ಕೃಷ್ಣರಾಜನ ತರುವಾಯ ಅವನ ಮಗನಾದ ೨ನೇ ಗೋವಿಂದನು ಪಟ್ಟಕ್ಕೆ
ಬಂದನು. ಕೆಲವು ತಾಮ್ರ ಪಟ್ಟಗಳಲ್ಲಿ ಇವನ ಹೆಸರಿನ ಉಲ್ಲೇಖವಿಲ್ಲ. ಇವನು ಅಷ್ಟು
ಪರಾಕ್ರಮಿಯಾಗಿರಲಿಲ್ಲವೆಂದು ಕೆಲವರು ಹೇಳುತ್ತಾರೆ, 'ಅನೇಕಾವಹ ಲಬ್ಧಕೀರ್ತಿಃ'
ಎಂದು ಅನೇಕ ಯುದ್ಧಗಳಲ್ಲಿ ಯಶಸ್ಸನ್ನು ಪಡೆದಿದ್ದಾನೆ ಎಂದು ದ್ವಿತೀಯ ಕರ್ಕರಾ
ಜನ ದಾನ ಪತ್ರದಲ್ಲಿ ಉಲ್ಲಿಖಿತವಾಗಿರುವದು. ವರ್ಧಾಪಟ್ಟದಲ್ಲಿ ವ. ತ್ರ ಇವನು ವಿಷ
ಯಲೋಲುಪನಾಗಿದ್ದ ರಿಂದ ರಾಜ್ಯವ್ಯವಸ್ಥೆಯ ಕಡೆಗೆ ಲಕ್ಷವನ್ನು ಕೊಡದೆ ತನ್ನ
ತಮ್ಮನ ಕಡೆಗೆ ರಾಜ್ಯಕಾರಭಾರವನ್ನು ಒಪ್ಪಿಸಿ ವಿಷಯ ಸೌಖ್ಯದಲ್ಲಿ ಮಗ್ನನಾಗಿರುತ್ತಿ
ದ್ದನೆಂದು ಬರೆಯಲ್ಪಟ್ಟಿರುವದು. ಡಿಂಡೋರಿ ರಾಧನ ಪುರ ಲೇಗಳಲ್ಲಿ ಇವನ ತಮ್ಮನು
ಇವನನ್ನು ಪದಚ್ಯುತವಾಗಿ ಮಾಡಿದನೆಂಬ ಗರ್ಭಿತಾರ್ಥವು ಹೊರಡುವದು. ಇವನು
ವಿಷಯಲೋಲುಪನಾಗಿದ್ದರೂ ಇರಬಹುದು. ಪರಾಕ್ರಮಿಯಾಗಿರಲಿಲ್ಲವೆಂಬ ಮಾತು
ಅಷ್ಟು ಸತ್ಯವಾಗಿ ತೋರುವದಿಲ್ಲ. ೪ನೇ ಗೋವಿಂದನ ದಾನಪತ್ರದಲ್ಲಿಯೂ ಈ
೨ನೇ ಗೋವಿಂದನು ಪರಾಕ್ರಮಿಯಾಗಿದ್ದನೆಂದೇ ಬರೆಯಲ್ಪಟ್ಟಿರುವದು.

"तस्माद्गोविन्दराजोभूत् इंद्रवैवश्रिलातले"
तस्यारि क्षोणभृत्भाकः प्रशस्तिरिव लक्ष्यते ॥

ಶತ್ರುಗಳನ್ನು ಸುಡುವದರಿಂದ ಉಂಟಾದ ಹೊಗೆಯ ಅಂಕನವು ಚಂದ್ರಬಿಂಬ
ನೆಂಬ ಶಿಲಾತಳದಲ್ಲಿ ಕುಳಿತದ್ದರಿಂದಲೇ ಅದು ಕಪ್ಪಾಗಿ ತೋರುವದೆಂದು ಇವನ ಪರಾ

---

* ೭೭ ನೇ ನಂಬರಿನ ನೋಣಬಸ್ತಿಯ ಕಂಬದ ಮೇಲೆ ಕನ್ನಡ ಅಕ್ಷರದ ಶಿಲಾಲಿಪಿಯೊಂದು ನಮ್ಮ
ಕಣ್ಣಿಗೆ ಬಿದ್ದಿತು. ಆಗ ನಮಗಾದ ಆನಂದವನ್ನು ಬಣ್ಣಿಸಲಳವಲ್ಲ. ನೋಡಬೇಕು ಆಲೂರ ಇವರ
ಗತವೈಭವ ಪುಟ ೨೦

ಪ್ರಾಚೀನ ಲೇಖನಮಾಲೆ ೧೧ನೇ ಪುಟ

ಕ್ರಮವು ಉತ್ಪ್ರೇಕ್ಷೆಯಿಂದ ಬಣ್ಣಿಸಲ್ಪಟ್ಟಿರುವದು. ಪ್ರಾಚೀನ ಲೇಖವಾಲಿಯ ೧೧ನೆ ಪುಟದಲ್ಲಿ ಇವನಿಗೆ ಕೊಟ್ಟ ಕ್ಷಣರಣದಲಿ ತಾರಾತ್ರಿ ನುತ್ಪೇಭ ಕುಂಭಕ್ತಿಃ ಎಂಬ ವಿಶೇಷಣವು ಇವನ ಪರಾಕ್ರಮವನ್ನೇ ವ್ಯಕ್ತಪಡಿಸುತ್ತದೆ. ಇವನು ಸುಮಾರು ೯-೧೦ ವರ್ಷಗಳ ರಾಜ್ಯವಾಳಿರಬೇಕೆಂದು ಹ್ವಿನ್ಸೆಂಟಸ್ಮಿಥ್ಥರು ಹೇಳುತ್ತಾರೆ.

ಇವನ ತರುವಾಯ ಇವನ ತಮ್ಮನಾದ ಧ್ರುವನು ಪಟ್ಟಕ್ಕೆ ಬಂದನು. ಇವನ ರಾಜ್ಯಕಾರಭಾರದಲ್ಲಿ ಚತುರನೂ ವೀರನೂ ಆಗಿದ್ದನು. ಇವನಿಗೆ ನಿರುಪಮ, ಧೋರ ಕಲಿವಲ್ಲಭ ಎಂಬ ಬೇರೆ ಹೆಸರುಗಳಿವ್ದವು. ಇವನು ಗಂಗರಾಜನನ್ನು ಗೆದ್ದು * ಸೆರೆ ಮನೆಯಲ್ಲಿಟ್ಟನು * ಗೌಡ (ಬಂಗಾಲ) ರಾಜನನ್ನು ಸೋಲಿಸಿ ಮದಾಂಧನಾದ ಪಶ್ಚಿಮ ದೇಶದ ವತ್ಸರಾಜನನ್ನು (ಧ್ರುವನು) ಸೋಲಿಸಿ ಮರು ಪ್ರದೇಶದ ಕಡೆಗೆ ಓಡಿಸಿ ಬಿಟ್ಟನು. ಅವನು ಗೌಡನಿಂದ ಕಸಿದುಕೊಂಡ ರಾಜಛತ್ರಗಳನ್ನು ಕಸಿದುಕೊಂಡನು. ಇವನು ದಕ್ಷಿಣದ ಪಲ್ಲವ ರಾಜನನ್ನೂ ಗೆದ್ದನು ಇವನು ಮಹಾನುಭಾವನೂ ಅಪ್ರತಿಹತ ಪ್ರತಾಪನೂ ಎಲ್ಲ ನರೆಂದ್ರಮಂಡಲದ ಸಮಾಚಾರವನ್ನು ತಕ್ಕೊಂಡವನು. ಬಾಲಾರ್ಕನಂತೆ ಶರೀರಕಾಂತಿಯುಳ್ಳವನೂ ಆಗಿದ್ದನೆಂದು ತಿಳಿದುಬರುವದು. ಇವನ ಆಳಿಕೆಯು ಪ್ರಜರಿಗೆ ಒಳ್ಳೇ ಸಂತುಷ್ಟಿಯನ್ನು ಮಾಡಿತು. ಇವನು 'ಯನ್ಮೃಷ್ಟಾ ಯಾಂಬುಧಿರಪಿ ಪ್ರಥಿತಃ ಸಮುದ್ರಃ' ಎಂದು ಹೊಗಳಿಸಿಕೊಂಡನು.

ಧ್ರುವನ ತರುವಾಯ ಅವನ ಮಗನಾದ ೩ನೇ ಗೋವಿಂದನು ಪಟ್ಟವೇರಿದನು "Govinda III. son of Druva, may justly claim to be the most remarkable prince of his vigorous danasty". ಎಂದು ಇವನ ಬಗ್ಗೆ ವ್ಹಿ. ಎ. ಸ್ಮಿಥರು ಉದ್ಗಾರತೆಗೆದಿರುವರು. ಇವನಿಗೆ ಜಗತ್ತುಂಗನೆಂಬ ಹೆಸರು ಇತ್ತು. ವಣೇ ದಿಂಡೋರಿ ರಾಧನಪುರ ತಾಮ್ರಶಾಸನಗಳನ್ನು ಶಕೆ ೭೩೫ (೮೧೩A. D.) ಯಲ್ಲಿ ಇವನೇ ಬರೆಯಿಸಿದನು. ರಾಷ್ಟ್ರಕೂಟರಲ್ಲಿ ಒಳ್ಳೇ ಶೌರ್ಯದಿಂದ

* ಮೇಹರ್ಬಾನ ರೈಸ ಸಾಹೇಬರು ಭಾಂಡಾರಕರ ಸ್ಮೃತಿನಿಬಂಧಾವತಿಯಲ್ಲಿ ಗಂಗರ ಬಗ್ಗೆ ಬರೆ ಲೇಖದಲ್ಲಿ ರಾಷ್ಟ್ರಕೂಟರಾಜನಾದ ಧ್ರುವನಿರುಪಮ ಅಥವಾ ಧಾರಾವರ್ಷನ ಮಗನಾದ ಶಾಂಭರನ [ಕಂಬಯ್ಯ] ರಣಾವಲೋಕನೆಂಬ ಬಿರುದನ್ನು ಧರಿಸಿ ಗಂಗರಾಜ್ಯವನ್ನು ರಾಷ್ಟ್ರಕೂಟರ ಪ್ರತಿನಿಧಿಯಾಗಿ ಆಳಿದನೆಂದು ಹೇಳುತ್ತಾರೆ.

* ಶ್ರೀ ಮಾನ್ ವಿದ್ವದ್ವರ್ಯ ಆರ್ ನರಸಿಂಹಾಚಾರ್ಯರು ಮಿಥಿಕ್ ಸೊಸಾಯಿಟಿ ಕ್ವಾರ್ಟರ್ಲಿ ಜರ್ನಲ್ಲಿನಲ್ಲಿ [೧೯೨೧ ಅಕ್ಟೋಬರ್] ತಳಕಾಡಿನ ಪತ್ತಿವು ಗಂಗರಬಗ್ಗೆ ಬರೆದಾಗ ಶ್ರೀಪುರುಷನ ಆಳಿಕೆಯಲ್ಲಿ ರಾಷ್ಟ್ರಕೂಟ ರಾಜನಾದ ಧ್ರುವನು ಗಂಗವಾಡಿಯ ಮೇಲೆ ಬಿದ್ದು ಶ್ರೀಪುರುಷನ ಮಗನಾದ ಶಿವಮಾರನನ್ನು ಸೆರೆಹಿಡಿದು ತನ್ನ ಮಗನಾದ ಕುಬನನ್ನು ಗಂಗವಾಡಿಗೆ ರಾಜ್ಯಪ್ರತಿನಿಧಿಯನ್ನಾಗಿ ನಿಯಮಿಸಿದನು ಶಿವಮಾರನು ತನ್ನ ಆಳಿಕೆಯಲ್ಲಿ ಅನೇಕ ವಿಪತ್ತುಗಳನ್ನು ಅನುಭವಿಸಿದನು- ಅವನನ್ನು ರಾಷ್ಟ್ರಕೂಟರ

ುರಿದ ಅರಸನು ಇವನೇ. ಧ್ರುವರಾಜನು ಗೋವಿಂದನ ಅನುಪಮಗುಣಗಳನ್ನು ನೋಡಿ ಸಾಮ್ರಾಜ್ಯದ ಸರ್ವಾಧಿಕಾರವನ್ನು ಅವನಿಗೆ ಒಪ್ಪಿಸಿದನೆಂದು ಕಾವೀ ಲೇಖದಲ್ಲಿ ಹೇಳಿದೆ. ಇವನ ಆಧಿಕಾರವು ವಿಂಧ್ಯ ಮೂಲವಾದಿಂದೆ ದಕ್ಷಿಣಕ್ಕೆ ಕಾಂಚಿಯವರೆಗೆ ಹಬ್ಬಿತ್ತು. ಪ್ರತ್ಯಕ್ಷವಾಗಿ ತುಂಗಭದ್ರೆಯವರೆಗೆ ಆಳಿದನು ಇವನು ತನ್ನ ತಮ್ಮನಾದ ಇಂದ್ರರಾಜನ್ನು ದಕ್ಷಿಣ ಗುಜರಾತದ ಅಂದರೆ ಲಾಟದೇಶದ ವ್ಯಾಯಿಸರಾಯ (ಪ್ರತಿನಿಧಿ) ನ್ನಾಗಿ ನೆಡಿಸಿದನು.

ಮೊದಲು ಗೋವಿಂದರಾಜನ ಬಗ್ಗೆ ಮಾತ್ಸರ್ಯಪಟ್ಟ ಅವನ ಬಂಧುಗಳೂ, ಮಿತ್ರರುಗಳೂ ಒಟ್ಟು ೧೨ ರಾಜರು ಕೂಡಿ ಗುಪ್ತಕಾರಸ್ಥಾನವನ್ನು ನಡೆಯಿಸಿ, ಅವನ ವಿರುದ್ಧವಾಗಿ ಬಂಡು ಎಬ್ಬಿಸಿದರು. ಗೋವಿಂದನು ಆಂಜದೆ, ಧೈರ್ಯದಿಂದ ಅವರೆಲ್ಲರ ಮುರಿದು ಮೂಲಿಗೊತ್ತಿದನು. ಗಂಗರಾಜನಾದ ಶಿವಮಾರನು ತನ್ನ ಕಳೆದ ಸ್ವಾತಂತ್ರ್ಯವನ್ನು ಪುನಃ ಪಡೆಯಲೋಸುಗ ಇವನೊಡನೆ ತುಮಕೂರ ಜಿಲ್ಲೆಯ ಕಾಗೆಲೆಯೂರು ಎಂಬಲ್ಲಿಯ ಕಾಳಗದ ಕಣದಲ್ಲಿ ಇದಿರಾಗಿ ಮಡಿದುಹೋದನೆಂದು ನರಸಿಂಹಾಚಾರ್ಯರ ಬರಹದಿಂದ ತಿಳಿದು ಬರುವದು.

ಇವನು ಗುಜರಾತ ಪತಿಯ ಮೇಲೆ ದಂಡೆತ್ತಿ ಹೋಗುವ ಸಿದ್ಧತೆಯನ್ನು ಮಾಡಲು, ಅದನ್ನು ಕೇಳಿ ಅವನು ಉತ್ತರಕ್ಕೆ ಓಡಿಹೋದನು. ಮೂಲವಾದ ಒಡೆಯನಿಗೆ ತನ್ನ ಸಾರ್ವಭೌಮತ್ವವನ್ನು ಒಡಂಬಡಲಿಕ್ಕೆ ಹಚ್ಚಿದನು. ಬಳಿಕ ವಿಂಧ್ಯಾದ್ರಿಯ ಕಡೆಗೆ ತಿರುಗಿದನು. ಮಾರಶರ್ವನು ಕೂಡಲೆ ಅವನಿಗೆ ಶರಣಾಗತನಾದನು. ಅವನು ಗೋವಿಂದರಾಜನಿಗೆ ಬೆಲೆಯುಳ್ಳ ಕಾಣಿಕೆಯನ್ನು ಅರ್ಪಿಸಿದನು. ಮಳೆಗಾಲವಾರಂಭವಾದ್ದರಿಂದ ೪ ತಿಂಗಳವರೆಗೆ ಶ್ರೀಭವನ (ಮಳಖೇಡ)ದಲ್ಲಿ ನಿಂತುಕೊಂಡನು. ಮಳೆಗಾಲವು ತೀರಿದ ಬಳಿಕ ತುಂಗಭದ್ರೆಯ ಕಡೆಗೆ ಸಾಗಿ ಪುನಃ ಪಲ್ಲವರಾಜನನ್ನು ಪಾದಾಕ್ರಾಂತ ಮಾಡಿದನು. ವೆಂಗಿರಾಜನ ಕಡೆಯಿಂದ ಒಂದು ಪಟ್ಟಣದ ತಟವನ್ನು ಕಟ್ಟಿಕೊಡಲು ಒಪ್ಪುವಂತೆ ಮಾಡಿದನು. ಇವನ ಬಿರುದು ಪ್ರಭೂತ ವರ್ಷ (ವಿಪುಲವಾಗಿ ಮಳೆಗರೆಯುವವನು) ಎಂದು ಇರುವದು.*

ಇವನು ತ್ಯಾಗಿಯೂ, ಪರಾಕ್ರಮಧನನೂ, ಪ್ರಕಟಪ್ರತಾಪಿಯೂ, ಆಗಿದ್ದನು. ಇವನ ವೈರಿಗಳು ಕಾಂತಿಹೀನರಾದರೆಂಬ ಭಾವವನ್ನು ಕವಿಯು ಚನ್ನಾಗಿ ಬಣ್ಣಿಸಿದ್ದಾನೆ—

---

* ದೀಪೋರಿ ರಾಧನಪುರ ಲೇಖಗಳನ್ನು ಬರೆಯಿಸಿದವನು ಇವನೇ. ಈ ಲೇಖಗಳು ಮುಯೂರಖಂಡಿಯಲ್ಲಿ ಬರೆಯಲ್ಪಟ್ಟವಂತೆ. ರಾಷ್ಟ್ರಕೂಟರ ಮೊದಲಿನ ರಾಜಧಾನಿ ಇದೇ ಮುಯೂರಖಂಡಿ (ನಾಸಿಕದ ಹತ್ತಿರ ಮೋರಖಡ ಗುಡ್ಡದ ಕಿಲ್ಲೆ) ಎಂದು ಚಿಂತಾಮಣರಾಯರ ಅಭಿಪ್ರಾಯವಿರುವದು. ಆದರೆ ರಾಷ್ಟ್ರಕೂಟರು ಮಹಾರಾಷ್ಟ್ರದವರೇ ಎಂದು ಅವರು ಹೇಳುವ ಮಾತನ್ನು ನಾವು ಒಪ್ಪುವದಿಲ್ಲ. ಗೋವಿಂದನ ಮಗ ನೃಪತುಂಗನೇ ಕವಿರಾಜಮಾರ್ಗದಲ್ಲಿ ಕನ್ನಡ ಗ್ರಂಥದಲ್ಲಿ ಕನ್ನಡ ನಾಡು ಆಗ ಕಾವೇರಿಯಿಂದ ಗೋದಾವರೀ ವರೆಗೆ ಇತ್ತೆಂದು ಸ್ಪಷ್ಟವಾಗಿ ಹೇಳಿರುವನು.

(ಗತಯೌವನ ವನಿತಾ ಜನ ಕುಚಸದೃಶಾ: ಯಸ್ಯ (ಗೋವಿಂದನ) ವೈರಿಣೋ: ॥ )

ಒಳಿಕ ಇವನ ಮಗನಾದ ನೃಪತುಂಗನು, ಅಥವಾ ಅಮೋಘವರ್ಷನು (ಸಫಲ ವಾದ ವೃಷ್ಟಿಯನ್ನು ಮಾಡುವವನು). ಪಟ್ಟವೇರಿದನು. ಇವನಿಗೆ ಅತಿಶಯಧವಳ, ಲಕ್ಷ್ಮೀವಲ್ಲಭ, ಕೃತಕೃತ್ಯ ಮಲ್ಲವಲ್ಲಭ, ನರಲೋಕಚಂದ್ರ, ನಿತ್ಯವಲ್ಲಭ, ಸರಸ್ವತೀ ತೀರ್ಥಾವತಾರ, ಮೊದಲಾದ ಬಿರುದುಗಳು ಇದ್ದವು. ಇವನು ಲಗಳ ರಿಂದ ಲಓಂ ವರೆಗೆ ೬೩ ವರ್ಷ, ರಾಜ್ಯಭಾರ ಮಾಡಿದನು.

(ಅಪೂರ್ಣ).

# ಪ್ರಕಟನೆ ೧.

ಮೈ॥ ಎ. ಇ. ದ. ಭಾ. ರವರ ಪತ್ರನಂ. 47/P. 9029 ತಾ॥18-2-1927 ನೇದ್ದರ ಪ್ರಕಾರ ಮಂಜೂರಾದ ಪುಸ್ತಕಗಳು.

| ನಂ. | ಪುಸ್ತಕಗಳ ಹೆಸರು. | ಗ್ರಂಥಕರ್ತರ ಹೆಸರು. | ಬೆಲೆ. | ಯಾತಕ್ಕೋಸ್ಕರ ಮಂಜೂರಾಗಿವೆ. |
|---|---|---|---|---|
| ೧ | ವಿದ್ಯಾದಾಯನಿ (ಮಾಸಪತ್ರಿಕೆ) | ಜಿ. ಹನುಮಂತರಾವ ಎಡಿಟರ ವಿದ್ಯಾದಾಯನಿ ಆಫಿಸ ಮೈಸೂರ | ೧– ೮–೦ | ಪ್ರಾಥಮಿಕ ಶಾಲೆಗಳ ಲಾಯಬ್ರರಿಗಳಿಗೋಸ್ಕರ |
| ೨ | ಅಂಕಗಣಿತ ಭಾಗ ೨ | ಟಿ. ಯನ್. ಅಮ್ಮಿನ ಭಾವಿ, ಧಾರವಾಡ | ೦– ೪–೦ | ಪ್ರಾಥಮಿಕ ಶಾಲೆಗಳ ಶಿಕ್ಷಕರ ಲಾಯಬ್ರರಿ ಗೋಸ್ಕರ |
| ೩ | ಶಿಕ್ಷಣಸಾರ | ಸದರ | ೦–೧೦–೦ | ಸದರ |

**H. A. Sadarangani,**

*Ag. E. I. S. D. Dharwar.*

## ಪ್ರಕಟನೆ ೨.

### ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು.

ನಂ. S-62 (G)-35-D

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಗೆ ೧೯೨೭ನೇ ಇ. ಯಿಂದ ಇತಿಹಾಸವು ಆವ್ಯಕ ವಿಷಯವೆಂದು ತಿಳಿಯತಕ್ಕದ್ದು. ಆದರೆ ೧೯೨೬ನೇ ಇ. ಯಲ್ಲಿ ಆವ ಪರೀಕ್ಷೆಯಿಂದ ೧೯೨೬ನೇ ಇ. ಯಲ್ಲಿ ಆಗುವ ಪರೀಕ್ಷೆಯವರಿಗೆ ಅವಧಿಯು ಅಲ್ಪವಿರುವದರಿಂದ ೧೯೨೬ನೇ ಇ. ಯ ಪರೀಕ್ಷೆಗೆ ಮಾತ್ರ ಇತಿಹಾಸವು ಐಚ್ಛಿಕ ವಿಷಯದಂತೆ ತಿಳಿಯುತಕ್ಕದ್ದೆಂದು ಸರಕಾರದ ಮಂಜೂರಿಯಿಂದ ಗೊತ್ತುಪಡಿಸಿದೆ. ಆದ್ದರಿಂದ ಉಮೇದವಾರರು ೧೯೨೬ನೇ ಇ. ಯ ಪರೀಕ್ಷೆಗೆ ಇತಿಹಾಸ, ಪ್ರಕೃತಿವಿಮರ್ಶೆ, ಡ್ರಾಯಿಂಗ, ಗಾಯನ ಇವುಗಳಲ್ಲಿ ಒಂದನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳತಕ್ಕದ್ದು. ಎರಡು ವಿಷಯಗಳನ್ನು ಸಹ ತೆಗೆದುಕೊಳ್ಳಬಹುದು.

೨ ಈ ತರಾವು ಸಿಂಧ ಪ್ರಾಂತಕ್ಕೆ ಲಾಗು ಇರುವದಿಲ್ಲ. ಯಾಕಂದರೆ ಅಲ್ಲಿ ಇತಿಹಾಸವು ೧೯೨೬ನೇ ಇ. ಯ ಪರೀಕ್ಷೆಗೂ ಅದರ ಮುಂದೆಯೂ ಆವಶ್ಯಕ ವಿಷಯದಂತೆ ತಿಳಿಯತಕ್ಕದ್ದೆಂದು ಈ ಮೊದಲೇ ಪ್ರಸಿದ್ಧಪಡಿಸಿರುತ್ತದೆ.

೩ ೧೯೨೭ನೇ ಇ. ಯ ಪರೀಕ್ಷೆಗೂ ಅದರ ಮುಂದಿನ ಪರೀಕ್ಷೆಗಳಿಗೂ ಉಮೇದವಾರರು ಪ್ರಕೃತಿವಿಮರ್ಶೆ, ಡ್ರಾಯಿಂಗ, ಗಾಯನ ಇವುಗಳಲ್ಲೊಂದನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಳ್ಳತಕ್ಕದ್ದು. ಎರಡು ವಿಷಯಗಳನ್ನು ಸಹ ತೆಗೆದುಕೊಳ್ಳಬಹುದು.

ಪುಣೆ
ತಾ॥ ೧೦ನೇ ಫೆಬ್ರುವರಿ ೧೯೨೭. } ಸಹಿ ವ್ಹಿ. ಬಿ. ಜೋಗಳೇಕರ.
ಡಾ. ಪ. ಇ. ರವರ ವತಿಯಿಂದ

## ಹೆಣ್ಣು ಮಕ್ಕಳ (ಕನ್ನಡ, ಮರಾಠಿ, ಉರ್ದು) ವ್ಹ. ಫಾ. ಪರೀಕ್ಷೆಯ ಕಾರ್ಯಕ್ರಮವು.

| ತಾರೀಖು. | ವೇಳೆ. ಎಲ್ಲಿಂದ | ವೇಳೆ. ಎಲ್ಲಿಯವರೆಗೆ | ವಿಷಯ. | ಶರಾ. |
|---|---|---|---|---|
| ಸೋಮವಾರ<br>೨೫—೪—೧೯೨೭ | ೧೦— ೦ | ೧೧— ೦ | ಉಮೇದವಾರರ ಹೆಸರುದಾಖಲ ಮಾಡುವದು. | ಭಾಷಾ ವಿಷಯದ ತೋಂಡೀ ಪರೀ |
| | ೧೧—೩೦ | ೨—೩೦ | ಭಾಷಾವಿಷಯ | ಕ್ಷೆಯು ಲೇಖೀ ಪರೀಕ್ಷೆಯು ನಡೆದಾಗ |
| | ೩— ೦ | ೫— ೦ | ನಿಬಂಧ ಮತ್ತು ಶುದ್ಧ ಬರಹ | ಲೇ ತೆಗೆದುಕೊಳ್ಳಲ್ಪಡುವದು. |
| ಮಂಗಳವಾರ<br>೨೬—೪—೧೯೨೭ | ೧೧— ೦ | ೨— ೦ | ಗಣಿತ ಮತ್ತು ಜಮಾಖರ್ಚು | |
| | ೩— ೦ | ೫— ೦ | ಭೂಗೋಲ | ಉಮೇದವಾರರು ಐಚ್ಛಿಕ ವಿಷಯಗ |
| ಬುಧವಾರ<br>೨೭—೪—೧೯೨೭ | ೧೧— ೦ | ೧— ೦ | ಆರೋಗ್ಯ ಶಾಸ್ತ್ರ | ಳಲ್ಲಿ ಒಂದನ್ನು ತೆಗೆದುಕೊಳ್ಳಲಿಕ್ಕೇ ಬೇ |
| | ೨— ೦ | ೪— ೦ | ಇತಿಹಾಸ (ಐಚ್ಛಿಕ) | ಕು. ಎರಡು ವಿಷಯಗಳನ್ನು ತೆಗೆದ |
| ಗುರುವಾರ<br>೨೮—೪—೧೯೨೭ | ೧೧— ೦ | ೨— ೦ | ಹೊಲಿಗೆ (ಅ), (ಬ) ಮತ್ತು (ಕ) | ಕೊಳ್ಳಲಿಕ್ಕೂ ಬರುವದು. |
| | ೩— ೦ | ೫— ೦ | ಡ್ರಾಯಿಂಗ (ಐಚ್ಛಿಕ) | |
| ಶುಕ್ರವಾರ<br>೨೯—೪—೧೯೨೭ | ಮುಂಜಾನೆ<br>೮— ೦ | ೧೦— ೦ | ಪ್ರಕೃತಿವಿಮರ್ಶೆ (ಐಚ್ಛಿಕ) | |
| | ಮಧ್ಯಾಹ್ನ<br>೩— ೦ | ೫—೩೦ | ಗಾಯನ (ಐಚ್ಛಿಕ) | |

# ಕನ್ನಡ ಶಾಲಾ ಪತ್ರಿಕೆ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಪುಟ ೬೪ | ಏಪ್ರಿಲ–ಮೇ ೧೯೨೭. | ಸಂ. ೧–೨.


# ಸ್ಫುಟ ವಿಚಾರಗಳು

## ೧. ಟ್ರೇನಿಂಗ ಸ್ಕೂಲು ಬಂದಾಯಿತು.

ಕಾರಣವೇನಿರುವದೆಂಬದನ್ನು ತರ್ಕಿಸುವದೂ ಅಸಾಧ್ಯವಾಗಿದೆ. ಸರಕಾರವೂ ಕೂಡ ಈ ವಿಷಯದ ತಮ್ಮ ಹೇಳಿಕೆಯನ್ನು ಎಲ್ಲಿಯೂ ಪ್ರಕಟಿಸಿಲ್ಲ. (ಇದು ಈಗ ಪ್ರಕಟವಾಗಿದೆ ಸಂ. ಶಾ. ಪ.) ನಮ್ಮ ದಕ್ಷಿಣಭಾಗದಲ್ಲಿ ಒಟ್ಟಿಗೆ ೪೦೭೩ ಶಿಕ್ಷಕರಿದ್ದು ಅವರಲ್ಲಿ ೩೬೦೨ ಶಿಕ್ಷಕರು ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನ ಕೆಳಗೂ ೪೭೧ ಜನರು ಮ್ಯುನಿಸಿಪಾಲಿಟಿಗಳ ಕೆಳಗೂ ಇರುವರು. ಅವರಲ್ಲಿ ೨೯೩೧ ಜನ ಶಿಕ್ಷಕರು ಟ್ರೇಂಡರಿದ್ದು ಮಿಕ್ಕುಳಿದ ೧೧೪೨ ಜನರು ಅಂಟ್ರೇಂಡರಿರುವರು. ಪ್ರತಿವರ್ಷ ಮರಣ, ಪೆನ್‌ಶನ್ ಮೇಲೆ ಹೋಗುವದು ಮುಂತಾದ ಕಾರಣಗಳಿಂದ ನೂರಕ್ಕೆ ೬ರಂತೆ ಶಿಕ್ಷಕರು ಕಡಿಮೆಯಾಗುತ್ತಿರುವರು. ಅಂದರೆ ಪ್ರತಿವರ್ಷ ೨೩೨ ಜನರು ಟ್ರೇಂಡರೂ ೬೮ ಜನ ಅಂಟ್ರೇಂಡರೂ—ಒಟ್ಟಿಗೆ ೩೦೦ಜನರು ಕಡಿಮೆಯಾಗುತ್ತಲಿದ್ದಾರೆ. ೧೯೨೫ ನೇ ಇಸ್ವಿಯ ಜನವರಿ ೧೯ನೇ ತಾರೀಖಿನ ೧೯೯೪ನೇ ನಂಬರಿನ ಸರಕಾರೀ ತರಾವಿನ ಮೇರೆಗೆ ಧಾರವಾಡ ಟ್ರೇನಿಂಗ ಸ್ಕೂಲಿನಲ್ಲಿ ಬ್ರಿಟಿಶ ಜಿಲ್ಲೆಗಳಿಗಾಗಿ ೨೫೦ ಜನ ಶಿಕ್ಷಕರು ಟ್ರೇಂಡರಾಗುತ್ತಿದ್ದರು. ಅದರಿಂದ ೨೯೫ ಜನ ಅಂಟ್ರೇಂಡರನ್ನು ಬೇರೆ ಬೇರೆ ಸ್ಥಾನಿಕ ಸಂಸ್ಥೆಗಳು ಪ್ರತಿವರ್ಷ ಕೆಲಸಕ್ಕೆ ನೇಮಿಸಿಕೊಳ್ಳಬೇಕಾಗುತ್ತಿತ್ತು. ಆದರೆ ಮೊನ್ನೆ ಮೊನ್ನಿನ ಸರಕಾರದ ನಿರ್ಣಯದ ಮೇರೆಗೆ ಧಾರವಾಡದ ಟ್ರೇನಿಂಗ ಸ್ಕೂಲು ಬಂದಾಗಿರುವದರಿಂದ ಆ ೨೫೦ ಜನ ಟ್ರೇಂಡ ಶಿಕ್ಷಕರೂ ಹೊರಬೀಳದಂತಾದರು. ಅದರಿಂದ ಪ್ರತಿವರ್ಷ ೩೨೦ ಜನ ಅಂಟ್ರೇಂಡ ಶಿಕ್ಷಕರು ಕೆಲಸದಲ್ಲಿ ಸೇರಬೇಕಾಗುವದು. ಈ ಲೆಕ್ಕದಿಂದ ನೋಡಿದರೆ ಹನ್ನೆರಡೇ ವರ್ಷಗಳ ಕಾಲಾವಧಿಯಲ್ಲಿ ದಕ್ಷಿಣ ಭಾಗದ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬನೂ ಟ್ರೇಂಡ ಶಿಕ್ಷಕನು ಉಳಯಲಾರನೆಂಬದು ಸಹಜವು. ಹೀಗಾಗುವದರಿಂದ ಪ್ರಾಥಮಿಕ ಶಾಲೆಗಳ ಸ್ಥಿತಿಯು ಎಷ್ಟರಮಟ್ಟಿಗೆ ಅಧೋಗತಿಗೆ ಹೋಗಬಹುದೆಂಬ ಬಹು ವಿಚಾರಾರ್ಹವಾದ ಪ್ರಶ್ನೆಯೊಂದು ತಾನಾಗಿ ಉಪಸ್ಥಿತವಾಗುವದು. ಸಾಮಾನ್ಯ ಜನತೆಯು ಈ ತರದ ಪ್ರಾಥಮಿಕ ಶಾಲೆಗಳ ಅಧೋಗತಿಗೆ ಕಾರಣವಾಗುವ ವಿದ್ಯಾಖಾತೆಯ ಅಧಿಕಾರಿಗಳ ಅಜಾಗ್ರತೆಯ ಕೃತಿಯ ವಿಷಯಕ್ಕೆ ಸರಕಾರವೇ ಜವಾಬದಾರವೆಂದು ತಿಳಿಯುವದು ಸಹಜವೇ ಸರಿ.

೨. "ಇನ್ನು ಮುಂದೆ ಇ. ಸ. ೧೯೨೮—೨೯ರ ಒಳಗಾಗಿ ಸ್ಥಾನಿಕ ಸಂಸ್ಥೆಗಳಲ್ಲಿ ಕೆಲಸಮಾಡುವ ಶಿಕ್ಷಕರಲ್ಲಿ ೧೦೦ರಲ್ಲಿ ೫೦ಜನರು ಮಾತ್ರ ಟ್ರೇಂಡರಿದ್ದರೆ ಸಾಕು"ಎಂಬ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯ್ದೆಗೆ ಸಂಬಂಧಪಟ್ಟ ನಿಯಮಗಳೊಳಗಿನ ೫ಲನೇ ನಿಯಮವನ್ನು ಮಂಜೂರು ಮಾಡುವಾಗ ಸರಕಾರದವರು ಶಿಕ್ಷಣ ಖಾತೆಯಲ್ಲಿ ಕೆಲಸಮಾಡಿ ಅನುಭವ ಪಡೆದ ಜನರ ಅಭಿಪ್ರಾಯವನ್ನು ತೆಗೆದುಕೊಂಡಿರುವರೋ ಹ್ಯಾಗೆಂಬದು ಇನ್ನೊಂದು ವಿಚಾರಣೀಯವಾದ ಪ್ರಶ್ನೆಯಾಗಿದೆ. ಈ ತೀರ ಕಡಿಮೆ ಮಾನವನ್ನೇ **ತೀರ ಹೆಚ್ಚಿನ ಮಾನ**ವೆಂದು ವಿದ್ಯಾಖಾತೆಯ ಅಧಿಕಾರಿಗಳು ಈಗೀಗ

ಅರ್ಥಾಂತರ ಮಾಡಿಕೊಂಡಂತೆ ತೋರುವದು. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ನೋಡಿದರೆ ಎಲ್ಲರೂ ಟ್ರೇಂಡ ಶಿಕ್ಷಕರಾಗಿರುವದು ಯೋಗ್ಯವೆನಿಸುವದು. ೧೯೨೩ನೇ ಇಸ್ವಿಯಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯಿದೆಯು ಪಾಸಾಗುವದಕ್ಕಿಂತಲೂ ಹಿಂದಿನ ದಿನಗಳಲ್ಲಿ ನೂರಕ್ಕೆ ನೂರು ಶಿಕ್ಷಕರು ಟ್ರೇಂಡರೇ ಇರಬೇಕೆಂಬದು ಸರಕಾರದ ಧೋರಣವಾಗಿದ್ದಿತು. ಮೇಲೆ ಹೇಳಿದ ನಿಯಮಗಳಲ್ಲಿ ಟ್ರೇಂಡ ಶಿಕ್ಷಕರ ಪರಮಾವಧಿ ಮಾನವು ಎಷ್ಟಿರತಕ್ಕದೆಂಬದನ್ನು ಸ್ಪಷ್ಟವಾಗಿ ಹೇಳಿಲ್ಲ. ಇದೊಂದು ಮಹತ್ವದ ದೋಷವೇ ಸರಿ. ನೂರಕ್ಕೆ ೫೦ ಜನರು ಟ್ರೇಂಡರಿದ್ದರೆ ಸಾಕೆಂಬ ನಿಯಮನ್ನು ನೋಡಿದೊಡನೆ ಇದು ಕೇವಲ ತಪ್ಪುವಳಿಕೆಯಿಂದ ಮಾಡಲ್ಪಟ್ಟಿರುವುದೆಂದೂ, ಇದರಿಂದ ಪ್ರಾಥಮಿಕ ಶಿಕ್ಷಣಕ್ಕೆ ಬಾಧೆಯುಂಟಾಗದೆ ಇರದೆಂದೂ ತಟ್ಟನೆ ಹೇಳಿಬಿಡಬೇಕಾಗುವದು. ಈ ನಿಯಮಗಳನ್ನು ಮಾಡಿದವರಿಗೆ ಮುಲ್ಕೀಪರೀಕ್ಷೆಯಲ್ಲಿ ಪಾಸಾದ ಉಮೇದವಾರರಿಗೆ ಯಾವ ಯಾವ ವಿಷಯಗಳ ಎಷ್ಟೆಷ್ಟು ಪರಿಜ್ಞಾನವಿರುವದೆಂಬದರ ತಿಳುವಳಿಕೆಯಿದ್ದಂತೆ ತೋರುವದಿಲ್ಲ. ಕೆಲ ಕೆಲವು ವಿಷಯಗಳ ಪ್ರಾಥಮಿಕ ಜ್ಞಾನವಲ್ಲದೆ ಹೆಚ್ಚಿನದೇನೂ ಈ ಉಮೇದವಾರರಿಗೆ ಇರುವದಿಲ್ಲ. ಶಿಕ್ಷಣಪದ್ಧತಿ, ಚಿಕ್ಕಬಾಲಕರ ಮನಸ್ಸಿನ ವಿಕಾಸ ಬೆಳುವಣಿಗೆಗಳ ಅಭ್ಯಾಸ, ಈ ವಿಷಯಗಳ ಮಾತನ್ನಂತೂ ಕೇಳುವದೇಬೇಡ. ಇಂಥ ಅನನುಭವಿಕ ಶಿಕ್ಷಕರು ಬಾಲಕರನ್ನು ತಿದ್ದುವದರ ಬದಲು ಕೆಡಿಸಿಬಿಡುವದಕ್ಕೆ ಹೆಚ್ಚು ಕಾರಣರಾಗುವರೆಂದು ಒತ್ತಿ ಒತ್ತಿ ಹೇಳಬೇಕಾಗುವದು. ೨೫ ವರ್ಷ ಡಿ॥ ಎ॥ ಇ, ೧೦ ವರ್ಷ ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲ, ೧೦ ವರ್ಷ ಡಿ॥ ಲೋ॥ ಬೋ॥ ಪ್ರೈಸ ಡೆಂಟ ಮತ್ತು ೨೫ ವರ್ಷ ಡಿ. ಲೋ. ಬೋ. ಮೆಂಬರ ಹೀಗೆ ಅರ್ಧಶತಮಾನದ ವರೆಗೆ ವಿದ್ಯಾಖಾತೆಯ ಕೆಲಸಗಳ ಅನುಭವದ ಮೂಲಕ ನಾನು ಈ ನಿಯಮಗಳನ್ನು ಮಾಡಿದವರ ಅದೂರದರ್ಶಿತ್ವವನ್ನು ಬಲವಾಗಿ ವಿರೋಧಿಸಬೇಕಾಗಿದೆ. ಒಬ್ಬ ಮುಲಕೀಪರೀಕ್ಷೆಯಲ್ಲಿ ಪಾಸಾದ ಉಮೇದವಾರನು ಪ್ರಾಥಮಿಕ ಶಾಲೆಗೆ ಬರುವ ಚಿಕ್ಕಮಕ್ಕಳ ನೈತಿಕ, ಶಾರೀರಿಕ, ಬೌದ್ಧಿಕ ಶಕ್ತಿಗಳನ್ನು ವಿಕಾಸಗೊಳಿಸಿ ಶಿಕ್ಷಣಕೊಡಲು ಎಷ್ಟುಮಾತ್ರಕ್ಕೂ ಯೋಗ್ಯನಲ್ಲ. ಮತ್ತು ಇಂಥವರಿಗೆ ಸಾಕಷ್ಟು ವಿಷಯಗಳ ಹಾಗು ಶಿಕ್ಷಣ ಪದ್ಧತಿಯ ಜ್ಞಾನವನ್ನು ಮಾಡಿಕೊಟ್ಟು ಹೊರತು ಶಿಕ್ಷಕರನ್ನಾಗಿ ನಿಯಮಿಸುವದು ಮಹದಪರಾಧವೆನಿಸುವದು.

೩. ಪ್ರಾಥಮಿಕ ಶಿಕ್ಷಕರಿಗೂ ಮಾಧ್ಯಮಿಕ ಶಿಕ್ಷಕರಿಗೂ ಕೊಡಲ್ಪಡುವ ಶಿಕ್ಷಣ ವಿಷಯಕ ಜ್ಞಾನದಲ್ಲಿ ಮಹದಂತರವಿರುವದು. ಮಾಧ್ಯಮಿಕ ಶಿಕ್ಷಕರಿಗಾಗಿ ಇಟ್ಟಿರುವ ಟ್ರೇನಿಂಗ ಕಾಲೇಜದಲ್ಲಿ ಪದವೀಧರರನ್ನಷ್ಟೇ ಆರಿಸಿಕೊಂಡು ಅವರಿಗೆ ಒಂದು ವರ್ಷದ ಕಾಲಾವಧಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನಷ್ಟೇ ಕಲಿಸುವರು. ಆ ಪದವೀಧರರಿಗೆ ತಾವು ಕಲಿಸಬೇಕಾಗಿರುವ ಹಾಯಸ್ಕೂಲಿನ ಅಭ್ಯಾಸ ಕ್ರಮವನ್ನು ಕಲಿಸಲಿಕ್ಕೆ

ಬೇಕಾಗುವಷ್ಟು ವಿಷಯಗಳ ಸಾಮಾನ್ಯ ಜ್ಞಾನವು ಇದ್ದೇ ಇರುವದು. ಆದರೆ ಮುಖ್ಯೇ ಪರೀಕ್ಷೆಯಲ್ಲಿ ಪಾಸಾದವರ ಮಾತು ಹಾಗಲ್ಲ ಅವರ ಸಾಮಾನ್ಯ ಜ್ಞಾನವು ತೀರ ಕಡಿಮೆಯಿರುವದು. ಆದ್ದರಿಂದ ಪ್ರಾಥಮಿಕ ಟ್ರೇನಿಂಗ ಕಾಲೇಜಗಳಲ್ಲಿ ಶಿಕ್ಷಣ ಪದ್ಧತಿಗೆ ಸಂಬಂಧಿಸಿದ ವಿಷಯಗಳನ್ನಷ್ಟೇ ಅಲ್ಲದೆ ವಿಕ್ಕ ಜ್ಞಾನಾರ್ಜನೆಯು ಸಾಮಾನ್ಯ ವಿಷಯಗಳನ್ನು ಕಲಿಸಬೇಕಾಗುವದು. ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗಿಂತ ಎಷ್ಟೋ ಮಡಿ ಹೆಚ್ಚಿನ ಜ್ಞಾನವುಳ್ಳವನಾಗಿರಬೇಕೆಂಬುದು ತೀರ ಸಹಜವು. ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗೆ ಕಲಿಸಬೇಕಾಗುವಷ್ಟೇ ವಿಷಯಗಳನ್ನು ತಿಳಿದಿದ್ದರೆ ಅವನ ಶಿಕ್ಷಣವು ಎಂದೂ ಪರಿಣಾಮಕಾರಕವಾಗಲಾರದು. ಅಂದರೆ ಎರಡು ಇಯತ್ತೆಗಳನ್ನು ಕಲಿತವನು ಎಂದೂ ಎರಡನೇ ಇಯತ್ತೆಯ ಶಿಕ್ಷಕನಾಗಲಾರನು. ಇದೇ ಸಂಗತಿಯನ್ನು ಇನ್ನನೇಕ ಉದಾಹರಣೆಗಳಿಂದ ಸಿದ್ಧ ಮಾಡಬಹುದು. ಶ್ರೀಮಂತನಿದ್ದವನು ಬೇಡಿದವರಿಗೆ ಸ್ವಲ್ಪ ಹಣವನ್ನು ಕೊಡಬಲ್ಲನು. ಆದರೆ ಬಡವನು ಏನು ಕೊಡಬಲ್ಲನು ? ಇನ್ನು ಎಂಥವರು ಶಿಕ್ಷಕರ ಕೆಲಸಕ್ಕೆ ತಕ್ಕವರೆಂಬದನ್ನು ನೋಡುವ. ಶಿಕ್ಷಕನು ಕೇವಲ ಪಗಾರಕ್ಕಾಗಿ ಕೆಲಸ ಮಾಡುವಂಥವನಿರಕೂಡದು. ಅವನು ತನ್ನ ಪ್ರೀತಿಯ ಉದ್ಯೋಗವೆಂದು ತಿಳಿದು ಆ ಕೆಲಸವನ್ನು ಕೈಕೊಂಡವನಿರಬೇಕು ಪರಾರ್ಥಕ್ಕಾಗಿ ದುಡಿಯುವವನೂ, ವಿಷಯಗಳ ಸಂಪೂರ್ಣ ಜ್ಞಾನವುಳ್ಳವನೂ, ಶಿಕ್ಷಕನ ಹೋರೆಗೆ ಬೇಕಾಗುವಂಥ ಪದ್ಧತಿಗಳ ಪರಿಜ್ಞಾನವುಳ್ಳವನೂ ಆದವನೇ ಶಿಕ್ಷಕನ ಕೆಲಸಕ್ಕೆ ತಕ್ಕವನೆನೆಸಿಕೊಳ್ಳುವನು. ಪ್ರಪಂಚದ ಸಾಮಾನ್ಯ ಜ್ಞಾನವನ್ನು ಪಡೆದವನೆಂಬದಿಷ್ಟೇ ಆಧಾರದ ಮೇಲಿಂದ ಯಾರಿಗೂ ಕೋರ್ಟು ಕಚೇರಿಗಳಲ್ಲಿ ವಕೀಲನ ಕೆಲಸ ಮಾಡಲಿಕ್ಕೆ ಕೊಡುತ್ತಿರುವದಿಲ್ಲ. ಅವನು ಕಾಯದೆಯನ್ನು ಅಭ್ಯಾಸಮಾಡಿ ತಕ್ಕ ಪರೀಕ್ಷೆಯಲ್ಲಿ ಪಾಸಾದರೆ ಮಾತ್ರ ಅಂಥ ಕೆಲಸಕ್ಕೆ ತಕ್ಕವನೆಂದು ತಿಳಿಯುವರು. ಅದರಂತೆ ಸಿಕ್ಕ ಸಿಕ್ಕವರಿಗೆ ಡಾಕ್ಟರನಂತೆ ಕೆಲಸ ಮಾಡಿ ಔಷಧೋಪಚಾರ ಮಾಡಲಿಕ್ಕೆ ಬಿಡುತ್ತಿರುವದಿಲ್ಲ. ಅವನು ದೀರ್ಘ ಕಾಲದವರೆಗೆ ತನ್ನ ಉದ್ಯೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಅಭ್ಯಾಸ ಮಾಡಬೇಕಾಗುವದು. ಆದರೆ ಸ್ಥಾನಿಕ ಸಂಸ್ಥೆಗಳಿಗೆ ಅಂಟ್ರೇಂಡ ಜನರನ್ನು ಶಿಕ್ಷಕರ ಕೆಲಸಕ್ಕೆ ನಿಯಮಿಸಿಕೊಳ್ಳಲಿಕ್ಕೆ ಅಪ್ಪಣೆ ಕೊಡುತ್ತಿರುವದನ್ನು ನೋಡಿದರೆ ವಿದ್ಯಾಖಾತೆಯವರು ಮಾತ್ರ ಈ ಎಲ್ಲ ಸಂಗತಿಗಳನ್ನು ಮರೆತುಬಿಟ್ಟಂತೆ ತೋರುವದು. ಆದ್ದರಿಂದ ಹಿಂದೆ ಹೇಳಿದ ನಿಯಮವನ್ನು ಬದಲಿಸಿ ಎಲ್ಲ ಶಿಕ್ಷಕರೂ ಟ್ರೇಂಡಡೇ ಇರಬೇಕೆಂದು ನಿಯಮಮಾಡಬೇಕಾಗುವದು. ಚಿಕ್ಕ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ಕಲಿತುಕೊಂಡ ವಿಷಯಗಳ ಭಾವನೆಗಳು ಬಹುಕಾಲದವರೆಗೆ ಉಳಿಯುವರಿಂದ ಆ ಕಾಲದಲ್ಲಿ ಅವರ ಮನಸ್ಸಿನಲ್ಲಿ ಯೋಗ್ಯ ಭಾವನೆಗಳು ಬಿಂಬಿಸುವಂತೆ ಮಾಡುವದು ಅತಿ ಮಹತ್ವದ ವಿಷಯವು. ಮತ್ತು ಅದಕ್ಕಾಗಿ ಯೋಗ್ಯ ಜನರನ್ನೇ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೆಲಸಕ್ಕೆ ನಿಯಮಿಸಬೇಕಾಗುವದು. ಶಿಕ್ಷಕರು ವಿದ್ಯಾ

ರ್ಥಿಗಳಿಗೆ ಹಲ ಕೆಲವು ವಿಷಯಗಳ ಜ್ಞಾನ ಮಾಡಿಕೊಟ್ಟರೆ ತನ್ನ ಕೆಲಸವಾಯಿತೆಂದು ತಿಳಿಯಕೂಡದು. ಶಿಕ್ಷಕರು ತಮ್ಮ ಬಾಲಕರು ಸತ್ಯಪ್ರಿಯರೂ, ಸಜ್ಜನರೂ, ಮೈಮುರಿದು ದುಡಿಯುವವರೂ, ಚಪಲರೂ, ನಿರೀಕ್ಷಣ ಶಕ್ತಿಯುಳ್ಳವರೂ, ರಾಜನಿಷ್ಠರೂ ಆದ ನಾಗರಿಕರಾಗಬೇಕೆಂಬ ಧ್ಯೇಯವುಳ್ಳವರಾಗಿರಬೇಕಲ್ಲದೆ ಯಾವಾಗಲೂ ವಿದ್ಯಾರ್ಥಿಗಳಾಗಿರಬೇಕಾಗುವದು.

೪. ಟ್ರೇನಿಂಗ ಕಾಲೇಜದಲ್ಲಿ ಕಲಿಯುವ ಉಮೇದವಾರರಿಗೆ ಸ್ಕಾಲರಶಿಪ್ಪುಗಳನ್ನು ಕೊಡುವ ಕಾರಣವಿಲ್ಲ. ಅವರಿಗೆ ಎರಡು ವರ್ಷಗಳವರೆಗೆ ಬೇರೆ ಬೇರೆ ವಿಷಯಗಳನ್ನು ಕಲಿಸತಕ್ಕದ್ದು. ಇಂಥ ಟ್ರೇಂಡ ಜನರಿಗೆ ನೌಕರಿಯನ್ನು ಕೊಡುವದಕ್ಕೆ ಸರಕಾರವಾಗಲಿ ಸ್ಥಾನಿಕ ಸಂಸ್ಥೆಗಳಾಗಲಿ ಹೊಣೆಯನ್ನು ಹೊರುವ ಕಾರಣವಿಲ್ಲ. ಕಳೆದ ಎರಡು ವರ್ಷಗಳಿಂದಲೂ ಸ್ಥಾನಿಕ ಸಂಸ್ಥೆಗಳಿಂದ ಬಂದಿರುವ ಉಮೇದವಾರರಿಗೆ ಅವರು ವಿದ್ಯೆಯಲ್ಲಿ ಹಿಂದುಳಿದವರಿರಲಿ ಮುಸಲ್ಮಾನರೇ ಇರಲಿ ಯಾವ ಜಾತಿಯವರೇ ಇದ್ದರೂ ಸ್ಕಾಲರ ಶಿಪ್ಪುಗಳನ್ನು ಕೊಟ್ಟಿಲ್ಲ. ಹೀಗೆ ತಮ್ಮ ಸ್ವಂತ ಖರ್ಚಿನಿಂದ ಶಿಕ್ಷಣ ಪಡೆಯುವಂಥ ಉಮೇದವಾರರಿಗೆ ದಕ್ಷಿಣ ಭಾಗದಲ್ಲಿ ಕೊರತೆಯಿರುವದಿಲ್ಲ. ಸದ್ಯಕ್ಕೆ ಪ್ರಯೋಗಾರ್ಥವಾಗಿ ಧಾರವಾಡ, ಬೆಳಗಾಂವ, ಮತ್ತು ವಿಜಾಪುರ ಜಿಲ್ಲೆಗಳಿಂದ ೩೫ ಜನ ಉಮೇದವಾರರನ್ನು ಈ ಕರಾರಿನ ಮೇರೆಗೆ ಇಟ್ಟುಕೊಂಡು ಒಂದು ವರ್ಗವನ್ನು ನಡೆಯಿಸಬೇಕು. ಟ್ರೇನಿಂಗ ಸ್ಕೂಲಿನಲ್ಲಿ ಶಿಕ್ಷಣ ಪಡೆದ ತರುವಾಯ ಅವರನ್ನು ಆಯಾ ಸ್ಥಾನಿಕ ಸಂಸ್ಥೆಗಳವರು ಶಿಕ್ಷಕರ ಕೆಲಸಕ್ಕೆ ನಿಯಮಿಸಿಕೊಳ್ಳಬಹುದು. ಇಲ್ಲವೆ ಅವರು ಸಣ್ಣ ಸಣ್ಣ ಹಳ್ಳಿಗಳಲ್ಲಿ ಗಾವಠೀ ಶಾಲೆಗಳನ್ನು ಆರಂಭಿಸಬಹುದು. ಈ ಮೇಲೆ ಹೇಳಿದ ಸಂಗತಿಗಳ ಮೇಲಿಂದ ಟ್ರೇನಿಂಗ ಸ್ಕೂಲಿನಲ್ಲಿ ಈಗಿನಕಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಅದನ್ನು ನಡೆಯಿಸುವದು ಶಕ್ಯವೂ ಅವಶ್ಯವೂ ಇರುವದೆಂಬದು ಸಿದ್ಧವಾಗುವದು.

೫. ಟ್ರೇನಿಂಗ ಕಾಲೇಜಗಳ ಅಭ್ಯಾಸ ಕ್ರಮವು ಯಾವ ರೀತಿಯಾಗಿರಬೇಕೆಂಬ ವಿಷಯದ ಬಗ್ಗೆ ಗವರ್ನಮೆಂಟಿನೇ ಇಸ್ಕೂಲಿಯಿಂದಲೂ ಸರಕಾರವು ತಪ್ಪು ಮಾಡುತ್ತ ಬಂದಿರುವದೆಂದು ತೋರುವದು. ಜ್ಞಾನವರ್ಧಕ ವಿಷಯಗಳನ್ನಿನಿಸಿಕೊಳ್ಳುವ ಸಂಸ್ಕೃತ ಬೀಜಗಣಿತಗಳನ್ನು ಟ್ರೇನಿಂಗ ಕಾಲೇಜದ ಅಭ್ಯಾಸ ಕ್ರಮದೊಳಗಿಂದ ಕಿತ್ತೊಗೆದಿರುವರು. ಅಂಕಗಣಿತಕ್ಕೆ ಬೀಜಗಣಿತವು ಮೂಲಾಧಾರವಾಗಿರುವದರಿಂದ ಬೀಜಗಣಿತದ ಜ್ಞಾನವಿಲ್ಲದ ಶಿಕ್ಷಕನು ಅಂಕಗಣಿತವನ್ನು ಸರಿಯಾಗಿ ಕಲಿಸಬಹುದೆಂದು ತಿಳಿಯುವದು ಹಾಸ್ಯಾಸ್ಪದವಾಗಿದೆ. ಅದರಂತೆ ಸಂಸ್ಕೃತದ ಜ್ಞಾನವಿಲ್ಲದೆ ಕನ್ನಡದ ಅದರಲ್ಲಿಯೂ ಗ್ರಾಂಥಿಕ ಕನ್ನಡ ಭಾಷೆಯ ಅಭ್ಯಾಸವು ಪೂರ್ಣವಾಗಬಹುದೆಂದು ತಿಳಿಯುವದೂ ಕೂಡ ಅಷ್ಟೇ ನಗೆಪೀಡಿತವಾಗುವದು. ಆದುದರಿಂದ ಶಿಕ್ಷಣ ಇಲಾಖೆಯವರು

ಅಭ್ಯಾಸ ಕ್ರಮವನ್ನು ಕಡಿಮೆ ತರಗತಿಗೆ ಇಳಿಸಿದ್ದು ಸರಿಯಲ್ಲ. ಕಾರಣ ಸಂಸ್ಕೃತ ಬೀಜಗಣಿತಗಳನ್ನು ಟ್ರೇನಿಂಗ ಕಾಲೇಜದ ಅಭ್ಯಾಸ ಕ್ರಮದಲ್ಲಿ ಪುನಃ ಸೇರಿಸಲೇಬೇಕೆಂದು ಆಗ್ರಹಪೂರ್ವಕವಾಗಿ ಹೇಳದಿರಲಾರೆನು. ಇನ್ನೊಂದು ಆಶ್ಚರ್ಯಕರವಾದ ಮಾತೇನೆಂದರೆ ಟ್ರೇ. ಕಾ. ದ ಮೊದಲನೇ ವರ್ಷದ ವಿದ್ಯಾರ್ಥಿಗಳು ಕನ್ನಡ ಕ್ರಮಿಕ ಪುಸ್ತಕಗಳ ಹೊರತಾಗಿ ಯಾವ ಗದ್ಯ ಇಲ್ಲವೆ ಪದ್ಯ ಗ್ರಂಥಗಳನ್ನು ಓದಬೇಕಾಗುವದೇ ಇಲ್ಲ ! ಉಚ್ಚ ತರದ ಗದ್ಯ ಪದ್ಯ ಕಾವ್ಯಗಳ ಅಭ್ಯಾಸ ಮಾಡದೆ ಇದ್ದ ವಿದ್ಯಾರ್ಥಿ ರ್ಥಿಗಳು ಭಾಷಾ ಸೌಂದರ್ಯವನ್ನಾಗಲಿ ಹೆಚ್ಚಿನ ವಿಚಾರಗಳನ್ನಾಗಲಿ ಹೇಗೆ ತಿಳಿದು ಕೊಳ್ಳುವರೆಂಬದು ತೀರ ಆಶ್ಚರ್ಯದ ವಿಷಯವು.

೬. ಪ್ರಾಥಮಿಕ ಶಿಕ್ಷಕರ ಪಗಾರಿನ ವಿಷಯವಾಗಿ ವಿಚಾರಮಾಡಿ ನೋಡಿದರೆ ಅವರಿಗೆ ಈಗ ಅವರ ಯೋಗ್ಯತೆಗೆ ಮೀರಿ ಪಗಾರು ಕೊಡಲ್ಪಡುವದೆಂದು ಹೇಳಬೇಕಾಗುವದು. ತೀರ ಕಡಿಮೆ ಪಗಾರವನ್ನು ೨೫ ರೂ ಇಟ್ಟಿದ್ದು ಬಹಳ ಹೆಚ್ಚಾಗಿದೆ. ಇನ್ನು ಮುಂದೆ, ಮೊದಲನೇ ವರ್ಷದ ಟ್ರೇಂಡರ ಆರಂಭದ ಪಗಾರ ೨೦ ರೂ. ಇದ್ದರೆ ಸಾಕು. ಸ್ಥಾನಿಕ ಸಂಸ್ಥೆಗಳು ೧೫ ರೂ. ಗಳ ಮೇಲೆ ಅಂಟ್ರೇಂಡ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಬಹುದು. ಎರಡನೇ ಮೂರನೇ ವರ್ಷಗಳ ಟ್ರೇಂಡ ಶಿಕ್ಷಕರ ಆರಂಭದ ಪಗಾರವು ಕ್ರಮವಾಗಿ ೨೫–೩೦ ರೂ. ಇರಬಹುದು. ೧ನೇ ೨ನೇ ೩ನೇ ವರ್ಗಗಳ ಟ್ರೇಂಡ ಶಿಕ್ಷಕರ ಕೊನೆಯ ಪಗಾರು ಕ್ರಮವಾಗಿ ೪೦– ೪೫– ೫೦ ಇದ್ದರೆ ಸಾಕು. ವರ್ಷಂಪ್ರತಿ ಬಡತಿಯ ಸ್ಕೇಲಿನಂತೆ ಪಗಾರು ಕೊಡುವ ಪದ್ಧತಿಯು ಪ್ರಾಥಮಿಕ ಶಿಕ್ಷಕರಿಗೆ ತಕ್ಕದ್ದಲ್ಲ. ಈ ತರದ ರೂಢಿಯು ಪ್ರಚಾರದಲ್ಲಿ ಬಂದಂದಿನಿಂದಲೂ ಶಿಕ್ಷಕರು ತಮ್ಮ ಕೆಲಸದಲ್ಲಿ ತಕ್ಕ ಕಾರ್ಯಸ್ಫೂರ್ತಿಯನ್ನು ತೋರಿಸುವದಿಲ್ಲ; ಮತ್ತು ಬಹುಜನ ಶಿಕ್ಷಕರು ತಮ್ಮ ಹಿಂದಿನ ಶಿಕ್ಷಕರಂತೆ ಸ್ಫೂರ್ತಿಯಿಂದಲೂ ಉತ್ಸಾಹದಿಂದಲೂ ಕೆಲಸಮಾಡುತ್ತಿರುವದಿಲ್ಲ. ಈಗಿನವರಂತೆ ನಿಯಮಿತ ಕಾಲಾವಧಿಯಿಂದ ಗೊತ್ತಾದಷ್ಟು ಬಡತಿಯನ್ನು ಕೊಡುವ ಪದ್ಧತಿಯನ್ನು ನಿಲ್ಲಿಸಿಬಿಡುವದು ಪ್ರಾಥಮಿಕ ಶಿಕ್ಷಣದ ದೃಷ್ಟಿಯಿಂದ ನೋಡಿದರೆ ಹಿತಾವಹವಾಗಿದೆ. ಇನ್ನು ಮುಂದೆ ಶಿಕ್ಷಕರ ಕೆಲಸದಲ್ಲಿ ಯೋಗ್ಯತೆಯನ್ನು ನೋಡಿ ಬಡತಿಗಳನ್ನು ಕೊಡತಕ್ಕದ್ದು. ಅದರಿಂದ ಶಿಕ್ಷಕರಲ್ಲಿ ಯೋಗ್ಯ ಮೇಲಾಟವೂ ಸ್ಪರ್ಧೆಯೂ ಉಂಟಾಗುವವು. ಈಗ ಕೊಟ್ಟಿರುವ ಹೆಡ್ ಮಾಸ್ತರ ಅಲಾವನ್ನು ಹೆಡ್‌ಮಾಸ್ತರ ಮತ್ತು ಅಸಿll ರಲ್ಲಿ ಕಲಹಕ್ಕೆ ಕಾರಣವಾಗುವದರಿಂದ ಅದನ್ನು ನಿಲ್ಲಿಸಿಬಿಡತಕ್ಕದ್ದು. ಈ ರೀತಿ ಆರಂಭದ ಪಗಾರವನ್ನು ಕಡಿಮೆ ಮಾಡಿ, ನಿಯಮಿತ ಕಾಲಾವಧಿಯಿಂದ ಬಡತಿಯನ್ನು ಕೊಡುವ ಕ್ರಮವನ್ನು ನಿಲ್ಲಿಸಿ, ಹೆಡ್‌ಮಾಸ್ತರರಿಗೆ ಅಲಾವನ್ಸವನ್ನು ಕೊಡುವ ಕ್ರಮವನ್ನು ಬಂದು ಮಾಡುವದರಿಂದ ಸರಕಾರಕ್ಕೆ ವೆಚ್ಚವು ಬಹಳ ಕಡಿಮೆಯಾಗಿ ಉಳಿತಾಯವಾಗುವದು. ಈ ಹಣವನ್ನು ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿಯೂ ಟ್ರೇನಿಂಗದ ಬಸ್ಸಿಗೂ ಉಪಯೋಗಿಸಿ

೭. ಧಾರವಾಡದ ಟ್ರೇನಿಂಗ ಸ್ಕೂಲನ್ನು ಬಂದು ಮಾಡದೆ ಅದಕ್ಕೆ ಇನ್ನೂ ಹೆಚ್ಚಿಗೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂತಲೂ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯದೆಯೊಳಗಿನ ಹಿಂದೆಹೇಳಿದ ಭಾಗಗಳನ್ನು ತಿದ್ದಿ ಸರಿಪಡಿಸಬೇಕೆಂತಲೂ ಸ್ಥಾನಿಕ ಸಂಘಗಳಿಗೆ ಕೊಟ್ಟಿರುವ ಅಧಿಕಾರಿಗಳನ್ನು ದುರುಪಯೋಗ ವಾಗುವ ಪ್ರಸಂಗದಲ್ಲಿ ಅವುಗಳ ಮೇಲೆ ಯೋಗ್ಯ ಮೇಲ್ವಿಚಾರಣೆ ನಡಿಸಿ ಅವುಗಳ ಮಾರ್ಗವನ್ನು ನಿಯಂತ್ರಣಪಡಿಸುವದಕ್ಕೆ ಆವಶ್ಯಕವೆನಿಸುವ ಕೆಲವು ಹೆಚ್ಚಿನ ಮಾತುಗಳನ್ನು ಅದರಲ್ಲಿ ಸೇರಿಸಬೇಕೆಂತಲೂ ತುಂಬಾ ಆಗ್ರಹದೊಡನೆ ವಿನಂತಿ ಮಾಡಿಕೊಂಡು ಈ ವಿನಂತಿ ಪತ್ರವನ್ನು ಮುಗಿಸುವೆನು.

S. K. Rodda

---

## ಗ್ರಂಥವಿಮರ್ಶೆ

**ಪುಟ್ಟಭಾರತ:**—ಬೆಲೆಲ ಆಣೆ. ಗ್ರಂಥಕರ್ತ—ಓಂಕಾರ ಬಾಳಕೃಷ್ಣಬೋಧೆ. ದೊರೆಯುವಸ್ಥಳ—ರಾಮತತ್ವಪ್ರಕಾಶ ಮುದ್ರಾಲಯ ಬೆಳಗಾಂವ. ಈ ಚಿಕ್ಕ ಪುಸ್ತಕದಲ್ಲಿ ಮಹಾಭಾರತದ ಗಿಲಪರ್ವಗಳ ಸಾರಾಂಶವು ಒಹು ಮನೋಹರವಾಗಿ ಸುಲಭ ಭಾಷೆಯಲ್ಲಿ ಬಾಲಕರಿಗೆ ಸಹ ತಿಳಿಯುವಂತೆ ಕೊಡಲ್ಪಟ್ಟಿದೆ. ಶಬ್ದಲಾಲಿತ್ಯವೂ ಅನುಪ್ರಾಸವೂ ಸರಿಯಾಗಿರುವವು ಹೆಣ್ಣುಮಕ್ಕಳು ಈ ಪುಸ್ತಕವನ್ನು ಓದಿ ಬೋಧವನ್ನೂ ಆನಂದವನ್ನೂ ಹೊಂದಬಹುದು. ಪ್ರಾ. ಶಾ. ಗಳ ೩–೪ನೇ ಇಯತ್ತೆಗಳಿಗೆ ಪುರವಣಿ ಪಠ್ಯ ಪುಸ್ತಕವಾಗಿ ಉಪಯೋಗಿಸಲಿಕ್ಕೆ ತಕ್ಕದ್ದಾಗಿದೆ. ದೊಡ್ಡ ಅಕ್ಷರಗಳ ಮುದ್ರಣದಿಂದ ಓದಲಿಕ್ಕೆ ಸುಗಮವಾಗಿರುವದು.

**ಶಾರದೆ** (ಮಾಸಪತ್ರಿಕೆ) ವಾರ್ಷಿಕವರ್ಗಣಿ—೧ರು. ೪ ಆಣೆ. ಸಂಪಾದಕ—ಭೀ. ಜೀ. ಹುಲಕವಿ ಧಾರವಾಡ. ಶಾರದೆಯು ಪ್ರಭವ ಸಂವತ್ಸರದ ಚೈತ್ರದಲ್ಲಿ ಪ್ರಾರಂಭವಾಗಿದೆ. ಈಗ ನಾಲ್ಕು ಸಂಚಿಕೆಗಳು ಕೈಸೇರಿವೆ ಇದರಲ್ಲಿ ಸುಲಭ ಪದ್ಯಗಳೂ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಕಥೆಗಳೂ, ಹಾಸ್ಯಪ್ರಧಾನ ಲೇಖಗಳೂ ಬರುತ್ತವೆ. ಅವುಗಳಲ್ಲಿ ಗಿರಿಯಮ್ಮನ ಚರಿತ್ರೆ, ಒಂದೇಗತಿ, ಬದನೇಕಾಯಿಯ ಜವಾಬು ಮುಂತಾದ ಲೇಖಗಳು ಉತ್ತಮವಾಗಿವೆ. ವಿದ್ಯಾರ್ಥಿಗಳೂ ಶಿಕ್ಷಕರೂ ಈ ಮಾಸಿಕಕ್ಕೆ ಯೋಗ್ಯ ಆಶ್ರಯವನ್ನು ಕೊಡುವರೆಂದು ನಂಬುತ್ತೇವೆ.

ಸ. ಶಾ. ಪತ್ರಕ.

---

ಕನ್ನಡ
# ಶಾಲಾ ಪತ್ರಿಕೆ

ಸಂಪಾದಕ:—ಹೆಸುಮುಂತ ಗೋವಿಂದರಾವ ದೇಶಪಾಂಡೆ, ಬಿ. ಎ.

| ಸಂಪುಟ ೬ಳ | ಆಗಷ್ಟು ೧೯೨೭ | ಸಂ. ೫ |
|---|---|---|

# ಸ್ಫುಟ ವಿಚಾರಗಳು

## ೧. ಅಭಿನಂದನ

ಟ್ರೇನಿಂಗ ಕಾಲೇಜವು ಪುನಃ ಪ್ರಾರಂಭವಾದದ್ದಕ್ಕಾಗಿ ಅನೇಕ ಸದ್ಗೃಹಸ್ಥರಿಂದ ಅಭಿನಂದನ ಪತ್ರಗಳು ನಮ್ಮ ಕಡೆಗೆ ಬಂದವೆ. ಅವುಗಳಿಗೆಲ್ಲ ವ್ಯಕ್ತಿಶಃ ಉತ್ತರ ಕೊಡುವದು ಅಶಕ್ಯವಿದ್ದದರಿಂದ ಅಭಿನಂದನ ಪತ್ರಗಳನ್ನು ಕಳಿಸಿದ ಸದ್ಗೃಹಸ್ಥರಿಗೆಲ್ಲ ನಮ್ಮ ಪ್ರೇಮಪೂರ್ವಕ ವಂದನೆಗಳನ್ನು ಸಮರ್ಪಿಸುವೆವು. ನಮ್ಮ ಕಡೆಗೆ ಬಂದ ಪತ್ರಗಳಲ್ಲಿ ಒಂದರ ಸಾರಾಂಶವನ್ನು ಕೆಳಗೆ ಕೊಟ್ಟಿದ್ದೇವೆ.

"ಪುನಃ ಟ್ರೇ. ಕಾ. ವು ಪ್ರಾರಂಭವಾವ ಸಂಗತಿಯನ್ನು ಕೇಳಿ ಒದಿ ಆನಂದ ಪರಮಾನಂದವಾಯಿತು. ಬಡವರ ಮನೆಗೆ ಭಾಗೀರಥಿಯು ತಾನಾಗಿಯೇ ಬಂದಷ್ಟು ಸಂತೋಷವಾಯಿತು. ಅವ್ದರಿಂದ ನಮ್ಮ ಮಿತ್ರರಲ್ಲಿ ಆನಂದ ಪ್ರದರ್ಶನವು ಹೂಡಲ್ಪಟ್ಟು ಪಿತಾಮಹರಾದ ದಿ. ಬ. ರೊದ್ದರಾಯರ ಸಾಹಸ ಪ್ರಯತ್ನಗಳ ಬಗ್ಗೆಯೂ ಹೊಗಳಲ್ಪಟ್ಟಿತು. ಇನ್ನು ಮುಂದೆ ಏನೊಂದೂ ಆತಂಕವಿಲ್ಲದೆ ದೇವರು ಸಾಗಮಾಡ ಬೇಕೆಂದು ಈಶ್ವರ ಪ್ರಾರ್ಥನೆಯು ಮಾಡಲ್ಪಟ್ಟಿತು.

ಕನ್ನಡಭಾಷೆಯ ಅಭಿವೃದ್ಧಿಗೆ ಕೇರುಬಡಿದಂತಾಗಿತ್ತು. ಈಗ ಆ ಕುತು ದೂರಾದಂತಾಯಿತು. ಸಂಕಟತರುವನ್ನೂ ಕಳೆಯುವನನ್ನೂ ದೇವರೇ ಅಲ್ಲವೇ? ಇಂತು ಕರ್ನಾಟಕದಲ್ಲಿ ಕನ್ನಡಭಾಷೆಯು ತನ್ನ ಮರ್ಯಾದೆಯನ್ನು ಕಾಯ್ದುಕೊಂಡು ಇರುವ ವೇಳೆಯು ಉಳಿದಂತಾಯಿತು. ಸ್ತುತ್ಯ! ಆನಂದ! ಆನಂದ !! ಪರಮಾನಂದ!!"

ಟ್ರೇ. ಕಾ. ವು ಉಳಿಯಬೇಕಾದರೆ ನಮ್ಮಲ್ಲಿಯ ಮುಂದಾಳುಗಳ ಪ್ರಯತ್ನವು ಒಂದು ಕಾರಣವಾಗಿದೆ. ಆದರೆ ಮುಖ್ಯವಾಗಿ ಈಗಿನ ಶಿಕ್ಷಣಮಂತ್ರಿಗಳಾದ ನಾಮದಾರ ದಿ. ಬ. ಹರಿಲಾಲ ದೇಸಾಯಿಯವರ ಸಂಪೂರ್ಣ ಸಹಾನುಭೂತಿಯೂ ವಿಶೇಷ ಕಾರಣವು. ಗುಜರಾಥದಲ್ಲಿಯ ಪ್ರೇಮುಚಂದ ರಾಯಚಂದ ಟ್ರೇನಿಂಗ ಕಾಲೇಜದ ಅವಸ್ಥೆಯೂ ನಮ್ಮಲ್ಲಿಯ ಟ್ರೇ. ಕಾ. ದಂತೆ ಆಗಿತ್ತು. ಅಲ್ಲಿಯ ಮುಂದಾಳುಗಳೂ ಈ ಕಾರ್ಯದಲ್ಲಿ ಒಳ್ಳೇ ಜಾಗ್ರತೆಯಿಂದ ಸ್ರವರ್ತಿಸಿದ್ದಲ್ಲದೆ ಒಂದು ಶಿಷ್ಟಮಂಡಳವನ್ನು ಶಿಕ್ಷಣ ಮಂತ್ರಿಗಳ ಕಡೆಗೆ ಕಳುಹಿಸಿ ತಮ್ಮ ಟ್ರೇ. ಕಾ. ವನ್ನು ಇಡಲೇಬೇಕೆಂದು ಆಗ್ರಹದ ವಿನಂತಿಯನ್ನು ಮಾಡಿಕೊಂಡರು. ಹೊಸ ರಾಜಕೀಯ ಸುಧಾರಣೆಯ ಪ್ರಚಾರವು ನಮ್ಮಲ್ಲಿ ಬಂದಂದಿನಿಂದ ಶಿಕ್ಷಣಖಾತೆಯು ಮೊದಲಿಗಿಂತ ಬೆಳೆದೀತೆಂದು ಜನರು ಆಶಿಸಿದ್ದರು. ಅದು ಹೋಗಿ ಮೊದಲಿದ್ದದ್ದರಲ್ಲಿಯೇ ಕಡಿಮೆಯಾದಬ್ಬನ್ನು ನೋಡಿ ಜನರ ಮನಸ್ಸು ಕುಗ್ಗಿ ಹೋಗಿತ್ತು. ಆದರೆ ನಮ್ಮ ಸುದೈವದಿಂದ ಮುಂಬಯಿ ಇಲಾಖೆಯಲ್ಲಿ ಶಿಕ್ಷಣಖಾತೆಗೆ ಸಮರ್ಥರಾದ ಮಂತ್ರಿಗಳು ಬಂದದರಿಂದ ಅವರು ಟ್ರೇನಿಂಗ್ ಕಾಲೇಜಗಳ ಅಸ್ಥಿಪಂಜರಗಳಲ್ಲಿ ಜೀವಕಳೆಯನ್ನು ತುಂಬಿ ಅವುಗಳಿಗೆ ಮೊದಲಿನ ಸ್ವರೂಪವನ್ನು ಕೊಟ್ಟಿದ್ದಲ್ಲದೆ ಇನ್ನೂ ಅವುಗಳ ಅಭಿವೃದ್ಧಿದಶೆಯನ್ನು ಕರಬೇಕೆಂದಿರುವರು. ಅದಕ್ಕಾಗಿ ಮುಂಬಯಿ ಇಲಾಖೆಯ ಜನರೆಲ್ಲರು ನಾ. ದಿ. ಬ. ದೇಸಾಯಿಯವರನ್ನು ಎಷ್ಟು ಕೊಂಡಾಡಿದರೂ ಕಡಿಪೆಯೇ ಸರಿ.

## ೨. ಟ್ರೇನಿಂಗ ಕಾಲೇಜದ ಅಭಿವೃದ್ಧಿ

ಹೀಗೆ ಪ್ರಯತ್ನಪೂರ್ವಕವಾಗಿ ಶಿಕ್ಷಣ ಮಂತ್ರಿಗಳು ನಮಗೆ ತಿರುಗಿಕೊಟ್ಟ ಧಾರವಾಡದ ಟ್ರೇನಿಂಗಕಾಲೇಜವನ್ನು ಪೂರ್ವದ ಸ್ಥಿತಿಗೆ ತರುವದು ಕರ್ನಾಟಕದ ಸ್ಕೂಲಬೋರ್ಡುಗಳ ಕೈಯ್ಯಲ್ಲಿ ಅದೆ ನಮ್ಮಲ್ಲಿಯ ಸಂಸ್ಥೆಯನ್ನು ಎತ್ತಿಹಿಡಿಯುಲಿಕ್ಕೆ ಪರಭಾಗದ ಮುಂದಾಳುಗಳು ಮನಃಪೂರ್ವಕವಾಗಿ ಪ್ರಯತ್ನಮಾಡುವದನ್ನು ನೋಡಿ ನಮ್ಮಲ್ಲಿಯ ಸ್ಕೂಲಬೋರ್ಡುಗಳು ಉತ್ಸಾಹದಿಂದ ಮುಂದೆಬಂದು ಎರಡನೆಯ ವರ್ಷದ ಟ್ರೇಂಡರ ಬೇಡಿಕೆಯನ್ನು ಮಾಡಿ ಟ್ರೇನಿಂಗ್ ಕಾಲೇಜವು ಮೊದಲಿನಂತೆ ಆಗುವದಕ್ಕೆ ಸಹಾಯವನ್ನು ಮಾಡುವವಲ್ಲದೆ ಅಂಥ ಟ್ರೇಂಡಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಿ ಪ್ರಾಥಮಿಕ ಶಿಕ್ಷಣವನ್ನು ಯಶಸ್ವಿಯಾಗಿ ಮಾಡುವದೂ ಅವುಗಳ ಕರ್ತವ್ಯವಾಗಿದೆ.

ಟ್ರೇಂಡರ ಸಂಖ್ಯೆಯು ಹೆಚ್ಚಾಯಿತು, ಹೆಚ್ಚಾಯಿತೆಂಬ ಕೂಗಾಟವನ್ನೇ ಮುಂದೆ ಮಾಡಿ ಶಿಕ್ಷಿಣ ಕಲೆಯನ್ನರಿಯದ (ಅಂಟ್ರೇಂಡ) ವ್ಹ. ಫಾ. ಪಾಸಾದ ಜನರನ್ನು ನೇಮಿಸಿಕೊಳ್ಳುವದರಿಂದ ಪ್ರಾ. ಶಿ. ದ ಹಾನಿಯು ಎಷ್ಟಾಗುವದೆಂಬದನ್ನು ಅವರು ವಿಚಾರಪೂರ್ವಕವಾಗಿ ವಿಮರ್ಶಿಸಿದಲ್ಲಿ ಮತ್ತು ಕನ್ನಡ ಭಾಷೆಯ ಅಭ್ಯಾಸಕ್ಕೆ ಉತ್ತೇಜನ

ವಿಲ್ಲದಂತಾಗಿ ಭಾಷೆಯು ಅವಸ್ಥೆಯು ಮುಂದೆ ಎಷ್ಟು ಹೀನಸ್ಥಿತಿಗೆ ಹೋಗಬಹುದೆಂಬ ದನ್ನು ಆಲೋಚಿಸಿದಲ್ಲಿ ಅವರು ಈ ಬಗ್ಗೆ ಸಹಾನುಭೂತಿಪೂರ್ವಕವಾಗಿ ವಿಚಾರಮಾಡಿ ಧಾರವಾಡ, ಬೆಳಗಾಂವ, ವಿಜಾಪೂರ ಜಿಲ್ಲೆಗಳಿಂದ ಆಯಾ ಜಿಲ್ಲೆಗಳ ಪ್ರಮಾಣ ಕ್ಕನುಸರಿಸಿ ಟ್ರೇಂಡರನ್ನು ಬೇಡಿದರೆ ಪ್ರಾ. ಶಾಲೆಗಳ ಸುಸ್ಥಿತಿಗೂ ಕನ್ನಡ ಭಾಷೆಯ ಅಭ್ಯಾಸಕ್ಕೂ ಉತ್ತೇಜನವನ್ನುಂಟು ಮಾಡುವರೆಂಬ ವಿಷಯದಲ್ಲಿ ಸಂದೇಹವಿಲ್ಲ.

ಈಗಿನ ನೇಮಗಳಂತೆ ಟ್ರೇನಿಂಗದ ಲಾಭವು ಬ್ರಾಹ್ಮಣರಿಗಿಂತ ಬ್ರಾಹ್ಮಣೇತ ರಿಗೇ ಆಗುವದುಂಟು. ೧೯೨೪ನೇ ಇ. ಯಿಂದ ೩ ವರ್ಷಗಳಲ್ಲಿ ಬ್ರಿಟಿಶ್ ಜಿಲ್ಲೆಗಳಲ್ಲಿ ಟ್ರೇಂಡರಾದ ೭೫ ಜನರಲ್ಲಿ ೮ ಜನ ಬ್ರಾಹ್ಮಣರೂ ೬೭ ಜನ ಬ್ರಾಹ್ಮಣೇತರರೂ ಇದ್ದರು. ಒಟ್ಟಿಗೆ ಬ್ರಾಹ್ಮಣ, ಪಂಚಾಳ ಮುಂತಾದ ಮುಂದರಿದ ಜನರನ್ನು ನೂರಕ್ಕೆ ೨೫ ರಂತೆ ತೆಗೆದುಕೊಳ್ಳಬೇಕೆಂಬ ನೇಮವಿರುವದು. ಆದದರಿಂದ ಬ್ರಾಹ್ಮಣೇತರ ಬಹು ಸಂಖ್ಯೆಯುಳ್ಳ ಬೋರ್ಡುಗಳು ಮೇಲಿನ ಸಂಗತಿಯನ್ನು ಅವಗಾಹನೆಗೆ ತಂದು ಟ್ರೇ. ಕಾ. ವನ್ನು ಪೂರ್ವದ ಸ್ಥಿತಿಗೆ ತರುವದು ಶಕ್ಯವದೆ.

ಇನ್ನು ಮುಂದೆ ಒಂದೊಂದು ಭಾಗಕ್ಕೆ ಒಂದೊಂದು ಸಂಪೂರ್ಣ ಟ್ರೇನಿಂಗ ಕಾಲೇಜವು ಇರಲೇಬೇಕೆಂಬ ಧೋರಣವನ್ನು ಶಿಕ್ಷಣ ಮಂತ್ರಿಗಳು ತಮ್ಮೊದುರಿಗೆ ಇಟ್ಟುಕೊಂಡಿರುವರೆಂದು ಕೇಳುತ್ತೇವೆ. ಆದದರಿಂದ ಇಂಥ ಅನುಕೂಲ ಪರಿಸ್ಥಿತಿಯ ಉಪಯೋಗವನ್ನು ಸ್ಕೂಲಬೋರ್ಡುಗಳು ಮಾಡಿಕೊಳ್ಳದೇ ಬಿಡಲಾರವೆಂದು ನಂಬಿದ್ದೇವೆ. ೧೯೨೩ನೇ ಇಸ್ವಿಯಲ್ಲಿ ಧಾರವಾಡದಂತೆ ಅಹಮ್ಮದಾಬಾದದ ಟ್ರೇನಿಂಗ ಕಾಲೇಜವಲ್ಲಿಯೂ ಒಂದನೇ ವರ್ಷದ ಒಂದೇ ವರ್ಗವನ್ನು ಇಡಬೇಕೆಂದು ಸರ ಕಾರದವರು ಮೊದಲು ಗೊತ್ತುಮಾಡಿದ್ದರು. ಆದರೆ ಸ್ವಾಭಿಮಾನವುಳ್ಳ ಗುಜರಾ ಥದ ಜನರೂ ಅಹಮ್ಮದಾಬಾದ ಸುರತಗಳ ಮುನಸಿಪಾಲಿಟಿಯವರೂ ಡಿಸ್ಟ್ರಿಕ್ಟ ಬೋರ್ಡಿನವರೂ ತಮಗೆ ಹೆಚ್ಚಿನ ಯೋಗ್ಯತೆಯ ಟ್ರೇಂಡರು ಅವಶ್ಯವಾಗಿ ಬೇಕೆಂಬ ಆಗ್ರಹವನ್ನು ತೋರಿಸಿದ್ದರಿಂದ ೧ನೇ ವರ್ಷದಲ್ಲಿ ೬೦ ವಿದ್ಯಾರ್ಥಿಗಳನ್ನೂ ೨ನೇ ವರ್ಷ ದಲ್ಲಿ ೨೫ ವಿದ್ಯಾರ್ಥಿಗಳನ್ನೂ ಇಟ್ಟುಕೊಳ್ಳಬೇಕೆಂದು ಸರಕಾರದವರು ಗೊತ್ತುಪಡಿಸಿ ದರು. ಕರ್ನಾಟಕದ ಜನರು ಈಗಿನಂತೆ ಆ ಕಾಲಕ್ಕೆ ಈ ಪ್ರಶ್ನದ ವಿಷಯವಾಗಿ ಆಸ್ಥೆಯನ್ನು ತೋರಿಸಿದ್ದರೆ ಟ್ರೇ. ಕಾ. ದಲ್ಲಿ ೨ನೇ ವರ್ಷದ ವರ್ಗವು ಉಳಿಯ ಬಹುದಾಗಿತ್ತು. ಆದುದರಿಂದ ಇನ್ನು ಮುಂದೆ ಸ್ಯಾಥನಿಕ ಶಿಕ್ಷಣದ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡ ಕರ್ನಾಟಕದ ಮುಂದಾಳುಗಳು ಯೋಗ್ಯ ಉತ್ಸಾಹವನ್ನು ತೋರಿಸುವರೆಂದು ನಂಬುತ್ತೇವೆ.

ತುಲನೆಗಾಗಿ ಬೇರೆ ಬೇರೆ ಭಾಗಗಳಲ್ಲಿಯ ಟ್ರೇಂಡ ಜನರ ಸಂಖ್ಯೆಯನ್ನು ಕೆಳಗೆ ಕೊಟ್ಟಿದ್ದೇವೆ.

ಇ. ಸ. ೧೯೨೪ರಲ್ಲಿದ್ದ ಸಂಖ್ಯೆ.

| ಭಾಗ | ೩ನೇ ವರ್ಷ | ೨ನೇ ವರ್ಷ | ೧ನೇ ವರ್ಷ | ಒಟ್ಟು ಟ್ರೇಂಡರ ಸಂಖ್ಯೆ |
|---|---|---|---|---|
| ಮುಂಬೈ | ೬೦೬ | ೭೫೧ | ೧೮೮೫ | ೩೪೪೨ |
| ಮಧ್ಯ | ೭೫೫ | ೧೩೨೯ | ೧೪೪೪ | ೩೯೨೮ |
| ಉತ್ತರ | ೯೮೨ | ೬೪೯ | ೧೭೯೨ | ೩೩೨೩ |
| ದಕ್ಷಿಣ | ೯೮೦ | ೧೧೨೪ | ೧೨೬೫ | ೩೨೬೯ |
| ಸಿಂಧ | ೬೭೯ | ೩೨೮ | ೮೧೨ | ೧೮೭೯ |

ಮೇಲಿನ ಕೋಷ್ಟಕದಿಂದ ದಕ್ಷಿಣಭಾಗದಲ್ಲಿ ೧ನೇ ವರ್ಷದ ಟ್ರೇಂಡರ ಸಂಖ್ಯೆಯು ಉತ್ತರ ಮಧ್ಯ ಮತ್ತು ಸಿಂಧ ಭಾಗಗಳಿಗಿಂತ ಪ್ರಮಾಣಕ್ಕನುಸರವಾಗಿ ನೋಡಿದರೆ ಕಡಿಮೆಯದೆಂಬದು ಗೊತ್ತಾಗುವದು. ೩ನೇ ವರ್ಷದವರ ಸಂಖ್ಯೆಯು ಸಿಂಧಕ್ಕಿಂತ ನಮ್ಮಲ್ಲಿ ಕಡಿಮೆಯದೆ. ೨ನೇ ವರ್ಷದ ಟ್ರೇಂಡರ ಸಂಖ್ಯೆಯು ಮಾತ್ರ ನಮ್ಮ ಭಾಗದಲ್ಲಿ ಹೆಚ್ಚಿಗುವದು. ಆದರೆ ಈ ನಾಲ್ಕು ವರ್ಷಗಳ ಅವಧಿಯಲ್ಲಿ ಈ ಸಂಖ್ಯೆಯು ಮರಣ, ಪೆನಶನ್ ಮೊದಲಾದ ಕಾರಣಗಳಿಂದ ನೂರಕ್ಕೆ ವರ್ಷಕ್ಕೆ ೮ ರಂತೆ ಕಡಿಮೆಯಾಗಿ ೩ನೇ ವರ್ಷದ ಟ್ರೇಂಡರ ಸಂಖ್ಯೆಯು ೭೭೨ ಆಗಿರಬಹುದು. ಮತ್ತು ೩ನೇ ವರ್ಷದ ವರ್ಗವು ಕಳೆದ ನಾಲ್ಕು ವರ್ಷಗಳಿಂದ ಇಲ್ಲದ್ದರಿಂದ ಹೊಸ ಜನರ ಪೂರೈಕೆಯಿಲ್ಲ. ಆದದರಿಂದ ೩ನೇ ವರ್ಷದ ವರ್ಗವನ್ನು ಇಲ್ಲಿಯ ಟ್ರೇ. ಕಾ. ದಲ್ಲಿ ಇಡುವದು ಅವಶ್ಯವದೆಯೆಂಬದು ಗೊತ್ತಾಗುವದು.

## ೩ ಗುಜರಾಥದಲ್ಲಿ ಅತಿವೃಷ್ಟಿ

ಗುಜರಾಥವಲ್ಲಿಯೂ ಕಾಶೇವಾಡ ಸಿಂಧಪ್ರಾಂತಗಳ ಕೆಲಕೆಲವು ಭಾಗಗಳಲ್ಲಿಯೂ ಈ ತಿಂಗಳಲ್ಲಿ ಅತಿವೃಷ್ಟಿಂದ ಅತಿಶಯ ಹಾನಿಯಾಗಿ ಹಾಹಾಕಾರವೆದ್ದಿರುವದು. ನೂರಾರು ಜನರು ಪ್ರಾಣಕ್ಕೆ ಎರವಾದರು; ಅಸಂಖ್ಯ ಧನಕರುಗಳು ನೀರಲ್ಲಿ ಮುಳುಗಿ ಸತ್ತವು; ಹತ್ತಿಪ್ಪತ್ತು ಸಾವಿರ ಗುಡಿಸಲುಗಳು ತೇಲಿಹೋದವು. ಸಾವಿರಾರು ಮನೆಗಳು ನೆಲಸಮವಾದವು; ಬೆಳೆಗಳೂ ಹೊಲಗಳೂ ಕೊಚ್ಚಿಕೊಂಡು ಹೋದವು. ಬಡೋದೆಯ ನಗರದಲ್ಲಿಯೂ ಪ್ರಾಣಿಸಂಗ್ರಹಾಲಯದಲ್ಲಿಯೂ ನೀರು ನಿಂತು ಅಪರಿಮಿತ ಹಾನಿಯಾಗಿದೆ. ಹೀಗೆ ಅಸಂಖ್ಯಜನರು ಮೇಘರಾಜನ ಕೋಪದಿಂದ ನಿರಾಶ್ರಿತರಾಗಿರುವರು. ಹೀಗೆ ಹಾನಿಗೆ ಗುರಿಯಾಗಿ ನಿರಾಶ್ರಿತರಾದವರ ಸಹಾಯಕ್ಕಾಗಿ ಸರಕಾರದವರೂ ಬೇರೆ ಬೇರೆ ಸಂಸ್ಥೆಗಳವರೂ ಮಂದಾಳುಗಳೂ ಮುಂದೆ ಪ್ರಯತ್ನ ಮಾಡು

ತ್ತಿರುವರು. ಅಲ್ಲಲ್ಲಿ ಸಣ್ಣ ದೊಡ್ಡ ಕಮೀಟಿಗಳನ್ನು ಕೂಡಿಸಿ ಹಣ ಕೂಡಿಸಹತ್ತಿರುವರು. ಈ ರೀತಿ ಸಾರ್ವಜನಿಕ ವರ್ಗಣೆಯಿಂದ ಸದ್ಯಕ್ಕೆ ಮುಂಬಯಿಯಲ್ಲಿ ೭–೮ ಲಕ್ಷ ರೂಪಾಯಿಗಳು ಕೂಡಿಬರುವವು. ಮತ್ತು ಸರಕಾರದವರು ೯೦ ಲಕ್ಷ ರೂ. ಗಳ ತನಕ ಸಹಾಯ ಮಾಡುವದನ್ನು ನಿಶ್ಚಯಿಸಿರುವರು. ಕೋಟ್ಯವಧಿ ರೂಪಾಯಿಗಳು ನಷ್ಟವಾಗಿ ಅಸಂಖ್ಯ ಜನರು ನಿರಾಶ್ರಿತರಾಗಿರುವಾಗ ಎಷ್ಟು ಜನರು ಎಷ್ಟು ವಿಧದಿಂದ ಸಹಾಯ ಮಾಡಿದರೂ ಕಡಿಮೆಯೇ ಎನಿಸಹತ್ತಿರುವದು. ಹೀಗಿರುವದರಿಂದ ಪ್ರತಿಯೊಬ್ಬನು ತನ್ನ ಕೈಲಾದಮಟ್ಟಿಗೆ ಇಂತಹ ನಿರಾಶ್ರಿತರಿಗೆ ನೆರವಾಗುವದು ಕರ್ತವ್ಯವೂ ಶ್ರೇಯಸ್ಕರವೂ ಆಗಿರುವದು. ಆದ್ದರಿಂದ ನಮ್ಮ ವಾಚಕರಲ್ಲಿ ಯಾರಾದರೂ ಸಹಾಯ ಮಾಡಲಿಚ್ಛಿಸಿ ತಮಗೆ ದೊರೆದಷ್ಟು ಹಣವನ್ನು ನಮ್ಮ ಕಡೆಗೆ ಕಳುಹಿಸಿದರೆ ಅದನ್ನು ಮಧ್ಯನರ್ತಿ ಸಂಸ್ಥೆಗೆ ಮುಟ್ಟಿಸುವ ವ್ಯವಸ್ಥೆ ಮಾಡುವೆವು. ಸರಕಾರೀ ನೌಕರರು ಈ ನಿರಾಶ್ರಿತರ ಸಹಾಯಕ್ಕಾಗಿ ವರ್ಗಣೆಯನ್ನು ಕೂಡಿಸಲಿಕ್ಕೆ ಅಡ್ಡಿಯಿಲ್ಲವೆಂದು ಸರಕಾರದವರು ನಿರ್ಣಯಿಸಿರುವರು.

---

## ಹೊಸ ಶೋಧಗಳ ಅಗತ್ಯ

### ಪ್ರೊ. ಯದುನಾಥ ಸರಕಾರರವರ ಭಾಷಣ

ಮೊನ್ನಿನ ಅಗಷ್ಟ ತಿಂಗಳಲ್ಲಿ ಮುಂಬಯಿಯಲ್ಲಾದ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಸಮಯದಲ್ಲಿ ಕಲಕತ್ತೆಯ ವಿಶ್ವವಿದ್ಯಾಲಯದ ವ್ಹಾಯಿಸ್ ಚಾನ್ಸೆಲರರಾದ ಪ್ರೊ. ಯದುನಾಥ ಸರಕಾರರವರು ಒಂದು ಭಾಷಣವನ್ನು ಮಾಡಿದರು. ಅದರ ಸಾರಾಂಶವನ್ನು ಇಲ್ಲಿ ಕೊಡುವೆವು.

"ಮುಂಬಯಿಯ ವಿಶ್ವವಿದ್ಯಾಲಯವು ಯೋಗ್ಯತಾವಂತರಾದ ಹಾಗು ಸತ್ಯಶೀಲರಾದ ಜನರನ್ನು ಉಂಟುಮಾಡಿ ಈ ಪ್ರಾಂತದೊಳಗಿನ ಸಾರ್ವಜನಿಕ ಕಾರ್ಯಗಳಿಗೆ ಚೆನ್ನಾಗಿ ನೆರವಾಗಿರುವದು. ಮತ್ತು ನೈತಿಕ ಹಾಗು ಸಾರ್ವಜನಿಕ ಹಿತದ ಕಾರ್ಯಗಳನ್ನು ಮಾಡುವಂಥ ಜನರು ಇತ್ತಿತ್ತ ಹೆಚ್ಚುಹೆಚ್ಚಾಗಿ ಹೊರಡಹತ್ತಿರುವರು. ಹಾಗು ದೇಶಭಾಷೆಗಳಲ್ಲಿ ಮೇಲ್ತರಗತಿಯ ಉಪಯುಕ್ತ ಗ್ರಂಥಗಳು ಹುಟ್ಟಲಿಕ್ಕೆ ಇವರಿಂದ ಸಹಾಯವಾಗಿದೆ. ಇಂಗ್ಲಿಷ ಶಿಕ್ಷಣದ ಸಹಾಯದಿಂದ ಸದ್ಯದ ರಾಜಕೀಯ ವಾತಾವರಣವುಂಟಾಗಲಿಕ್ಕೆ ಕಾರಣವಾಗಿದೆ. ಒಟ್ಟಿನ ಮೇಲೆ ಪಾಶ್ಚಾತ್ಯ ಸುಧಾರಣೆಗಳನ್ನು ಈ ದೇಶದಲ್ಲಿ ಹಬ್ಬಿಸುವ ಮಹತ್ವದ ಕಾರ್ಯವನ್ನು ಇದು ಕೈಕೊಂಡಿರುವದೆಂದು ಹೇಳಬಹುದು.

ವಿಶ್ವವಿದ್ಯಾಲಯದ ಅಭಿವೃದ್ಧಿಯ ಕಾರ್ಯದಲ್ಲಿ ಅತಿ ಮಹತ್ವದ ಮಾತೆಂದರೆ **ಹೊಸ ಶೋಧನ ಕಾರ್ಯಗಳು.** ಭರತಖಂಡವು ಬೌದ್ಧಿಕ ವಿಷಯಗಳಲ್ಲಿ ಪರ

ದೇಶಗಳಿಗೆ ಋಣಿಯಾಗಕೂಡದು. ನಮ್ಮ ದೇಶವು ಬೇರೆ ಬೇರೆ ಕಲೆಗಳಲ್ಲಿಯೂ ಶಾಸ್ತ್ರೀಯ ವಿಷಯಗಳಲ್ಲಿಯೂ ಪರಾವಲಂಬಿಯಾಗಕೂಡದು; ನಮ್ಮ ದೇಶದ ಮಾನಸಿಕವಿಕಾಸವು ಸರಿಯಾಗಿ ಆಗಬೇಕು; ಎಂದು ಅಪೇಕ್ಷಿಸಿದರೆ ಅದು ಈ ವಿಷಯಗಳಲ್ಲಿ ಪರದೇಶಗಳಿಗೆ ಋಣಿಯಾಗಕೂಡದು. ಇಷ್ಟೇ ಅಲ್ಲ; ಪರದೇಶದವರು ಈ ವಿಷಯಗಳನ್ನು ನಮ್ಮವರಿಂದಲೇ ಕಲಿತುಕೊಳ್ಳುವಂತೆ ಮಾಡಬೇಕು. ಹೊಸ ಹೊಸ ಶೋಧಗಳು ಅಥವಾ ನೂತನ ಸತ್ಯ ಸಂಗತಿಗಳ ಉತ್ಪತ್ತಿ ಇವು ಶಿಕ್ಷಣ ಸೃಷ್ಟಿಯೊಳಗಿನ ಅತಿ ಮಹತ್ವದ ಹಾಗು ವೈಭವದ ವಿಷಯಗಳು. ಮಾನವಜಾತಿಯ ಬುದ್ಧಿವಿಕಾಸದ ಪರಮಾವಧಿಯೇ ವಿಶ್ವವಿದ್ಯಾಲಯದ ಶಿಕ್ಷಣದ ಉಚ್ಚತರದ ಹಾಗು ಎಂದೂ ಮರೆಯಲಾಗದ ಧ್ಯೇಯವಾಗಿರುವದು.

ಹೊಸ ಶೋಧಗಳಲ್ಲಿ ತೊಡಗಿದ ವಿದ್ಯಾರ್ಥಿಗಳು ನೂತನ ವಿಚಾರಕ್ರಮವನ್ನು ಹುಟ್ಟಿಸುವ ಶೋಧಕ ಜಗತ್ತಿನಲ್ಲಿ ಸಂಚರಿಸುವ ದಾರಿಕಾರರಾಗಿರುವರು. ಅವರ ಮೇಲೆ ಯಾವಾಗ ಯಾವ ತರದ ಸಂಕಟಗಳು ಬರಬಹುದೆಂಬದರ ಕಲ್ಪನೆಯಿರುವದಿಲ್ಲ. ಇಂತಹ ಶೋಧಕ ವಿದ್ಯಾರ್ಥಿಗಳು ಸತ್ಯ ಹಾಗು ಅಸತ್ಯಗಳ ನಡುವೆ ಅಲೆದಾಡಿ ಸತ್ಯವನ್ನು ಕಂಡುಕೊಳ್ಳಬೇಕಾಗುವದು. ಇಂತಹ ಸತ್ಯಶೋಧಕರ ಉತ್ತಮ ವರ್ಗವಿದ್ದ ಹೊರತು ವಿಶ್ವವಿದ್ಯಾಲಯವು ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಿತೆಂದು ಹೇಳಲಿಕ್ಕೆ ಬರುವಂತಿರುವದಿಲ್ಲ.

ಯೋಗ್ಯವಾದ ನೂತನ ಸಂಗತಿಗಳನ್ನು ಶೋಧಿಸುವದರಿಂದ ಮನುಷ್ಯರ ಶೀಲ ( Character ) ದ ಮೇಲೆಯೂ ಪರಿಣಾಮವಾಗುವದು. ಜಗತ್ತಿನಲ್ಲಿರುವ ಎಲ್ಲ ಶೋಧಕರು "ಸತ್ಯಾನ್ವೇಷಿಗಳ ಒಂದು ಸಂಘ"ವನ್ನು ಮಾಡಿಕೊಂಡಿರುವರು. ಅವರಲ್ಲಿ ದೇಶ ವಿದೇಶದವರೆಂಬ ಮತ್ಸರಭಾವವಿಲ್ಲ; ಜಾತಿ ಪರಜಾತಿಯವರೆಂಬ ಭೇದಭಾವನೆಯಿಲ್ಲ; ಸತ್ಯದ ಶೋಧನೆಯ ಕಾರ್ಯಕ್ಕೆ ಅಂತ್ಯವೇ ಇಲ್ಲ. ಇಷ್ಟೇ ಅಲ್ಲ, ಅದರಲ್ಲಿ ತೊಡಗಿದವರಿಗೆ ವಿಶ್ರಾಂತಿಯೂ ಕೂಡ ಇಲ್ಲ. ಹೀಗೆಂದು ಆ ಕಾರ್ಯದಲ್ಲಿ ತೊಡಗುವವರು ಹಿಂದೆ ಮುಂದೆ ನೋಡುತ್ತ ಅಳಿಮನಸ್ಸು ಮಾಡುವಂತೆಯೂ ಇಲ್ಲ.

ಹೊಸ ಶೋಧಗಳನ್ನು ನಡೆಯಿಸುವ ವಿಷಯಕ್ಕೆ ವಿಶ್ವವಿದ್ಯಾಲಯಗಳೇ ಹೆಚ್ಚು ಯೋಗ್ಯವಾದ ಸ್ಥಾನಗಳಾಗಿರುವವು. ಬೇಕಾದಷ್ಟು ಶ್ರೀಮಂತನೇ ಆಗಲಿ, ಬುದ್ಧಿವಂತನೇ ಆಗಲಿ ವ್ಯಕ್ತಿಶಃ ಈ ಕಾರ್ಯವನ್ನು ಕೈಕೊಂಡರೆ ಅದು ಸಾಧ್ಯವಾಗುವದು ತುಂಬಾ ಕಠಿಣವಾಗುವದು. ವಿಶ್ವವಿದ್ಯಾಲಯದಲ್ಲಿ ಉತ್ತಮೋತ್ತಮ ಗ್ರಂಥಸಂಗ್ರಹವಿರುವ ಹಾಗು ಮೇಲ್ತರದ ಎಲ್ಲ ನಿಯತಕಾಲಿಕ (Magazines) ಗಳು ಬರುತ್ತಿರುವಂಥ ಒಂದು ವಾಚನಾಲಯವನ್ನು ಸ್ಥಾಪಿಸಬೇಕು. ಮತ್ತು ಯಾವತ್ತು ತರದ ಶಾಸ್ತ್ರೀಯ ವಿಷಯದ ಉಪಕರಣಗಳ ಸಂಗ್ರಹವುಳ್ಳ ಒಂದು ಪ್ರಯೋಗಶಾಲೆಯನ್ನು

ಆರಂಭಿಸಬೇಕು. ಮತ್ತು ಬೇರೆ ಬೇರೆ ಶಾಖೆಗಳಲ್ಲಿ ಶೋಧದ ಕಾರ್ಯಗಳನ್ನು ಕೈಕೊಂಡಿರುವಂಥ ಶೋಧಕರ ಸಮುದಾಯವನ್ನು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಕೆಲಸ ಮಾಡಲಿಕ್ಕೆ ತೊಡಗಿಸಬೇಕು. ಮತ್ತು ಆ ಬೇರೆ ಬೇರೆ ಶಾಖೆಗಳಲ್ಲಿ ಶೋಧನ ಕಾರ್ಯವನ್ನು ಕೈಕೊಂಡವರು ಪರಸ್ಪರ ನಿರವಾಗಿ ಒಮ್ಮನಸ್ಸಿನಿಂದ ಕೆಲಸ ಮಾಡು ವಂತೆ ಮಾಡಬೇಕು. ಯಾಕಂದರೆ, ಯಾವ ಮನುಷ್ಯನೇ ಆಗಲಿ, ಅವನು ಬೇಕಾ ದಷ್ಟು ಬುದ್ಧಿಶಾಲಿಯಾಗಿದ್ದರೂ ಎಲ್ಲ ವಿಷಯಗಳಲ್ಲಿ ನಿಷ್ಣಾತನಾಗಿರುವದು ಸಂಭವ ನೀಯವಲ್ಲ. ಒಂದು ಶಾಖೆಯಲ್ಲಿ ಶೋಧವ ಕಾರ್ಯವನ್ನು ನಡೆಯಿಸಿರುವವನ ವಿಚಾರ ಕ್ರಮಗಳೂ ಅದರ ಫಲಿತವೂ ಮತ್ತೊಬ್ಬನ ಕಾರ್ಯಕ್ಕೆ ಸಹಾಯಕಾರಿಯಾಗಬ ಹುದು. ಮತ್ತು ಬೇರೆ ಬೇರೆ ಜನರು ವ್ಯಕ್ತಿಗತವಾಗಿ ನಡೆಯಿಸಿರುವ ಶೋಧನಕಾ ರ್ಯಗಳಲ್ಲಿ ಒಬ್ಬನು ಮಾಡಿದ್ದನ್ನೇ ಮತ್ತೊಬ್ಬನು ಮಾಡುವದರಿಂದಾಗುವಂಥ, ಶ್ರಮವು ನಿರರ್ಥಕವಾಗುವಂಥ ಪ್ರಸಂಗಗಳು ವಿಶ್ವವಿದ್ಯಾಲಯದ ಆಡಳಿತೆಯ ಕೆಳಗೆ ಕೆಲಸ ಮಾಡುವದರಿಂದ ತಪ್ಪಿ ಹೋಗುವವು. ಹಿಂದೆ ಇಂತಹ ಎಷ್ಟೋ ಪ್ರಸಂಗ ಗಳು ಒದಗಿ ಒಬ್ಬರು ಮಾಡಿದ ಶ್ರಮವು ಇನ್ನೊಬ್ಬರು ಮಾಡಿದ ಅದೇತರದ ಶೋಧ ದಿಂದ ನಿರರ್ಥಕವಾಗಿ ಹೋದ ಉದಾಹರಣೆಗಳಿರುವವು.

ನಮ್ಮ ದೇಶದಲ್ಲಿ ಅಸಂಖ್ಯ ಸ್ವಾಭಾವಿಕ ಸೃಷ್ಟಿಶಕ್ತಿಗಳೂ ಸೃಷ್ಟಿಸಂಪತ್ತುಗಳೂ ಇರುವ ಸ್ಥಳಗಳಿರುವವು. ಆದರೆ ಶಾಸ್ತ್ರೀಯ ಜ್ಞಾನದ ಅಭಾವದ ಮೂಲಕ ಅವೆಲ್ಲ ನಿರರ್ಥಕವಾಗಿವೆ. ಜರ್ಮನ್ ದೇಶದಲ್ಲಿ ಹುಟ್ಟಿದಂಥ ಶಾಸ್ತ್ರೀಯ ಶೋಧಕರೂ ಶಾಸ್ತ್ರೀಯ ಜ್ಞಾನವೂ ನಮ್ಮ ದೇಶದಲ್ಲಿ ಆಗಿದ್ದರೆ ನಮ್ಮ ದೇಶದ ಸಂಪತ್ತು ವಿಪುಲ ವಾಗಿ ಅಭಿವೃದ್ಧಿ ಹೊಂದಬಹುದಾಗಿದ್ದಿತು. ನಮ್ಮ ದೇಶದಲ್ಲಿ ಶಾಸ್ತ್ರೀಯ ಶೋಧನ ಕಾರ್ಯವು ಅಸಾಧ್ಯ ಕೋಟಿಯಲ್ಲಿ ಗಣನೆಯಾಗಿಲ್ಲ. ನಮ್ಮಲ್ಲಿಯೂ ಇಂತಹ ಶೋಧಕ ಮಹನೀಯರು ಆಗಿರುವರು. ಯುರೋಪಖಂಡಕ್ಕೆ ಶಾಸ್ತ್ರೀಯ ವಿಷಯ ದಲ್ಲಿಯೂ ತತ್ತ್ವಜ್ಞಾನದಲ್ಲಿಯೂ ಅನೇಕ ಸಂಗತಿಗಳನ್ನು ಕಲಿಸಿದಂಥ ಇಬ್ಬರು ಮಹ ನೀಯರಿಗೆ ಹಿಂದುಸ್ತಾನವು ಜನ್ಮಕೊಟ್ಟಿರುವದು. ಸರ್ ಜಗದೀಶಚಂದ್ರ ಬೋಸರೂ ಡಾ॥ ರವೀಂದ್ರನಾಥ ಠಾಕೂರರೂ ಪರದೇಶದ ಶೋಧಕರು ಅನುಕೂಲ ಸ್ಥಿತಿಯಲ್ಲಿ ಮಾಡಿರುವಂಥ ಮಹತ್ಕಾರ್ಯಗಳನ್ನೇ ಇಲ್ಲಿಯೂ ಮಾಡಿ ತೋರಿಸಿರುವರು.

ಉದ್ಯೋಗ ವ್ಯವಸಾಯಗಳಲ್ಲಿಯೂ ಬುದ್ಧಿ ಶಕ್ತಿಯಲ್ಲಿಯೂ ಮುಂಬಯಿ ಇಲಾ ಖೆಯು ಮಿಕ್ಕ ಭಾಗಗಳಿಗಿಂತ ಕಡಿಮೆ ತರಗತಿಯದೆಂದು ಹೇಳಲು ಕಾರಣವಿಲ್ಲ. ಶೋಧಕರಿಗೆ ಅವಶ್ಯವಾದ ಇತಿಹಾಸ, ಭಾಷೆ, ಸೃಷ್ಟಿಸಂಪತ್ತು ಮುಂತಾದ ಸಾಮಗ್ರಿ ಗಳೂ ಈ ಇಲಾಖೆಯಲ್ಲಿ ಕಡಿಮೆಯಾಗಿಲ್ಲ. ವಿಶ್ವವಿದ್ಯಾಲಯದವರು ಈ ವಿಷಯದಲ್ಲಿ ತಕ್ಕ ನಿಬಂಧನೆಗಳನ್ನು ಮಾಡಿಕೊಂಡು ವಿದ್ಯಾರ್ಥಿಗಳ ಲಕ್ಷ್ಯವನ್ನು ಈ ಕಡೆಗೆ ಆಕ ರ್ಷಿಸಿಕೊಳ್ಳುವದೇ ಮುಖ್ಯ ಮಾತಾಗಿದೆ. ಮತ್ತು ಇಂತಹ ಶೋಧಗಳ ಯೋಗ

ವಾಗಿರುವ ಕೃಷಿಯನ್ನೇ ಗೊತ್ತುಪಡಿಸುವದೂ ಆವಶ್ಯಕವಾಗಿದೆ. ವಿಶ್ವವಿದ್ಯಾಲಯದ ಚಾಲಕರಲ್ಲಿ ಕೆಲವರು ಈ ವಿಷಯಗಳಲ್ಲಿ ಮನಸ್ಸು ಹಾಕಿದವರಿದ್ದು ಆ ಕೆಲಸದಲ್ಲಿ ತೊಡಗಿದವರಿಗೆ ಆಡಿಗಡಿಗೆ ಒದಗುವಂಥ ತೊಂದರೆಗಳನ್ನು ನಿವಾರಿಸಿ ತಕ್ಕ ಸಹಾಯ ಮಾಡುವದೂ ಒಂದು ಮಹತ್ವದ ಮಾತಾಗಿದೆ. ಶೋಧನಕಾರ್ಯವೂ ದೇಶದ ಒಂದು ಕರ್ತವ್ಯವೆಂದೂ ಕಲಕತ್ತೆ, ಲಖನೌ, ಬನಾರಸ ಮತ್ತು ಅಲೀಗಡ ವಿಶ್ವವಿದ್ಯಾಲಯಗಳಂತೆ ಮುಂಬಯಿ ವಿಶ್ವವಿದ್ಯಾಲಯದಲ್ಲಿಯೂ ವಿದ್ಯಾಪಂತರಾದ ಜನರು ಹೊರಟರೆ ಅದರಿಂದ ರಾಜಕೀಯ ಆಡಳಿತೆಗಳಿಗೂ ಹೆಚ್ಚು ಅನುಕೂಲವಾಗುವದೆಂಬ ಸಂಗತಿಯನ್ನೂ ಮುಂಬಯಿಯ ಸರಕಾರದ ದೃಷ್ಟಿಪಥಕ್ಕೂ ತಂದು ಕೊಡಬೇಕು.

ನಮ್ಮ ರಾಜಕೀಯ ಮುಂದಾಳುಗಳಿಗೆ ದೇಶದ ಬೌದ್ಧಿಕ ಪ್ರಗತಿಯೂ ಸ್ವಾತಂತ್ರ್ಯವೂ ಅಂತಿಮ ಧ್ಯೇಯಗಳಾಗಿರುವವು. ಮತ್ತು ಈ ಧ್ಯೇಯದ ಸಾಧನೆಗೆ ನಮ್ಮ ವಿಶ್ವವಿದ್ಯಾಲಯಗಳು ಸ್ವಾಮುಖ್ಯವಾಗಿ ಪ್ರಯತ್ನ ಮಾಡತಕ್ಕದ್ದು. ದಿನದಿನಕ್ಕೆ ಮುಂದಡಿಯಿಡುತ್ತ ನಡೆದಿರುವ ಜಗತ್ತಿನಲ್ಲಿ ಬದುಕಿ ಬಾಳಬೇಕಾಗಿರುವ ನಮ್ಮ ಜನತೆಯೂ ವಿಶ್ವವಿದ್ಯಾಲಯಗಳೂ ಈ ಮಾತನ್ನು ಇನ್ನು ಮುಂದೆ ದುರ್ಲಕ್ಷಿಸುವಂತಿಲ್ಲ. ಕಾರ್ಖಾನರು, ಶಾಲಾ ಶಿಕ್ಷಕರು, ಭಾಷಾಂತರಕಾರರು, ನಕಲು ಮಾಡುವವರು, ಇಂಜನೀಯರರು ಮುಂತಾದವರ ತಂಡವನ್ನು ತಯಾರಿಸುವ ಸಾಲೆ ಕಾಲೇಜಗಳನ್ನು ನೋಡಿ ಈ ವಿಶ್ವವಿದ್ಯಾಲಯದ ಯೋಗ್ಯತೆಯನ್ನು ನಿರ್ಣಯಿಸುವ ಕಾಲವು ಹಿಂದಾಗಿಹೋಗಿದೆ. ಜಗತ್ತಿನ ಜ್ಞಾನಭಾಂಡಾರಕ್ಕೆ ನಮ್ಮಿಂದ ಏನಾದರೂ ಕಾಣಿಕೆಯು ದೊರೆಯಲೇಬೇಕಾಗಿದೆ. ಪರದೇಶಗಳಿಂದ ಬಂದ **ಬಟ್ಟೆಗಳಿಂದ** ನಮ್ಮ ದೇಶದ ಜನತೆಯ ಶರೀರವನ್ನೂ ಮನಸ್ಸನ್ನೂ ಮುಚ್ಚಿಕೊಂಡು ಜೋಪಾನ ಮಾಡುವ ಸ್ಥಿತಿಯು ಇನ್ನು ಎಷ್ಟು ದಿವಸ ತಾನೆ ನಡೆಯಬೇಕು? ಜನತೆಯ ಬುದ್ಧಿಶಕ್ತಿಯ ಹಾಗು ನೂತನ ಶೋಧಗಳ ಔಷಧ ಯಂತ್ರಗಳ ಸಾಮಗ್ರಿಗಳು ನೂತನ ಜೀವನಕ್ರಮದ ಸಾಧನಗಳು, ಮುಂತಾದವುಗಳ ವಿಷಯದಲ್ಲಿ ಕೇವಲ ಪರಾವಲಂಬಿಯಾಗಿರುವ ದೇಶಕ್ಕೆ ಪರದೇಶದವರು ಕೊಟ್ಟ ಸ್ವರಾಜ್ಯವು ಎಷ್ಟು ಕಾಲ ತಾನೇ ಬಾಳಬಹುದು? ಇಂಥವರಿಗೆ ಪರರ ಅನುಗ್ರಹದಿಂದ ದೊರೆದ ರಾಜಕೀಯ ಸ್ವಾತಂತ್ರ್ಯವು ಹೇಗೆ ತಾನೇ ಸ್ಥಿರವಾಗಬಹುದು?

ಕೊನೆಗೆ, ಮುಂಬಯಿ ವಿಶ್ವವಿದ್ಯಾಲಯದ ಪದವೀಧರರು ತಾವು ತೇಲಂಗ, ರಾನಡೆ, ಭಾಂಡಾರಕರ ಮತ್ತು ರಾಜವಾಡೆ ಮುಂತಾದ ಲೋಕಮಾನ್ಯ ವ್ಯಕ್ತಿಗಳ ವಂಶ ಪರಂಪರೆಯಲ್ಲಿ ಸೇರಿದವರೆಂಬ ಅಭಿಮಾನವನ್ನು ಮುಂದಿಟ್ಟುಕೊಂಡು ಕೆಲಸ ಮಾಡಿ ಶ್ರೇಯೋವಂತರಾಗಲೆಂದೂ ತನ್ಮೂಲಕ ಭರತಖಂಡದ ಕಲ್ಯಾಣ ಕರ್ತರಾಗಲೆಂದೂ ಆಶಿಸುವೆನು.

ಸಿದ್ಧನಾಥ ವಾಚನ ಮಂದಿರ.
ಧಾರವಾಡ

ಕನ್ನಡ

# ಶಾಲಾ ಪತ್ರಿಕೆ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

| ಸಂಪುಟ ೬೪ | ಸಪ್ಟೆಂಬರ ೧೯೨೭ | ಸಂ. ೬ |
|---|---|---|

## ಸ್ಫುಟ ವಿಚಾರಗಳು

೧. **ಮದ್ರಾಸ ಇಲಾಖೆಯ ಪ್ರಾಥಮಿಕ ಶಿಕ್ಷಣ**:—ಮದ್ರಾಸ ಇಲಾಖೆಯಲ್ಲಿಯ ಪ್ರಾಥಮಿಕ ಶಿಕ್ಷಣದ ಪ್ರಗತಿಯು ಎಷ್ಟಾಗಿರುವದು. ಡಿಸ್ಟ್ರಿಕ್ಟ ಎಜ್ಯುಕೇಶನ್ ಕೌನ್ಸಿಲ್ಲುಗಳು ಈ ವಿಷಯದಲ್ಲಿ ತಮ್ಮ ಕಾರ್ಯವನ್ನು ಎಷ್ಟು ಮಟ್ಟಿಗೆ ಯಶಸ್ವಿಯಾಗಿ ಮಾಡಿರುವವು ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಲಿಕ್ಕೆ ಏನು ಮಾಡ ತಕ್ಕದ್ದು ಎಂಬ ಪ್ರಶ್ನಗಳನ್ನು ವಿಚಾರಮಾಡಲಿಕ್ಕೆ ಮಿ. ಸ್ಟ್ಯಾಥಾಮ ಎಂಬ ಶಿಕ್ಷಣಾಧಿಕಾರಿಯನ್ನು ನೇಮಿಸಿದ್ದರು. ಅವರು ಅಲ್ಲಿಯ ಸರಕಾರಕ್ಕೆ ಕಳುಹಿಸಿದ ರಿಪೋರ್ಟಿನಿಂದ ಕಂಡುಬರುವ ಸಂಗತಿಗಳನ್ನು ಕೆಳಗೆ ಕೊಟ್ಟಿದ್ದೇವೆ

ಇಲಾಖೆಯ ಒಟ್ಟು ಜನಸಂಖ್ಯೆಗೆ ಶಾಲೆಗೆ ಹೋಗುವವರ ಪ್ರಮಾಣದಿಂದ ಶಿಕ್ಷಣದ ಪ್ರಗತಿಯನ್ನು ನೋಡುವದಿದ್ದರೆ ಮದ್ರಾಸ ಇಲಾಖೆಯು ಉಳಿದ ಪ್ರಾಂತಗಳಿಗಿಂತ ಮುಂದುವರಿದಿರುವದು ಅದು ಕೆಳಗೆ ಕೊಟ್ಟ ಪ್ರಮಾಣದಿಂದ ಗೊತ್ತಾಗುವದು.

**ಶಾಲೆಗೆ ಹೋಗುವವರ ಸಂಖ್ಯೆಯ ಪ್ರಮಾಣ**

| | | |
|---|---|---|
| ೧. | ಮದ್ರಾಸ | ೫·೫೦ |
| ೨. | ಮುಂಬೈ | ೨·೨೮ |
| ೩. | ಪಂಜಾಬ | ೫·೧೩ |
| ೪. | ಬಂಗಾಲ | ೪·೭೫ |

| | | |
|---|---|---|
| ೬. | ಅಸಾಮು | ೩.೬೧ |
| ೭. | ಬಿಹಾರ ಮತ್ತು ಓಡಿಸಾ | ೩.೧೮ |
| ೮. | ಮಧ್ಯಪ್ರಾಂತ | ೨.೭೨ |
| ೯. | ಸಂಯುಕ್ತಪ್ರಾಂತ | ೨.೬೨ |

ಮದ್ರಾಸ ಇಲಾಖೆಯಲ್ಲಿಕಲಿಯುವವರ ಸಂಖ್ಯೆಯು ಪ್ರಮಾಣವು ಹೆಚ್ಚಿರುವದಲ್ಲದೆ ಸಾಲೆಯಲ್ಲ ಕಲಿಯುವ ಗಂಡು ಮತ್ತು ಹೆಣ್ಣುಹುಡುಗರ ಪ್ರಮಾಣವು ಸಹ ಉಳಿದ ಇಲಾಖೆಗಳಿಗಿಂತ ಹೆಚ್ಚಿಗಿರುವದು.

ಆದರೆ ಮದ್ರಾಸ ಇಲಾಖೆಯಲ್ಲಿಯೂ ಉಳಿದ ಇಲಾಖೆಗಳಂತೆ ಕೆಲವು ಅಸಮಾಧಾನಕರವಾಪ ಸಂಗತಿಗಳು ಇರುವವು. ಅವುಗಳಲ್ಲಿ ಮುಖ್ಯವಾಗಿ—ಒಬ್ಬನೇ ಶಿಕ್ಷಕನುಳ ಅಥವಾ ೫ ವರ್ಗಗಳುಳ್ಳ ಇಡೀ ಶಾಲೆಯನ್ನು ನಡೆಯಿಸುವದು ಶಿಕ್ಷಣದೃಷ್ಟಿಯಿಂದ ಅನಿಷ್ಟವು. ಈ ತರದ ಶಾಲೆಗಳನ್ನು ಪಂಜಾಬ ಇಲಾಖೆರುಲ್ಲಿ ಮಾತ್ರ ಕಡಿಮೆಮಾಡಿದ್ದಾರೆಂಬದು ಸಂತೋಷದ ಸಂಗತಿಯು.

ಮಿ. ಸ್ಟ್ಯಾಥಾಮರು ಪ್ರಾ. ಶಿ. ದ ಬಗ್ಗೆ ಕೆಲವು ಉಪಯುಕ್ತ ಸೂಚನೆಗಳನ್ನು ಮಾಡಿದ್ದಾರೆ. ಅವು ಯಾವವೆಂದರೆ—ಈಗ ಈ ಇಲಾಖೆಯಲ್ಲಿ ಖಾಸಗಿ ಶಾಲೆಗಳ ಸಂಖ್ಯೆಯು ಹೆಚ್ಚಾಗಿದ್ದರೂ ತಪಾಸಣೆಯ ಅಮಲದಾರರು ಮಾತ್ರ ಸರಕಾರದಿಂದ ನೇಮಿಸಲ್ಪಟ್ಟವರೇ ಇರುವರು. ಇನ್ನು ಮುಂದೆ ಈ ಅಮಲದಾರರ ಸಂಖ್ಯೆಯನ್ನು ಹೆಚ್ಚುಮಾಡಬೇಕು. ಮತ್ತು ಈ ಅಮಲದಾರರು ಕೇವಲ ಪ್ರಾ. ಶಿ. ದ ಸುಧಾರಣೆಯ ವಿಚಾರವನ್ನೇ ಮಾಡಬೇಕು ಪ್ರತಿ ಒಂದು ಜಿಲ್ಲೆಗೂ ಮುನಸಿಪಾಲಿಟಿಗೂ ಒಂದೊಂದು ಸ್ವತಂತ್ರವಾದ ಸ್ಕೂಲಕಮೀಟಿಯು ಇರಬೇಕು. ಆ ಕಮೀಟಿಯವರು ತಮ್ಮ ಕ್ಷೇತ್ರದಲ್ಲಿಯ ಶಿಕ್ಷಣಸುಧಾರಣೆ ಮತ್ತು ಬೆಳವಣಿಗೆಯ ವಿಷಯಕ್ಕೆ ತಮ್ಮ ವಿಚಾರಗಳನ್ನು ಸರಕಾರಕ್ಕೆ ತಿಳಿಸುತ್ತಿರಬೇಕು. ಸರಕಾರದ ಸೂಚನೆಯು ಮೇರಿಗೆ ಒತ್ತಾಯದ ಶಿಕ್ಷಣವನ್ನು ಅಮಲಿನಲ್ಲಿ ತರಬೇಕು. ಹೆಣ್ಣುಮಕ್ಕಳ ಶಿಕ್ಷಣವು ಎಷ್ಟು ಮಟ್ಟಿಗೆ ಬೆಳೆದದೆ ಎಂಬದನ್ನು ವಿಚಾರಿಸಿ ಅದರ ಅಭಿವೃದ್ಧಿಯಾಗುವಂತೆ ಮಾಡಬೇಕು. ಟ್ರೇಂಡ ಹಾಗು ಅಂಟ್ರೇಡ ಶಿಕ್ಷಕರ ಪಗಾರದ ಮಾನವನ್ನು ಗೊತ್ತುಪಡಿಸಬೇಕು. ಮತ್ತು ಪ್ರತಿ ಒಂದು ಸಾಲೆಯಲ್ಲಿ ಟ್ರೇಂಡ ಶಿಕ್ಷಕನೇ ಇರುವಂತೆ ವ್ಯವಸ್ಥೆಯಾಗಬೇಕು. ಪ್ರಾ. ಶಿ. ದ ಪ್ರಸಾರ ಮಾಡುವದಕ್ಕಿಂತ ಮೊದಲು ಈಗಿದ್ದ ಶಾಲೆಗಳ ಸ್ಥಿತಿಯನ್ನು ಸುಧಾರಿಸಬೇಕು. ಹಳ್ಳಿಗಳ ಪರಿಸ್ಥಿತಿಯನ್ನು ಅನುಲಕ್ಷಿಸಿ ಶಿಕ್ಷಣವು ಕೊಡಲ್ಪಡುವಂತೆ ವ್ಯವಸ್ಥೆಯಾಗಬೇಕು. ಪ್ರಾಂತಿಕಸರಕಾರದವರೂ ಸ್ಥಾನಿಕಸಂಘಗಳೂ ತಮ್ಮ ಕಂದಾಯದ ಹಣದಲ್ಲಿ ಪ್ರಾ. ಶಿ. ದ ಬಗ್ಗೆ ಹೆಚ್ಚು ಹಣ ಖರ್ಚುಮಾಡುವದು ಆದ್ಯಕರ್ತವ್ಯವೆಂದು ತಿಳಿಯತಕ್ಕದ್ದು. ಸರಕಾರಕ್ಕೂ ಸ್ಥಾನಿಕಸಂಘಗಳಿಗೂ ನಿಕಟವಾದ ಸಹಕಾರವು ಇರಬೇಕು

## ೨. ಪ್ರಾಥಮಿಕ ಶಿಕ್ಷಕರ ಪಗಾರ.

ಈಗ ಅನೇಕ ವರ್ಷಗಳಿಂದಲೂ ಪ್ರಾ॥ ಶಿ॥ ರು ತಮ್ಮ ಪಗಾರದ ಸುಧಾರಣೆಯ ಬಗ್ಗೆ ಪ್ರಯತ್ನ ಮಾಡುತ್ತಿರುವದೂ. ಅವರ ಬೇಡಿಕೆಯ ಬಗ್ಗೆ ಸರಕಾರದವರು ಸಹಾನುಭೂತಿಯನ್ನು ತೋರಿಸುತ್ತ ಬಂದಿರುವದೂ ಸರ್ವವಿಶ್ರುತವಾಗಿದೆ. ೧೯೨೩ನೇ ಇಸ್ವಿಯಲ್ಲಿ ಒತ್ತಾಯದ ಶಿಕ್ಷಣದ ಕಾಯದೆಯು ಪಾಸಾದ ತರುವಾಯ ಆ ಕಾಯದೆಗೆ ಅನುಸಾರವಾದ ನಿಯಮಗಳನ್ನು ರಚಿಸುವಾಗ ಸರಕಾರದವರು ೧೯೨೩ನೇ ಇಸ್ವಿಯ ತರುವಾಯ ಟ್ರೇಂಡರಾಗುವ, ಹಾಗು ಸ್ಥಾನಿಕ ಅಧಿಕಾರಿ ಸಂಸ್ಥೆಗಳು ಕೊಸದಾಗಿ ನೇಮಿಸಿಕೊಳ್ಳುವ ಅಂಟ್ರೇಂಡ ಶಿಕ್ಷಕರ ಪಗಾರವನ್ನು ಗೊತ್ತುಪಡಿಸುವ ಅಧಿಕಾರವನ್ನು ಸ್ಥಾನಿಕ ಅಧಿಕಾರಿ ಸಂಸ್ಥೆಗಳಿಗೆ ಒಪ್ಪಿಸಿರುವರು. ಸರಕಾರದವರು ಕನಿಷ್ಠ ಮತ್ತು ಪರಮಾವಧಿಯ ಸ್ಕೇಲುಗಳನ್ನು ಗೊತ್ತುಮಾಡಿಕೊಟ್ಟಿದ್ದಾರೆ.

| ಅವು ಯಾವವೆಂದರೆ. | ಕನಿಷ್ಠ ಸ್ಕೇಲು. | ಪರಮಾಧಿಯ ಸ್ಕೇಲು. |
|---|---|---|
| ೧ನೇ ವರ್ಷ | ೨೦–೩೫ ರು. | ೩೦–೫೦ |
| ೨ನೇ ,, | ೨೫–೪೫ ,, | ೩೫–೬೦ |
| ೩ನೇ ,, | ೩೫–೫೫ ,, | ೪೦–೭೦ |

ಹೀಗಿರುವದರಿಂದ ಇನ್ನು ಮುಂದೆ ಬರುವ ಶಿಕ್ಷಕರ ಪಗಾರವನ್ನು ಗೊತ್ತುಪಡಿಸುವ ವಿಷಯದಲ್ಲಿ ಸರಕಾರಕ್ಕೆ ನಿಶೇಷ ಸಂಬಂಧವಿಲ್ಲ. ಇನ್ನು ೧೯೨೩ನೇ ಇಸ್ವಿಯವರೆಗೆ ಆದ ಟ್ರೇಂಡರ, ಹಾಗು ಅದಕ್ಕೂ ಮೊದಲೇ ಕಾಯಂ ನೌಕರಿಯಲ್ಲಿ ಸೇರಿರುವ ಅಂಟ್ರೇಂಡ ಶಿಕ್ಷಕರ ಪಗಾರದ ವಿಷಯವೊಂದು ಮಾತ್ರ ಸರಕಾರದ ಕಡೆಗೆ ಉಳಿದಂತಾಯಿತು. ಈ ವಿಷಯದಲ್ಲಿಯೂ ಸರಕಾರವು ಕಳೆದ ವರ್ಷ ಕೂಡಿದ ಕೌನ್ಸಿಲಿನಲ್ಲಿ ಸಾತೆಸರಾಂಜಪೆಸ್ಕೀಮನ್ನು ಮುಂಜೂರ ಮಾಡಿ ತಮ್ಮ ಮನೋಗತವನ್ನು ತಿಳಿಸಿರುವದು. ಆದರೆ ಅದನ್ನು ಅಮಲಿನಲ್ಲಿ ತರುವದು ಮಾತ್ರ ಅಷ್ಟು ಸುಲಭವಾಗಿಲ್ಲ. ಸರಕಾರಕ್ಕೆ ಇರುವ ಹಣದ ಕೊರತೆಯು ದಿನದಿನಕ್ಕೆ ಹೆಚ್ಚುತ್ತ ನಡೆದಿರುವದು. ಪ್ರಾಥಮಿಕ ಶಿಕ್ಷಣದ ಒತ್ತಾಯದ ಕಾರ್ಯಕ್ರಮವನ್ನು ನೆರವೇರಿಸಲಿಕ್ಕೆ ಸಿದ್ಧವಾಗುತ್ತಿರುವ ಇಡೀ ಇಲಾಖೆಯೊಳಗಿನ ಸ್ಥಾನಿಕ ಅಧಿಕಾರಿ ಸಂಘಗಳಿಗೆ ಹಣವನ್ನು ಒದಗಿಸಿಕೊಡುವದು ಸರಕಾರದ ಮುಂದಿರುವ ಬಹುದೊಡ್ಡ ಪ್ರಶ್ನೆಯಾಗಿದೆ. ಇಂಥ ಪರಿಸ್ಥಿತಿಯಲ್ಲಿ ಸಾತೆಸರಾಂಜಾಸ್ಕೀಮವನ್ನು ಅಮಲಿನಲ್ಲಿ ತರುವದು ಸರಕಾರಕ್ಕೆ ಎಷ್ಟು ಮಟ್ಟಿಗೆ ಸಾಧ್ಯವಿರುವದೊ ಎಂಬದನ್ನು ಹೇಳಲಾಗುವದಿಲ್ಲ. ಶಿಕ್ಷಕವರ್ಗವು ಹೆಚ್ಚಿಗೆ ಪಗಾರ ಬೇಡುತ್ತಿರುವಾಗ ಸರಕಾರವೂ ಆ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುತ್ತಿರುವಾಗ ನಾವು ಅವರಿಗೆ ಈಗ ದೊರೆಯುತ್ತಿರುವ ಪಗಾರವನು, ಕಡಿಮೆ ಮಾಡಬೇಕೆಂಬ ಅಭಿಪ್ರಾಯದವರಿರುವದಿಲ.

## ೩. ಶಿಕ್ಷಣಸುಧಾರಣೆಯ ಕಮೀಟಿ.

೧. ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಅಭ್ಯಾಸಕ್ರಮದಲ್ಲಿ ಪರಸ್ಪರ ಸಂಬಂಧವೂ ಸುಧಾರಣೆಯೂ ಅವಶ್ಯಕವೆಂಬ ವಿಚಾರದಿಂದ ಈ ಎರಡು ಮುದ್ದೆಗಳನ್ನು ಕುರಿತು ವಿಚಾರಮಾಡಿ ವರದಿಯನ್ನು ಕಳಿಸುವದಕ್ಕಾಗಿ ಮುಂಬಯಿ ಸರಕಾರದವರು ಕೆಳಗೆ ಹೇಳುವ ಸಭಾಸದರಿರುವ ಒಂದು ಕಮೀಟಿಯನ್ನು ನಿಯಮಿಸಿರುವರು. ಅವರು ತಮ್ಮ ಕೆಲಸವನ್ನು ಬರುವ ಡಿಸೆಂಬರ ಮೊದಲನೇ ತಾರೀಖಿಗೆ ಆರಂಭಿಸಿ ೧೯೨೮ನೇ ಇಸ್ವಿಯ ಜೂನ ೧೫ನೇ ತಾರೀಖಿನ ಒಳಗಾಗಿ ತಮ್ಮ ವರದಿಯನ್ನು ಮುಂಬಯಿ ಸರಕಾರಕ್ಕೆ ಕಳಿಸತಕ್ಕದ್ದೆಂದು ಗೊತ್ತಾಗಿದೆ. ಕಮೀಟಿಯವರು ಬೇರೆ ಬೇರೆ ಕಡೆಗೆ ಹೋಗಿ ಸಾಕ್ಷಿಗಳನ್ನು ತೆಗೆದುಕೊಂಡು ತಮ್ಮ ವರದಿಯನ್ನು ತಯಾರಿಸುವರು.

(೧) **ಕಮೀಟಿಯವರು ವಿಚಾರಿಸತಕ್ಕ ಮುಖ್ಯ ವಿಷಯಗಳು** :— ಸದ್ಯಕ್ಕೆ ಪ್ರಚಾರದಲ್ಲಿರುವ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಅಭ್ಯಾಸಕ್ರಮದಲ್ಲಿ ಏನಾದರೂ ತಾತ್ವಿಕ ಸಂಬಂಧವಿರುವದೋ ಹ್ಯಾಗೆ ? ಹಾಗೆ ಸಂಬಂಧವಿಲ್ಲದೆ ಇದ್ದರೆ ಈ ಎರಡೂ ವಿಭಾಗಗಳ ಅಭ್ಯಾಸಕ್ರಮದಲ್ಲಿ ಪರಸ್ಪರ ಸಂಬಂಧವುಂಟಾಗಿ ಆ ಎರಡೂ ವರ್ಗದ ವಿದ್ಯಾರ್ಥಿಗಳ ಶ್ರಮ ಹಾಗು ಕಾಲದ ಅಪವ್ಯಯವಾಗದಂತೆ ಏನಾದರೂ ಕೊಸ ಯೋಜನೆಯನ್ನು ಮಾಡಬಹುದೋ ಹೇಗೆ ?

(೨) ಸದ್ಯದ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಅಭ್ಯಾಸಕ್ರಮದಲ್ಲಿ ಒಕ್ಕಲತನ ವ್ಯಾಪಾರೋದ್ಯೋಗಗಳು ಇವುಗಳ ಜ್ಞಾನಕ್ಕೆ ಸಾಕಷ್ಟು ಅವಕಾಶವದೆಯೋ ಹ್ಯಾಗೆ ? ಹಾಗಿಲ್ಲದಿದ್ದರೆ ಆ ಅಭ್ಯಾಸಕ್ರಮಗಳಲ್ಲಿ ಹೇಗೆ ತಿದ್ದುಪಡಿಯನ್ನು ಮಾಡಿ ಈ ವಿಷಯಗಳನ್ನು ಸಮಾವೇಶ ಮಾಡಬಹುದು ? ಹೀಗೆ ಈ ಹೊಸ ವಿಷಯಗಳ ಸಮಾವೇಶ ಮಾಡುವಾಗ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳ ಅಭ್ಯಾಸಕ್ಕೆ ಏನೂ ಕೊರತೆಯಾಗಕೂಡದು.

(೩) ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳ ಅಭ್ಯಾಸಕ್ರಮದಲ್ಲಿ ಒಕ್ಕಲತನ ವ್ಯಾಪಾರೋದ್ಯೋಗ ಮುಂತಾದ ಔದ್ಯೋಗಿಕ ವಿಷಯಗಳನ್ನು ಸಮಾವೇಶಮಾಡಿ ಮಾಧ್ಯಮಿಕ ಶಾಲೆಗಳಲ್ಲಿ ಅವನ್ನು ಮುಂದೆ ಸಾಗಿಸುವದು. ಮತ್ತು ಆ ವಿಷಗಳನ್ನು ಕಲಿಸುವಂಥ ಟ್ರೇಂಡ ಶಿಕ್ಷಕರನ್ನು ತಯಾರಿಸುವದು ಈ ವಿಷಯಗಳನ್ನು ಪರೀಕ್ಷಿಸುವಂಥ ಪರೀಕ್ಷಕರನ್ನು ನಿಯಮಿಸುವದು ಮತ್ತು ಈ ವಿಷಯಗಳಿಗೆ ಸಂಬಂಧಿಸಿದ ಪರೀಕ್ಷೆಗಳನ್ನು ಗೊತ್ತುಪಡಿಸುವದು.

(೪) ಮೇಲಿನ ಸೂಚನೆಗಳನ್ನು ಅಮಲಿನಲ್ಲಿ ತರುವದಕ್ಕಾಗಿ ಬೇಕಾಗುವ ವೆಚ್ಚದ ಅಂದಾಜು ಗೊತ್ತುಮಾಡುವದು.

(೫) ಮೇಲಿನ ಮುಖ್ಯ ವಿಷಯಗಳಿಗೆ ಸಂಬಂಧಿಸಿದ ವಿಷಯಗಳನ್ನು ವಿಚಾರಿಸುವದು.

(೬) ಮುಖ್ಯ ಕಮೀಟಿಯಲ್ಲಿ ವಿಭಾಗಗಳನ್ನು ಕಲ್ಪಿಸಿಕೊಂದು ತಮಗೆ ಅನುಕೂಲವಾದ ರೀತಿಯಿಂದ ಬೇರೆಬೇರೆ ಕಡೆಗೆ ಹೋಗಿ ಈ ವಿಷಯಗಳ ಮೇಲೆ ಅನುಭವಿಕರಾದವರ ಅಭಿಪ್ರಾಯವನ್ನು ಸಾಕ್ಷಿಯರೂಪದಿಂದ ಸಂಗ್ರಹಿಸಿ ವರದಿಯನ್ನು ಸಿದ್ಧಪಡಿಸಬಹುದು.

ಇದರಲ್ಲಿ ಈ ಕೆಳಗೆ ಹೇಳುವ ೧೪ ಜನ ಸಭಾಸದರಿರುವರು.

೧. ಮಿ. ಎಮ್. ಹೆಸ್ಕೆಥ ಡೈರೆಕ್ಟರ ಆಫ ಪಬ್ಲಿಕ್ ಇನಸ್ಟ್ರಕ್ಶನ್(**ಚೇಅರಮನ್**)

ಸಭಾಸದರು.

೨. ಮಿ. ಎನ್. ಎಮ್. ಶಹಾ ಪ್ರಿನ್ಸಿಪಾಲ ನ್ಯೂ ಪೂನಾ ಕಾಲೇಜು ಪುಣೆ.

೩. ಮಿ. ಡಿ. ವ್ಹಿ. ಕರುಕುಳೆಕರ ಪ್ರಿನ್ಸಿಪಾಲ ಟೋಪಿವಾಲಾ ಹಾಯಸ್ಕೂಲ ಮಾಲವಣ.

೪. ಡಿ. ವ್ಹಿ. ನಿರಚಂದಾನಿ ಹೆಡ್ ಮಾಸ್ಟರ ಶಿಕಾರಪುರ ಹಾಯಸ್ಕೂಲ ಶಿಕಾರಪುರ

೫. ಮಿ. ಪಿ. ಕೆ. ದೇಸಾಯಿ ಆಡಮಿನಿಸ್ಟ್ರೇಟೀವ ಆಫೀಸರ ಅಹಮ್ಮದಾಬಾದ ಮುನಿಸಿಪಾಲಟಿ

೬. ಮಿ. ನುರುದ್ದೀನ ಅಹಮ್ಮದ ಗುಲಾಮಅಲಿ ಪ್ರಿನ್ಸಿಪಾಲ ಹೈದರಾಬಾದ ಟ್ರೇನಿಂಗ ಕಾಲೇಜ

೭. ಮಿಸ್. ರೂಬಿ ನವಲಕರ ಲೇಡಿ ಸುಪರಿಂಟೆಂಡೆಂಟ ಹೆ. ಟ್ರೇ. ಕಾ. ಪುಣೆ.

೮. ರೆವ್ಹ ಎಲ್. ಎಸ್. ಲಾಂಗ ವ್ಹೋಕೇಶನಲ್ ಟ್ರೇನಿಂಗ ಸ್ಕೂಲ ಅಂಕಲೇಶ್ವರ

೯. ಡಾ. ಬಿ. ಆರ್. ಅಂಬೇಡಕರ ಬಾರಅಟ ಲಾ M. L. C. ಮುಂಬಯಿ

೧೦. ಮಿ. ಕನಯ್ಯಲಾಲ ಮಣಿಕಲಾಲ ಮುನಸಿ M. L. C. ಅಡ್ವೊಕೇಟ ಮುಂಬಯಿ

೧೧. ಮಿ. ಜಿ. ಎನ್. ಗೋಖಲೆ ಪ್ರಿನ್ಸಿಪಾಲ ಸಿವ್ಹಿಲ್ ಎಂಜಿನಿಯರಿಂಗ ಕಾಲೇಜ ಸಿಂಧ

೧೨. ಮಿ. ಕೆ. ಎಮ್. ಪವಾರ ಡೆ. ಡೈರೆಕ್ಟರ ಆಫ ಅಗ್ರಿಕಲ್ಚರ ಉತ್ತರ ಮಧ್ಯಭಾಗ

೧೩. ಡಾ. ಕೆ. ಜಿ. ನಾಯಿಕ ಪ್ರೊಫೆಸರ ಆಫ ಕೆಮಿಸ್ಟ್ರಿ ಬಡೋದಾ ಕಾಲೇಜ ಬಡೋದಾ

೧೪. ಮಿ. ಕೆ. ಎಸ್. ವಕೀಲ ಎಜ್ಯೂ. ಇನಸ್ಪೇಕ್ಟರ ಉತ್ತರಭಾಗ (ಸೆಕ್ರೆಟರಿ)

ಮಿ. ಕೆ- ಜಿ. ಜೋಸಿ ಎಜ್ಯೂ. ಇನಸ್ಪೇಕ್ಟರ ಮಧ್ಯಭಾಗ ಇವರು ಮಿ. ವಕೀಲ ಇವರು ವಿಲಾಯತಿಯಿಂದ ತಿರುಗಿ ಬರುವ ವರೆಗೆ ಸೆಕ್ರೆಟರಿಗಳಾಗತಕ್ಕದ್ದು.

## ಶಾರೀರಿಕ ಶಿಕ್ಷಣದ ಕಮಿಟಿ

೨. ಮುಂಬಯಿ ಸರಕಾರದವರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣವನ್ನು ಆವಶ್ಯಕ ವಿಷಯವಾಗಿ ಗೊತ್ತುಪಡಿಸಬೇಕೋ ಹ್ಯಾಗೆಂಬ ವಿಷಯವನ್ನೇ ಕುರಿತು ವಿಚಾರಮಾಡಿ ವರದಿಯನ್ನು ತಯಾರಿಸುವದಕ್ಕಾಗಿ ಕೆಳಗೆ ಹೇಳುವ ಸಭಾಸದರಿರುವ ಒಂದು ಕಮೀಟಿಯನ್ನು ನಿಯಮಿಸಿರುವರು. ಅವರು ಬರುವ ನೊವ್ಹೆಂಬರ ತಿಂಗಳ ೧ನೇ ತಾರಿಖಿಗೆ ಕೆಲಸವನ್ನು ಆರಂಭಿಸಿ ೧೯೨೮ನೇ ಇಸ್ವಿ ಜೂನ್ ೧೦ ನೇ ತಾರೀಖಿನ ಒಳಗಾಗಿ ತಮ್ಮ ವರದಿಯನ್ನು ತಯಾರಿಸಬೇಕು. ಆ ಕಮೀಟಿಯವರು ಈ ಕೆಳಗೆ ಹೇಳುವ ವಿಷಯಗಳನ್ನು ಕುರಿತು ವಿಚಾರ ಮಾಡುವರು.

(೧) ಸದ್ಯಕ್ಕೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಎಷ್ಟು ಮಟ್ಟಿಗೆ ಶಾರೀರಿಕ ಶಿಕ್ಷಣವು ಕೊಡಲ್ಪಡುತ್ತಿರುವರೆಂಬದನ್ನೂ ಅದರಿಂದ ಎಷ್ಟುಮಟ್ಟಿಗೆ ಪರಿಣಾಮವಾಗಿದೆಯೆಂಬದನ್ನೂ ವಿಚಾರಿಸಿ ಇನ್ನು ಮುಂದೆ ಇದರಲ್ಲಿ ಮಾಡಬೇಕಾಗಿರುವ ಸುಧಾರಣೆಯನ್ನು ಸೂಚಿಸುವದು, ತಾಲೀಮು ಡ್ರಿಲ್ಲು ಆಟಗಳು ಮುಂತಾದವುಗಳಲ್ಲಿ ಬೇರೆ ಬೇರೆ ವಯಸ್ಸಿನ ವಿದ್ಯಾರ್ಥಿಗಳಿಗೆ ತಕ್ಕವಾದವುಗಳನ್ನು ಗೊತ್ತುಪಡಿಸುವದು; ತಾಲೀಮಖಾನೆ ಆಟದ ಬೈಲು ಮುಂತಾದವುಗಳನ್ನು ಪೂರೈಸಿಕೊಡುವದು; ಸಾರ್ವಜನಿಕ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಶಾರೀರಕ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡುವಂಥ ಗರಡೀ ಮನೆ ಮುಂತಾದ ಸಂಸ್ಥೆಗಳಿಗೆ ಸಹಾಯ ದ್ರವ್ಯವನ್ನು ಕೊಡುವದು; ಮುನಸಿಪಾಲ್ಟಿ ಮತ್ತು ಲೋಕಲ್‌ಬೊರ್ಡಿನವರು ಆಟದ ಬೈಲು ಮುಂತಾದವುಗಳಿಗಾಗಿ ಬೈಲು ಸ್ಥಳವನ್ನು ಕಾದಿಡುವದಕ್ಕಾಗಿ ಅವುಗಳಿಗೆ ಸಹಾಯ ದ್ರವ್ಯವನ್ನು (ಗ್ರ್ಯಾಂಟು) ಕೊಡುವದು.

(೨) ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳಲ್ಲಿ ಶಾರೀರಕ ಶಿಕ್ಷಣವನ್ನು ಆವಶ್ಯಕ ವಿಷಯವನ್ನಾಗಿ ಮಾಡುವದು ಮತ್ತು ಅದನ್ನು ಅಮಲಿನಲ್ಲಿ ತರುವದಕ್ಕಾಗಿ ಬೇಕಾಗುವ ಜೇರಿ ಜೇರಿ ಮೆಟ್ಟುಗಳನ್ನು ಗೊತ್ತು ಪಡಿಸುವದು.

(೩) ಮೇಲಿನ ಮುಖ್ಯ ವಿಷಯಗಳಿಗೆ ಸಂಬಂಧಿಸಿದ ಉಪವಿಷಯಗಳು.

ಈ ಕೆಳಗೆ ಹೇಳುವ ಜನರು ಈ ಕಮೀಟಿಯ ಸಭಾಸದರಾಗಿ ನೇಮಿಸಲ್ಪಟ್ಟಿರುನರು. ಅವರಲ್ಲಿ ಮಿ. ಕಾನಟಕರ ಇವರು ಆ ಕಮೀಟಿಯ ಸೆಕ್ರೆಟರಿಗಳಿಗಾಗಿ ಆರಿಸಲ್ಪಟ್ಟಿರುವರು.

೧. ಮಿ. ಕನಯಾಲಾಲ ಮಾಣಿಕಲಾಲ ಮುನಸಿ M. L. C. ಅಡ್ವೋಕೇಟ ಮುಂಬಯಿ. **ಚೇರಮನ್**

## ಸಭಾಸದರು

೨ ಮಿ. ಎಚ್ ಆರ್ ಹ್ಯಾಮಲೆ ಪ್ರಿನ್ಸಿಪಾಲ ಸೆಕಂಡರಿ ಟ್ರೇನಿಂಗ ಕಾಲೇಜ ಮುಂಬಯಿ.

೩ ಮಿ. ಎಲ್ ಬಿ. ಭೋಪಟಕರ M. A. L. L. B. ಪುಣೆ

೪ ಡಾ. ಸುಮಂತ ಬಟಕರಾಮ ಮೆಹತಾ ರಿಟಾಯರ್ಡ ಚೀಫ ಮೆಡಿಕಲ್ ಆಫೀಸರ ಬಡೋದಾ

೫ ಮಿಸ್ ವೋತಿವಾಲಾ ಮುಂಬಯಿ

೬ ಖಾ. ಬ. ಶಹಾ ನವಾಜಖಾನ ಗುಲಾಮ ಮರ್ತುಜಾಖಾನ ಭುಟೊ M. L. C. ಲಾರಖಾನಾ

೭ ಮಿ ಛೋಟಾಲಾಲ ಬಾಲಕೃಷ್ಣ ಪುರಾಣಿ ಧಡೋಚ

೮ ಮಿ. ಜೆ. ಜಿ. ಗುಣೆ ಲೋಣಾವಳಾ

೯ ಮಿ. ಕೆ. ಆರ್. ಕಾನಿಟಕರ ಪ್ರಿನ್ಸಿಪಾಲ ಫರ್ಗ್ಯುಸನ್ ಕಾಲೇಜ ಪುಣೆ.

---

ಮೇಲಿನ ಎರಡೂ ಕಮೀಟಿಗಳಲ್ಲಿ ಕರ್ನಾಟಿಕದ ವತಿಯಿಂದ ಒಬ್ಬ ಸಬಾಸದನಾದರೂ ಇರಬೇಕಾಗಿತ್ತು.

ಪ್ರಾಥಮಿಕ ಮಾಧ್ಯಮಿಕ ಶಿಕ್ಷಣದ ಸುಧಾರಣೆ ಒತ್ತಾಯದ ಶಾರೀರಿಕ ಶಿಕ್ಷಣ ಇವುಗಳ ಬಗ್ಗೆ ಪ್ರಾ. ಶಿ. ರಿಗೆ ಸೂಚನೆಗಳನ್ನು ಮಾಡುವದಿದ್ದರೆ ಅವರು ಅವುಗಳನ್ನು ನಮ್ಮ ಕಡೆಗೆ ಕಳುಹಿಸಬಹುದು.

ಸಂ· ಶಾ. ಪ.

# ಪ್ರಕಟನೆ

**ಸರಕಾರಿ ಠರಾವ ನಂಬರ:— ೩೫೦೧**

೨೨೬೩. F ತಾ॥ ೨೯ನೇ ಎಪ್ರಿಲ ೧೯೨೭

**ಪ್ರಾಥಮಿಕ ಶಾಲೆಗಳಿಗೋಸ್ಕರ ತಿದ್ದಿ ಬೆಳಿಸಿದ ಗಣಿತ ವಿಷಯದ ಅಭ್ಯಾಸ ಪತ್ರಿಕೆ**

## ಬಾಲಕರ ವರ್ಗ

**ಅಂಕಗಣಿತ**:— (೧) ಸಂಖ್ಯೆಗಳ ಎಣಿಕೆ:— ೧ರಿಂದ ೧೦೦ರ ವರೆಗೆ ಸಂಖ್ಯೆಗಳನ್ನು ಎಣಿಸುವದು, ಓದುವದು, ಮತ್ತು ಬರೆಯುವದು, (ಪ್ರತ್ಯಕ್ಷ ವಸ್ತುಗಳ ಸಹಾಯದಿಂದ ಸಂಖ್ಯೆಗಳನ್ನು ಎಣಿಸುವದು.)

(೨) ಗುಂಪು ಮಾಡುವದು. ೨, ೩, ೪, ೫, ೧೦ ಹೀಗೆ ವಸ್ತುಗಳ ಗುಂಪುಗಳನ್ನು ಮಾಡುವದು.

(೩) ಬಾಯಿಯಿಂದ ಬೇರೀಜು ಮಾಡುವದು.

ನೂರರ ಒಳಗಿನ ಯಾವದಾದರೊಂದು ಸಂಖ್ಯೆಗೆ ಐದರ ವರೆಗಿನ ಸಂಖ್ಯೆಗಳನ್ನು ಕೂಡಿಸುವದು. (೩೮+೪, ೯೮+೫ ಹೀಗೆ ಹತ್ತರ ಅಥವಾ ನೂರರ ಗಂಟುಗಳು ಕೈಲೆ ಬರುವಂಥ ಸಂಖ್ಯೆಗಳನ್ನು ಬಿಡಬೇಕು.) ಆರಂಭದ ಪಾಠಗಳಲ್ಲಿ ಈ ಉತ್ತರಗಳನು ಪ್ರತ್ಯಕ್ಷ ವಸ್ತುಗಳನ್ನು ಉಗಯೋಗಿಸಿ ವಿದ್ಯಾರ್ಥಿಗಳು ಮನಗಾಣತಕ್ಕದ್ದು.

**ಭೂಮಿತಿ**:— (೧) ಮೈ, ಏಣು, ಮೂಲೆ, ವಕ್ರವೆಣುಗಳು, ಇವುಗಳ ತಿಳುವಳಿಕೆಯುಂಟಾಗುವದಕ್ಕಾಗಿ ಘನ, ಘನಾಕೃತಿ, ಗೋಲ (ಚಂಡು) ಈ ಆಕೃತಿಗಳ ವಸ್ತುಗಳನ್ನು ಉಪಯೋಗಿಸುವದು.

(೨) ವಸ್ತುಗಳನ್ನಿಟ್ಟು ಗೆರೆಹೊಡೆಯುವದು. (ಟ್ರೇಸಿಂಗ) ಮೇಲೆ ಹೇಳಿದ ಆಕೃತಿಗಳ ಪದಾರ್ಥಗಳನ್ನು ಪಾಟಿಯ ಮೇಲೆ ಇಲ್ಲವೆ ಕರೇ ಹಲಗೆಯ ಮೇಲೆ ಇಟ್ಟು ಸುತ್ತಲೂ ಗೆರೆ ತೆಗೆದು ಆಕೃತಿಗಳನ್ನು ರಚಿಸುವದು.

(೩) ಕಾಗದ ಮಡಿಚುವದು. ಚೌರಸ ಹಾಗು ಕಾಟಕೋನ ಚೌಕೋನಾಕೃತಿಗಳನ್ನು ಮಾಡುವದು.

## ೧ನೆಯ ಇಯತ್ತೆ

**ಅಂಕಗಣಿತ**: — ೧ ಸಂಖ್ಯೆಗಳು.

೧೦೦ದ ವರೆಗೆ ಸಂಖ್ಯೆಗಳನ್ನು ಎಣಿಸುವದು. ಮತ್ತು ಬರೆಯುವದು. ಎಕ್ಕಂ, ದಹಂ, ಶತಂ ಇವುಗಳ ಜ್ಞಾನ, ಶೂನ್ಯದ ಉಪಯೋಗ.

೨ ಆರಂಭದ ಕೃತಿಗಳು. ಬೇರೀಜು, ವಜಾಬಾಕಿ, ಗುಣಾಕಾರ, ಭಾಗಾಕಾರ ಗಳು (ಅ) ನೂರರ ವರೆಗಿನ ಸಂಖ್ಯೆಗಳನ್ನು ಬಾಯಿಂದಲೇ ಕೂಡಿಸುವದು. ಮತ್ತು ಕಳೆಯುವದು. ಎರಡು ಸ್ಥಾನಗಳುಳ್ಳ ಸಂಖ್ಯೆಗಳ ಬೇರೀಜು ವಜಾಬಾಕಿಗಳ ಸುಲಭ ಉದಾಹರಣೆಗಳನ್ನು ಪಾಟಿಯಮೇಲೆ ಮಾಡುವದು.

ಹಣದ ಬೇರೀಜು ವಜಾಬಾಕಿಗಳ ಸುಲಭ ಉದಾಹರಣೆಗಳು.

( ರೂಪಾಂತರದ ಸಂಬಂಧವುಳ್ಳ ಲೆಕ್ಕಗಳನ್ನು ಹೇಳಬಾರದು. )

(ಬ) ಬಾಯಿಂದ ಗುಣಾಕಾರ ಮಾಡುವದು.

೧. ಒಂದೇ ಸಂಖ್ಯೆಯನ್ನು ಹಲವು ಸಾರೆ ಕೂಡಿಸುವದು.

ಉದಾ:— ೩ ಮೂರು ಸಾರೆ ಕೂಡಿಸುವದು = ೯

೨. ಗುಣಾಕಾರ. ೩×೩=೯

( ಕ ) ಬಾಯಿಯಿಂದ ಭಾಗಾಕಾರ ಮಾಡುವದು.

**ಮಾಪನ** :—

೨ ಎಷ್ಟು ಸಾರೆ ಕೂಡಿಸಿದರೆ ೮ ಆಗುವದು ?

೩. **ಮಗ್ಗಿಗಳು**— ೧೦×೧೦ ರ ವರೆಗಿನ ಮಗ್ಗಿಗಳನ್ನು ಪ್ರತ್ಯಕ್ಷ ವಸ್ತುಗಳ ಸಹಾಯದಿಂದ ರಚಿಸುವದು. ಮತ್ತು ಅದಕ್ಕೆ ಸಂಬಂಧಿಸಿದ ಉದಾಹರಣೆಗಳನ್ನು ಬಾಯಿಯಿಂದ ಮಾಡುವದು.

೪. **ದೇಶೀಯ ನಾಣ್ಯಗಳು** — ದೇಶೀಯ ನಾಣ್ಯಗಳ ಕೋಷ್ಟಕಗಳ ಜ್ಞಾನ, ಮತ್ತು ವ್ಯವಹಾರದಲ್ಲಿರುವ ನಾಣ್ಯಗಳ ಪರಿಚಯ ಹಾಗು ನಿತ್ಯದ ವ್ಯವಹಾರ ದಲ್ಲಿ ಉಪಯೋಗಿಸುವಂಥ ಉದಾಹರಣೆಗಳು.

**ಸೂಚನೆ**— ಈ ವರ್ಗದಲ್ಲಿ ಪಾಟಿಯ ಮೇಲಿನ ಲೆಕ್ಕಗಳು ತೀರ ಸುಲಭವಿರ ತಕ್ಕದ್ದು.

## ಭೂಮಿತಿ.

೧. **ರಚನೆ**— ಸರಳರೇಖೆಗಳಿಂದಲೂ ಟೆಮ್ಮೆಗಳಿಂದಲೂ ಚೌರಸ ಇಲ್ಲವೆ ಕಾಟಕೋನಾಕೃತಿಗಳಲ್ಲಿ ಡಿಝೈನುಗಳನ್ನು ರಚಿಸುವದು.

೨. **ಡ್ರಾಯಿಂಗು**— ಪೆಟ್ಟಿಗೆ, ಚೌಕಟ್ಟು, ಚೌರಸ, ಕಾಟಕೋನಾಕೃತಿ, ಕಾಟಕೋನಾಕೃತಿಗಳ ಮೂಲೆಗಳು, ಇವುಗಳ ಸಾದಾ ಚಿತ್ರ ತೆಗೆಯುವದು.

## ೨ನೆಯ ಇಯತ್ತೆ.

### ಅಂಕ ಗಣಿತ

೧. **ಸಂಖ್ಯೆ**— ೧ ಲಕ್ಷದ ವರೆಗಿನ ಸಂಖ್ಯೆಗಳನ್ನು ಎಣಿಸುವದು ಮತ್ತು ಬರೆಯುವದು.

## ೨. ಆರಂಭದ ನಾಲ್ಕು ಕೃತಿಗಳು.

(ಅ) ೧೦,೦೦೦ ವರೆಗಿನ ಸಂಖ್ಯೆಗಳ ಬೇರೀಜು ವಜಾಬಾಕಿಗಳು, ಅಧಿಕ ಋಣಾ ಚಿಹ್ನಗಳ ಉಪಯೋಗ.

(ಬ) ೧೦,೦೦೦ ವರೆಗಿನ ಸಂಖ್ಯೆಗಳಿಗೆ ೨ ಸ್ಥಾನಗಳುಳ್ಳ ಸಂಖ್ಯೆಗಳಿಂದ ಗುಣಿಸುವದು, ಗುಣಕದ ಎಡಗಡೆಯ ಅಂಕಿಯಿಂದ ಗುಣಾಕಾರವನ್ನು ಮಾಡಹತ್ತುವದು ನೆಟ್ಟಗೆ.

(ಕ) ಎಣಿಸುವದು.

ನಾಲ್ಕರಂತೆ ಎಷ್ಟು ಸಾರೆ ಕೂಡಿ ಹದಿನಾರು ಆಗಿರುವದು ?

**ಪಾಲು ಮಾಡುವದು**— ಹದಿನಾರರ ನಾಲ್ಕನೆಯ ಪಾಲು ಎಷ್ಟು ?

ಈ ಎರಡು ಕೃತಿಗಳ ಸಂಬಂಧದ ಜ್ಞಾನ.

೧೦,೦೦೦ ದ ವರೆಗಿನ ಸಂಖ್ಯೆಗೆ ೨ ಸ್ಥಾನಗಳುಳ್ಳ ಸಂಖ್ಯೆಗಳಿಂದ ಭಾಗಿಸುವದು. ಭಾಜಕವು ಬಾಲಕರಿಗೆ ಗೊತ್ತಿದ್ದ ಮಗ್ಗಿಯೊಳಗಿನದಿರಬೇಕು. ×, ÷ ಚಿಹ್ನಗಳ ಉಪಯೋಗ.

೩. **ಮಗ್ಗಿಗಳು**—೨೦×೧೦=೨೦೦. ಆಯಾ ಸ್ಥಳಗಳಲ್ಲಿ ಉಪಯೋಗಿಸುವ ಕಾಲ, ತೂಕ, ಅಳತೆ (ಉದ್ದಳತೆ ಮತ್ತು ಮೂಪು) ಇವುಗಳಿಗೆ ಸಂಬಂಧಿಸಿದ ಕೋಷ್ಟಕಗಳು. ಹಾಗು ಅವುಗಳಿಗೆ ಸಂಬಂಧಿಸಿದ ಸುಲಭ ಉದಾಹರಣೆಗಳು. ಬಾಲಕರು ಅಳತೆ, ತೂಕಗಳನ್ನು ಪ್ರತ್ಯಕ್ಷ ಮಾಡಿ ನೋಡುವದು. ಮತ್ತು ಅವುಗಳ ಅಂದಾಜು ಕಟ್ಟುವದು.

## ೪ ಅಪೂರ್ಣಾಂಕ

$\frac{1}{2}$, $\frac{1}{3}$, $\frac{1}{4}$, $\frac{1}{5}$, $\frac{1}{6}$ ಮುಂತಾದ ಸಾದಾ ಅಪೂರ್ಣಾಂಕಗಳ ತಿಳಿವಳಿಕೆ, ಅವುಗಳನ್ನು ದೇಶೀಯ ಪದ್ಧತಿಯಂತೆ ಬರೆಯುವದು.

**ಸೂಚನೆ:**— ನಿತ್ಯದ ವ್ಯವಹಾರದಲ್ಲಿ ಉಪಯೋಗವಾಗುವಂಥ ಮೇಲಿನ ವಿಷಯಗಳಿಗೆ ಸಂಬಂಧಿಸಿದ ಲೆಕ್ಕಗಳನ್ನು ಬಾಯಿಯಿಂದ ಮಾಡುವದು.

## ಭೂಮಿತಿ

### ೧ ರಚನೆ

ಮೊದಲನೇ ಇಯತ್ತೆಯ ವಿಷಯಗಳನ್ನು ಮುಂದೆ ಸಾಗಿಸುವದು.

**ಡ್ರಾಯಿಂಗು**

ಕಾಟಕೋನ ಚೌಕೋನಾಕೃತಿಯ ವಸ್ತುಗಳ ಚಿತ್ರ ಬರೆಯುವದು.

ಉದಾ:— ಖಿಡಿಕೆ, ಸಾಲಿಯ ಕೋಣೆ, ಮುಂತಾದವು. ರೂಲಪಟ್ಟಿ ಮತ್ತು ತ್ರಿಕೋನ ಪಟ್ಟಿಗಳನ್ನು ಸರಿಯಾಗಿ ಉಪಯೋಗಿಸುವದು ನಕಾಶದೊಳಗೆ ಬೇರೆ ಬೇರೆ ವಸ್ತುಗಳ ಸ್ಥಾನ ನಿರ್ದೇಶ ಮಾಡುವದು.

## ೩ನೆಯ ಇಯತ್ತೆ

### ಅಂಕಗಣಿತ

(೧) **ಸಂಖ್ಯೆ**:— ಕೋಟಿಯ ವರೆಗೆ ಸಂಖ್ಯೆಗಳನ್ನು ಎಣಿಸುವದು ಮತ್ತು ಬರೆಯುವದು.

(೨) **ನಾಲ್ಕು ಕೃತಿಗಳು**:— ಬೀರೀಜು, ವಜಾಬಾಕಿ, ಗುಣಾಕಾರ ಮತ್ತು ಭಾಗಾಕಾರ ಇವುಗಳ ಹೆಚ್ಚು ಕಠಿಣವಾದ ಉದಾಹರಣೆಗಳು.

(ಅ) ದೊಡ್ಡ ದೊಡ್ಡ ಸಂಖ್ಯೆಗಳ ಗುಣಾಕಾರ, ಹಣದ ಉದಾಹರಣೆಗಳು ಸಹಿತ.

(ಬ) ಸಂಕ್ಷಿಪ್ತ ಭಾಗಾಕಾರ—ಹಣದ ಉದಾಹರಣೆಗಳಲ್ಲಿ ಒಂಟಿ ಅಂಕೆಯ ಸಂಖ್ಯೆಯಿಂದ ಭಾಗಿಸುವದು.

(ಕ) ಸಾದಾ ಭಾಗಾಕಾರ—ಸಂಕ್ಷಿಪ್ತ ಭಾಗಾಕಾರಕ್ಕೂ ಸಾದಾ ಭಾಗಾಕಾರಕ್ಕೂ ತುಲನೆ ಮಾಡಿ ನೋಡುವದು.

(ಡ) ಹಣದ ರೂಪಾಂತರ

(ಇ) (ರೇಖಾ ಅಪೂರ್ಣಾಂಕಗಳಂತೆ) ವಿವಿಧ ಬೀರೀಜು, ವಜಾಬಾಕಿಗಳು ಮತ್ತು ಇಂಗ್ಲಿಶ ಪದ್ಧತಿಯಂತೆ ನಾಲ್ಕೂ ವಿವಿಧ ಕೃತಿಗಳು.

(೩) ಮಗ್ಗಿಗಳೂ ಕೋಷ್ಟಕಗಳೂ

(ಅ) ಹಿಂದಿನ ಇಯತ್ತೆಗಳಲ್ಲಿ ಕಲಿತ ಮಗ್ಗಿಗಳ ಉಜಳಣಿ.

(ಬ) ಇಂಗ್ಲಿಷ ನಾಣ್ಯದ ಕೋಷ್ಟಕಗಳು.

(೪) **ಅಪೂರ್ಣಾಂಕ**:— ಅಪೂರ್ಣಾಂಕದ ವಿಚಾರ ಮುಂದೆ ಸಾಗಿದ್ದು $\frac{1}{3}=\frac{2}{6}=\frac{3}{9}$ ಇಂಥ ಸವಿೂಕರಣಗಳ ಜ್ಞಾನ. ಸುಲಭ ವ್ಯವಹಾರಿ ಅಪೂರ್ಣಾಂಕಗಳ ಬೀರೀಜು ವಜಾಬಾಕಿಗಳು.

(೫) ಪ್ರಮಾಣ— ಏಕಮಾನ ಪದ್ಧತಿ ಸಮಪ್ರಮಾಣದ ಸುಲಭ ಉದಾಹರಣೆಗಳನ್ನು ಏಕಮಾನಪದ್ಧತಿಯಿಂದ ಬಿಡಿಸುವದು.

ಸೂಚನೆ:— ಮೇಲಿನ ಎಲ್ಲ ವಿಷಯಗಳಿಗೆ ಸಂಬಂಧಿಸಿದ ನಿತ್ಯದ ವ್ಯವಹಾರಕ್ಕೆ [illegible] ಬಾಯಿಯಿಂದ ಮಾಡುವದು.

## ಭೂ ಮಿ ತಿ

೧ ಡ್ರಾಯಿಂಗು—ಸ್ಕೇಲ್ ಡ್ರಾಯಿಂಗು.

ವರ್ತುಳ ಸಿಲಿಂದರಾಕಾರದ ಪೆಟ್ಟಿಗೆ ಮುಂತಾದವುಗಳ ಚಿತ್ರ ತೆಗೆಯುವದು.

೨. ಕಾಗದ ಮಡಿಚುವದು— ವರ್ತುಳಾಕಾರದ ಕಾಗದವನ್ನು ಮಡಿಚುವದು.

## ನಾಲ್ಕನೆಯ ಇಯತ್ತೆ.

### ಅಂಕಗಣಿತ.

೧. ಸಂಖ್ಯೆ — ಅವಯವಗಳು. ೩೬೦= ೨×೨×೩×೩×೩×೫ ಹೀಗೆ ಸಂಖ್ಯೆಯ ಅವಿಭಾಜ್ಯ ಅವಯವಗಳನ್ನು ಕಂಡುಹಿಡಿಯುವದು.

ಅವಯವಗಳನ್ನು ತೆಗೆಯುವದು—

ಗಣಿತದ ಸುಲಭ ಕೃತಿಗಳು— ಉದಾ. ೫೧ರಿಂದ ಅಥವಾ ೪೯ ರಿಂದ ಗುಣಿಸುವಾಗ ಮೂಲಸಂಖ್ಯೆಗೆ ೫೦ ರಿಂದ ಗುಣಿಸಿ ಆ ಸಂಖ್ಯೆಯನ್ನು ಕೂಡಿಸುವದ ಅಥವಾ ಕಳೆಯುವದು.

೨೫, ೧೨೫ ಇತ್ಯಾದಿಗಳಿಂದ ಗುಣಿಸುವದು ಮತ್ತು ಭಾಗಿಸುವದು.

೨. ಅಪೂರ್ಣಾಂಕಗಳು—

(ಅ) ಅಪೂರ್ಣಾಂಕಗಳ ಬೇರೀಜು ವಜಾಬಾಕಿಗಳಿಂದ ಕೂಡಿದ ಸರಳ ಹಾಗು ಸುಲಭವಾದ ಉದಾಹರಣೆಗಳು.

(ಬ) " ದ " ಪದದ ಉಪಯೋಗ.

ಅಪೂರ್ಣಾಂಕಗಳಿಗೆ ಅಪೂರ್ಣಾಂಕಗಳಿಂದ ಭಾಗಿಸುವದು. ವಿಷಮ ಅಪೂರ್ಣಾಂಕಗಳು.

(ಕ) ಅತಿಸಂಕ್ಷೇಪರೂಪವನ್ನು ಯಾವಾಗ ಕೊಡಬೇಕು, ಯಾವಾಗ ಕೊಡ ಬಾರದು ಎಂಬದರ ಕಲ್ಪನೆ.

೩. ಪ್ರಮಾಣ ಏಕಮಾನ ಪದ್ಧತಿಯು — ತ್ರೈರಾಶಿಕ ಹಾಗು ಪಂಚರಾಶಿಕದ ಉದಾಹರಣೆಗಳನ್ನು ಏಕಮಾನಪದ್ಧತಿಯಿಂದ ಬಿಡಿಸುವದು. ವ್ಯವಹಾರದೊಳಗಿನ ಸುಲಭ ಉದಾಹರಣೆಗಳು.

೪. ಬಡ್ಡಿ— ಸರಳಬಡ್ಡಿ.

(ಅ) ಬಡ್ಡಿಯನ್ನು ತೆಗೆಯುವದು ಮಾತ್ರ.

(ಬ) ದೇಶೀ ಪದ್ಧತಿಯ ಪ್ರಕಾರ ಬಡ್ಡಿ ತೆಗೆಯುವದು.

೫. **ಮಹತ್ವಮಾಪನ—**

( ಅ ) ಪ್ರತ್ಯಕ್ಷ ಅಳತೆ ಮಾಡಿನೋಡಿ ಕಾಟಕೋನ ಚೌಕೋನಾಕೃತಿಗಳ ಕ್ಷೇತ್ರ ಫಲತೆಗೆಯುವದು. ನೆಲಕ್ಕೆ ಕಲ್ಲುಹಾಸಿಗೆ ಮಾಡುವದು. ಬಣ್ಣ ಹೆಚ್ಚು ವದು. ಇವುಗಳ ವೆಚ್ಚವನ್ನು ತೆಗೆಯುವ ಲೆಕ್ಕಗಳು. ಚೌರಸ ಅಳತೆ ( ಚೌರಸ, ಕಾಟಕೋನ ಚೌಕೋನ ಇವುಗಳ **ಕ್ಷೇತ್ರಫಲ** ಮಾತ್ರ )

(ಬ) ಸುಲಭವಾದ ಆಕೃತಿಗಳ ಘನಫಲ ತೆಗೆಯುವದು. ಘನ ಅಳತೆಗಳು ( ಘನ ಇಟ್ಟಿಗೆಯ ಆಕೃತಿ ಇವುಗಳ ಘನಫಲವಮಾತ್ರ )

(೬) **ಜಮಾಖರ್ಚು:—** ಪ್ರಾರಂಭದ ಜಮಾಖರ್ಚು (ಸಾಮಾನ್ಯ ಕಲ್ಪನೆಮಾತ್ರ )

ಸಾಲೆಯೊಳಗಿನ ಸ್ಟೇಶನರೀ ಸೋಸಾಯಟಿಯ ಲೆಕ್ಕವನ್ನು ಬಾಲಕರಿಂದ ಬರೆ ಯಿಸಬಹುದು.

---

## ಭೂಮಿತಿ

(೧) **ವರ್ತುಳಗಳು:—** ಕೋನದ ಕಲ್ಪನೆ

ವರ್ತುಳವನ್ನು ವಿಭಾಗಿಸಿ ಅಂಶಗಳನ್ನು ತೋರಿಸುವದು. ಮತ್ತು ಅದನ್ನು ಹೋಕಾ ಯಂತ್ರದಂತೆ ಭಾಗ ಮಾಡುವದು.

(೨) **ಕ್ಷೇತ್ರ:—** ಕಾಟಕೋನ ಚೌಕೋನ ಮತ್ತು ತ್ರಿಕೋನ ಇವುಗಳ ಕ್ಷೇತ್ರ ಫಲ ತೆಗೆಯುವದು.

ಕಾ. ಚೌ. ದ ಕ್ಷೇತ್ರ=ತಳ×ಎತ್ತರ

ತ್ರಿ. ದ. ಕ್ಷೇತ್ರ=$\frac{1}{2}$ತಳ×ಎತ್ತರ

(೩) **ಘನಫಲ:—** ಯಾವದೊಂದು ಘನಾಕೃತಿಯನ್ನು ನೀರು ತುಂಬಿದ ಪಾತ್ರೆ ಯಲ್ಲಿ ಇಟ್ಟು ಹೊರಚಲ್ಲಿದ ನೀರಿನ ಅಳತೆಯನ್ನು ಮಾಡಿ ಆ ಘನಾಕೃತಿಯ ಘನಫಲ ತೆಗೆಗಬುವದು

ಸೂಚನೆ— (ಅ) ಪಾಟಿಯ ಮೇಲೆ ಲೆಕ್ಕಗಳನ್ನು ಮಾಡಿಸುವದಕ್ಕಿಂತ ಮೊದಲು ಬಾಯಿಲೆಕ್ಕಗಳನ್ನು ಸಾಗಿಸಬೇಕು. ಲೆಕ್ಕಗಳನ್ನು ತೀವ್ರವಾಗಿ ಮಾಡುವ ರೂಢಿಯುಂ ಟಾಗುವದಕ್ಕಾಗಿ ಬಾಯಿಯಿಂದ ಉದಾಹರಣೆಗಳನ್ನು ಮಾಡಿಸಿಕೊಳ್ಳಬಹುದು. ಆದರೆ ಉದಾಹರಣೆಗಳು ಮಾತ್ರ ಸುಲಭವಾವವೂ ನಿತ್ಯದ ವ್ಯವಹಾರಕ್ಕೆ ಉಪಯು ಕ್ತವಾದವೂ ಇರತಕ್ಕದ್ದು.

೫. **ಮಹತ್ವಮಾಪನ—**

( ಅ ) ಪ್ರತ್ಯಕ್ಷ ಅಳತೆ ಮಾಡಿನೋಡಿ ಕಾಟಕೋನ ಚೌಕೋನಾಕೃತಿಗಳ ಕ್ಷೇತ್ರ ಫಲತೆಗೆಯುವದು. ನೆಲಕ್ಕೆ ಕಲ್ಲುಹಾಸಿಗೆ ಮಾಡುವದು. ಬಣ್ಣ ಹೆಚ್ಚು ವದು. ಇವುಗಳ ವೆಚ್ಚವನ್ನು ತೆಗೆಯುವ ಲೆಕ್ಕಗಳು. ಚೌರಸ ಅಳತೆ ಚೌರಸ. ಕಾಟಕೋನ ಚೌಕೋನ ಇವುಗಳ ಕ್ಷೇತ್ರಫಲ ಮಾತ್ರ )

(ಬ) ಸುಲಭವಾದ ಆಕೃತಿಗಳ ಘನಫಲ ತೆಗೆಯುವದು. ಘನ ಅಳತೆಗಳು ಘನ ಇಟ್ಟಿಗೆಯ ಆಕೃತಿ ಇವುಗಳ ಘನಫಲಮಾತ್ರ )

(೬) **ಜಮಾಖರ್ಚು:—** ಪ್ರಾರಂಭದ ಜಮಾಖರ್ಚು ಸಾಮಾನ್ಯ ಕಲ್ಪನೆಮಾತ್ರ )

ಸಾಲೆಯೊಳಗಿನ ಸ್ಟೆಶನರೀ ಸೋಸಾಯಟಿಯ ಲೆಕ್ಕವನ್ನು ಬಾಲಕರಿಂದ ಬರೆ ಯಿಸಬಹುದು.

---

## ಭೂಮಿತಿ

(೧) **ವರ್ತುಳಗಳು:—** ಕೋನದ ಕಲ್ಪನೆ ವರ್ತುಳವನ್ನು ವಿಭಾಗಿಸಿ ಅಂಶಗಳನ್ನು ತೋರಿಸುವದು. ಮತ್ತು ಅದನ್ನು ಹೋಕಾ ಯಂತ್ರದಂತೆ ಭಾಗ ಮಾಡುವದು.

(೨) **ಕ್ಷೇತ್ರ:—** ಕಾಟಕೋನ ಚೌಕೋನ ಮತ್ತು ತ್ರಿಕೋನ ಇವುಗಳ ಕ್ಷೇತ್ರ ಫಲ ತೆಗೆಯುವದು.

ಕಾ. ಚೌ. ದ ಕ್ಷೇತ್ರ=ತಳ×ಎತ್ತರ

ತ್ರಿ. ದ. ಕ್ಷೇತ್ರ=$\frac{1}{2}$ತಳ×ಎತ್ತರ

(೩) **ಘನಫಲ:—** ಯಾವದೊಂದು ಘನಾಕೃತಿಯನ್ನು ನೀರು ತುಂಬಿದ ಪಾತ್ರೆ ಯಲ್ಲಿ ಇಟ್ಟು ಹೊರಚಲ್ಲಿದ ನೀರಿನ ಅಳತೆಯನ್ನು ಮಾಡಿ ಆ ಘನಾಕೃತಿಯ ಘನಫಲ ತೆಗೆಯುವದು

ಸೂಚನೆ— (ಅ) ಪಾಟಿಯ ಮೇಲೆ ಲೆಕ್ಕಗಳನ್ನು ಮಾಡಿಸುವದಕ್ಕಿಂತ ಮೊದಲು ಬಾಯಿಲೆಕ್ಕಗಳನ್ನು ಸಾಗಿಸಬೇಕು. ಲೆಕ್ಕಗಳನ್ನು ತೀವ್ರವಾಗಿ ಮಾಡುವ ರೂಢಿಯುಂ ಟಾಗುವದಕ್ಕಾಗಿ ಬಾಯಿಯಿಂದ ಉದಾಹರಣೆಗಳನ್ನು ಮಾಡಿಸಿಕೊಳ್ಳಬಹುದು. ಅಡಗಿ ಉದಾಹರಣೆಗಳು ಮಾತ್ರ ಸುಲಭವಾವವೂ ನಿತ್ಯದ ವ್ಯವಹಾರಕ್ಕೆ ಉಪಯು ಕ್ತವಾದವೂ ಇರತಕ್ಕದ್ದು.

(ಬ) ಪ್ರತ್ಯಕ್ಷ ವಸ್ತುಗಳಿಗೆ ಸಂಬಂಧಿಸಿದ ಉದಾಹರಣೆಗಳನ್ನು ಹೇಳತಕ್ಕದ್ದು; ಮತ್ತು ಅವು ಹುಡುಗರ ಯೋಗ್ಯತೆಗೆ ತಕ್ಕವಿದ್ದು ಅವರ ಬಳಕೆಯೊಳಗಿನ ವಸ್ತು ಸಂಗತಿಗಳಿಗೆ ಸಂಬಂಧಿಸಿರಬೇಕು.

(ಕ) ಉಪ್ಪುದ್ದವಾದ ಹಾಗು ತೊಡಕುಳ್ಳ ಉದಾಹರಣೆಗಳನ್ನು ಹೇಳ ಬಾರದು.

---

## ದಕ್ಷಿಣ ಭಾಗದಬಗ್ಗೆ ಕೋಷ್ಟಕಗಳು

ಮುಗ್ಗಿಗಳು:—೨ರಿಂದ ೧೦ರ ವರೆಗೆ ಮತ್ತು ೧೨, ೧೫, ೧೬, ೨೦ ರ ಮುಗ್ಗಿಗಳು. ಅರ್ಧ ಮತ್ತು ಕಾಲುಗಳು ೨೦ ರ ವರೆಗೆ; ಮತ್ತು ೩೦, ೪೦, ೫೦, ೬೦, ೭೦, ೮೦. ೯೦, ೧೦೦ ಅರ್ಧ ಮತ್ತು ಕಾಲುಗಳು.

### ಹಣದ ಕೋಷ್ಟಕ

೩ ಪೈಗಳು=೧ ದುಡ್ಡು

೪ ದುಡ್ಡುಗಳು<br>ಅಥವಾ<br>೧೨ ಪೈಗಳು } =೧ ಆಣೆ

೪ ಆಣೆಗಳು<br>ಅಥವಾ<br>೧೬ ದುಡ್ಡುಗಳು } =೧ ಪಾವಲಿ

೨ ಪಾವಲಿಗಳು=೧ ಅರ್ಧರೂಪಾಯಿ

೨ ಅರ್ಧರೂಪಾಯಿಗಳು=೧ ರೂಪಾಯಿ

೧೬ ಆಣೆಗಳು=೧ ರೂಪಾಯಿ

### ತೂಕದ ಕೋಷ್ಟಕ

೫ ತೊಲೆಗಳು<br>೬ ತೊಲೆಗಳು* } =೧ ಪಾವಸೇರು

೨ ಪಾವಸೇರು=೧ ಅಚ್ಚೇರು

೨ ಅಚ್ಚೇರು = ೧ ಸೇರು

೬ ಸೇರು=೧ ಪಂಥೇರು

೨ ಪಂಥೇರು=೧ ಧಡೆ

೪ ಧಡೆ=೧ ಮಣ

೨೦ ಮಣ=೧ ಖಂಡಿ

### ಉದ್ದಳತೆಯ ಕೋಷ್ಟಕ

೧೨ ಇಂಚು=೧ ಫೂಟು

೩ ಫೂಟು=೧ ಯಾರ್ಡು

೧೭೬೦ ಯಾರ್ಡು=೧ ಮೈಲು

೨ ಮೈಲು=೧ ಹರದಾರಿ (ಸಾಮಾನ್ಯವಾಗಿ)

### ಘನ ಅಳತೆಯ ಕೋಷ್ಟಕ

೧೨×೧೨×೧೨ ಅಥವಾ<br>೧೭೨೮ ಘನ ಇಂಚುಗಳು } =೧ ಘನ ಫೂಟು

೧೦೦ ಘನಫೂಟು=೧ ಬ್ರಾಸು

### ಧಾನ್ಯದ ಅಳತೆಯ ಕೋಷ್ಟಕ

(ಕಾನಡಾಜಿಲ್ಲೆಯ ಫಟ್ಟದ ಕೆಳಗಿನ ತಾಲೂಕುಗಳಲ್ಲಿ)

೪ ಸೊಲಿಗೆ=೧ ಸಿದ್ದೆ

---

* ಉತ್ತರ ಕನ್ನಡ ಜಿಲ್ಲೆಯ ಫಟ್ಟದ ಮೇಲಿನ ತಾಲೂಕುಗಳಲ್ಲಿ

೬ ಸಿದ್ದೆ ಅಥವಾ ೪ ಮಾನೆ } =೧ ಕೊಳಗ

೧೬ ಅಥವಾ ೧೫ ಕೊಳಗ } =೧ ಮಾನಿಗೆ ( ಮುಂಡೆ )

೨೦ ಕೊಳಗ=೧ ಖಂಡಗ

೨೦ ಖಂಡಗ=೧ ಕುಂಭ

೪ ಹೇರು=೧ ಪಲ್ಲೆ

## ಕಾಲಮಾನದ ಕೋಷ್ಟಕ

೬೦ ಸೇಕಂಡು=೧ ಮಿನಿಟು

೬೦ ಮಿನಿಟು=೧ ತಾಸು

೨೪ ತಾಸು=೧ ದಿವಸ

೭ ದಿವಸ=೧ ವಾರ

೩೬೫ ದಿವಸ=೧ ವರ್ಷ

## ಜೌರಸ ಅಳತೆಯ ಕೋಷ್ಟಕ

೧೨×೧೨ ಅಥವಾ ೧೪೪ ಚೌರಸಇಂಚು } =೧ ಚೌರಸ ಫೂಟು

೩×೩ ಅಥವಾ ೯ ಚೌರಸಫೂಟ } =೧ ಚೌರಸ ಯಾರ್ಡು

೧೩೧ ಚೌರಸಯಾರ್ಡ=೧ ಗುಂಠೆ

೪೦ ಗುಂಠೆ=೧ ಎಕರೆ

೧+೧೬ ಗುಂಠೆ=೧ ಆಣೆ

## ಬೆಳ್ಳಿ ಬಂಗಾರಗಳ ತೂಕದ ಕೋಷ್ಟಕ

೮ ಗುಂಜಿ=೧ ಮಾಸಿ

೧೨ ಮಾಸಿ=೧ ತೊಲಿ

೨೪ ತೊಲಿ=೧ ಶೇರು

## ಧಾನ್ಯದ ಅಳತೆಯ ಕೋಷ್ಟಕ

( ಧಾರವಾಡ ಜಿಲ್ಲೆ )

೨ ಚಟಾಕು=೧ ಗಿರಪಾವು (ಗಿದ್ಯ) *

೨ ಗಿರಪಾವು=೧ ಕಾಲಪಾವು (ಅದ್ಯ) *

೨ ಕಾಲಪಾವು=೧ ಅರಪಾವು (ಸೊಲಿಗೆ) *

(ಸೇರು) *

೪ ಸೇರು=೧ ಚಿಟ್ಟಿ (ವಮ್ಮನ)

೧೬ ಚಿಟ್ಟಿ=೧ ಅಂಡಿಗೆ (ಚೀಲ)

೨ ಅಂಡಿಗೆ= ೧ ಹೇರು

೨೦ ಹೇರು=೧ ಖಂಡಿ

## ಧಾನ್ಯದ ಅಳತೆಯ ಕೋಷ್ಟಕ

( ಬೆಳಗಾವ ಜಿಲ್ಲೆ )

೨ ಕೊಳಿವೆ=೧ ಗಿರಪಾವು

೨ ಗಿರಪಾವು=೧ ಪಾವು (ಶೇರು)

೨ ಪಾವು=೧ ಪಡಿ

೨ ಪಡಿ=೧ ಸೊಲಿಗೆ

೧೬ ಸೊಲಿಗೆ=೧ ಅಂಡಿಗೆ

೨ ಅಂಡಿಗೆ=೧ ಹೇರು

೨೦ ಹೇರು=೧ ಖಂಡಿ

---

೧೬ ದಾಮು=೧ ಔಂಸ

೧೬ ಔಂಸ=೧ ಪೌಂಡ

೨೮ ಪೌಂಡ=೧ ಕ್ವಾರ್ಟರ

೪ ಕ್ವಾರ್ಟರ=೧ ಹಂಡ್ರಡ್‌ವೇಟ

೨೦ ಹಂಡ್ರಡ್‌ವೇಟ=೧ ಟನ್

* ಈ ಹೆಸರುಗಳು ವಿಜಾಪುರ ಜಿಲ್ಲೆಯೊಳಗಿನವು

# ಪ್ರಕಟನೆ. ೨

ನಂ ಎಸ್- ೬೨-(ಜಿ)- ೩೯-ಡಿ.

**ಪುಣೆ, ೨೬ನೇ ಅಗಸ್ಟ ೧೯೨೭.**

೧. ಗಂಡು ಹುಡುಗರ ಸಾಲೆಯಲ್ಲಿ ಕಲಿಯುತ್ತಿರುವ ಹೆಣ್ಣುಮಕ್ಕಳಿಗೆ, ಅವರ ಪಾಲಕರ ಇಚ್ಛೆಯಿದ್ದರೆ ಗಂಡು ಹುಡುಗರ ಮ್ಹಾರ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆಯು ದೊರೆಯುವದು. ಈ ಪರೀಕ್ಷೆಯಲ್ಲಿ ಪಾಸಾದ ಹುಡಿಗೆಯರು ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜನ್ನು ಸೇರಲಿಕ್ಕೆ ತಕ್ಕವರಾಗುವರು. ಈ ಪರೀಕ್ಷೆಗೆ ಕೂಡ್ರುವ ಉಮೇದವಾರರಿಗೆ ವಯಸ್ಸಿನ ನಿರ್ಬಂಧವಿಲ್ಲ

೨. ಮೇಲಿನ ಹುಕುಮಿನಿಂದ, ಇದೇ ಆಫೀಸಿನಿಂದ ಹೊರಟ ನಂ. ಎಸ್-೬೨-(ಜಿ)-೩೯-ಡಿ. ತಾ॥ ೧೧-೯-೧೯೨೬ನೇ ಹುಕುಮು ರದ್ದುಪಡಿಸಿರುತ್ತದೆ.

**ಸಹಿ. ಜೆ. ಎ. ಲಝುರಸ**

**ಡಾ. ಪ. ಇ. ರವರ ಬಗ್ಗೆ.**

---

# ಪ್ರಕಟನೆ ೩.

## ಹೆಣ್ಣುಮಕ್ಕಳ ಮ್ಹ. ಫಾ. ಪರೀಕ್ಷೆ

ದಕ್ಷಿಣಭಾಗ

## ಕನ್ನಡ ಉಮೇದವಾರರ ಬಗ್ಗೆ

ನಂ-೬೨-ಬಿ-೫೧

ಸನ್ ೧೯೨೮ ನೇ ಇಸವಿಯಲ್ಲಿ ಆಗತಕ್ಕ ಹೆಣ್ಣುಮಕ್ಕಳ ಮ್ಹ. ಫಾ. ಪರೀಕ್ಷೆಗ ಶಾಲಾಖಾತೆಯ ೬ನೇ ಪುಸ್ತಕದೊಳಗಿನ ಕೆಳಗೆ ಬರೆದ ಗದ್ಯ-ಪದ್ಯ ಪಾಠಗಳನ್ನು ನೇಮಿಸಿರುತ್ತದೆ.

(ಅ) ಗದ್ಯ

ಭಾಗ ೧ :— ೧, ೨, ೩, ೭, ೮, ೧೦, ೧೧, ೧೨, ೧೩, ೧೪, ೧೫, ೧೬, ೧೯, ೨೦, ೨೨, ೨೪, ೨೫, ೨೬, ೨೭, ೩೦, ೩೧, ೩೨, ೩೯, ೪೨, ಮತ್ತು ೪೪ನೇ ಪಾಠಗಳು (ಒಟ್ಟು ೨೬ ಪಾಠಗಳು)

ಭಾಗ ೨: — ೫೬, ೫೭, ೫೮, ೫೯, ಮತ್ತು ೬೦ನೇ ಪಾಠಗಳು ( ಒಟ್ಟು ೫ ಪಾಠಗಳು. )

ಭಾಗ ೩ :— ೬೭, ೬೮, ೬೯, ೭೦, ಮತ್ತು ೭೧ನೇ ಪಾಠಗಳು (ಒಟ್ಟು ೫ ಪಾಠಗಳು)

(ಬ) ಪದ್ಯ:— ೩೪, ೩೮, ೪೩, ೪೭, ೫೦, ಮತ್ತು ೫೪ನೇ ಪಾಠಗಳು. (ಒಟ್ಟು ೬ ಪಾಠಗಳು)

ಧಾರವಾಡ
೩ನೇ ಎಪ್ರಿಲ್ ೧೯೩೭.

H. A. Sadarangani,
ಆಕ್ಟಿಂಗ ಎ. ಇ. ವ ಭಾ.

---

## ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮವು

## ದಕ್ಷಿಣಭಾಗ

## ೧೯೩೭

ನಂ. ೬೨. ಬಿ. ೩೧೦೯. ತಾ॥ ೪–೮–೧೯೩೭

---

## ಕನ್ನಡ ಉಮೇದವಾರರು

## ಧಾರವಾಡ ಸೆಂಟರ

| ನಂ. | ಹೆಸರು. | ಗುಣಗಳು. |
|---|---|---|
| ೧ | ಗಂಗವ್ವಾ ಫಕ್ಕೀರಗೌಡಾ ಪಾಟೀಲ | ೪೦೧ |
| ೨ | ಪೌಲಿನಾ ಪ್ರಭಾಕರಪ್ಪಾ ಪೌಲ | ೪೦೧ |
| ೩ | ಮಥರ್ಾ ಮಿಚಾಲಪ್ಪಾ ಕೊಲ್ಹಾರ | ೩೮೭ |
| ೪ | ತಾರಾ ಜೊಹಾನ್ ಕುಶಾಲ | ೩೮೩ |
| ೫ | ಮೂಗವ್ವಾ ನಿಂಗಪ್ಪಾ ಕುರಿ | ೩೭೦ |
| ೬ | ಹನುಮಾಬಾಯಿ ವೆಂಕಟರಾವ ಚಿಗಳ್ಳಿ | ೩೬೯ |
| ೭ | ವೆಂಕೂಬಾಯಿ ಗೌರವ್ವಾ ವಿಜಾಪುರ | ೩೬೪ |
| ೮ | ರಂದವ್ವಾ ತಿಮ್ಮರಡ್ಡಿ ಮಂಟೂರ | ೩೫೯ |
| ೯ | ಕನಕವ್ವಾ ಹಾಲಪ್ಪಾ ಕನಕಪ್ಪನವರ | ೩೪೭ |
| ೧೦ | ರುಕ್ಮಿಣಿ ಶಿವರಾಮು ದೊಡ್ಡವಾಡ | ೩೪೨ |
| ೧೧ | ರುಕ್ಮಿಣಿ ಜೋತೆಪ್ಪಾ ಯಾದವ | ೩೩೪ |
| ೧೨ | ಅಂಬಾಬಾಯಿ ಧೋಂಡೀಬಾ ಚವ್ಹಾಣ | ೩೨೭ |
| ೧೩ | ಗಂಗವ್ವಾ ವೆಂಕಪ್ಪಾ ಸೋನಾರ | ೩೨೦ |

| | | |
|---|---|---|
| ೧೪ | ಮಲ್ಲವ್ವಾ ದೇವಪ್ಪಾ ಮಾಸೂರ | ೩೧೧ |
| ೧೫ | ಸುವರ್ಣಿ ಕಾಳಪ್ಪಾ ಬೋಗಾರ | ೩೦೪ |
| ೧೬ | ಬಸವ್ವಾ ಬಸನಗವಡಾ ಸುಣಗಾರ | ೩೦೬ |
| ೧೭ | ಭೂದೇವಿ ನಿಜಗುಣಾರ್ಯ ಹಿರೇಮಠ | ೨೯೬ |
| ೧೪ | ತಾಯವ್ವಾ ನಿಜಪ್ಪಾ ಹಲಕರಣಿ | ೨೭೯ |
| ೧೯ | ಗುರುಬಸವ್ವಾ ರಂಗನಗವಡಾ ಗೌಡಪ್ಪಗವಡರ | ೨೫೧ |

## ಗದಗ ಸೆಂಟರ

| | | |
|---|---|---|
| ೧ | ಸಿದ್ದವ್ವಾ ಬಸಪ್ಪಾ ಬಳ್ಳಾರಿ | ೩೭೫ |
| ೨ | ಕಮಲಾಬಾಯಿ ದೇವದಾನಪ್ಪಾ ಗುಂಡಿ | ೩೩೭ |
| ೩ | ಗಂಗವ್ವಾ ಕರಿಬಸಯ್ಯಾ ಪುರಾಣಿಕಮಠ | ೩೩೦ |
| ೪ | ಮನೋರಮಾ ಚಿದಾನಂದಪ್ಪಾ ಲದ್ವಾ | ೨೫ |
| ೫ | ಸಾವಿತ್ರೆವ್ವಾ ಸಿದ್ದಪ್ಪಾ ಕೊಪ್ಪದ | ೩೨೩ |
| ೬ | ಗುಣವಂತೆವ್ವಾ ಶ್ರೀನಿವಾಸಪ್ಪಾ ಅಂಗಡಿ | ೨೯೪ |
| ೭ | ಹಂಪವ್ವಾ ಕೊಟ್ರಪ್ಪಾ ಹುಬ್ಬಳ್ಳಿ | ೨೮೪ |

## ಬೆಳಗಾಂವ ಸೆಂಟರ

| | | |
|---|---|---|
| ೧ | ತಾಯವ್ವಾ ಶಿವರಾಯಿ ಅಂಕಲಕಟ್ಟಿ | ೨೯೪ |
| ೨ | ವೀರವ್ವಾ ಬಸಪ್ಪಾ ಯೆಲಿನಾಯಕರ | ೨೮೦ |
| ೩ | ನೇಮವ್ವಾ ಭೀಮಗವಡಾ ಯೆಲಿಗವಡರ | ೨೫೮ |

## ಕಾರವಾರ ಸೆಂಟರ

| | | |
|---|---|---|
| ೧ | ಮಹಾದೇವಿ ನಾಗಪ್ಪಾ | ೩೪೨ |
| ೨ | ಗಂಗಾಬಾಯಿ ಮಹಾದೇವ ಸಿರಸಿಕರ | ೨೬೦ |

# ಮರಾಠಿ ಉಮೇದವಾರರು

## ಧಾರವಾಡ ಸೆಂಟರ

| | | |
|---|---|---|
| ೧ | ನಳಿನಿ ಮುಕುಂದರಾವ ಭಾಂಡಾರಕರ | ೨೫೭ |

## ಕಾರವಾರ ಸೆಂಟರ

| | | |
|---|---|---|
| ೧ | ಸುಸೀಲಾ ಶಿವರಾವ ಸುಂಕಟಣಕರ | ೩೫೮ |

## ಬೆಳಗಾಂವ ಸೆಂಟರ

| | | |
|---|---|---|
| ೧ | ಗಂಗೂತಾಯಿ ಗಣಪತರಾವ ತಿನಯಿಕರ | ೧೩೩ |
| ೨ | ಗಂಗೂಬಾಯಿ ದತ್ತಾತ್ರಯ ಸಡೇಕರ | ೩೧೬ |

| | | |
|---|---|---|
| ೩ | ಗಂಗೂಬಾಯಿ ವಿಷ್ಣುಪಂತ ಜಾಂಬೋಟಕರ | ೩೦೬ |
| ೪ | ಗಂಗೂಬಾಯಿ ಪ್ರಲ್ಹಾದರಾವ ಬೆಳಗಾಂವಕರ | ೨೯೧ |
| ೫ | ಅಕ್ಕುತಾಯಿ ಕೃಷ್ಣರಾವ ಜೋಶಿ | ೨೭೧ |
| ೬ | ಸುಭದ್ರಾಬಾಯಿ ಆತ್ಮಾರಾಮ ಕದಮ್ | ೨೬೮ |
| ೭ | ಚಂಪಾಬಾಯಿ ಬಾಬಗವಡಾ ಪಾಟೀಲ | ೨೬೩ |
| ೮ | ಮನೂತಾಯಿ ನಾರಾಯಣಸ್ವಾಮಿ ಮುದ್ಲಿಯಾರ | ೨೬೦ |
| ೯ | ರಂಗೂತಾಯಿ ನಾರಾಯಣರಾವ ಕಿತ್ತೂರಕರ | ೨೫೧ |

**ಉರ್ದು ಉಮೇದವಾರರ**

| | | |
|---|---|---|
| ೧ | ಖುದಿಜಾಬಿ ಮೀರಸಾಹೇಬ ಮುಲ್ಲಾ | ೩೧೮ |


H. A. Sadarangani
ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

---

## ಪತ್ರಗಳ ಸಾರಾಂಶ

**ಹಿರೇಹೊನ್ನೀಹಳ್ಳಿ:**— (ತಾ॥ ಕಲಘಟಗಿ) —ಇಲ್ಲಿಯ ಕೊ. ಕ್ರೆ. ಸೊಸಾ ಯಿ ಸೆಕ್ರೆಟರಿಗಳಾದ ವಿ–ಎಲಿವಾಳ ಎಂಬವರು ತಿಳಿಸುವದೇನಂದರೆ:—ಈ ಊರ ಸಾಲೆಯಲ್ಲಿ ಶ್ರೀ. ಪಾಟೀಲ ಕುಲಕರ್ಣಿ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರೆದು ಪರಸ್ಥಳದ ವಿದ್ಯಾರ್ಥಿಗಳಿಗೆ ವಾರಗಳನ್ನುಕೊಟ್ಟು ವಿದ್ಯಾಭ್ಯಾಸಕ್ಕೆ ಸಹಾಯವಮಾಡಿದ ಸದ್ಗೃಹಸ್ಥರ ಅಭಿನಂದನ ಮಾಡಲ್ಪಟ್ಟಿತು. ಚ. ಫ. ಕಟ್ಟಿ ಇವರು ಇಲ್ಲಿಗೆ ಬಂದಾಗಿನಿಂದ ಸಾಲೆಯಲ್ಲಿ ಹುಡುಗರ ಸಂಖ್ಯೆಯು ೧೩೭ರ ವರೆಗೆ ಬೆಳೆದದೆ. ಮತ್ತು ಮುಲ್ಕೀಪರೀಕ್ಷೆಯ ಕ್ಲಾಸನ್ನಿಟ್ಟು ಪ್ರತಿವರ್ಷ ಮೂರುಮೂರರಂತೆ ಕಳೆದ ಎರಡು ವರ್ಷಗಳಿಂದ ಹುಡುಗರನ್ನು ವ್ಹ. ಫಾ. ಪರೀಕ್ಷೆಗೆ ಕಳಿಸಿರುವರು. ಹಾಗು ಅವರೆಲ್ಲರು ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು; ಎಲ್ಲ ಪ್ರಕಾರದ ಸಾಲೆಯ ಸುಸ್ಥಿತಿಯನ್ನು ನೋಡಿ ವೇ. ಮಡಿವಾಳಯ್ಯ ಸ್ವಾಮಿ ಉಗ್ಗಿನಕೇರಿ ಇವರು ಸಾಲೆಯ ಉಪಯೋಗಕ್ಕಾಗಿ ೫ ರೂ. ಗಳನ್ನು ಕೊಟ್ಟರು. ಹಾಗು ರಾಮಚಂದ್ರಪ್ಪಾ ಅರ್ಕಸಾಲಿ ಎಂಬವರು ತಮ್ಮ ವೊಮ್ಮಗನುಪಾಸಾದ ಆನಂದಕ್ಕಾಗಿ ಎಲ್ಲ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಿದರು.

**ಕೋಡಬಾಳ:**— (ತಾ॥ ಕರ್ಜಗಿ)—ಈ ಊರ ಸಾಲೆಯು ತೀರ ಹೀನಸ್ಥಿತಿಗೆ ಬಂದಿತ್ತು. ಆದರೆ ಮಿ. ರುದ್ರಯ್ಯಾ ಹಿರೇಮಠ ಎಂಬವರು ವರ್ಗವಾಗಿ ಬಂದಾಗಿನಿಂದ ಹುಡುಗರ ಸಂಖ್ಯೆಯು ಬೆಳೆದು ಸಾಲೆಯು ಊರ್ಜಿತಸ್ಥಿತಿಯನ್ನು ಹೊಂದಿದೆ. ಊರವರೆಲ್ಲರು ಕೂಡಿ ಸಾಲೆಯ ಉಪಯೋಗಕ್ಕಾಗಿ ಒಂದು ಗಡಿಯಾರ, ಒಂದು ಜಾಗಟೆ

| | | |
|---|---|---|
| ೩ | ಗಂಗೂಬಾಯಿ ವಿಷ್ಣುಪಂತ ಜಾಂಬೋಟಕರ | ೩೦೬ |
| ೪ | ಗಂಗೂಬಾಯಿ ಪ್ರಲ್ಹಾದರಾವ ಬೆಳಗಾಂವಕರ | ೩೯೧ |
| ೫ | ಅಕ್ಕುತಾಯಿ ಕೃಷ್ಣರಾವ ಜೋಶಿ | ೩೭೧ |
| ೬ | ಸುಭದ್ರಾಬಾಯಿ ಆತ್ಮಾರಾಮ ಕದಮ್ | ೩೬೮ |
| ೭ | ಚಂಪಾಬಾಯಿ ಬಾಬಗವಡಾ ಪಾಟೀಲ | ೩೬೩ |
| ೮ | ಮನೂತಾಯಿ ನಾರಾಯಣಸ್ವಾಮಿ ಮುದ್ಲಿಯೂರ | ೩೬೦ |
| ೯ | ರಂಗೂತಾಯಿ ನಾರಾಯಣರಾವ ಕಿತ್ತೂರಕರ | ೩೫೧ |


**ಉರ್ದು ಉಮೇದವಾರರು**


| | | |
|---|---|---|
| ೧ | ಖುದಿಜಾಬಿ ಮೀರಸಾಹೇಬ ಮುಲ್ಲಾ | ೩೧೮ |


H. A. Sadarangani
ಎಜ್ಯುಕೆಶನಲ್ ಇನಸ್ಪೆಕ್ಟರ ದ. ಭಾ.

---

## ಪತ್ರಗಳ ಸಾರಾಂಶ

**ಹಿರೇಹೊನ್ನೀಹಳ್ಳಿ:—** (ತಾ॥ ಕಲಘಟಗಿ) —ಇಲ್ಲಿಯ ಕೊ. ಕ್ರೆ. ಸೊಸಾ ಯಿಟಿ ಸೆಕ್ರೆಟರಿಗಳಾದ ಮಿ—ಎಲಿವಾಳ ಎಂಬವರು ತಿಳಿಸುವದೇನಂದರೆ:—ಈ ಊರ ಸಾಲೆಯಲ್ಲಿ ಶ್ರೀ. ಪಾಟೀಲ ಕುಲಕರ್ಣಿ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರೆದು ಪರಸ್ಥಳದ ವಿದ್ಯಾರ್ಥಿಗಳಿಗೆ ವಾರಗಳನ್ನುಕೊಟ್ಟು ವಿದ್ಯಾಭ್ಯಾಸಕ್ಕೆ ಸಹಾಯಮಾಡಿದ ಸದ್ಗೃಹಸ್ಥರ ಅಭಿನಂದನ ಮಾಡಲ್ಪಟ್ಟಿತು. ಚ. ಫ. ಕಟ್ಟಿ ಇವರು ಇಲ್ಲಿಗೆ ಬಂದಾಗಿನಿಂದ ಸಾಲೆಯಲ್ಲಿ ಹುಡುಗರ ಸಂಖ್ಯೆಯು ೧೩೭ರ ವರೆಗೆ ಬೆಳೆದದೆ. ಮತ್ತು ಮುಲ್ಕೀಪರೀಕ್ಷೆಯ ಕ್ಲಾಸನ್ನಿಟ್ಟು ಪ್ರತಿವರ್ಷ ಮೂರುಮೂರರಂತೆ ಕಳೆದ ಎರಡು ವರ್ಷಗಳಿಂದ ಹುಡುಗರನ್ನು ವ್ಹ. ಫಾ. ಪರೀಕ್ಷೆಗೆ ಕಳಿಸಿರುವರು. ಹಾಗು ಅವರೆಲ್ಲರು ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು, ಎಲ್ಲ ಪ್ರಕಾರದ ಸಾಲೆಯ ಸುಸ್ಥಿತಿಯನ್ನು ನೋಡಿ ವೇ. ಮಡಿವಾಳಯ್ಯ ಸ್ವಾಮಿ ಉಗ್ಗಿನಕೇರಿ ಇವರು ಸಾಲೆಯ ಉಪಯೋಗಕ್ಕಾಗಿ ೫ ರೂ. ಗಳನ್ನು ಕೊಟ್ಟರು. ಹಾಗು ರಾಮಚಂದ್ರಪ್ಪಾ ಅರ್ಕಸಾಲಿ ಎಂಬವರು ತಮ್ಮ ವೊಮ್ಮ ಗನುಪಾಸಾದ ಆನಂದಕ್ಕಾಗಿ ಎಲ್ಲ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಿದರು.

**ಕೋಡಬಾಳ:—** (ತಾ॥ ಕರ್ಜಗಿ)—ಈ ಊರ ಸಾಲೆಯು ತೀರ ಹೀನಸ್ಥಿತಿಗೆ ಬಂದಿತ್ತು. ಆದರೆ ಮಿ. ರುದ್ರಯ್ಯಾ ಹಿರೇಮಠ ಎಂಬವರು ವರ್ಗವಾಗಿ ಬಂದಾಗಿನಿಂದ ಹುಡುಗರ ಸಂಖ್ಯೆಯು ಬೆಳೆದು ಸಾಲೆಯು ಊರ್ಜಿತಸ್ಥಿತಿಯನ್ನು ಹೊಂದಿದೆ. ಊರವರೆಲ್ಲರು ಕೂಡಿ ಸಾಲೆಯ ಉಪಯೋಗಕ್ಕಾಗಿ ಒಂದು ಗಡಿಯೂರ, ಒಂದು ಜಾಗಟೆ

ಒಂದು ಮುಲಕಂಬ, ಒಂದು ಕಬ್ಬಿಣ ಸಳಿಯ ಗಾಲಿ ಇವುಗಳನ್ನು ತರಿಸಿಕೊಟ್ಟಿರುತ್ತೇವೆ ಎಂಬದಾಗಿ ಕಲವೀರಪ್ಪಾ ಕುಬಸದ ಇವರು ತಿಳಿಸುತ್ತಾರೆ.

**ವಿಜಾಪುರ**:— ಇಲ್ಲಿಯ ಪೋಷ್ಟ ಮಾಸ್ತರರಾದ ಮಿ. ಶಿ. ಬ. ಮುದ್ದೇಬಿಹಾಳ ಇವರು ಬರೆಯುವದೇನಂದರೆ— ಇಲ್ಲಿಯ ಜುಮ್ಮಾಮಶೀದಿಯ ಹತ್ತರಿರುವ ಬಾವಿಯಲ್ಲಿ ಒಬ್ಬ ಹೆಣ್ಣುಮಗಳು ಬಿದ್ದು ನುಳುಗುತ್ತಿದ್ದಳು ಆದರೆ ಉರ್ದು ೧ನೇ ನಂ॥ ಸಾಲೆಯ ಅಸಿ॥ ಮಾ। ರಾದ ಮಿ. ಅಹಮ್ಮದ ಸಾಹೇಬ ಸುಲ್ತೈಮಾನ ಎಂಬವರು ಅಕಸ್ಮಾತ್ತಾಗಿ ನೋಡಿ ಬಾವಿಯಲ್ಲಿ ಜಿಗಿದು ಆ ಹೆಣ್ಣುಮಗಳ ಪ್ರಾಣವನ್ನು ಉಳಿಸಿದರು, ಅಹಮ್ಮದ ಸಾಹೇಬ ಇವರು ಸ್ಕೌಟಶಿಕ್ಷಣವನ್ನು ಹೊಂದಿದವರಾದ್ದರಿಂದ ಇಂಥ ಸಾಹಸದ ಕೆಲಸವನ್ನು ಮಾಡಿ ಒಳ್ಳೇ ಮಾದರಿಯನ್ನು ಹಾಕಿಕೊಟ್ಟರೆಂದು ಹೇಳಬಹುದು. ಸ್ಕೌಟ ಶಿಕ್ಷಣ ಹೊಂದಿದವರೆಲ್ಲರೂ ಇದೇ ಪ್ರಕಾರ ಯೋಗ್ಯ ರೀತಿಯಿಂದ ತಮ್ಮ ಶಿಕ್ಷಣದ ಸಾರ್ಥಕ ಮಾಡಿಕೊಳ್ಳಬೇಕು.

**ಕಿತ್ತೂರ** (ಜಿ॥ ಬೆಳಗಾಂವ):—ಪು॥ ರಾ॥ ಸಿ. ಎಮ್ ಪಾಟೀಲ ಮು॥ ಅರ್ಲವಾಡ ಇವರು ಇಲ್ಲಿಯ ೨ನೇ ನಂ॥ ಶಾಲೆಯನ್ನು ನೋಡಿ ಸಂತೋಷಬಟ್ಟು ಸಾಲೆಯ ಉಪಯೋಗಕ್ಕಾಗಿ ಒಂದು ಜಾಂಗಟೆ ಹಾಗು ಶಬ್ದಕೋಶ ಇವುಗಳನ್ನು ಕೊಳ್ಳುವದಕ್ಕೋಸ್ಕರ ೧೦ ರೂಪಾಯಿಗಳನ್ನು ಕೊಟ್ಟರೆಂದು ಹೆ. ಮಾ. ಭೀ. ನಾ. ಕುಲಕರ್ಣಿ ಇವರು ತಿಳಿಸುತ್ತಾರೆ.

**ಕಬ್ಬೂರ** (ತಾ॥ ಕರ್ಜಗಿ):—ಮಿ. ವೇ. ದೇ. ಕುಲಕರ್ಣಿ ಎಂಬವರು ತಿಳಿಸುವದೇನಂದರೆ— ಈ ತಾಲೂಕಿನ ಮಾಮಲೇದಾರರಾದ ಮೆ॥ ಕಾಜಿಯವರು ಈ ಊರ ಸಾಲೆಯನ್ನು ನೋಡಿ ಬಹಳ ಆನಂದಬಟ್ಟು ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಿದನು. ಮತ್ತು ಶಿಕ್ಷಕರಿಗೆ ಶಿಕ್ಷಣದ ವಿಷಯದಲ್ಲಿ ಕೆಲವು ಉಪಯುಕ್ತ ಸೂಚನೆಗಳನ್ನು ಮಾಡಿದರು ಹಾಗು ಶರಾ ಪುಸ್ತಕದಲ್ಲಿ ಕೆಳಗೆ ಕೊಟ್ಟಂತೆ ತಮ್ಮ ಅಭಿಪ್ರಾಯವನ್ನು ಬರೆದಿರುವರು " ಹೆ. ಮಾ. ಮಿ. ಆರ್. ಡಿ. ಕುಲಕರ್ಣಿ ಇವರು ಹೆಚ್ಚು ಶ್ರಮಬಟ್ಟು ಕೆಲಸ ಮಾಡುತ್ತಿರುವದರಿಂದ ಸಾಲೆಯು ಊರ್ಜಿತ ಸ್ಥಿತಿಯಲ್ಲಿದೆ. ಪಂಚರೂ ಮಿ. ಬಿ. ಡಿ. ಕುಲಕರ್ಣಿ ಇವರೂ ಸಾಲೆಗೆ ಚೆನ್ನಾಗಿ ಸಹಾಯ ಮಾಡುತ್ತಿರುವರು ಹೆ. ಮಾ.ರು ವಿದ್ಯಾರ್ಥಿಗಳ ಸ್ಕೌರಿನ ಲೆಕ್ಕವನ್ನೂ ಪುಶ್ತರ ಫಂಡಿನ ಲೆಕ್ಕವನ್ನೂ ಮಾದರಿ ತೆಗೆದುಕೊಳ್ಳುವಂತೆ ಇಟ್ಟಿದ್ದನ್ನು ನೋಡಿ ಆನಂದವೆನಿಸುವದು"

**ಸಿಂದಿಗಿ** (ಜಿ॥ ವಿಜಾಪೂರ):—ಮೆ॥ ಚಂದಾವರಕರ ಕೃತ ಭೂಮಿತಿಯೊಳಗಿನ ೧ನೇ ಪ್ರಮೇಯದ ೨ನೇ ಅಭ್ಯಸನ ಹಾಗು ಮಿಶ್ರ ಅಭ್ಯಸನಗಳಲ್ಲಿಯ ೯ನೇ ಅಭ್ಯಸನ ಇವೆರಡನ್ನೂ ಯಾರಾದರೂ ವ್ಯವಸಾಯಬಂಧುಗಳು ಬಿಡಿಸಿ ಶಾಲಾಪತ್ರಿಕೆಯ ದ್ವಾರ ತಿಳಿಸಬೇಕೆಂದು ಅಸಿ॥ ಮಾಸ್ತರರಾದ ಮಡಿವಾಳಪ್ಪಾ ದುಂಡಪ್ಪಾ ಎಂಬವರು ಇಚ್ಛಿಸುತ್ತಾರೆ.

**ಕುಡಪಲಿ** (ತಾ॥ ಕೋಡ)ಃ—ಇಲ್ಲಿಯು ಒನೇ ಇಯತ್ತೈಯ ವಿದ್ಯಾರ್ಥಿಯಾದ ಶ. ಬ. ಕರೀಗವಡರ ಎಂಬವನು ತಿಳಿಸುವದೇನೆಂದರೆ ನಮ್ಮ ಶಾಲೆಯ ಕೆಲವು ವಿದ್ಯಾರ್ಥಿಗಳೂ ಗುರುಗಳೂ ಕೂಡಿ ಮದಗಮಾಸೂರ ಕೆರೆಯನ್ನು ನೋಡಲಿಕ್ಕೆ ಹೋಗಿದ್ದೆವು. ನಾವೆಲ್ಲರೂ ಮೊದಲು ಕಡೂರ ಗುಡ್ಡದ ಕಣಿವೆಯಲ್ಲಿರುವ ಸಿದ್ಧೇಶ್ವರ ದೇವಾಲಯವನ್ನೂ ಈ ಗುಡ್ಡದ ಅತ್ಯುನ್ನತ ಪ್ರದೇಶದಲ್ಲಿದ್ದ ಅಂತರಗಂಗೆಯೆಂಬ ಜಲಾಶಯವನ್ನೂ ನೋಡಿ ಬಳಿಕ ಮೇದೂರಿಗೆ ಹೋಗಿ ವಸ್ತೀಮಾಡಿದೆವು. ಅಲ್ಲಿಯ ಪ್ರಮುಖರಾದ ಹನುಮಂತಗೌಡರು ನಮ್ಮೆಲ್ಲರಿಗೆ ಪ್ರೇಮಪೂರ್ವಕವಾಗಿ ಆತಿಥ್ಯವನ್ನು ಮಾಡಿದರು. ಮರುದಿನ ಬೆಳಿಗ್ಗೆ ಕಣಿವೆಯ ದಾರಿಯಿಂದ ಮಾಸೂರ ಕೆರೆಗೆ ಹೋದೆವು. ಈ ಕಡೂರ ಗುಡ್ಡದಲ್ಲಿ ಒಂದು ವಿಸ್ತಾರವಾದ ಕೋಟೆಯುದೆ ಅವರಲ್ಲಿ ಒಂದು ಭವ್ಯವಾದ ಮಸೀದೆಯು ಈಗಲೂ ಭದ್ರವಾಗಿದೆ. ಈ ಗುಡ್ಡದಲ್ಲಿ ಹಿಂಸ್ರ ಪ್ರಾಣಿಗಳಿರುವಂತೆ ಕಂಡುಬಂತು. ಮತ್ತು ಇಲ್ಲಿ ೧೬ ತುಂಬಿನ ಒಂದು ದೊಡ್ಡ ಒಡ್ಡು ಇರುವದು. ಅದನ್ನು ಪ್ಲಡ್‌ಲೀವ್ಹಲ್ ಎಂಬವನು ೧೮೮೦ರಲ್ಲಿ ಸಿದ್ಧಪಡಿಸಿದನೆಂದು ತಿಳಿಯುವದು. ಮದಗ ಸರೋವರದ ನೀರು ಇಲ್ಲಿಂದ ಸೋಸಿ ಕಾಲುವೆಯ ಮಾರ್ಗವಾಗಿ ಮುಂದೆ ಸಾಗುವದು. ಈ ಕೆರೆಯ ಸುತ್ತಲಿನ ೮—೧೦ ಹಳ್ಳಿಗಳ ಜನರೂ ಮೈಸೂರ ಸೀಮೆಯ ೮—೧೦ ಹಳ್ಳಿಗಳ ಜನರೂ ಈ ಕಾಲುವೆಗಳಿಂದಲೇ ಬೆಳೆಗಳನ್ನು ತಕ್ಕೊಳ್ಳುವರು. ಈ ಕೆರೆಯನ್ನು ವಿಜಯನಗರದ ಅರಸರಲ್ಲೊಬ್ಬನು ಕಟ್ಟಿಸಿದನೆಂದು ಉಲ್ಲೇಖವಿದೆ. ಕೆರೆಯ ಕ್ಷೇತ್ರವು ಅಜಮಾಸು ೩—೪ ಮೈಲು ಇರುವದು. ಕುಮದ್ವತೀ ನದಿಯೂ ಬೇರೆ ಎಷ್ಟೋ ಹಳ್ಳಗಳೂ ಇದಕ್ಕೆ ಬಂದು ಕೂಡುವವು. ನಾವೆಲ್ಲರೂ ಕೆರೆಯಲ್ಲಿ ಸ್ನಾನಮಾಡಿ ಉಪಹಾರ ತೀರಿಸಿಕೊಂಡು ನದಿಗೆ ಕಟ್ಟಿದ ಒಂದೇ ಮೊಳ ಅಗಲಾದ ಪೂಲಿನ ಮೇಲೆ ಹಾಯ್ದು ಊರಿಗೆ ಬಂದೆವು.

**ಜಾನಾಪೂರ ಗಂಗಾಪೂರ** (ತಾ॥ ನವಲಗುಂದ):—ಇಲ್ಲಿಯಹೆ. ಮಾಸ್ತರರಾದ ಲ. ಹ. ಉಗಲಾಟ ಎಂಬವರು ಕೆಳಗೆ ಬರೆದ ಒಗಟನ್ನು ಯಾರಾದರೂ ಬಿಡಿಸಬೇಕೆಂದು ತಿಳಿಸುತ್ತಾರೆ.

ಆರಡಿಯ ವಾಹನನ ವಾಹನವ
ದಾರಿಯೊಳ್ ನಾತರುತಿರ್ದೆ ।
ಮೂರಪಿತ ಪತ್ನಿಪಿತ ಬಂದು ನೂಕಿಸಲು ॥
ಸೂರ್ಯಸುತ ಭೂಮಿಗೆ ಹೊಂದಲು ।
ಮಹಾಕ್ಲೇಶವಾಯ್ತೆಂದು ।
ನದಿರಮಣಾರಿಪಿತ ಭಂಗವಾದನು ಎಂದು ಪೇಳ್ದಳು ॥

**ಟೀಪು**:—ಹೊಂದಿಕೆಯ ಸಲುವಾಗಿ ಕೊನೆಯಲ್ಲಿ ಗೆರೆಯಿಂದ ಗುರ್ತಿಸಿದೆಯೇ ಹೊರತು ಪದ್ಯವೆಂದು ತಿಳಿಯಲಾಗದು.

**ಆಲದಗೇರಿ** (ತಾ॥ ಕೋಡ):—ಈ ಊರ ಸಾಲೆಯಲ್ಲಿ ಗಜಾನನನ ಉತ್ಸವ ನಿಮಿತ್ತ ಸಭೆಯು ನೆರೆದಿತ್ತು. ಆ ಕಾಲಕ್ಕೆ ವಿದ್ಯಾರ್ಥಿಗಳು ಸ್ಯಮಂತಕೋಪಾಖ್ಯಾ ನಾಟಕವನ್ನು ಎಲ್ಲರಿಗೂ ಆನಂದವಾಗುವಂತೆ ಮಾಡಿ ತೋರಿಸಿದರು. ಮತ್ತು ಹೆ ಮಾ. ಬಿ. ಖ. ನಾಡಿಗೇರ ಇವರು 'ಶಿಕ್ಷಣದ ಪ್ರಗತಿಯಾಗಬೇಕಾದರೆ ಜನಸಹಾಯವ ಅವಶ್ಯವಾದದ್ದು' ಎಂಬ ಬಗ್ಗೆ ಭಾಷಣ ಮಾಡಿದರು. ಕೂಡಲೆ ಸಭೆಯಲ್ಲಿಯೆ ೧೧ ರೂ. ವರ್ಗಣೀ ವಸೂಲಾಯಿತು. ನಾಡಿಗೇರ ಇವರು ಬಂದಾಗಿನಿಂದ ಸಾಲೆಯು ಊರ್ಜಿತಸ್ಥಿತಿಯಲ್ಲಿದೆ ಎಂಬದಾಗಿ ಮಹದೇವಪ್ಪ ಕಜ್ಜರಿ ಮತ್ತು ಅಬ್ದುಲಸಾಹೇ ಅತ್ತರ್ ಎಂಬವರು ಬರೆಯುತ್ತಾರೆ.

**ಮಾರಣಬಸರಿ** ( ತಾ॥ ರೋಣ ):—ಈ ಊರ ಸಾಲೆಯಲ್ಲಿ ವಾಡಿಕೆಯಂ ಈ ವರ್ಷವಾದರೂ ಗಜಾನನೋತ್ಸವವು ಮಾಡಲ್ಪಟ್ಟಿತು. ಹುಲ್ಲನುನೆ .ಮಾಸ್ತರರ ಕೀರ್ತನವನ್ನು ಮಾಡಿದರು. ಹೆ. ಮಾ. ದ. ಶ್ರೀ. ಕುಲಕರ್ಣಿ ಇವರ ಸಮಯೊ ಚಿತ ಭಾಷಣವಾಯಿತು ಎಂಬದಾಗಿ ಓರ್ವ ಪ್ರೇಕ್ಷಕರು ತಿಳಿಸುತ್ತಾರೆ.

---

## ಲೇಖಕರಿಗೆ ಸೂಚನೆ.

ಕೆಳಗೆ ಬರೆದ ಲೇಖಗಳು ನಮ್ಮ ಕಡೆಗೆ ಬಂದವೆ. ಸ್ಥಳದ ಅನುಕೂಲವಾದಂ ಅವುಗಳನ್ನು ಪ್ರಸಿದ್ಧ ಮಾಡುವೆವು.

೧. ಚಿಕ್ಕಮಕ್ಕಳಿಗೆ ಹೇಳುವ ಕಥೆಗಳು. ೨. ಆಕ್ಷೇಪಣಿರಸನ. ೩. ಪ್ರಾ ಶಿ. ರ ಪಗಾರ ಗ್ರಹಣ. ೪. ಈಶಸ್ತವನ (ಕವಿತೆ). ೫. ಸ್ತ್ರೀ ಶಿಕ್ಷಣ. ೬. ಒತ್ತ ಕ್ಷರಗಳನ್ನು ಕಲಿಸುವಕ್ರಮ. ೭. ಬೌದ್ಧ ಧರ್ಮದ ಸಂಕ್ಷಿಪ್ತ ಇತಿಹಾಸ. ೮, ಆದ ರ್ಶಭೂತ ಶಿಕ್ಷಕರು. ೯. ಜಂತುಹುಳಗಳು. ೧೦. ಬಿದರಬೆಟ್ಟ. ೧೧. ಸೀತ ಸ್ವಯಂವರ (ಕವಿತೆ). ೧೨. ಮಾತೆಯ ಪ್ರೇಮ. ೧೩. ಶಿಕ್ಷಣ ಧರ್ಮರಹಸ್ಯ ೧೪. ಸತ್ಪುರುಷರ ನೀತಿ ಕಥೆಗಳು. ೧೫. ಬುದ್ಧಕಾಲೀನ ವಿಶ್ವವಿದ್ಯಾಲಯ.

ಸಂ. ಶಿ. ಪ.

ಕನ್ನಡ

# ಶಾಲಾ ಪತ್ರಿಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

| ಸಂಪುಟ ೬೪ | ನವಂಬರ, ದಿಶಂಬರ ೧೯೨೭ | ಸಂ. ೮, ೯ |
|---|---|---|

## ಸ್ಫುಟವಿಚಾರಗಳು

### ೧. ಸಿವ್ಹಾದ ಪ್ರಾಥಮಿಕ ಶಾಲೆಗಳ ಮೆಡಿಕಲ ಇನಸ್ಪೆಕ್ಶನ್ನ

ಸಿವ್ಹಾದ ಪ್ರಾ. ಶಾ. ಗಳಲ್ಲಿ ಕಲಿಯುತ್ತಿರುವ ಬಾಲಕರ ಮೆಡಿಕಲ ಇನಸ್ಪೆಕ್ಶನ್ನದ ಪ್ರಯೋಗವನ್ನು ಮೇಜರ ವೆಬ್ಬ ಎಂಬ ಹೆಲ್ಥ ಆಫೀಸರರು ೧೯೨೩ನೇ ಇಸವಿಯ ಸಪ್ಟಂಬರ ತಿಂಗಳಲ್ಲಿ ಪ್ರಾರಂಭಿಸಿದರು. ಈ ಪದ್ಧತಿಯು ಹಿಂದುಸ್ಥಾನದಲ್ಲಿ ಬೇರೆ ಕಡೆಗೆ ಅಮಲಿನಲ್ಲಿ ಇಲ್ಲದ್ದರಿಂದ ಮಹತ್ವದ್ದಾಗಿದೆ. ಜಗತ್ತಿನ ಬೇರೆ ರಾಷ್ಟ್ರಗಳಲ್ಲಿ ಪ್ರಚಲಿತವಾದ ಪದ್ಧತಿಯ ಮೇರೆಗೆ ಸಿವ್ಹಾದಲ್ಲಿಯಾದರೂ ಈ ಪದ್ಧತಿಯಲ್ಲಿ ಸವಾವೇಶವಾದ ಸಂಗತಿಗಳು ಯಾವವೆಂದರೆ:— (೧) ಪ್ರತಿಯೊಬ್ಬ ಬಾಲಕನ ಆರೋಗ್ಯ ಪರೀಕ್ಷೆಯನ್ನು ೨ ತಿಂಗಳಿಗೊಮ್ಮೆ ಮಾಡಿ ಏನಾದರೂ ರೋಗವು ಆಗುವಂತಿದ್ದರೆ ಅದನ್ನು ಪ್ರತಿಬಂಧಿಸುವದು ಮತ್ತು ರೋಗವು ಆಗಿದ್ದರೆ ತಕ್ಕ ಉಪಚಾರ ಮಾಡಿ ಪ್ರತಿಹಾರಮಾಡುವದು. (೨) ರೋಗದಿಂದ ಬಳಲುತ್ತಿರುವ ಬಾಲಕರಿಗೆ ನಿಶ್ಚಿತವಾದ ಉಪಚಾರ ಮಾಡುವದು. (೩) ಮೇಲಿನ ಅನುಭವದಿಂದ ರಿಪೋರ್ಟನ್ನು ಕಾಲ ಕಾಲಕ್ಕೆ ಬರೆಯುವದು. ಮತ್ತು ಅವುಗಳನ್ನು ಒಟ್ಟುಗೂಡಿಸಿ ವಾರ್ಷಿಕ ರಿಪೋರ್ಟನ್ನು ಸಿದ್ಧಪಡಿಸುವದು. (೪) ಶಾಲೆಯ ಮನೆಯನ್ನೂ ಸುತ್ತಲಿನ ಸ್ಥಳವನ್ನೂ ಪ್ರತಿ ತಿಂಗಳು ತಪಾಸುಮಾಡಿ ರಿಪೋರ್ಟು ಬರೆಯುವದು ಮತ್ತು ಅವುಗಳನ್ನು ಒಟ್ಟುಗೂಡಿಸಿ ವಾರ್ಷಿಕ ರಿಪೋರ್ಟ ಸಿದ್ಧಪಡಿಸುವದು.

೧೯೨೩-೨೪ರಲ್ಲಿ ೭೫೧ ಮಂದಿ ಪ್ರಾ. ಶಾ. ಗಳ ಬಾಲಕರನ್ನು ತಪಾಸು ಮಾಡಲು ಅವರಲ್ಲಿ ನೂರಕ್ಕೆ ೬೭ ಮಂದಿಗೆ ಉಪಚಾರವು ಅವಶ್ಯವೆಂದು ಕಂಡು ಬಂದಿತು. ಆದರೆ ೧೯೨೪ನೇ ಇಸವಿಯ ಕೊನೆಗೆ ಉಪಚಾರ ಹೊಂದತಕ್ಕವರ ಸಂಖ್ಯೆಯು ಕಡಿಮೆಯಾಗಿ ನೂರಕ್ಕೆ ೫೫.೦೫ ಆಯಿತು. ಮುಂದೆ ಇಂಗ್ಲಿಷ ಶಾಲೆಗಳಲ್ಲಿ ಕಲಿಯತಕ್ಕ ವಿದ್ಯಾರ್ಥಿಗಳನ್ನೂ ಪರೀಕ್ಷಿಸಬೇಕೆಂದು ಗೊತ್ತುಮಾಡಿದ್ದರಿಂದ ೧೯೨೫ನೇ ಇಸವಿಯ ಪ್ರಾರಂಭದಲ್ಲಿ ಎಲ್ಲ ವಿದ್ಯಾರ್ಥಿಗಳನ್ನು ಪರೀಕ್ಷಿಸಲು ನೂರಕ್ಕೆ ೮೧ ಜನರಿಗೆ ಉಪಚಾರವು ಅವಶ್ಯವೆಂದು ಗೊತ್ತಾಯಿತು. ಆದರೆ ಅದೇ ವರ್ಷದ ಕೊನೆಗೆ ಈ ಸಂಖ್ಯೆಯು ಕಡಿಮೆಯಾಗಿ ನೂರಕ್ಕೆ ೩೦ ಆಯಿತು. ೧೯೨೬ನೇ ಇಸವಿಯ ಪ್ರಾರಂಭದಲ್ಲಿ ನೋಡಲು ಬಾಲಕರಲ್ಲಿ ನೂರಕ್ಕೆ ೪೩ ಮಂದಿಗೆ ಮತ್ತು ಬಾಲಿಕೆಯರಲ್ಲಿ ೭೫ ಜನರಿಗೆ ಉಪಚಾರವು ಅವಶ್ಯವೆಂದು ಕಂಡು ಬಂತು. ಮತ್ತು ಒಟ್ಟು ವಿದ್ಯಾರ್ಥಿಗಳಲ್ಲಿ ನೂರಕ್ಕೆ ೪೫ ಜನರ ಸ್ವಚ್ಛತೆ ಮತ್ತು ಆರೋಗ್ಯದ ವಿಷಯಕ್ಕೆ ಹೆಚ್ಚು ಲಕ್ಷ ಕೊಡಬೇಕೆಂದು ಶಿಕ್ಷಕ ಶಿಕ್ಷಕಿಯರಿಗೆ ಹೇಳಬೇಕಾಯಿತು. ಆದರೆ ಅದೇ ವರ್ಷದ ಕೊನೆಗೆ ಈ ಸಂಖ್ಯೆಯು ಕಡಿಮೆಯಾಗಿ ಬಾಲಕರಲ್ಲಿ ನೂರಕ್ಕೆ ೧೫ ಜನರಿಗೆ, ಬಾಲಿಕೆಯರಲ್ಲಿ ನೂರಕ್ಕೆ ೪೩.೨ ಜನರಿಗೆ ಉಪಚಾರವು ಅವಶ್ಯವೆಂದು ತಿಳಿಯಿತು. ಸ್ವಚ್ಛತೆಯ ವಿಷಯಕ್ಕೆ ಬಾಲಕರಲ್ಲಿ ನೂರಕ್ಕೆ ೨೧ ಮಂದಿಗೆ ಬಾಲಿಕೆಯರಲ್ಲಿ ೨೦ ಜನರಿಗೆ ಹೆಚ್ಚು ಲಕ್ಷ ಪೂರೈಸಬೇಕೆಂದು ಶಿಕ್ಷಕರಿಗೆ ಹೇಳಬೇಕಾಯಿತು. ೧೯೨೭ನೇ ಇಸವಿಯ ಪ್ರಾರಂಭಕ್ಕೆ ಬಾಲಕರಲ್ಲಿ ೩೯-೬ ಜನರಿಗೆ, ಬಾಲಿಕೆಯರಲ್ಲಿ ೬೩ ಜನರಿಗೆ ಉಪಚಾರವು ಅವಶ್ಯವೆಂದು ಕಂಡುಬಂತು. ಮತ್ತು ಸ್ವಚ್ಛತೆಯ ವಿಷಯದಲ್ಲಿ ನೂರಕ್ಕೆ ೪೪.೭ ಹುಡುಗರ ಕಡೆಗೆ ಮತ್ತು ೩೭-೩ ಹುಡಿಗೆಯರಿಗೆ ಶಿಕ್ಷಕರು ಲಕ್ಷಕೊಡಬೇಕೆಂದು ಹೇಳಲಾಯಿತು. ೧೯೨೫-೨೬ನೇ ಸಾಲಿನಲ್ಲಿ ಸಿಮ್ಲಾದೊಳಗಿನ ಸಾಲೆಗಳೊಳಗಿನ ಹೆಣ್ಣು ಮತ್ತು ಗಂಡುಮಕ್ಕಳ ಸರಾಸರಿ ಎತ್ತರ, ತೂಕ ಮತ್ತು ಎದೆಯ ಅಳತೆಗಳನ್ನು ಗೊತ್ತುಮಾಡಿತು. ಸದ್ಯಕ್ಕೆ ಸಿಮ್ಲಾದೊಳಗಿನ ೨೭ ಸಾಲೆಗಳೊಳಗಿನ ವಿದ್ಯಾರ್ಥಿಗಳ ಶಾರೀರಕ ಸ್ಥಿತಿಯು ಚೆನ್ನಾಗಿರುವದಾಗಿಯೂ ಅವರ ಮೇಲೆ ಹೇಳಿದ ಅಳತೆಗಳೂ ತೂಕವೂ ಸಮಾಧಾನಕರವಾಗಿ ಇರುವವೆಂದು ಗೊತ್ತಾಗಿದೆ.

ಮಧ್ಯಾಹ್ನದಲ್ಲಿ ಹುಡುಗರಿಗೆ ಊಟದ ವ್ಯವಸ್ಥೆ ಮಾಡುವದು, ಎಲ್ಲ ಹುಡುಗರಿಗೆ ತಕ್ಕಂಥ ಆಟಗಳನ್ನು ಆಡಿಸುವದು ಮುಂತಾದ ವ್ಯಾಯಾಮದ ವ್ಯವಸ್ಥೆ ಮಾಡುವದು, ಮತ್ತು ಅವರ ಆರೋಗ್ಯದ ಸಂಬಂಧದಿಂದ ಮೇಲಿಂದ ಮೇಲೆ ತಪ್ಪದೆ ತಪಾಸುಮಾಡುವದು ಮುಂತಾದವುಗಳಿಂದ ಈ ರೀತಿಯಾಗಿ ಹುಡುಗರ ಆರೋಗ್ಯವು ಸುಧಾರಿಸಲಿಕ್ಕೆ ಅನುಕೂಲವಾಗಿರುವದು.

ತೀರ ಬಡವರಾದ ಜನರು ತಮ್ಮ ಮಕ್ಕಳಿಗೆ ಚಾಳೀಸುಗಳನ್ನು ಕೊಡುವದಕ್ಕೆ ಸಾಧ್ಯವಿಲ್ಲದಿರುವದರಿಂದ ಸಿಮ್ಲಾದ ಮ್ಯುನಿಸಿಪಾಲಿಟಿಯವರು ಅಂಥವರ ಮಕ್ಕಳಿಗೆ

ಪ್ರಕ್ಯಟೆಯಾಗಿ ಚಾಳೀಸುಗಳನ್ನು ಕೊಡಿಸುವರು. ೧೯೨೩ರಲ್ಲಿ ನೂರರಲ್ಲಿ ೪. ೧ ವಿದ್ಯಾರ್ಥಿಗಳಿಗೆ ದೃಷ್ಟಿದೋಷವಿರುವದು ಕಂಡು ಬಂದಿತು. ಅಂಥವರಿಗೆಲ್ಲಾ ಚಾಳೀಸುಗಳು ಕೊಡಲ್ಪಟ್ಟವು. ೧೯೨೬ರಲ್ಲಿ ನೂರರಲ್ಲಿ ೧.೫ ರಂತೆ ವಿದ್ಯಾರ್ಥಿಗಳಿಗೆ ದೃಷ್ಟಿದೋಷವಿರುವದೆಂದು ತಿಳಿದು ಬಂದಲು ಅವರಿಗೆ ತಕ್ಕ ಉಪಚಾರಗಳು ಮಾಡಲ್ಪಟ್ಟವು. ೧೯೨೭ ರಲ್ಲಿ ನೂರರಲ್ಲಿ ಒಬ್ಬನಿಗೆ ಮಾತ್ರ ಕಣ್ಣಿನಲ್ಲಿ ದೋಷವಿರುವದೆಂದು ಗೊತ್ತಾಯಿತು. ಮತ್ತು ಅಂಥವರಿಗೆ ಚಾಳೀಸುಗಳು ಕೊಡಲ್ಪಟ್ಟವು. ವ್ಯವಸ್ಥಿತವಾದ ಡಾಕ್ಟರ ತಪಾಸಣೆಯು ಅಮಲಿನಲ್ಲಿ ಬಂದಂದಿನಿಂದ ಬಾಲಕರ ಸ್ವಚ್ಛತೆಯ ವಿಷಯದಲ್ಲಿ ಒಡೆದು ಕಾಣುವಂಥ ಸುಧಾರಣೆಯಾಗಿರುವದು. ಇಲ್ಲಿ ಬಾಲಕರ ಆರೋಗ್ಯರಕ್ಷಣೆಯ ಸಂಸ್ಥೆಯೂ ಸಾಲೆಗಳೊಳಗಿನ ಬಾಲಕರ ಆರೋಗ್ಯ ತಪಾಸಣೆಯ ಕೆಲಸಗಾರರೂ ಪರಸ್ಪರ ಸಹಕಾರಿತೆಯಿಂದ ಕೆಲಸಮಾಡುತ್ತಿರುವರು. ಚಿಕ್ಕಮಕ್ಕಳು ಹುಟ್ಟಿದಂದಿನಿಂದ ಅವರ ಆರೋಗ್ಯ ವಿಷಯದ ಮಾಹಿತಿಯುಳ್ಳ ಕಾರ್ಡುಗಳನ್ನು ಡಾಕ್ಟರಿಣಿಯರು ತುಂಬಿ ಆ ಬಾಲಕರು ಸಾಲೆಗೆ ಹೋಗಹತ್ತಿದ ಕೂಡಲೆ ಶಾಲೆಯನ್ನು ತಪಾಸು ಮಾಡುವ ಡಾಕ್ಟರರ ಕಡೆಗೆ ಕಳುಹಿಸಿ ಕೊಡುವರು. ಇದರಿಂದ ಸಮ್ಮಾದೊಳಗಿರುವ ೨೭ ಸಾಲೆಗಳಲ್ಲಿ ಯಾವದೇ ಒಂದು ಸಾಲೆಗೆ ಹೋಗುವ ಬಾಲಕರ ಹುಟ್ಟಿದಂದಿನಿಂದ ಈ ವರೆಗಿನ ಆರೋಗ್ಯವಿಷಯಕ ಮಾಹಿತಿಯು ಆ ಡಾಕ್ಟರರಿಗೆ ದೊರೆಯುವದು. ಹೀಗೆ ವ್ಯವಸ್ಥಿತ ರೀತಿಯಿಂದ ಬಾಲಕರ ಆರೋಗ್ಯದ ತಪಾಸಣೆ ಮಾಡುವದರಿಂದ ಇಡೀ ಸಮಾಜದ ಆರೋಗ್ಯವರ್ಧನಕ್ಕೆ ಕಾರಣವಾಗಿರುವದು. ರೋಗಗಳನ್ನು ಕಂಡು ಹಿಡಿದು ಔಷಧೋಪಚಾರಗಳಿಂದ ಅವುಗಳ ನಿವಾರಣೆ ಮಾಡುವದಿಷ್ಟೇ ಇದರ ಉದ್ದೇಶವಲ್ಲ. ಆರೋಗ್ಯವಿಷಯದ ಮಹತ್ವದ ಜ್ಞಾನವನ್ನು ಬೆಳಿಸುವದೂ ಜನರಲ್ಲಿ ಅದನ್ನು ಹಬ್ಬಿಸುವದೂ ಮುಖ್ಯ ಉದ್ದೇಶಗಳಾಗಿವೆ. ಸಾಲೆಗಳಲ್ಲಿ ಈ ತರದ ತಪಾಸಣೆ ಮುಂತಾದವುಗಳನ್ನು ಮಾಡಿ ಆರೋಗ್ಯರಕ್ಷಣೆಯ ಮಾರ್ಗವನ್ನು ಗೊತ್ತುಮಾಡಿಕೊಡುವದರಿಂದ ಜನರಲ್ಲಿ ಅದರ ಪ್ರಸಾರವು ಹೆಚ್ಚಾಗಲಿಕ್ಕೆ ಕಾರಣವಾಗುವದು. ಸಮ್ಮಾದೊಳಗಿನ ಸಾಲೆಗಳ ವಿದ್ಯಾರ್ಥಿಗಳ ತಪಾಸಣೆ ಮುಂತಾದವುಗಳ ಸಂಗಡಲೇ ಜನರೊಳಗೆ ಆರೋಗ್ಯರಕ್ಷಣೆಯ ಸಂಬಂಧದ ಜ್ಞಾನಪ್ರಸಾರಣೆಯ ಕಾರ್ಯವೂ ನಿರವೇರಿಸಲ್ಪಡುತ್ತಿರುವದು. ೧೯೨೩ನೇ ಇಸ್ವಿ ಸಪ್ಟಂಬರ ತಿಂಗಳಲ್ಲಿ ಈ ಸಂಸ್ಥೆಯು ಕೆಲಸವನ್ನು ಆರಂಭಿಸಿದಂದಿನಿಂದ ನಮ್ಮ ಕಲ್ಪನೆಗಿಂತಲೂ ಹೆಚ್ಚಾಗಿ ಅದರಿಂದ ಲಾಭವಾದದ್ದು ಕಂಡುಬಂದಿರುವದು.

## ೨. ವಾಚನಾಲಯಕ್ಕೆ ೧ ಲಕ್ಷ ರೂ. ಗಳ ದಾನ

ಪುಣೆಯ ಫರ್ಗ್ಯುಸನ್ ಕಾಲೇಜಕ್ಕೆ ಅದರ ಪುಸ್ತಕಾಲಯದ ಉನ್ನತಿಗಾಗಿ ಮುಂಬಯಿಯ ಮಿ॥ ಸಿ. ಎನ್. ವಾಡಿಯಾ ರವರ ಔದಾರ್ಯದ ದಾನವು :—

ಮಿ. ವಾಡಿಯಾರವರು ತಮ್ಮ ಔದಾರ್ಯ ಪರೋಪಕಾರಗಳ ಬಗ್ಗೆ ಮುಂಬಯಿಯಲ್ಲಿಯೂ ಹೊರಗೂ ವಿಶ್ರುತರಿದ್ದಾರೆ. ಇವರು ಪೂನ್ಸೆ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಒಂದು ಪುಸ್ತಕಾಲಯವನ್ನು ಏರ್ಪಡಿಸುವದಕ್ಕೋಸ್ಕರ ಒಂದು ಲಕ್ಷ ರೂಪಾಯಿಯ ರಕಮನ್ನು ಡೆಕ್ಕನ್ ಎಜುಕೇಶನ್ ಸೊಸಾಯಿಟಿಯ ವಶಕ್ಕೆ ಒಪ್ಪಿಸಿರುವರು. ಈ ದಾನವು ಕಾಲೇಜಕ್ಕೆ ದೊರೆತ ಮೇಲಾದ ಆಶ್ರಯವೆಂದು ಹೇಳಬೇಕಾಗಿದೆ. ಯಾಕಂದರೆ ಯೋಗ್ಯವಾದ ಇಮಾರತಿನಲ್ಲಿ ವ್ಯವಸ್ಥೆಗೊಳಿಸಿದ ದೊಡ್ಡ ಪುಸ್ತಕಾಲಯವಿದ್ದ ಹೊರತು ಯಾವದೊಂದು ವಿದ್ಯಾದಾನದ ಸಂಸ್ಥೆಯು ತನ್ನ ನಿಜವಾದ ಕಾರ್ಯವನ್ನು ಮಾಡಲು ಅಸಮರ್ಥವಾಗುವದು. ಪುಸ್ತಕಾಲಯವೇ ವಿದ್ಯಾಲಯದ ಜೀವನಾಧಾರವು. ಲಂಡನ್ ವಿಶ್ವವಿದ್ಯಾಲಯದ ಕಾಲೇಜಗಳು ಬ್ರಿಟಿಶ ಮ್ಯೂಝಿಯಮದ ಹತ್ತರ ಇರುವದರಿಂದ ಬಹಳ ಅನುಕೂಲವಾಗಿದೆ. ಬೊಡ್ಲಿಯನ್ ಪುಸ್ತಕಾಲಯವಿಲ್ಲದಿದ್ದರೆ ಆಕ್ಸಫೋರ್ಡಕ್ಕೂ, ಯುನಿವ್ಹರ್ಸಿಟಿಯ ಪುಸ್ತಕಾಲಯವಿಲ್ಲದಿದ್ದರೆ ಕೆಂಬ್ರಿಜಕ್ಕೂ ಈಗಿದ್ದ ಮಹತ್ವವು ಬರುವ ಸಂಭವವು ತೀರಕಡಿಮೆ ಇತ್ತು. ಮಿ॥ ವಾಡಿಯಾರವರು ಫರ್ಗ್ಯುಸನ್ ಕಾಲೇಜಕ್ಕೆ ಅದರ ಪುಸ್ತಕಾಲಯದ ಇಮಾರತಿಗಾಗಿಯೂ ಉನ್ನತಿಗಾಗಿಯೂ ಒಂದು ಲಕ್ಷ ರೂಪಾಯಿಯನ್ನು ಕೊಡುವಾಗ ಬಹಳ ದೂರದ ವರೆಗೆ ವಿಚಾರಮಾಡಿರುವರೆಂದು ಹೇಳಬಹುದು. ಇವರು ಈ ದಾನದಿಂದ, ವಿದ್ಯಾರ್ಥಿಗಳಿಗೆ ಫರ್ಗ್ಯುಸನ್ ಕಾಲೇಜಿನಲ್ಲಿ ಸುಗಮವಾದ ಉಚ್ಚ ಶಿಕ್ಷಣವು ಇನ್ನು ಮುಂದೆ ದೊರೆಯಲಿಕ್ಕೆ ಹೆಚ್ಚು ಅನುಕೂಲ ಮಾಡಿಕೊಟ್ಟಿರುವರೆಂದು ಹೇಳಬಹುದು. ಕಾಲೇಜುಗಳಲ್ಲಿ ಜಗತ್ತಿಗೆ ಹೆಸರಾದ ಪ್ರೊಫೆಸರರು ಇರಬಹುದು; ಆದರೆ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗುವವರೆಗೆ ಅವರ ಶ್ರಮವು ಸಫಲವಾಗದು. ವಿದ್ಯಾರ್ಥಿಗಳು ಪುಸ್ತಕಾಲಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ಅವರೇ ದೋಷಕ್ಕೆ ಪಾತ್ರರು. ಮಿ. ವಾಡಿಯಾರವರು ಕೊಟ್ಟ ಈ ದಾನವು ಔದಾರ್ಯದ ಹಾಗು ಜಾಣತನದ ಕುರುಹು ಆಗಿರುವದು.

## ೩ ಶಹರಾದ ಅಮೀನುಲ್ಲಾ ಖಾನರು.

ಅಫಗಾಣಿಸ್ಥಾನದ ಶಹರಾದ ಅಮೀನುಲ್ಲಾ ಖಾನ ಸಾಹೆಬರು ಪಾಶ್ಚಾತ್ಯರಾಷ್ಟ್ರಗಳಲ್ಲಿ ಪ್ರವಾಸ ಮಾಡುವ ಉದ್ದೇಶದಿಂದ ತಮ್ಮ ದೇಶದಿಂದ ಹೊರಟು ಮುಂಬೈಗೆ ದಿಶಂಬರ ೧೫ಳಕ್ಕೆ ಬಂದು ರಜಪುತಾನಾ ಎಂಬ ಹೆಸರಿನ ಬೋಟಿನಿಂದ ಶನಿವಾರ ೧೭ನೇ ತಾರಿಖಿನ ದಿವಸ ವಿಲಾಯತಿಗೆ ಹೊರಟುಹೋದರು. ಇವರು ಪ್ರಜಾಹಿತನಿರತರೂ ಸಾರಾಸಾರ ವಿಚಾರವುಳ್ಳವರೂ ಇವರ ವಿಷಯದಲ್ಲಿ ಅಭಿಮಾನಿಗಳೂ ಹಿಂದೂ ಮುಸಲ್ಮಾನ ಪ್ರಜೆಗಳನ್ನು ಸಮದೃಷ್ಟಿಯಿಂದ ನೋಡುವವರೂ ಬ್ರಿಟಿಶ ಸರಕಾರದ ಮಿತ್ರರಾಜರೂ ಆದದರಿಂದ ಮುಂಬಯ ನಾಗರಿಕರು ಇವರಿಗೆ ಅಪೂರ್ವವಾದ ಸ್ವಾಗತವನ್ನು

ಮಾಡಿದರು. ಮುಸಲ್ಮಾನ ಜನರ ಉತ್ಸಾಹವನ್ನು ವರ್ಣಿಸುವದು ಸಾಧ್ಯವಲ್ಲ. ಜನರು ಕೊಟ್ಟ ಮಾನಪತ್ರಗಳಿಗೆ ಉತ್ತರ ಕೊಡುವಾಗ ಅವರು ಹೇಳಿದ್ದೇನೆಂದರೆ :—

ಕಳೆದ ಶುಕ್ರವಾರ ತಾ॥ ೧೬–೧೨–೨೭ನೇ ದಿವಸ ಮುಂಬಯಿಯಲ್ಲಿ ಅಫಗಾಣಿಸ್ತಾನದ ರಾಜರಿಗೆ ಖಿಲಾಫತ ಕವಿಯಿಯ ಪರವಾಗಿ ಮಾನಪತ್ರವು ಕೊಡಲ್ಪಟ್ಟಿತು. ಆ ದಿವಸವು ಮುಸಲ್ಮಾನರಿಗೆ ಪವಿತ್ರದಿವಸವಾಗಿದ್ದದರಿಂದ ಮಧ್ಯಾಹ್ನದ ಉಪಾಸನೆ (ನಿಮಾಜಿ) ಗೆ ರಾಜರು ಜುಮ್ಮಾಮಶೀದಿಗೆ ಬಂದಿದ್ದರು. ಸುಮಾರು ೫೦,೦೦೦ ಮುಂದಿ ಮಹಮ್ಮದೀಯರು ಪ್ರಾರ್ಥನೆಗೆ ಸೇರಿದ್ದರು. ಪ್ರಾರ್ಥನೆಯು ಮುಗಿದ ಮೇಲೆ ರಾಜರು ಧರ್ಮಪರವಾಗಿ ಹೇಳಿದ ಉಪದೇಶದ ಮಾತುಗಳಲ್ಲಿ ಮಹತ್ವದ ಸಂಗತಿಗಳನ್ನು ಇಲ್ಲಿ ಕೊಟ್ಟಿರುತ್ತೇವೆ.

ಮಹಮ್ಮದೀಯ ಬಂಧುಗಳೇ ನೀವು ಹಿಂದುಜನರ ಧಾರ್ಮಿಕ ಆಚರಣೆಗಳಿಗೂ ನಡೆನುಡಿಗಳಿಗೂ ಮಾನಕೊಟ್ಟರೆ ಅವರು ನಿಮ್ಮ ಧರ್ಮದ ಆಚಾರ ವಿಚಾರಗಳಿಗೆ ಮಾನಕೊಡುವರು. ಇತರರ ದಾರ್ಮಿಕ ವಿಶ್ವಾಸಕ್ಕೆ ನೀವು ಮೂಗುಮುರಿದರೆ ನಿಮ್ಮ ಧರ್ಮದ ತಿರಸ್ಕಾರಕ್ಕೆ ನೀವು ಆಸ್ಪದ ಕೊಟ್ಟಂತಾಗುವದು. ಇಷ್ಟೇ ಅಲ್ಲ ನೀವು ಪರಧರ್ಮದ ಅಸಹಿಷ್ಣುತೆಯಿಂದ ನಮ್ಮ ಧರ್ಮದ ತತ್ವಗಳನ್ನು ಜಗತ್ತಿಗೆ ಸಾರಿದ ಮಹಾತ್ಮನ ಉಪದೇಶವನ್ನು ಅಪಮಾನಗೊಳಿಸಿದಂತಾಗುವದು.

ಮುಂಬಯಿ ಕಾರ್ಪೊರೇಶನ್‌ದಿಂದ ಕೊಡಲ್ಪಟ್ಟ ಮಾನಪತ್ರದ ಸಮಾರಂಭದಲ್ಲಿ ಶಹರು ಅಂದದ್ದೇನೆಂದರೆ:—ಹಿಂದು ಮುಸಲ್ಮಾನರು ಪರಸ್ಪರ ಪ್ರೇಮಭಾವದಿಂದ ವರ್ತಿಸಬೇಕೆಂತಲೂ ಎಲ್ಲರಿಗೂ ದೇವರು ಒಬ್ಬನೇ ಇರುವನೆಂತಲೂ ವಿಶ್ವಬಂಧುತ್ವದ ಕಡೆಗೆ ಲಕ್ಷ್ಯಪಟ್ಟು ಐಕ್ಯವನ್ನು ಪ್ರಚಾರದಲ್ಲಿ ತರಬೇಕೆಂತಲೂ ಉಪದೇಶಿಸಿದರು. ಕಟ್ಟಕಡೆಗೆ ಹೇಳಿದ್ದೇನಂದರೆ—ನೀವು ಈ ದೇಶದಲ್ಲಿ ಸಿದ್ಧವಾದ ಪದಾರ್ಥಗಳನ್ನೇ (ಅವು ನೆಟ್ಟಗೆ ಇರಲಿ ಇಲ್ಲದಿರಲಿ) ಉಪಯೋಗಿಸತಕ್ಕದ್ದು. ಇದೇ ಉದ್ಯೋಗ ಕೈಗಾರಿಕೆಗಳ ಉನ್ನತಿಯ ಮಾರ್ಗವು. ರಾಜರು ಸ್ವಂತದ ಸಂಬಂಧದಿಂದ:—ನಾನು ಅಫಗಾಣಿಸ್ತಾನದ ಸೇವಕನು. ಬಡವರಿಗಿಂತ ಬಡವನು. ನನ್ನ ಪ್ರಜೆಗಳು ನನ್ನನ್ನು ಅರಸನನ್ನು ಮಾಡಿದರು. ಮತ್ತು ಅದಕ್ಕೆ ಪ್ರತಿಫಲವಾಗಿ ನಾನು ಅವರ ಕಲ್ಯಾಣಕ್ಕಾಗಿ ಯಾವಾಗಲೂ ಯತ್ನಿಸುತ್ತೇನೆ.

# ಬುದ್ಧಕಾಲಿನ ವಿಶ್ವವಿದ್ಯಾಲಯ

( ಲೇ :—ಹನುಮಂತ ನಾಗನೂರ ತಾ. ಗೋಕಾಕ. )

ನಮ್ಮ ಭರತಖಂಡದ ವೈಭವಸೂರ್ಯನು ಕೆಲವೊಂದು ಕಾಲದಲ್ಲಿ ಅತ್ಯುನ್ನತ ಶಿಖರದ ಮೇಲೆ ನಲಿದಾಡುತ್ತಿದ್ದನು. ವಿದ್ಯಾಸಂಪತ್ತುಗಳ ಪ್ರಾಪ್ತಿಗೋಸುಗ ಮಿಕ್ಕು ಳಿದದೇಶದ ಜನರು ದೀನವದನದಿಂದ ಭಾರತವನ್ನು ಯಾಚಿಸುತ್ತಿದ್ದರು. ಬುದ್ಧ ಸಂಸ್ಕೃತಿಯ ಪ್ರಚಂಡ ತೆರೆಯ ಮುಂದೆ ಜಗತ್ತಿನ ಎಲ್ಲ ಜನರು ತಲೆವಾಗಿದ್ದರು. ಯಾವದೇ ವಿದ್ಯೆಯಲ್ಲಿ ಅಂತಿಮ ನಿಷ್ಣಾತ ಜನರು ಹಿಂದುಸ್ಥಾನದಲ್ಲಿಯೇ ಸಿಗುತ್ತಿದ್ದರು. ಕಾನಪುರದ ಖ್ರಿಸ್ತಕಾಲೇಜದ ಪ್ರೊಫೆಸರರಾದ ತ್ರಿಪಾಠಿಯೆಂಬ ವಿದ್ವಾನ ಸಂಶೋಧಕರು ಬುದ್ಧಕಾಲದಲ್ಲಿ ಏಳ್ಗೆಗೆ ಬಂದಿದ್ದ ತಕ್ಷಶಿಲಾ, ಬನಾರಸ, ನಾಲಂದಾ, ವಿಕ್ರಮಶಿಲಾ ಈ ವಿದ್ಯಾಪೀಠಗಳ ಬಗ್ಗೆ ಕೆಳಗೆ ಬರೆದಂತೆ ಸುಲಲಿತವಾಗಿ ಬರೆದಿರುವರು. "ವಿಗತ ವಿಭವ ಜಿತರಾಷ್ಟ್ರದ ಪೂರ್ವೇತಿಹಾಸವು ಬಲುಸೊಗಸಾಗಿರುತ್ತದೆ. ಮತ್ತು ಸತ್ವತೊರೆದ ಜನರಿಗೆ ಆ ಇತಿಹಾಸ ಪರಶೀಲನೆಯು ಅವರ ಸತ್ವದ ನೆನಪು ಮಾಡಿಕೊಡುತ್ತದೆ."

ನಾಲಂದಾದಲ್ಲಿಯ ಆಶ್ರಮ ಸ್ಥಾಪನೆಯ ಕಾಲವು ಇನ್ನೂ ಗೊತ್ತಾಗಿಲ್ಲ. ತಿಬೇಟ ಇತಿಹಾಸಕಾರನಾದ ತಾರಾನಾಥನ ಮತವು ಆಶೋಕನ ಕಾಲಕ್ಕೆ ನಿರ್ಮಾಣವಾಗಿರಬೇಕೆಂಬದಾಗಿದೆ. ಆದರೆ ಹುವೆನತ್ಸಾಂಗನೆಂಬ ಚೀನೀ ಪ್ರವಾಸಿಗನು ಬುದ್ಧನಿರ್ವಾಣ ಸಮಯಕ್ಕೆಂದು ಮತಪಡುವನು. ಪ್ರೊಫೆಸರ ಸಾಮಘರನು ಕ್ರಿ. ಶ. ೪೫೦ರಲ್ಲಿ ಸ್ಥಾಪನೆಯಾಗಿದೆಯೆಂದು ನಿಶ್ಚಿತಮಾಡಿರುವನು. ಏನೇ ಇರಲಿ ಈ ವಿದ್ಯಾಪೀಠವು ಕ್ರಿ. ಶ. ೪೦೦–೬೦೦ ಇಸವಿಯ ನಡುವೆ ಚನ್ನಾಗಿ ಪ್ರಸಿದ್ಧವಾಗಿರಬೇಕೆಂಬದಾಗಿ ಧ್ವನಿತವಾಗುತ್ತದೆ.

ಬುದ್ಧಧರ್ಮಿಯ ಜನರು ಈ ಆಶ್ರಮವು ಬಲುಪವಿತ್ರವೆಂದು ತಿಳಿಯುತ್ತಿದ್ದರು. ಸ್ವತಃ ಗೌತಮಬುದ್ಧನು ಮೂರು ತಿಂಗಳು ಅಲ್ಲಿದ್ದು ಪುನೀತಮಾಡಿರುವನೆಂದು ತಿಳಿಯುವರು.

ಈ ವಿದ್ಯಾಪೀಠದ ಕಟ್ಟಡವನ್ನು ಮೊದಲು ಶಕ್ರಾದಿತ್ಯನು ಕಟ್ಟಿಸಿದನು. ಮುಂದೆ ಆತನ ಮಗನು ಬುದ್ಧಗುಪ್ತನು ಮೊದಲಿನ ಆಶ್ರಮದ ಪೂರ್ವಕ್ಕೆ ಸಂಘಾರಾಮವನ್ನು ಕಟ್ಟಿಸಿದನು. ಮುಂದೆ ನರಶಿಂಹಗುಪ್ತ ಬಲಾದಿತ್ಯನು ನೈಋತ್ಯಕ್ಕೆ, ಮತ್ತು ಆತನ ಮಗ ಪ್ರಜ್ಞಾರಾಸನು ಪೂರ್ವಕ್ಕೆ ಹೀಗೆ ಎರಡು ಸಂಘಾರಾಮಗಳನ್ನು ಕಟ್ಟಿಸಿದರು. ಮುಂದೆ ಒಬ್ಬ ರಾಜನು ಉತ್ತರಕ್ಕೆ ದೊಡ್ಡದೊಂದು ಸಂಘಾರಾಮಕಟ್ಟಿಸಿ ಈ ಕಟ್ಟಡಗಳ ಸುತ್ತಲು ಅವಾರ ಕಟ್ಟಿಸಿದನು. ಈ ತೆರದಿಂದ ಈ ವಿದ್ಯಾಲಯವು ಸಿದ್ಧವಾಗಲು ಈ ರಾಜರ ಪರಿಶ್ರಮವು ಕಾರಣೀಭೂತವಾಗಿರುತ್ತದೆ.

ಹೂವೆನ್ನತ್ಸಾಂಗ ಮತ್ತು ಶಾಮೆನ ವ್ಹಿನಲಿ ಇವರು ಕೆಳಗೆ ಬರಿದಂತೆ ವರ್ಣಿಸಿರುವರು.

ಈ ಪೀಠವು ಪರ್ವತದ ಶಿಖರದ ಮೇಲೆ ನಿಚ್ಚಳವಾಗಿ ಅತ್ಯಂತ ಮನೋಹರವಾಗಿ ಕಾಣುತ್ತದೆ. ವೇಧಶಾಲೆಯು ಬಲು ಎತ್ತರಮೇಲಿದ್ದು ಕೃತ್ರಿಮ ಜಲದಲ್ಲಿಂದ ನೀಲಕಮಲಗಳು ಇತಸ್ತತಃ ಹೊಂಬಣ್ಣದ ಕನಕಕಮಳದ ದಟ್ಟಣೆಯಲ್ಲಿಂದ ಮೆಲ್ಲ ಮೆಲ್ಲನೆ ತಲೆಚಾಚುತ್ತಲಿವೆ. ಈ ಸೂಕ್ಷ್ಮಹೂವಿಗೆ ಪ್ರಖರ ರವಿಕಿರಣಗಳ ತಾಪವಾಗದಂತೆ ಆಮ್ರವೃಕ್ಷಗಳು ತಮ್ಮ ಶೀತಲ ಛಾಯಾಛತ್ರವನ್ನು ಹಿಡಿದಿರುತ್ತವೆ.

ಈ ತೆರದ ನಂದನವನದಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಜನೆಯನ್ನು ಭರದಿಂದ ಸಾಗಿಸುತ್ತಿದ್ದರು. ಆ ನಯನಮನೋಹರವಾದ ತಾಣದಲ್ಲೀಗ ಕೇವಲ ಕಲ್ಲಿನ ರಾಶಿಗಳು ಮಾತ್ರ ಉಳಿದಿವೆ. ಗೋಡೆಯ ಉಳಿದ ಛಾಗವನ್ನು ಪುರಾಣವಸ್ತುಸಂಶೋಧಕರು ಕಾದಿಟ್ಟಿರುವರು. ಈ ಅವಶೇಷ ನೋಡಿಯೇ ತಜ್ಞರು "ಆ ಕಾಲದ ಶಿಲ್ಪ ಕಲೆಯು ಮಿಗಿಲಾದ ಪೂರ್ಣಾವಸ್ಥೆಗೆ ಮುಟ್ಟಿತೆಂದ"ರಿಯುವರು.

ಶಾಮನ ವ್ಹಿನಲಿ ಈತನು ನಾಲಂದಾದಲ್ಲಿಯ ವಿದ್ಯಾಪೀಠದಲ್ಲಿ ೧೦೦೦೦ ಗುರು ಶಿಷ್ಯರ ಸಂಖ್ಯೆ ಇತ್ತೆಂತಲೂ, ಮತ್ತು ಇಲ್ಲಿ ಮೇಲಾದ ಬುದ್ಧಿಮತ್ತೆಯ ಜನರು ಇದ್ದು ಅವರ ಶಿಕ್ಷಣನೈಪುಣ್ಯವಿಷಯದ ಖ್ಯಾತಿ ದೂರ ದೂರ ದೇಶದವರಿಗೆ ಹಬ್ಬಿತ್ತೆಂತಲೂ, ಅವರು ನೀತಿವಂತರಿದ್ದು ಆಶ್ರಮದ ಕಟ್ಟಳೆಗಳನ್ನು ಅತಿ ನಿಯಮದಿಂದ ಪಾಲಿಸುತ್ತಿದ್ದರೆಂತಲೂ ಮತಪಟ್ಟಿರುವನು.

ಹೂವೆನತ್ಸಾಂಗನು ನಾಲಂದಾ ವಿದ್ಯಾಲಯದಲ್ಲಿ ಕಲಿಯುವಾಗ್ಗೆ ಮುಖ್ಯಾಧ್ಯಾಪಕನು ಶೀಲಭದ್ರನೆಂಬವನಿದ್ದನು. ಈ ಆಚಾರ್ಯನು ಪೂರ್ವಬಂಗಾಲದಲ್ಲಿಯ ಒಬ್ಬ ಬ್ರಾಹ್ಮಣರಾಜನ ಮಗನಿದ್ದು ಆಚಾರ್ಯನು ಧರ್ಮಪಾಲನ ಶಿಷ್ಯನಾಗಿದ್ದನು. ಧರ್ಮಪಾಲನ ನಂತರ ಮುಖ್ಯಾಧ್ಯಾಪಕನು ಶೀಲಭದ್ರನೇ ಆದನು. ವೈದ್ಯಕಿ ಮತ್ತು ಜ್ಯೋತಿಷ್ಯಗಳಲ್ಲಿ ಪಾರಂಗತನಾದ ನಾಗಾರ್ಜುನ, ಸರ್ವಮಾನ್ಯ ಬುದ್ಧ ಚರಿತ್ರಕಾರ ಅಶ್ವಘೋಷರಂಥ ಅನೇಕ ಕರ್ತೃತ್ವಶಾಲಿ ಅಧ್ಯಾಪಕರು ಆಗ್ಗೆ ಮಿಂಚಿಹೋದರು.

ಇವರಲ್ಲಿ ಅನೇಕ ಅಧ್ಯಾಪಕರು ತಿಬೇಟದೇಶದಲ್ಲಿ ಹೋಗಿ ತಮ್ಮ ಬುದ್ಧಿಮತ್ತೆಯಿಂದ ಬುದ್ಧಾನುನಾಮಗಳನ್ನು ಮಾಡಿದರು. ಕಮಲಶೀಲ, ಪದ್ಮಸಂಭವ ಇವರನ್ನು ತಿಬೇಟದ ಆಗಿನ ರಾಜನಾದ ಖ್ರಿ ಸ್ಥೋದನತ್ಸನು ಮರ್ಯಾದೆಯಿಂದ ಕರೆಕಳುಹಿಸಿದ್ದನು. ಈ ಆಚಾರ್ಯರು 'ಸಾಮಯ' ದಲ್ಲಿ ಬುದ್ಧವಿಹಾರವನ್ನು ಕ್ರಿ. ಶ. ೭೪೯ ರಲ್ಲಿ ಸ್ಥಾಪಿಸಿದರು.

ನಾಲಂದಾ ವಿದ್ಯಾಪೀಠಕ್ಕೆ ಮಗಧ ರಾಜನು ೧೦೦ ಹಳ್ಳಿಗಳ ಉತ್ಪನ್ನವನ್ನು ಉಂಬಳಿಯಾಗಿ ಕೊಟ್ಟಿದ್ದನು. ಶ್ರೀಮಂತ ಜನರ ವರ್ಷಾಶನ, ಅರವಿ–ಅಂಚಡಿ ಇವುಗಳ ವರ್ಷಾವು ಆಶ್ರಮದ ಮೇಲೆ ಒಂದೇಸವನೆಯಾಗುತ್ತಿತ್ತು.

ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಹೊಟ್ಟೆ ಬಟ್ಟೆಯ ಯಾವತರದ ಚಿಂತೆ ಇದ್ದಿಲ್ಲ. ಅಂತೇ ಸದಾಕಾಲ ಅಧ್ಯಯನ ಮತ್ತು ಧಾರ್ಮಿಕ ಕೃತ್ಯದಲ್ಲಿಯೇ ಕಾಲ ಕಳೆಯುತ್ತಿದ್ದರು.

ಈ ವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಉಮೇದವಾರರಿಗೆ ಅಪ್ಪಣೆ ಸಿಗುತ್ತಿತ್ತು. ಪ್ರವೇಶ ಪರೀಕ್ಷೆಯ ವಿಷಯಗಳು ಬಲು ಬಿಗಿಯಾಗಿರುತ್ತಿದ್ದವು. ಉಮೇದವಾರರಲ್ಲಿ ೧೦೦ಕ್ಕೆ ೪೦ರಂತೆ ಪಾಸಾಗುವದು ಕಠಿಣವಾದ ಸಂಗತಿಯಾಗಿತ್ತು.

ಹುವೆನ್‌ತ್ಸಾಂಗನು ಬರೆದಿರುವದೇನಂದರೆ:—"ತೀರ ಪ್ರಭಾತ ಸಮಯದಿಂದ ರಾತ್ರಿಯವರೆಗೆ ಗುರುಶಿಷ್ಯರಲ್ಲಿ ಪ್ರಶ್ನೋತ್ತರಗಳು ನಡೆಯುತ್ತಿದ್ದವು. ವಿದ್ಯಾಭ್ಯಾಸದ ವೇಳಾಪತ್ರಿಕೆಯು ಘಟಿಕಾದಿಂದ ನಡೆಯುತ್ತಿತ್ತು. ಈ ಘಟಿಕಾ ಪತ್ರಿಕೆಯ ಮೇಲೆ ಒಬ್ಬ ಸ್ವತಂತ್ರಕಾವಲಗಾರನು ಇರುತ್ತಿದ್ದನು. ಶಿಕ್ಷಣವು ಪ್ರಾಯಶಃ ಬಾಯಿಂದಲೇ (ತೊಂಡಿ) ನಡೆಯುತ್ತಿತ್ತು. ಬುದ್ಧ ಧರ್ಮದ ತತ್ವಗಳೆಲ್ಲ ಈ ಶಿಕ್ಷಣ ಕ್ರಮದಲ್ಲಿ ಅಡಕವಾಗಿದ್ದವಲ್ಲದೆ ವೇದ, ವೇದಾಂಗ, ತರ್ಕಶಾಸ್ತ್ರ, ವ್ಯಾಕರಣ, ವೈದ್ಯಶಾಸ್ತ್ರ, ಸಾಂಖ್ಯ ಮತ್ತು ಮಿಕ್ಕುಳಿದ ಶಾಸ್ತ್ರಗಳನ್ನು ವಿದ್ಯಾರ್ಥಿಗಳಿಂದ ಓದಿಸುತ್ತಿದ್ದರು."

ಧರ್ಮ ಹಬ್ಬುಗೆಯ ಬಗ್ಗೆ ನಾಲಂದಾದಲ್ಲಿ ಬುದ್ಧ ಭಿಕ್ಷುಕರು ದೂರ ದೂರ ದೇಶಗಳಿಗೆ ಹೋಗುತ್ತಿದ್ದರು. ಈ ಕೆಲಸದಲ್ಲಿ ನಾಲಂದಾ ವಿದ್ಯಾಪೀಠಕ್ಕಿಂತಲೂ ತಕ್ಷಶಿಲಾ ವಿದ್ಯಾಪೀಠವು ಹೆಚ್ಚಿಗೆ ಪ್ರಸಿದ್ಧವಿತ್ತು. ತಕ್ಷಶಿಲಾದಲ್ಲಿ ನಾಲಾಂದಾದಂತೆ ಒಂದೇ ವಿದ್ಯಾಲಯವಿರದೆ ಬೇರೆ ಬೇರೆ ಆಚಾರ್ಯರ ಕೈಕೆಳಗೆ ಹಲವು ವಿದ್ಯಾಪೀಠಗಳು ಇದ್ದವು. ಮುಂದೆ ಸಾಮ್ರಾಟ್ ಅಶೋಕನು ಇವೆಲ್ಲ ಒಟ್ಟುಗೂಡಿಸಿ ಒಂದೇ ದೊಡ್ಡ ವಿದ್ಯಾಪೀಠ ಮಾಡಿದನು. ಈ ಪೀಠದಲ್ಲಿ ರಾಜನೀತಿವಿಷಯಕ ಶಿಕ್ಷಣವನ್ನು ಸಹ ಕೊಡುತ್ತಿದ್ದರು. ಅಶೋಕನ ಹಿಂದುಗಡೆ ಅಭಿಮಾನಾಸ್ಪದ ಮತ್ತೂ ಆದರ್ಶ ಭೂತ ಮಗಧ ಸಾಮ್ರಾಜ್ಯ ಶಕಟ ನಡಿಸುವ ಎಲ್ಲ ರಾಜ ಪುರುಷರು ಈ ವಿದ್ಯಾಲಯದಲ್ಲಿಯೇ ಶಿಕ್ಷಣ ಹೊಂದಿದರು.

ಹಲವು ಶತಮಾನಗಳ ವರೆಗೆ ಈ ವಿದ್ಯಾಪೀಠದಲ್ಲಿಯ ಬುದ್ಧ ಭಿಕ್ಷುಕರು ಧರ್ಮ ಪ್ರಸಾರಾರ್ಥ ಒಂದೇಸವನೇ ಏಶಿಯಾ ಖಂಡದಲ್ಲಿಯ ಎಲ್ಲ ದೇಶಗಳಿಗೆ ಹೋಗುತ್ತಿದ್ದರು. ಈ ವಿದ್ಯಾವಿಭೂಷಿತ ರತ್ನಗಳಿಂದಲೇ ಭಾರತೀಯರ ಕಲಾ, ಧರ್ಮ, ತತ್ವ ಜ್ಞಾನ, ಇವುಗಳ ಹಬ್ಬುಗೆಯು ಎಲ್ಲಜಗತ್ತಿಗೆ ಆಗಿ ಹೋಯಿತು. ಬುದ್ಧ ಭಿಕ್ಷುಕಗಳ ವಿದ್ವತ್ತೆಗೆ ಮೆಚ್ಚಿ 'ಫಾಹಿಯಾನ' 'ಹುವೆನ್‌ತ್ಸಾಂಗ'ರಂಥ ಯಾತ್ರಿಕರು ತಮ್ಮ ಆಯುಷ್ಯದ ಬಹುಕಾಲವನ್ನು ಹಿಂದುಸ್ಥಾನದಲ್ಲಿಯೇ ಕಳೆದರು.

ಆಶ್ರಮದಲ್ಲಿ ಒಂದು ಗ್ರಂಥಾಲಯವಿದ್ದು ಅಲ್ಲಿ ಹಲವು ಗ್ರಂಥಗಳನ್ನಿಟ್ಟಿದ್ದರು. ಈ ಗ್ರಂಥಾಲಯಕ್ಕೆ 'ಧರ್ಮಗಂಜ' ವೆಂದು ಕರೆಯುತ್ತಿದ್ದರು. ಇದನ್ನು ಬೇರೆ ಬೇರೆ ಮೂರು ಕಟ್ಟಡಗಳಲ್ಲಿ ವಿಭಾಗಿಸಿದ್ದರು. ಈ ಕಟ್ಟಡಗಳಿಗೆ 'ರತ್ನಸಾಗರ' 'ರತ್ನೋದಧಿ' 'ರತ್ನರಂಜಕ' ಹೀಗೆ ಹೆಸರಗಳಿರುವವು. 'ರತ್ನೋದಧಿ' ಎಂಬದು ಒಂಬತ್ತು ಅಂತಸ್ತಿನದು ಇದ್ದು ಅದರಲ್ಲಿ ಕೇವಲ ಧಾರ್ಮಿಕ ಹೊತ್ತಿಗೆಗಳನ್ನೇ ಇಟ್ಟಿದ್ದರು. ಮಹಮ್ಮದಬಖ್ತ್ಯಾರ ಖಿಲಜಿಯು ಕ್ರಿ. ಶ. ೧೧೯೦ ರಲ್ಲಿ ಬಂಗಾಲದ ಮೇಲೆ ದಾಳಿ ಮಾಡಿದಾಗ್ಗೆ ಈ ಗ್ರಂಥಭಾಂಡಾರ ಸುಟ್ಟು ಹಾಳುಮಾಡಿದನು ಈ ಅಸುರನಿಗೆ ಯಾತರ ಅರಿವು; ಮುಂದೆ ಅಲ್ಲಿಯ ಆಚಾರ್ಯರು ಕಟ್ಟಡವನ್ನು ದುರಸ್ತ ಮಾಡಿದರು; ಆದರೆ ಗ್ರಂಥ ಸಂಗ್ರಹವು ಸುಟ್ಟದ್ದು ಸೂರೆ ಆಗಿಯೇ ಹೋಯಿತು. ಮರಳಿ ಅದರ ಹಾನಿಯು ತುಂಬಿ ಎಂದೂ ಬರಲಿಲ್ಲ !

ನಾಲಂದಾ ವಿದ್ಯಾಪೀಠವು ತನ್ನ ಗೌರವವನ್ನು ಕಳಕೊಂಡ ಕಾಲವು ನಿಶ್ಚಿತ ವಾಗಿ ಗೊತ್ತಾಗಿಲ್ಲ. ಹೂಎನ್‌ತ್ಸಾಂಗನು ಇಲ್ಲಿದ್ದಾಗ್ಯೆ ಅಂದರೆ ಕ್ರಿ. ಶ. ೬೭೩ರಿಂದ ೬೮೭ರ ವರೆಗೆ ಈ ವಿದ್ಯಾಲಯವು ತನ್ನ ಕೀರ್ತಿ ಶಿಖರದಮೇಲೆ ವಿರಾಜಿಸುತ್ತೆಂಬದರಲ್ಲಿ ಸಂದೇಹಯವಿಲ್ಲ.

ಇತ್ತೀಚೆಗೆ ಹಲವು ಕಾರಣಗಳಿಂದ ವಿದ್ಯಾಪೀಠಕ್ಕೆ ಅಳಿಗಾಲವು ಹತ್ತಿತು. ಕ್ರಿ. ಶ. ೮೦೦ನೇ ಇಸ್ವಿಯಲ್ಲಿ ವಿಕ್ರಮ ಶಿಲಾದಲ್ಲಿ ಒಂದು ವಿಶ್ವವಿದ್ಯಾಲಯವು ಪ್ರಸಿದ್ಧಿಗೆ ಬಂದಿತ್ತು. ಇದರಿಂದಲೂ ಸಹ ನಾಲಂದಾ ವಿದ್ಯಾಪೀಠದ ಮಹತ್ವ ಕಡಿಮೆಯಾಯಿ ತೆಂದು ಕೆಲ ವಿದ್ವಾನರ ಊಹೆ ಇರುವದು. ಆದರೆ ಡಾ. ಹರಪ್ರಸಾದಶಾಸ್ತ್ರೀ ಇವರು ೧೦-೧೧ನೇ ಶತಮಾನದಲ್ಲಿಯೂ ಸಹ ಚನ್ನಾಗಿ ಪ್ರಸಿದ್ಧವಿದ್ದು ವಿಕ್ರಮಶಿಲೆಯ ಪ್ರತಿ ಸ್ಪರ್ಧೆಯಾಗಿತ್ತೆಂದೆನ್ನುವರು. ಡಾ. ಕೆಲಹಾರ್ನರು "ನಾಲಂದಾ ವಿಶ್ವವಿದ್ಯಾಲಯದ ನಿಷ್ಕಲಂಕ ಚಂದ್ರಮನಿಗೆ ಒಂಬತ್ತನೇ ಶತಮಾನದ ಮುಂದಿನ ಅರ್ಧದಿಂದ ಇಳಿಕೆಯ ಕಾಲವು ಹತ್ತಿತೆಂ"ದೆನ್ನುವರು; ಆದರೂ ೧೧ನೇ ಶತಮಾನದವರೆಗೆ ಅಂತೂ ಇಂತೂ ಜೀವ ಹಿಡಿದಿತ್ತು. ಮುಂದೆ ಮುಸಲ್ಮಾನರ ಆಸುರೀ ಲಾಲಸೆಯಿಂದ ಜೀವಿಸಲಿಕ್ಕೆ ಅಸ ಮರ್ಥವಾಯಿತು.

ಈ ತೆರನಾದ ಕೇವಲ ಆರ್ಯಾವರ್ತದಲ್ಲಿಯಷ್ಟೇ ಅಲ್ಲ. ಇಡೀ ಜಗತ್ತಿಗೆ ಭೂಷಣಾಸ್ಪದವಾದ ಈ ಶಿಕ್ಷಣ ಸಂಸ್ಥೆಯು ಪರಕೀಯರಿಂದ ನಾಶವಾಯಿತು !! ಅಲ್ಲಿ ಈಗ್ಗೆ ವಿಸ್ತೀರ್ಣವಾದ ಮೈದಾನವೂ, ಬಿದ್ದ ಕಟ್ಟಡಗಳ ಅವಶೇಷವೂ ಕಾಣುತ್ತವೆ!!! "ಸರ್ವೆ ಖಲ್ವಿದಂ ಕವಾಗ್ರಾಸಃ..... ಕಾಲಾಯ ತಸ್ಮೈ ನಮಃ" ಇದೇ ನಿಜವಾದದ್ದು.

# ಬಿದರಬೆಟ್ಟು

(ಲೇಖಕ:— ನರಸಿಂಹಾಚಾರ್ಯ ಕಾವ್ಯಾನಂದ)

ಮಲ್ಲಾಡಿನ ಒಬ್ಬ ವೃದ್ಧ ಗೃಹಸ್ಥನು ಹಿತ್ತಲಿನಲ್ಲಿದ್ದ ಹೂತುಲಸಿಯನ್ನು ತೆಗೆದು ಕೊಂಡು ವೃಂದಾವನಕಟ್ಟೆಯ ಮೇಲೆ ಕುಳಿತಿದ್ದನು. ಬಿಜಾಪುರದ ಕಡೆಯಿಂದ ಬಂದ ಆತನ ಪ್ರೀತಿಯ ಮೊಮ್ಮಗನು ಹತ್ತಿರ ಬಂದು ಕೂತು, ಜಿಜ್ಞಾಸೆಯಿಂದ ಕೇಳ ಲಾರಂಭಿಸಿದನು. ಅವರ ಸಂವಾದವನ್ನು ಇದರಂತೆ ಬರೆದಿರುತ್ತೇನೆ:—

ಮೊಮ್ಮಗ—ಅಜ್ಜಾ, ನಿಮ್ಮ ಹೊರಜೀಲಿಯಲ್ಲಿ ಎತ್ತರವಾಗಿ ಬೆಳೆದ ಈ ಗಿಡ ಗಳ ಗುಂಪು ಯಾತರದು ?

ಅಜ್ಜ—ನಿನಗೆ ಏತರವರ ಹಾಗೆ ಕಾಣುತ್ತದೆ ?

—ನನಗೆ ಅಲ್ಲವ (ಹಸೆಸುಂಠಿಯ) ಗಿಡದಂತೆ ತೋರುತ್ತದೆ.

—ನೀನು ಅದನ್ನೆಲ್ಲಿ ನೋಡಿರುವಿ ?

—ನಮ್ಮ ತುಲಸೀವೃಂದಾವನದಲ್ಲಿ.

—ಅಲ್ಲಿ ಇಷ್ಟು ದೊಡ್ಡ ಗಿಡಗಳು ಬೆಳೆಯುವ ಸಂಭವವಿದೆಯೇ ?

—ಇಲ್ಲ; ಅಲ್ಲಿ ಹೇಗೆ ಬೆಳದಾವು ?

—ಇದರ ಎಲೆಗಳು ಖಾರಗೆಣಸನ್ನು ( ಅಲ್ಲವನ್ನು ) ಹೋಲುತ್ತಿದ್ದರೂ ಇದು ಅಲ್ಲವಲ್ಲ. ಇದಕ್ಕೆ ಬಿದರು ಅನ್ನುತ್ತಾರೆ. ಈ ಗಿಡಗಳ ಗುಂಪಿಗೆ ಬಿದರ ಬೆಟ್ಟಿನ್ನುವರು. ಇವು ನಿಮ್ಮ ಬೆಳವಲನಾಡಿನಲ್ಲಿ ಅಷ್ಟು ಬೆಳೆಯುವದಿಲ್ಲ. ನೀರಿನ ಆಸರಕ್ಕೆ ಹಚ್ಚಿದರೆ ಮಾತ್ರ ಬೆಳೆಯಬಹುದು.

—ಇದು ಏತಕ್ಕೆ ಬರುತ್ತದೆ?

—ಇದರಿಂದ ಜನಗಳಿಗೆ ಬಹಳ ಉಪಯೋಗವುಂಟು. ಇದರಲ್ಲಿ ನಾಲ್ಕಾರು ಜಾತಿಗಳಿರುತ್ತವೆ. ಒಳ್ಳೇಗಡುತರವಿರುವದಕ್ಕೆ ಡವಗೆ ಯೆಂದೂ ಅದಕ್ಕೂ ಸಣ್ಣಾಗಿರು ವದಕ್ಕೆ ಗಳವೆಂತಲೂ ಅದಕ್ಕೆ ಸಣ್ಣಾಗಿರುವದಕ್ಕೆ ಸೀಬು ಎಂತಲೂ ಅನ್ನುವರು. ಮೇಲೆ ನೋಡು, ನಮ್ಮ ಚಪ್ಪರದಲ್ಲಿ ಕಾಣುವವೇ ಗಳಗಳು; ನಿಮ್ಮಲ್ಲಿ ಮಾಳಿಗೆಗೆ ಹಾಕಿರು ವವು ಅವು ಸೀಬುಗಳು; ಡೊಂಬರು ಏರುವಗಣಿಯೇ ಡವಗೆ, ಡವಗೆಗಳನ್ನು ಬಡವರು ಮನೆಗಳಿಗೆ ಎಳೆಗಳ ಬದಲಾಗಿ ಹಾಕುತ್ತಾರೆ. ಇದರ ಜಾತಿಗೇ ಬಿದರೆಂಬ ಹೆಸರು.

—ಇದಿಷ್ಟೇ ಅಹುದಲ್ಲೊ, ಮತ್ತೇನು ಉಪಯೋಗ ?

—ಇದರ ಮೊಳಕೆಗೆ ಕಳಲ ಎನ್ನುವರು. ಅದರ ಪಲ್ಲೆಯನ್ನು ಬಹು ಜನರು ತಿನ್ನುತ್ತಾರೆ. ಇದು ಮುಂಬಲಂಗೀ ಪಲ್ಲೆಯಂತಾಗುವದು; ಅದರ ಉಪ್ಪಿನ ಕಾಯಿ

ಯನ್ನು ಹಾಕುತ್ತಾರೆ. ಕಳಲಿಯು ಉಷ್ಣಗುಣವುಳ್ಳದ್ದು. ಇದರ ತೊಪ್ಪಲವನ್ನು ದನಗಳು ತಿನ್ನುತ್ತವೆ. ತೊಪ್ಪಲ ಕಷಾಯವನ್ನು ಬಹುಮೂತ್ರ ರೋಗದವರಿಗೆ ಕೊಡುತ್ತಾರೆ. ಇದು ಬಾಳೆಯಂತೆ ಈದು ಸಾಯುವ ಗಿಡವು. ಬಾಳೆ ಒಂದೇ ವರ್ಷಕ್ಕೆ ಈಯುತ್ತದೆ. ಇದು ಹತ್ತೆಂಟು ವರ್ಷದ್ದಾಗಿ ಬಹಳ ಬಲಿತ ಬಳಿಕ ಈದು ಒಣಗಿ ಹೋಗುತ್ತದೆ.

ಈದ ವೇಳೆಗೆ ಇದರ ತುಂಬೆಲ್ಲ ಕಾಯಿಗಳಾಗುತ್ತವೆ. ಅದರಲ್ಲಿ ಆಗುವ ಕಾಳಿಗೆ ಬಿದರಕ್ಕಿಯೆನ್ನುವರು. ಬಿದರಕ್ಕಿ ಸೀರ ಗೋದಿಯಂತಿರುತ್ತದೆ. ಬಡವರು ಅದರ ಹಿಟ್ಟು ಮಾಡಿ ತಿನ್ನುತ್ತಾರೆ. ಬಿದರು ಬರಗಾಲಕ್ಕೆ ಈಯುವದೆಂದು ಮುಲ್ಲಾಡಿನ ಜನರು ತಿಳಿಯುತ್ತಾರೆ.

—ನಮ್ಮ ಚಕ್ಕಡೀ ತಳಕ್ಕೆ ಹಾಕಿದೆ ಅದೂ ಬಿದರೇ ಏನು ?

—ಅಹುದು, ಅದು ಡವಗೀ ಜಜ್ಜಿ ಮಾಡಿದ ತಟ್ಟಿಯು. ಮೇದಾರ ಜಾತಿಯೇ ಬಿದರಿನ ಮೇಲೆ ಹೊಟ್ಟೇ ತುಂಬಿಕೊಳ್ಳುತ್ತಿದೆ. ಕಣಜ, ತಟ್ಟಿ, ಮರ, ಕೆರಸಿ, ಬುಟ್ಟಿ, ಸಾರಣಿಗಿ (ಜಲ್ಲಡಿ), ಕೆರಸಿ, ಓರೋಳಿಗೆ, ಂಬಳಿಗಿ, (ಎಲಿಹಾಕುವದಕ್ಕೆ ಮಾಡಿದವು) ಸಾಂಗಸೆ (ಮುಚ್ಚಳದ ಪೆಟ್ಟಿಗೆ), ಗೊಡೆ (ನೀರು ಗೊಜ್ಜುವ ಬುಟ್ಟಿ), ಹರಿಗೋಲು (ಬಿದರ ಇಲ್ಲವೆ ಬೆತ್ತದ ೨೦ ಜನರು ಕೂಡ್ರುವಂಥ ಬುಟ್ಟಿ ಇದರ ಮೇಲೆ ತೊಗಲು ಹಾಕಿರುತ್ತಾರೆ. ನದೀ ದಾಟಲಿಕ್ಕೆ ಬರುವದು) ಮೊದಲಾದವುಗಳು ಆಗುವವು.

—ಅಹುದು, ಇವೆಲ್ಲ ಬಹಳ ಉಪಯೋಗದ ಜೀನಸುಗಳು. ಮರ ಬುಟ್ಟಿಯಿಲ್ಲದಿದ್ದರೆ ಅಕ್ಕಿ ಹಿಟ್ಟು ಹೇಗೆ ನೆಟ್ಟಗಾದಾವು ?

—ನಿನಗೆ ಬೇಸರ ಬಂದಿತೇನು ? ತುಸು ಸುನ್ನಾನೆ ಕೇಳಿದರೆ ಇನ್ನೂ ಹೇಳುವೆನು.

—ಇಲ್ಲ, ಬೇಸರಿಕೆಯಿಲ್ಲ; ನಮ್ಮೂರಿಗೆ ಹೋಗಿ ಗೊತ್ತಿಲ್ಲದವರಿಗೆ ಹೇಳುತ್ತೇನೆ. ಅವರಿಗೆ ಇದನ್ನು ಕೇಳಿ ನೋಡೆನಿಸುತ್ತದೆ ! ನನಗೂ ಅವರು ಜಾಣನಿದ್ದಾನೆ ಕೃಷ್ಣ, ಅನ್ನುವರು.

—ಬಹಳ ಒಳ್ಳೇದು, ಹಾಗಾದರೆ ಕೇಳು—ಪೊಳ್ಳು ಗಳಗಳ ಗಣ್ಣು ಪಾರಮಾಡಿ ಕೊಳವಿಗಳನ್ನು ಮಾಡುತ್ತಾರೆ. ಅವುಗಳಿಗೆ ಸೆಡ್ಡೀಕೊಲೆನ್ನುವರು. ಅವು ಕೂರಿಗೆಯ ಮುಖ್ಯಾಂಗಗಳು. ಅವುಗಳಿಲ್ಲದಿದ್ದರೆ ಬಿತ್ತಲಿಕ್ಕೇ ಬರಲಿಕ್ಕಿಲ್ಲ. ಇದರ ಇನ್ನೊಂದು ಜಾತಿಗ ಸೇವಿಗೇ ಬಿದರು ಎನ್ನುವರು. ಅದರಿಂದ ನುಣುಪಾದ ಸೇವಿಗೇ ಕೋಲು ಗಳೂ ಬಡಿಗೆಗಳೂ ನೇಕಾರರ ಕೋಲುಗಳೂ ಆಗುತ್ತವೆ. ದನಕಾಯುವ ಹುಡುಗರು ಸಂಪಾಗಿ ಊದುವ ಕೊಳಲುಗಳು ಇವರವೇ. ಶ್ರೀ. ಕೃಷ್ಣನು ನಿನ್ನಷ್ಟಿರುವಾಗ

ಕೊಳಲನ್ನೂದುತ್ತಿದ್ದನು. ಅದರಿಂದ ಆತನಿಗೆ ವೇಣು-ಕೊಳಲ-ಗೋಪಾಲ ಅಂತ ಹೆಸರು ಬಿದ್ದಿದೆ.

—ಅಜ್ಜಾ ನನಗೊಂದು ಕೊಳಲು ಮಾಡಿಸಿ ಕೊಡು, ಕೊಡತೀ ?

—ನೀನು ಊರಿಗೆ ಹೋಗುವಾಗ್ಗೆ, ಕೊಳಲೊಂದೇ ಏಕೆ, ಒಕಳೀ ಗೊಜ್ಜು ಜೇಕಲಳಿಗಿ, ಚಿನ್ನಿಕೋಲು, ಊದಗೊಳವಿ ಮೊದಲಾದವುಗಳನ್ನು ಮಾಡಿಸಿಕೊಡತ್ತೇನೆ. ಮೇದಾರರು ಬಿದರು ಒಡಿಯುವಾಗ ಬೆಣಚಿಗಲ್ಲಿನಂಥ ಹಗುರಾದ ಪದಾರ್ಥ ಹೊರಡುತ್ತದೆ. ಅದಕ್ಕೆ ಬಿದರ ಸುಣ್ಣವೆನ್ನುವರು. ಅದರ ಗುಣವು ಶೀತವಿರುತ್ತದೆ ಅದೂ ಔಷಧಕ್ಕೆ ಬರುತ್ತದೆ. ಪರದೇಶದ ಕಲಾಕುಶಲರು ಬಿದರಿನಿಂದ ಹಲ್ಲುಜ್ಜು ಬ್ರಶ್ಯಗಳನ್ನೂ ಕಾಗದವನ್ನೂ ಮಾಡುತ್ತಾರಂತೆ. ಬೆತ್ತದ ಬಡಿಗೆ ಖುರ್ಚಿಗಳನ್ನು ನೋಡಿರುವಿಯಲ್ಲಾ, ಆ ಬೆತ್ತವೂ ಇದರ ಜಾತಿಯದೇ. ಈ ಬಿದರ ಜಾತಿಯು ಮನುಷ್ಯನ ಅನ್ನವಸ್ತ್ರ ಮೊದಲಾದವುಗಳಿಗೆ ಬಹಳೇ ಉಪಯುಕ್ತವಾದದ್ದು. ನೀನು ದೊಡ್ಡವನಾದ ಹಾಗೆ ನಿನಗೆ ನಾನು ಹೇಳಿದ್ದನ್ನು ಬಿಟ್ಟು ಇನ್ನೂ ಸಾವಿರಾರು ಉಪಯೋಗಳು, ತಿಳಿದುಬಂದಾವು. ನಾಳೆ ಶಿವರಾತ್ರಿಗೆ ಗೋಕರ್ಣಕ್ಕೆ ಹೋಗೋಣ, ಆಗ ಅಜ್ಜ ನಿನಗೆ ಇನ್ನೂ ಎಷ್ಟೋ ಚಂದದ ಬಿದರು ಬೆತ್ತದ ಸಾಮಾನುಗಳು ಕಣ್ಣಿಗೆ ಬೀಳುವವು

ತಮ್ಮಾ ಊಟಕ್ಕೆ ಬಾ, ಎಂದು ಅವರಕ್ಕ ಕರೆಯಲು, ಕೃಷ್ಣನು ಎದ್ದನು. ಅವನಜ್ಜನು ಹರೇರಾಮ ಅನ್ನುತ್ತ ಒಳಗೆ ಹೋದನು.

---

## ಹದಿನೈದನೇ ಶತಮಾನದ ದಕ್ಷಿಣ ದೇಶವು

ಲೇಖಕ:—ಗುರುನಾಥ ಗೋವಿಂದ ಉಪ್ಪಾರ, ಯಮಕನಮರಡಿ.

ದಕ್ಷಿಣ ಹಿಂದುಸ್ತಾನದ ಇತಿಹಾಸದಲ್ಲಿ ಹದಿನೈದನೇ ಶತಮಾನವು ಬಹಳೆ ಮಹತ್ವದ್ದಾಗಿರುವದು, ಯಾಕಂದರೆ ಈ ಕಾಲದಲ್ಲಿ ಆದ ಘಟನೆಗಳಿಂದ ಇತಿಹಾಸಗತಿಯು ತಿರುಗಿತು. ಈ ಘಟನೆಗಳಲ್ಲಿ ಎರಡು ಮಹತ್ವವುಳ್ಳವಾಗಿವೆ:—

(೧) ಬಾಮನೀ ಸಾಮ್ರಾಜ್ಯದ ಪತನ ಮತ್ತು (೨) ಪೋರ್ತುಗೀಜ ವ್ಯಾಪಾರಗಳ ಆಗಮನ. ಬಾಮನೀ-ಸಾಮ್ರಾಜ್ಯವು ನಾಶವಾದಮೇಲೆ (೧) ವಿಜಾಪೂರ (೨) ಅಹಮದ ನಗರ (೩) ಗೋವಳಕೊಂಡ (೪) ಬೇದರ (೫) ಎಲಿಚಪೂರ ಈ ಐದು ರಾಜ್ಯಗಳು ಸ್ಥಾಪಿಸಲ್ಪಟ್ಟವು. ಅವುಗಳ ಸಂಪೂರ್ಣ ಶಕ್ತಿಯು ಪರಸ್ಪರರ ಕಲಹ-ಸಂಗ್ರಾಮಗಳಲ್ಲಿ ನಷ್ಟವಾಯಿತು. ಇದು ಒಂದು ರೀತಿಯಿಂದ ಒಳತೇ ಆಯಿತು, ಹೇಗಂದರೆ ಈ ಮುಸಲ್ಮಾನ ರಾಜ್ಯಗಳ ಪರಸ್ಪರರ ವೈಮನಸ್ಸು ಛತ್ರಪತಿ ಶಿವಾಜಿ ಮಹಾರಾ

ಜರಿಗೆ ಮಹಾರಾಷ್ಟ್ರದ ತಳಕದಿಯನ್ನು ಹಾಕುವದಕ್ಕೆ ಬಹಳೇ ಅನುಕೂಲಸ್ಥಿತಿಯನ್ನು ಒದಗಿಸಿಕೊಟ್ಟಿತು.

(೧) ಸನ್ ೧೪೨೯ ಇ. ಯಲ್ಲಿ ಯುಸುಫ ಆದಿಲಶಹನು ವಿಜಾಪುರದ ಸ್ವಾಧೀನತೆಯನ್ನು ಸಾರಿದ್ದು.

(೨) ಅಹಮದನಗರದ ಅಹಮದ ನಿಜಾಮಶಹನು ೧೪೯೦ ಇ. ಯಲ್ಲಿ ಸ್ವತಂತ್ರ ರಾಜನಾಗಲಿಕ್ಕೆ ಸಾರಿದ್ದು.

(೩) ಗೋವಳಕುಂಡದಲ್ಲಿ ಸನ್ ೧೫೧೮ ಇ. ಯಲ್ಲಿ ಸುಲ್ತಾನ ಅಲಿ ಕುತುಬ ಶಹನು ಸ್ವತಂತ್ರ ರಾಜ್ಯ ಸ್ಥಾಪಿಸಿದ್ದು.

(೪) ೧೪೯೨ ಇ. ಯಲ್ಲಿ ಬೇದರದ ಪ್ರತಿನಿಧಿ ಕಾಸೀಮ ಬರೀದಶಹನು ಸ್ವತಂತ್ರ ಬಾದಶಹನಾಗಲು ಸಾರಿದ್ದು.

(೫) ಎಲಿಚಪುರವನ್ನು ಫತಹುಲ್ಲಾ ಇಮಾದಶಹಾನು ಸ್ವತಂತ್ರ ಮಾಡಿದ್ದು.

ಈ ಕಾಲದ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಡುವ ಅನೇಕ ಗ್ರಂಥಗಳು ಸಿದ್ಧವಿರುವವು. ಅವುಗಳನ್ನು ಸೌಲಭ್ಯಕ್ಕಾಗಿ ನಾವು ನಾಲ್ಕು ಭಾಗಗಳಲ್ಲಿ ವಿಭಾಗಿಸಬಹುದಾಗಿದೆ. (೧) ಇತಿಹಾಸ-ಪರಿಸ್ತಾ ಮೊದಲಾದ ಇತಿಹಾಸ ಗ್ರಂಥಗಳು; ಮುಸಲ್ಮಾನ ದೃಷ್ಟಿಯಿಂದ ತೆಗೆದುಕೊಂಡಿವೆ. (೨) ಮರಾಠಿಬಖರ ಅಥವಾ ಹಿಂದೂ ಇತಿಹಾಸ (೩) ಮುಸಲ್ಮಾನೀ ಇತಿಹಾಸಗಳ ಆಧಾರಗಳ ಮೇಲಿಂದ ಬರೆದ ಇಂಗ್ಲಿಷ ಇತಿಹಾಸ ಗ್ರಂಥಗಳು (೪) ಆ ಕಾಲದಲ್ಲಿ ಭರತಖಂಡದ ಪ್ರವಾಸವನ್ನು ಮಾಡುವವರಿಂದ ಬರೆದ ವೃತ್ತಾಂತಗಳು.

ಹದಿನೈದನೇ ಶತಮಾನದಲ್ಲಿ ಮೂವರು ಪ್ರವಾಸಿಕರು ಬಂದಿದ್ದರು. ಅವರ ಅನುಭವದಿಂದ ನಾವು ಆ ಕಾಲದ ಸ್ಥಿತಿಯನ್ನು ತಕ್ಕಮಟ್ಟಿಗೆ ಗೊತ್ತುಮಾಡಿಕೊಳ್ಳಬಹುದಾಗಿದೆ. ಮೊದಲನೇ ಪ್ರವಾಸಿಯು ನಿಕೋಲೋಕೊಂಟೀ ಎಂಬ ವೆನಿಸದ ನಿವಾಸಿಯು; ಈತನು ಸನ್ ೧೪೨೦ ಇ. ಯಲ್ಲಿ ದಮಸ್ಕಸದಿಂದ ಪರಿವಾರ ಸಹಿತ ಹೊರಟನು. ಭರತಖಂಡಕ್ಕೆ ಹೊರಡುವ ಮೊದಲು ಅವನು ದಮಸ್ಕಸದಲ್ಲಿ ವ್ಯಾಪಾರ ಮಾಡುತ್ತಿದ್ದನು. ಸನ್ ೧೪೨೧ ಇ ಯಲ್ಲಿ ಅವನು ವಿಜಯನಗರಕ್ಕೆ ಹೋದನು. ಅಲ್ಲಿ ಆ ಕಾಲದಲ್ಲಿ ಹಿಂದೂ ಸಮ್ರಾಜದ ಮೊದಲನೇ ದೇವರಾಯನು ರಾಜ್ಯವಾಳುತ್ತಿದ್ದನು. ನಿಕೋಲೋಕೊಂಟಿಯು ಹಿಂದುಸ್ತಾನದಿಂದ ಜಾವಾಕ್ಕೂ ಚೀನಕ್ಕೂ ಹೋಗಿದ್ದನು. ಆ ಮೇಲೆ ಮಲಬಾರ ಸಮುದ್ರತೀರದ ಸವಿೂಪದಿಂದ ಅವನು ತನ್ನ ದೇಶಕ್ಕೆ ತಿರುಗಿ ಹೋದನು. ನಿಕೋಲೋ-ಕೋಂಟಿಯು ಸುಮಾರು ೨೫ ವರ್ಷಗಳವರೆಗೆ ಪೂರ್ವ ದೇಶದಲ್ಲಿಯೇ ಭ್ರಮಣ ಮಾಡಿ ನಂತರ ಫಾರ್ಸಿ ಭಾಷೆಯ ಅಭ್ಯಾಸವನ್ನು ಜನ್ನಾಗಿ ಮಾಡಿದನು. ತನ್ನ ಪ್ರವಾಸದಲ್ಲಿ ಅವನು ಫಾರ್ಸಿದೇಶದ ನಿವಾಸಿಯಂತೆ ಇದ್ದನು.

ಆತನು ತನ್ನ ಆಚಾರ, ವಸ್ತ್ರಾಭರಣಗಳಲ್ಲಿ ಪರಿವರ್ತನೆಯನ್ನು ಮಾಡಿಕೊಂಡಿದ್ದನು. ಮಿಶ್ರದೇಶದ ಸಮೀಪದಲ್ಲಿ ಬಂಧಿಸಲ್ಪಟ್ಟುದರಿಂದ ಆತನು ಪರಿವಾರದೊಡನೆ ಕ್ರಿಶ್ಚನ್ ಧರ್ಮಕ್ಕೂ ನಡೆವಳಿಕೆಗೂ ನಮಸ್ಕಾರ ಮಾಡಬೇಕಾಯಿತು. ಯಾಕಂದರೆ ಒಂದು ವೇಳೆ ಅವನು ಹಾಗೆ ಮಾಡದಿದ್ದರೆ ಧರ್ಮಾಂಧ ಮುಸಲ್ಮಾನರಿಂದ ತನ್ನ ಸಂಪತ್ತನ್ನೂ ಹೆಂಡರು-ಮಕ್ಕಳನ್ನೂ ಉಳಿಸಿಕೊಳ್ಳುವದು ಕಠಿಣವಾಗುತ್ತಿತ್ತು. ಸ್ವದೇಶಕ್ಕೆ ಮುಟ್ಟಿದ ಮೇಲೆ ಅವನು ಪೋಪನ ಎಮುರಿನಲ್ಲಿ ಇದಕ್ಕೆ ಪಶ್ಚಾತ್ತಾಪಪಟ್ಟು ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಪುನಃ ಕ್ರಿಸ್ತೀ ಧರ್ಮವನ್ನು ಸ್ವೀಕರಿಸಿದನು. ನಿಕೋಲಕೋಂಟಿಯು ಇತಿಹಾಸಕಾರನಾಗಿದ್ದಿಲ್ಲ, ಅದಕ್ಕಾಗಿ ಅವನು ತನ್ನ ಪ್ರವಾಸದಲ್ಲಿಯ ಸಂಗತಿಯನ್ನು ತಾನಾಗಿಯೇ ಏನೂ ಬರೆದಿಟ್ಟುವದಿಲ್ಲ. ಅವನ ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತ ಕಾಲದಲ್ಲಿ ಪೋಪನ ಗುಮಾಸ್ತನ ಹತ್ತಿರ ಬರೆದುಕೊಟ್ಟದ್ದು ಅವನ ಯಾತ್ರೆಯ ಅನುಭವದ ರೂಪದಲ್ಲಿರುವದು. ಹೀಗಿದ್ದರೂ ಆ ವರ್ಣನೆಯು ಅನೇಕ ಸ್ಥಳಗಳಲ್ಲಿ ಸಾಮಾನ್ಯ ವಿಚಾರದಿಂದ ಅಸತ್ಯವಾದದ್ದೆಂದು ಗೊತ್ತಾಗುವದು. ಆದರೂ ಅದರಲ್ಲಿ ಕೆಲಮಟ್ಟಿಗೆ ಐತಿಹಾಸಿಕ ಸಾಮಗ್ರಿಯು ದೊರೆಯುವಂತಿದೆ.

ಎರಡನೆಯ ಪ್ರವಾಸಿಯು ಕಮಾಲುದ್ದೀನ ಅಬ್ದುಲ್ ರಜಾಕನೆಂಬ ಹೆಸರಿನ ಮುಸಲ್ಮಾನನಿದ್ದನು. ಅವನು ತಿಮೂರನ ಎರಡನೆಯ ಮಗನಾದ ಶಹಾರುಖಮಿರ್ಜಾನ ದರಬಾರದಲ್ಲಿ ಮರ್ಯಾದೆಯ ಸ್ಥಳದಲ್ಲಿ ಇದ್ದನು. ಅಬ್ದುಲ್ ರಜಾಕನು ರಾಯಭಾರಿಯ ರೂಪದಿಂದ ಭರತಖಂಡಕ್ಕೆ ಬಂದಿದ್ದನು. ಆದರೆ ಇದಕ್ಕೆ ಯೋಗ್ಯವಾದ ಪ್ರಮಾಣಗಳು ದೊರೆಯುವದಿಲ್ಲ. ಐತಿಹಾಸಿಕ ಪ್ರಮಾಣಗಳಿಂದ ಸಿದ್ಧವಾಗುವದೇನಂದರೆ, ಅತನನ್ನು ಕಾಲಿಕತ್ತದ ಝಾಮೋರಿನ್ನನ ರಾಜ್ಯದಲ್ಲಿ ಇಸ್ಲಾಮದ ಪ್ರಚಾರಕ್ಕಾಗಿ ಕಳಿಸಿಕೊಟ್ಟದ್ದಾಗಿತ್ತು. ಅತ್ಯಾಚಾರಿ ತೈಮೂರನ ಭಯವು ಆ ಕಾಲದಲ್ಲಿಯೂ ಒಂದು ರೀತಿಯಲ್ಲಿ ಇನ್ನೂ ಉಳಿದಿತ್ತು. ಆ ಕಾಲದಲ್ಲಿಯೂ ಭರತಖಂಡದ ರಾಜನೀತಿಯು ಹೊರದೇಶದ ಮುಸಲ್ಮಾನ ಬಾದಶಹರ ಮಿತ್ರತ್ವ ಹಾಗೂ ಸಹಾಯವನ್ನು ನೋಡಿ ಹೆಚ್ಚುಕಡಿಮೆಯಾಗುತ್ತಿತ್ತು. ಜೈನಪುರದ ಸುಲ್ತಾನ ಇಬ್ರಾಹೀಮಶಹನು ಆ ಕಾಲದಲ್ಲಿ ಬಂಗಾಲದ ಮೇಲೆ ದಾಳಿಯ ಸೌರಣೆಯನ್ನು ಮಾಡಿದ್ದನು ಅದರಿಂದ ಬಂಗಾಲದಲ್ಲಿ ಶಹಾನಸಿರುದ್ದೀನಶಹನು ಅಂಜಿದವನಾಗಿ ಶಹಾರುಖಮಿರ್ಜಾನನ್ನು ಕರೆದನು. ಆದರೆ ಅಂಶತಃ ಪಾರ್ಸಿಯ ರಾಜದೂತನು ಮುಂದೆ ಬಿದ್ದದರಿಂದ ಸುಲ್ತಾನನು ಏರಾಟದ ವಿಚಾರವನ್ನು ಬಿಟ್ಟುಬಿಟ್ಟನು. ಇವರ ಪ್ರಭಾವವು ಕಾಲಿಕಟದ ಝಾಮೋರಿನ್ನನ ಮೇಲೆಯೂ ಬಿತ್ತು. ಮತ್ತು ಅವನು ಶಹಾರುಖಮಿರ್ಜಾನ ಪ್ರಭಾವದಿಂದ ಲಾಭಹೊಂದುವದಕ್ಕಾಗಿ ನಿಶ್ಚಯಮಾಡಿಕೊಂಡು ತನ್ನ ವತಿಯಿಂದ, ಒಬ್ಬ ಮುಸಲ್ಮಾನ ರಾಯಭಾರಿಯನ್ನು ಕಳಿಸಿಕೊಟ್ಟು ಶಹಾರುಖಮಿರ್ಜಾನಿಗೆ 'ಕಾಲಿಕಟದಲ್ಲಿ ವಾಸಿಸುವ ಮುಸಲ್ಮಾನರಿಗೆ ಶಾಫ

ಫಾರಸದ ಹೆಸರಿನ ಪುಸ್ತಕವನ್ನು ಓದಲು ಅನುಮತಿಯನ್ನು ಕೊಡಿರಿ.' ಎಂದು ಪ್ರಾರ್ಥಿಸಿದನು. ಝೂವೋರಿನನು ಶಹನ ಆಳಿಕೆಗೆ ಒಪ್ಪಿದನೆಂದು ತೋರಿಸುವದೇ ಆ ಪುಸ್ತಕ ಓದುವದನ್ನು ಕೇಳಿದ್ದರ ಅರ್ಥವಾಗಿತ್ತು. ಆದರೆ ಆ ಮಾತು ನಿಜವಾಗಿರಲಿಲ್ಲ; ಇದೊಂದು ಝೂವೋರಿನನ ರಾಜನೀತಿಯ ತಂತ್ರವು; ಮತ್ತು ಈ ತಂತ್ರದಿಂದ ತನ್ನ ವಿರೋಧಿಯು ಸಂಶಯದಲ್ಲಿರಬೇಕೆಂಬದೇ ಅವನ ಉದ್ದೇಶ್ಯವಾಗಿತ್ತು. ಇದು ಝೂವೋರಿನನ ರಾಜನೀತಿಯ ನಡತೆಯಾಗಿತ್ತು. ಮತ್ತು ಅವನು ಈ ತರಹದಿಂದ ತನ್ನ ವಿರೋಧಿಯು ಸಂಶಯದಲ್ಲಿರುವದನ್ನು ಅಪೇಕ್ಷಿಸುತ್ತಿದ್ದನು. ಝೂವೋರಿನನ ಈ ಭಾವವು ಶಹಾರೂಖವಿಜರ್ಜನನಿಗೆ ಯಾವ ಕೆಲಸಕ್ಕೂಬರುತ್ತಿರಲಿಲ್ಲ. ಆದರೆ ಕಾಲಿಕಟದ ಇಸ್ಲಾಮ ಮತಾನುಯಾಯಿ ರಾಯಭಾರಿಯ ಪ್ರೇರಣೆಯಿಂದ ಅವನು ಈ ಸಮಯದ ಲಾಭವನ್ನಾಡಿಕೊಂಡು ಧರ್ಮ ಪ್ರಚಾರಾರ್ಥವಾಗಿ ಅಬ್ದುಲ್‌ರಜಾಕನಿಗೆ ನಿಯಮಿಸಿದ್ದಾಯಿತು. ನಿಜವಾಗಿ ಅಬ್ದುಲ್ ರಜಾಕನು ಈ ರೂಪದಿಂದ ದಕ್ಷಿಣದೇಶದಲ್ಲಿ ಬಂದದ್ದಕ್ಕೆ ಯಾವ ಪ್ರಮಾಣಗಳೂ ಇರುವದಿಲ್ಲ. ಅವನು ೧೪೪೨ ಇ. ಯಲ್ಲಿ ಹಿರಾತದಿಂದ ಹೊರಟು, ಎಪ್ರೇಲ ೧೪೪೩ ಇ. ಯಲ್ಲಿ ವಿಜಯನಗರಕ್ಕೆ ಮುಟ್ಟಿದನು. ಈ ವರ್ಷದ ಅಂತ್ಯದಲ್ಲಿ ಅವನು ಸ್ವದೇಶಕ್ಕೆ ತಿರುಗಿಹೋದನು. ಆ ಕಾಲದಲ್ಲಿ. ವಿಜಯ ದೇವರಾಯನ (೧೪೨೩–೧೪೪೬) ಆಳಿಕೆಯಿತ್ತು. ಅಬ್ದುಲ್‌ರಜಾಕನು ತನ್ನ ಪ್ರವಾಸದ ವರ್ಣನೆಯನ್ನು ತಾನೇ ಬರೆದ ತಿಮೂರಲೇನ ವಂಶದ ಇತಿಹಾಸ ಗ್ರಂಥವಾದ "ಮತಿಲಾ ಉಸ್ಸಾ ಆದೀನ"ದಲ್ಲಿ ಬಹಳವಾಗಿ ಕೊಟ್ಟಿರುವನು.

ಮೂರನೆಯ ಪ್ರವಾಸಿಯ ಹೆಸರು "ಅಥಾನಾಟಿಯಾಸನಿಕಿಟನ" ಎಂದಿರುವದು. ಇವನು ರಸಿಯಾದೇಶದ ನಿವಾಸಿಯಾಗಿದ್ದನು. ೧೪೭೯ ಇ. ಯಲ್ಲಿ ಭರತಖಂಡಕ್ಕೆ ಬಂದು ಸುಮಾರು ೪ ವರ್ಷ ದಕ್ಷಿಣ ದೇಶದಲ್ಲಿದ್ದನು. ಈತನು ಕುದುರೆಯ ವ್ಯಾಪಾರ ಮಾಡುತ್ತಿದ್ದನು. ಈತನು ತನ್ನ ಪ್ರವಾಸದ ವರ್ಣನೆಯಲ್ಲಿ ಭರತಖಂಡದಲ್ಲಿಯ ವಾನರ ರಾಜ್ಯದ ವರ್ಣನೆಯನ್ನು ಬಹಳೇ ಮನೋರಂಜಕವಾಗಿ ಕೊಟ್ಟಿರುವನು. ಅದರ ಮೇಲೆ ಈಗಿನ ಐತಿಹಾಸಿಕ ವಿದ್ವಾಂಸರು ವಿಶ್ವಾಸವಿಡಲು ಸಿದ್ಧರಿರುವದಿಲ್ಲ.

ದಕ್ಷಿಣ ಭಾರತದಲ್ಲಿ ವಿಕಳಿತ್ರ ರಾಜ್ಯ ಸಂಬಂಧವಾಗಿ ಇತಿಹಾಸವು ಅಷ್ಟೊಂದು ಆಧಾರವನ್ನು ಕೊಡುವದಿಲ್ಲ. ಬಹಳೇ ಪ್ರಾಚೀನಕಾಲದಿಂದ ಅಲ್ಲಿ ಎಷ್ಟೋ ಸ್ವತಂತ್ರ ರಾಜ್ಯಗಳು ಅಸ್ತಿತ್ವದಲ್ಲಿದ್ದವು. ಸನ್ ೧೩೯೪ ಇ. ಯಲ್ಲಿ ಅಲ್ಲಾಉದ್ದೀನ ಖಿಲಜಿಯು ಆಕ್ರಮಣಮಾಡುವ ಕಾಲದಲ್ಲಿ, ಕೆಳಗೆ ಕಾಣಿಸಿದ ನಾಲ್ಕು ರಾಜವಂಶಗಳು ಅಲ್ಲಿ ರಾಜ್ಯ ಕಾರಭಾರವನ್ನು ಮಾಡುತ್ತಿದ್ದವು.

೧. ಉತ್ತರದಲ್ಲಿ ಮತ್ತು ವಾಯವ್ಯದಲ್ಲಿ ಯಾದವವಂಶವು. ಅದರಿಂದ ಕೊಲ್ಲಾಪುರದ ಸಿಲಹರ ರಾಜವಂಶವು ಹೊರಟಿರುವದು.

೨. ಮಧ್ಯ ಮತ್ತು ಪೂರ್ವದಲ್ಲಿ ವರಂಗಲದ ಕಾಕತ್ಯರು.

. ದ್ವಾರಸಮುದ್ರದ ಹೊಯ್ಸಳ ರಾಜವಂಶವು. ಅವರ ಆಳಿಕೆಯು ಕೃಷ್ಣಾ ಮತ್ತು ಕಾವೇರಿಯ ಕೆಳಗಿನ ಭೂಭಾಗದಲ್ಲಿ ಸಮುದ್ರದ ಒಂದು ತಟದಿಂದ ಮತ್ತೊಂದು ತಟದವರೆಗೆ ನಡೆಯುತ್ತಿತ್ತು.

೪. ಮದುರೆಯ ಪಾಂಡ್ಯರು, ಅವರ ಆಳಿಕೆಯು ಕಾವೇರಿಯ ದಡದ ಯಾವತ್ತು ಉಳಿದ ಭಾಗದ ಮೇಲಿತ್ತು. ಚೋಳರನ್ನು ಇವರು ಗೆದ್ದಿದ್ದರು. ಮತ್ತು ಕೇರಲವೂ ಹೆಚ್ಚುಕಡಿಮೆ ಮಾನದಿಂದ ಇತರ ಸ್ವಾಧೀನತೆಯಒಪ್ಪಿಕೊಂಡಿತ್ತು.

ಈ ಸಾಮ್ರಾಜ್ಯಗಳಲ್ಲಿ ಕ್ರಮವಾಗಿ ಮರಾಠಿ, ತೆಲಗು, ಕನ್ನಡ ಮತ್ತು ತಮಿಳ ಭಾಷೆಗಳು ನಡೆಯುತ್ತಿದ್ದವು. ಇದರಿಂದ ಗೊತ್ತಾಗುವದೇನಂದರೆ ಈ ಭಾಷೆಗಳ ರೂಪರೇಖೆಯು ಹದಿಮೂರನೆಯ ಶತಮಾನದಲ್ಲಿಯೇ ಆಗಿಹೋಗಿತ್ತು. ಈ ನಾಲ್ಕು ರಾಜ್ಯಗಳು ಪರಸ್ಪರವಾಗಿ ಜಗಳಾಡುತ್ತಿದ್ದವು. ಬಹುತರವಾಗಿ ಜಯಾಪಜಯದೊಡನೆಯೇ ರಾಜ್ಯಗಳ ಮೇರೆಯಲ್ಲಿಯೂ ಹೆಚ್ಚುಕಡಿಮೆಯಾಗುತ್ತಿತ್ತು. ಹದಿನಾಲ್ಕನೆಯ ಶತಮಾನದಲ್ಲಿ ಈ ನಾಲ್ಕು ರಾಜ್ಯಗಳು ಮುಸಲ್ಮಾನರ ಕೈಕೆಳಗೆ ಬಂದವು. ಆದರೆ ಕಾಕತೀಯ ರಾಜವಂಶವು ಹದಿನೈದನೆಯ ಶತಮಾನದ ಪ್ರಾರಂಭದವರೆಗೆ ಕಾಳಗವಾಡುತ್ತ ನಡೆದಿತ್ತು. ದಕ್ಷಿಣದ ವಾಯವ್ಯ ಮತ್ತು ಮಧ್ಯಭಾಗಗಳು ೧೩೪೭ರಲ್ಲಿ ಬಹಮನೀರಾಜ್ಯವು ಸ್ಥಾಪಿತವಾದ್ದರಿಂದ ಪಾರತಂತ್ರ್ಯಹೊಂದಿ ಹಿಂದುಗಳ ಕೈಯಿಂದ ಹೋದದ್ದಾಯಿತು. ಒಡಿಸಾದ ಗಂಗ ಮತ್ತು ಕೋಂಡವಿಡದ ರೇಡಿಯು ಸುಮಾರು ಒಂದು ಶತಮಾನವು ಮತ್ತು ಆ ವಿರೋಧಕ್ಕಾಗಿ ಶೌರ್ಯತನದಿಂದ ನಡಿಸಿದ್ದಾಯಿತು. ಅದರಿಂದ ಕಾಕತೀಯರೂ ಸಾಗಿಸಿಬರಲು ಕೇರಲದ ಸಣ್ಣ ಸಣ್ಣ ರಾಜ್ಯಗಳು ಮತ್ತೆ ಪ್ರಾರಂಭಿಸಿದವು. ಯಾಕೆಂದರೆ ಇಸ್ಲಾಮಿಯರ ದಾಳಿಯು ಅಲ್ಲಿಯವರೆಗೆ ಮುಟ್ಟಿದ್ದಿಲ್ಲ. ಹದಿನೈದನೇ ಶತಮಾನದ ಅಂತ್ಯದಲ್ಲಿ ದಕ್ಷಿಣ ಹಿಂದುಸ್ತಾನದಲ್ಲಿ ಎರಡು ಪ್ರಮುಖರಾಜ್ಯಗಳು ಇದ್ದವು. ಒಂದು ಬಹಮನೀರಾಜ್ಯವು ಎರಡನೆಯದು ವಿಜಯನಗರ ರಾಜ್ಯವು. ಇದನ್ನು ಹೊಯಿಸಾಲ ಬಲ್ಲಾಳರಾಜ್ಯದ ತಳಹದಿಯ ಮೇಲೆ ಈ ವಂಶದ ಒಬ್ಬ ಪುರುಷನು ೧೩೩೬ನೆ ಇ. ಯಲ್ಲಿ ಸ್ಥಾಪಿಸಿದ್ದನು. ಕಾಲಿಕತ್ತದಿಂದ ಸಿಂಹಳದವರೆಗೆ ತುಸು ಭೂಭಾಗವನ್ನು ಳಿದು ವಿಜಯನಗರ ಸಾಮ್ರಾಜ್ಯದ ಪತಾಕೆಯು ಕಾವೇರೀ ತುಂಗಭದ್ರಾ ನದಿಗಳ ನಡುವಿನ ಯಾವತ್ತೂ ದಕ್ಷಿಣ ದೇಶದ ಮೇಲೆ ಬೀಸುತ್ತಿತ್ತು. ಪಶ್ಚಿಮ ದಂಡೆಗೆ ಗೋವೆಯಿಂದ ಮಂಗಳೂರದವರೆಗಿನ ಪ್ರದೇಶವೂ ಈ ಸಾಮ್ರಾಜ್ಯದಲ್ಲಿಯೇ ಸೇರಿತ್ತು. ಕೃಷ್ಣಾ ಮತ್ತು ತುಂಗಭದ್ರೆಯ ದುಆಬ, ಕೃಷ್ಣಾನದಿಯ ಡೆಲ್ಟಾದ ಮಧ್ಯವರ್ತಿಯ ಭಾಗ, ತೆಲಂಗ ಮತ್ತು ಒಡಿಸಾಗಳಮೇಲೆ ಬಹಮನೀರಾಜ್ಯ ಮತ್ತು ವಿಜಯನಗರ ರಾಜ್ಯಗಳ ಸಂಗ್ರಾಮವು ನಡೆಯುತ್ತಿರುತ್ತಿತ್ತು. ಅಬುಲ್ ರಜ್ಜಾಕನ ಅಭಿಪ್ರಾಯ

ನೇನಂದರೆ ಆ ಕಾಲದಲ್ಲಿ ಕಾಲಿಕಟದ ಝಮೋರಿನನು ವಿಜಯನಗರದ ಅಂಕಿತನಾಗಿದ್ದಿಲ್ಲ. ಅದರ ಅದಕ್ಕೆ ಅಂಜಿದವನಾಗಿದ್ದನೆಂಬದು ನಿಜ ಮಲಬಾರವನ್ನೂ ಆತನು ವಿಜಯನಗರ ರಾಜ್ಯದ ಸೀಮೆಯನ್ನಾಗಿ ಬರೆದಿರುವನು. ತಂಜಾವರ ಮತ್ತು ಮಧುರೆಯ ಕೋಳ ಮತ್ತು ಪಾಂಡ್ಯ ರಾಜವಂಶಗಳೂ ವಿಜಯನಗರದ ಆಧೀನತೆಯಲ್ಲಿದ್ದವು. ಈ ಪ್ರಕಾರ ಉತ್ತರ ಮತ್ತು ದಕ್ಷಿಣಕರ್ನಾಟಕ ಪ್ರದೇಶದಲ್ಲಿಯೂ ವಿಜಯನಗರ ಸಾವಮ್ರಾಜ್ಯದ ಎಷ್ಟೋ ಭಾಗವು ವಿದ್ಯಮಾನವಾಗಿತ್ತು. ಈ ಎಲ್ಲವೂ ಕಪ್ಪಕೊಡುತ್ತಿದ್ದವು, ಮತ್ತು ಅವಶ್ಯಕತೆಯಿದ್ದರೆ ಸೈನಿಕಸಹಾಯವನ್ನೂ ಕೊಡುತ್ತಿದ್ದವು.

ಮೇಲ್ಕಾಣಿಸಿದ ದಕ್ಷಿಣಭಾಗವನ್ನು ಬಿಟ್ಟು ಸಮಸ್ತ ಮಹಾರಾಷ್ಟ್ರದಲ್ಲಿ ಬಹಮನೀ ಸಾವಮ್ರಾಜ್ಯವಿತ್ತು. ಕೃಷ್ಣಾನದಿಯ ದಕ್ಷಿಣಭಾಗವನ್ನು ಬಿಟ್ಟು ಯಾವತ್ತು ತೆಲಂಗಣ ಪ್ರಾಂತದಮೇಲೂ ಇವರ ಅಧಿಕಾರವಿತ್ತು. ಇದರಲ್ಲಿ ಮುಂಬಯಿ ಇಲಾಖೆಯ ಮರಾಠಿಪ್ರಾಂತ, ನಿಜಾಮರಾಜ್ಯ, ವರಾಡ ಮತ್ತು ಉತ್ತರಸರಕಾರ ಇವೂ ಇದ್ದವು. ಹದಿನೈದನೇ ಶತಮಾನದ ಉತ್ತರಾರ್ಧದಲ್ಲಿ ಸದ್ಯದ ಮಧ್ಯಪ್ರಾಂತದ ದಕ್ಷಿಣಭಾಗವೂ ಈ ರಾಜ್ಯದಲ್ಲಿತ್ತು. ವಿಜಯನಗರ ಸಾವಮ್ರಾಜ್ಯದಲ್ಲಿ ಕನ್ನಡ ಮತ್ತು ತೆಲಗು ಭಾಷೆಗಳೂ, ಬಾಮನೀರಾಜ್ಯದಲ್ಲಿ ಮರಾಠಿ ಹಾಗು ತೆಲಗು ಭಾಷೆಗಳೂ ಇದ್ದವೆಂದು ಹೇಳಬಹುದು.

ಅಬ್ದುಲ್ ರಜಾಕ ಮತ್ತು ನಿಕಿಟನರು ಬರೆಯುವದೇನಂದರೆ—ನಾವು ನಮ್ಮ ಪ್ರವಾಸದಲ್ಲಿ ಎಲ್ಲೆಡೆಯಲ್ಲಿಯೂ, ಬಹುಜನರಿಂದ ತುಂಬಿತುಳುಕುತ್ತಿರುವ ಮತ್ತು ಸುಖ ಸಮೃದ್ಧಿಶಾಲಿಯಾದ ನಗರ ಮತ್ತು ಗ್ರಾಮಗಳು ಕಂಡುಬರುತ್ತಿದ್ದವು. ಕೊಂಟೆಯು ಬರೆಯುವದೇನಂದರೆ ಈ ಕಾಲದಲ್ಲಿ ಭಯಂಕರ ರೋಗದ (೧೫ನೇ ಶತಮಾನದಲ್ಲಿ ಯುರೋಪಖಂಡದಲ್ಲಿ ಯಾವರೋಗವು ಹಬ್ಬಿತ್ತೋ ಅದರ) ಸುದ್ದಿಯು ಕೂಡ ಭರತಖಂಡದಲ್ಲಿದ್ದಿಲ್ಲ. ದೇಶವೆಲ್ಲ ಬಹುಜನ ಪೂರ್ಣವಿದ್ದಿತೆಂದು ಸಿದ್ಧವಾಗುವದು. ದೇಶದಲ್ಲಿ ಕೃಷಿ, ಶಿಲ್ಪ ಮತ್ತು ವ್ಯವಸಾಯಗಳು ಒಳೇ ಉನ್ನತಿಯಲ್ಲಿದ್ದವು. ಆ ಕಾಲದಲ್ಲಿಯ ಪ್ರಜಾಜನರ ಸಮೃದ್ಧಿಯ ಮತ್ತು ಅರಸನ ಪ್ರಜಾವಾತ್ಸಲ್ಯದ ಒಂದು ಉದಾಹರಣೆಯನ್ನು ಕೊಟ್ಟರೆ ಸಮಯೋಚಿತವಾಗಬಹುದು. ಒಂದು ದಿನ ಸುಲ್ತಾನ ಫಿರೋಜಶಹಾ ಬಾಮನಿ ಬಾದಶಹನು (೧೪೯೭ರಿಂದ ೧೪೨೨ ಇ. ವರೆಗೆ ಆಳಿದನು.) ಎಲ್ಲಿಯೋ ಹೊರಟಿದ್ದನು ಮಾರ್ಗದಲ್ಲಿ ಒರ್ವ ಭಿಕ್ಷುಕನನ್ನು ನೋಡಿ ಅವನು ಆತನ ಭಿಕ್ಷಾಪಾತ್ರೆಯನ್ನು ನೋಡಲು ಅದರಲ್ಲಿ ಭಿಕ್ಷೆ ದೊರೆತ ತುಸು ಜೋಳದ ಧಾನ್ಯಗಳು ಬಿದ್ದಿದ್ದವು. ಇದರಿಂದ ಸುಲ್ತಾನನಿಗೆ ವಿಚಾರಹುಟ್ಟಿದ್ದೇನಂದರೆ ಜೋಳವು ಅಪ್ಪಾಯಿಂದ ಉತ್ತಮ [illegible] ಮತ್ತು ಮನುಷ್ಯರಿಗೆ ಇದಕ್ಕೂ ಹೆಚ್ಚಾದ (ಎಷ್ಟಿಕ) ಆಹಾರವು ದೊರೆಯಬೇಕು. ಈ ವಿಚಾರವನ್ನು ತೆಗೆದುಕೊಂಡು ತನ್ನ ರಾಜ್ಯದಲ್ಲಿ ಗೋದಿಯ ಭೂಮಿಗೆ ವಿಶೇಷ ವ್ಯವಸ್ಥೆಯನ್ನು ಮಾಡಿ

ದನು. ಮತ್ತು ಭಿಕ್ಷುಕರ ಭಿಕ್ಷಾಪಾತ್ರೆಯಲ್ಲಿಯೂ ಗೋದಿಯು ಬೀಳುವ ವರೆಗೆ ಕಾರ್ಯದಲ್ಲಿಯೇ ತೊಡಗಿದವನಾದನು. ಗೋದಾವರೀ ಕೃಷ್ಣೆಗಳಿಂದ ತೊಯ್ಯುವ ಪ್ರದೇಶದಲ್ಲಿ, ಬಾಮನೀಕಾಲದ ಜಲಾಶಯಗಳು ಈಗ್ಯೂ ಇರುವವು. ಅವುಗಳ ಸಹಾಯದಿಂದ ಬತ್ತದ ಎರಡನೆಯ ಬೆಳೆಯನ್ನು ಮಾಡಿಕೊಳ್ಳುತ್ತಿದ್ದರು. ಇದರಿಂದ ಈ ಕಾಲ ರಾಜಕೀಯ ಅಧಿಕಾರಿಗಳ ಯೋಗ್ಯತೆಯು ಪ್ರಕಟವಾಗುವದು. ಈ ಕಾಲದಲ್ಲಿಯೆ ಹಣ್ಣಿನ ತೋಟಗಳನ್ನು ಮಾಡಿದರು. ಮತ್ತು ಬೇದರದಲ್ಲಿ ಕೇಶರದ ಹೊಲದ ವ್ಯವಸಾಯನ್ನುಮೂಡಿತ್ತು. ಹದಿನೈದನೇ ಶತಮಾನದಲ್ಲಿ ದಕ್ಷಿಣಹಿಂದುಸ್ತಾನದಿಂದ ಅನೇಕತರದ ಮಸಾಲೆಯೊಡನೆ ರೇಸಿಮೆ, ಮತ್ತು ನೂಲಿನ ತರತರದ ಬಟ್ಟೆಗಳು ದೂರದೇಶಕ್ಕೆ ಹೋಗುತ್ತಿದ್ದವು.

ನಿಕಿಟನನು ಬರೆದಿರುವದೇನಂದರೆ ಬೇದರದ ಪೇಟೆಯಲ್ಲಿ ಒಂದಾದರೂ ವಿದೇಶದ ವಸ್ತುವು ಮಾರುತ್ತಿದ್ದಿಲ್ಲ. ಯಾವತ್ತು ವಸ್ತುಗಳು ಸ್ವದೇಶದಲ್ಲಿಯೇ ನಿರ್ಮಿತವಾಗುತ್ತಿದ್ದವು. ಹೊರಗಿನಿಂದ ಕೇವಲ ಕುದುರೆಗಳನ್ನು ಮಾತ್ರ ತರಿಸುತ್ತಿದ್ದರು. ಇದರ ಹೊರ್ತಾಗಿ ಯಾವದೇ ಎರಡನೆಯ ವಸ್ತುವಿನ ಸಲುವಾಗಿ ಹೊರಗಿನವರ ಮೋಹವನ್ನು ನೋಡಬೇಕಾಗುತ್ತಿದ್ದಿಲ್ಲ. ಹೆಚ್ಚಾಗಿ ಜನರು ಅನೇಕ ತರದ ರತ್ನದ ಖಣಿಗಳಲ್ಲಿ ಕೆಲಸಮಾಡುತ್ತಿದ್ದರು. ಮತ್ತು ಶಿಲ್ಪ ಮುಂತಾದ ಕಾರ್ಯಗಳಲ್ಲಿ ತೊಡಗಿದವರಾಗಿದ್ದರು. ಇದರಿಂದ ಗೊತ್ತಾಗುವದೇನಂದರೆ ಆ ಕಾಲದಲ್ಲಿ ದಕ್ಷಿಣಭಾರತವು ವೈಭವಶಾಲಿಯಾಗಿತ್ತು. ಕೈಂಬೆ, ಟೌಲ, ಉಭೋಲ, ಮುಂಗಳೂರ, ಕಾಲಿಕಟ ಮತ್ತು ಕ್ವಿತಿನ ಈ ಬಂದರಗಳಿಂದ್ಮಬಹಳ ವ್ಯಾಪಾರವಾಗುತ್ತಿತ್ತು. ಅಲ್ಲಿ ಯಾವಾಗಲೂ ಜನದಟ್ಟಣೆಯಿರುತ್ತಿತ್ತು. ಭಾರತೀಯರಲ್ಲಿ ವಿದ್ಯಾಪೂರ್ಣತೆಯಿತ್ತು. ಕೊಂಕಣದ ದಂಡಯಲ್ಲಿ ವಾಸಿಸುವ ಬಹು ಜನರು ತಮ್ಮ ಸ್ವತಂತ್ರ ಹಡಗಗಳನ್ನಿಟ್ಟಿದ್ದರು. ಮತ್ತು ಇವರಲ್ಲಿಯು ಕೆಲಜನರು ಸಮುದ್ರಗಳ್ಳರ ಕೆಲಸವನ್ನೂ ಮಾಡುತ್ತಿದ್ದರು. ಅವರಿಗೆ ಅರಬಿ ಸಮುದ್ರದೊಳಗಿನ ವ್ಯಾಪಾರಸ್ಥರು ಅಂಜುತ್ತಿದ್ದರು. ಗಿಲನೆಯ ಶತಮಾನದಲ್ಲಿ ಅಂಗ್ರೆ ಎಂಬ ಹೆಸರಿನ ಇವರ ಒಬ್ಬ ಸರದಾರನು ಇಸ್ಟ ಇಂಡಿಯಾ ಕಂಪನಿಯಿಂದ ಅರಬೀಸ ಮುದ್ರದ ಅಧಿಪತ್ಯಕ್ಕಾಗಿ ದೊಡ್ಡ ಸಂಗ್ರಾಮವನ್ನು ಮಾಡುವಷ್ಟು ಪ್ರಬಲನಾಗಿದ್ದನು.

ಕಾಲಿಕಟದಲ್ಲಿ ದೊಡ್ಡ ಗೋದಿಗಳಿದ್ದವು. ಮತ್ತು ನಿಶ್ಚಿತ ದಲಾಲಿಯಿಂದ ವ್ಯಾಪಾರವು ನಡೆಯುವಂತೆ ವ್ಯವಸ್ಥೆಯಿತ್ತು. ಇದರಿಂದಲೆ ಕಾಲದ ವ್ಯಾಪಾರವು ದೊಡ್ಡ ಪ್ರಮಾಣದಲಿತೆಂದು ಗೊತ್ತಾಗುವದು. ಕೊಂಟಿಯು ಭಾರತೀಯ ಹಡಗದ ವರ್ಣನೆಯನ್ನು ಮಾಡುತ್ತ ಬರೆಯುವದೇನಂದರೆ ಯುರೋಪದ ಹಡಗಕ್ಕಿಂತಲೂ ಈ ಹಡಗಗಳು ಎಷ್ಟೋ ಚನ್ನಾಗಿರುವವು. ಕೆಲಕೆಲವು ವ್ಯಾಪಾರಸ್ಥರ ಬಳಿಯಲ್ಲಿ ೪೦-೫೦ ಹಡಗಗಳಿದ್ದವು. ಪ್ರತಿಯೊಂದು ಹಡಗದ ಬಲಯು ಬಹುತರವಾಗಿ ೫೦ ಸಾವರಬಂಗಾರದನಾಣ್ಯಗಳಾಗಿದ್ದವು. ಮಾಲು ವಿಕ್ರಯವಾದ ನಂತರ ನೂರಕ್ಕೆ ೩॥ ದಲಾಲಿಯು

ವಸೂಲು ಮಾಡಲ್ಪಡುತ್ತಿತ್ತು. ಒಂದು ವೇಳೆ ಯಾವದೇ ಕಾರಣದಿಂದ ಜೀನಸು ಮಾರದಿದ್ದರೆ ಏನೂ ದಲಾಲಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಈ ಕಾಲದಲ್ಲಿ ಕಾಲಿ ಕಟದಹೊರ್ತಾಗಿ ಅನ್ಯ ಸ್ಥಳಗಳಲ್ಲಿ ಕಾಗದವು ದೊರೆಯುತ್ತಿದ್ದಿಲ್ಲ. ಮತ್ತು ಅದರ ಕೆಲಸವನ್ನು ಎಲೆಗಳಿಂದ ಮಾಡುತ್ತಿದ್ದರು. ಅರಿವೆಯ ಮೇಲೂ ಬರೆಯುತ್ತಿದ್ದರು.

ಮೂರೂ ಪ್ರವಾಸಿಕರಲ್ಲಿ ಯಾರೂ ಆ ಕಾಲದಲ್ಲಿ ಹಬ್ಬಿದ ಯಾವ ರೋಗದ ಉಲ್ಲೇಖವನ್ನೂ ಮಾಡಿರುವದಿಲ್ಲ. ಇಷ್ಟುವರ್ಷಗಳ ವರೆಗೆ ಭ್ರಮಣ ಮಾಡುತ್ತಿದ್ದರೂ ಯಾವದೇ ಸಾಂಕ್ರಾಮಿಕ ರೋಗಗಳು ಅವರಿಗೆಕಂಡುಬರಲಿಲ್ಲ. ಇದರ ಅರ್ಥವೇನಂದರೆ ಆ ಕಾಲದಲ್ಲಿ ಜನತೆಯ ಸ್ವಾಸ್ಥೆಯು ಬಹಳೇ ಚನ್ನಾಗಿತ್ತು, ಮತ್ತು ಸ್ವಚ್ಛತೆಯ ಬಗ್ಗೆ ಎಚ್ಚರಿಕೆಯೂ ಇರುತ್ತಿತ್ತು. ಆ ಕಾಲದಲ್ಲಿ ಕಳವಾದ ಜೀನಸನ್ನು ತಂದೊಪ್ಪಿಸಬೇಕು. ಇಲ್ಲವೆ ಕಳವಾದ ಜೀನಸಿನ ಬೆಲೆಯನ್ನು ಕೊಡಬೇಕು ಈ ಶರ್ತುಗಳಿಂದ ಕಾಲದಲ್ಲಿ ಚೌಕಿದಾರರ ನೇಮಣೂಕಿಯಾಗುತ್ತಿತ್ತು. ಮೇಲೆ ಹೇಳಿದಂತೆ ಆ ಸಮಯದಲ್ಲಿ ಕೆಲವು ಸ್ಥಳಗಳಲ್ಲಿ ರತ್ನದ ಖಣಿಗಳಿದ್ದವು. ಅದರಿಂದ ಬಹಳೇ ಜನರು ಕೆಲಸದಲ್ಲಿ ತೊಡಗುತ್ತಿದ್ದರು. ಪ್ರವಾಸಿಗಳು ಈ ವಿಷಯವಾಗಿ ವಿಸ್ತಾರವಾಗಿ ವರ್ಣನೆಯನ್ನು ಮಾಡಿರುವರು. ಕೊಹಿನೂರು ರತ್ನವು ಗೋವಲಕೊಂಡದ ಖಣಿಯಲ್ಲಿಯೇ ದೊರೆತದ್ದೆಂಬದನ್ನು ಹೇಳುವ ಅವಶ್ಯಕತೆಯಿಲ್ಲ. ಅಬ್ದುಲ್‌ರಜಾಕನು ಬರೆದಿರುವದೇನದಂರೆ ವಿಜಯನಗರದಲ್ಲಿ ರತ್ನಗಳ ಕ್ರಯವಿಕ್ರಯಕ್ಕಾಗಿ ಒಂದು ಬೇರೆ ಪೇಟೆಯೇ ತಯಾರಿಸಲ್ಪಟ್ಟಿತ್ತು.

ಆ ಕಾಲದಲ್ಲಿ ಹೊನ್ನು, ಟಂಕೆ ಮೊದಲಾದ ಹೆಸರಿನ ಬಂಗಾರ, ಬೆಳ್ಳಿ ತಾಮ್ರಗಳನ್ನು ನಾಣ್ಯಗಳು ನಡೆಯುತ್ತಿದ್ದವು. ಟಂಕಸಾಲೆಯಲ್ಲಿ ಬಂಗಾರವನ್ನು ತೆಗೆದು ಕೊಂಡು ಹೋದವರಿಗೆ ಸರಕಾರೀ ಖರ್ಚಿನಿಂದ ಸಿಕ್ಕೆಯನ್ನು ಹೊಡೆದುಕೊಡುತ್ತಿದ್ದರು. ಆನೆಗಳನ್ನು ಹಿಡಿಯುವದೂ ಸಾಕುವದೂ ಬಹಳೇ ಭರದಿಂದ ನಡೆಯುತ್ತಿತ್ತು. ಈ ಪ್ರವಾಸಿಗಳು ವಿಜಯನಗರ ಮತ್ತು ಬೇದರದ ವರ್ಣನೆಯನ್ನು ಮಾಡುವಾಗ ದಕ್ಷಿಣ ಭಾರತವಾಸಿಗಳು ಆ ಕಾಲದಲ್ಲಿ ಅತ್ಯಂತ ಸಮೃದ್ಧಿಶಾಲಿಯಾಗಿದ್ದರೆಂದು ಬರೆದಿರುವರು.

ಕೊಂಟೀಯು ಬರೆಯುವದೇನಂದರೆ ವಿಜಯನಗರವು ಸುಮಾರು ೬೦ ಮೈಲು ಪರಿಘದಲ್ಲಿ ವ್ಯಾಪಿಸಿರುವದು. ಅಬ್ದುಲ್ ರಜಾಕನು ಬರೆಯುವದೇನಂದರೆ ವಿಜಯನಗರದ ಉತ್ತರ ದ್ವಾರವು ದಕ್ಷಿಣದಿಂದ ಎಂಟು ಮೈಲು ಅಂತರದ ಮೇಲಿತ್ತು. ನಗರದ ರಕ್ಷಣೆಗಾಗಿ ಏಳು ಪ್ರಾಕಾರಗಳು ತಯಾರಿಸಲ್ಪಟ್ಟಿದ್ದವು. ಮೊದಲಿನ ಮೂರು ಪ್ರಾಕಾರಗಳಲ್ಲಿ ತೋಟ ಉಪವನ ಮತ್ತು ನಾನಾತರದ ಬೈಲು (ಆಟ) ಪ್ರದೇಶಗಳು ಇದ್ದವು. ಅವು ಒಂದು ದೊಡ್ಡ ಕೆರೆಯಿಂದ ನೀರುನ್ನುಣ್ಣುತ್ತಿದ್ದವು. ಕೆಳಭಾಗದಲ್ಲಿ ಕೋಟೆಯಿತ್ತು. ಅದರ ಮಧ್ಯಭಾಗದಲಿ ರಾಜಪ್ರಾಸಾದ, ಟಂಕಸಾಲೆ ಮಂತ್ರಿ ಮಂಡಲದ ಕಚೇರಿ, ಮುಖ್ಯ ನ್ಯಾಯಾಕಚೇರಿ ಮತ್ತು ಮುಖ್ಯಾಧಿಕಾರಿಗಳ ಆಫೀಸುಗಳಿದ್ದವು.

ಶಹರದ ಓಣಿ ಹಾಗು ಪೇಟೆಗಳಲ್ಲಿ ಕಲ್ಲಿನಿಂದ ಕಟ್ಟಿದ ಅನೇಕ ಕಾಲುವೆಗಳು ಹರಿಯುತ್ತಿದ್ದವು. ಪ್ರತಿಯೊಂದು ವಸ್ತುವಿನ ಮಾರಾಟದ ಬಗ್ಗೆ ಒಂದು ಪೇಟೆಯು ಇರುತ್ತಿತ್ತು. ರತ್ನ ಹಾಗೂ ಮುತ್ತುಗಳಿಗಾಗಿ ಪ್ರತ್ಯೇಕವಾದ ಒಂದು ಪೇಟೆಯಿತ್ತು. ಒಂದು ಪೇಟೆಯಲ್ಲಿ ಕೇವಲ ಹೂವುಗಳೇ ಮಾರಲ್ಪಡುತ್ತಿದ್ದವು. ಶಾಹೀಮೊಹಲ್ಲೆಯ ಎಡಭಾಗದಲ್ಲಿ ಕೌನ್ಸಿಲಭವನ, ಪ್ರಧಾನ ಮಂತ್ರಿಯ ಕಚೇರಿ ಮತ್ತು ನ್ಯಾಯಾಸ್ಥಾನಗಳಿದ್ದವು ಅವುಗಳ ಹಿಂದೆ ಈ ಅಧಿಕಾರಿಗಳು ವಾಸಿಸುವ ಗೃಹಗಳನ್ನು ನಿರ್ಮಿಸಿದ್ದರು. ಬೀದಿಯ ಬಲಭಾಗದಲ್ಲಿ ಟಂಕಸಾಲೆಯಿತ್ತು. ಪ್ರತಿಯೊಂದು ಪ್ರಾಕಾರವು ಅಥವಾ ಕೋಟೆಯು ಒಂದು ಸ್ವತಂತ್ರ ನಗರದ ರೂಪದಲ್ಲಿತ್ತು. ಶಹರದ ಅವಶೇಷಗಳು ಮಾತ್ರ ಈಗಲೂ ಗೋಚರವಾಗುವವು. ಅದರಿಂದ ಇದರ ವಿಸ್ತಾರದ ಕಲ್ಪನೆಯಾಗುವದು. ವಿಜಯನಗರವು ೧೩೨೬ ಇ. ಯಲ್ಲಿ ಸ್ಥಾಪಿಸಲ್ಪಟ್ಟಿತ್ತು. ಅದರೆ ಸುಮಾರು ಎರಡುನೂರು ವರ್ಷಗಳಿಗಿಂತ ಹೆಚ್ಚಾಗಿ ಬಾಳಿ ನಂತರ ೧೫೬೫ ಇ. ಯಲ್ಲಿ ಪೂರ್ಣ ನಷ್ಟವಾಯಿತು.

ಹದಿನೈದನೇ ಶತಮಾನದಲ್ಲಿ ದಕ್ಷಿಣ ಹಿಂದುಸ್ತಾನದಲ್ಲಿ ಹಿಂದು ಹಾಗು ಇಸ್ಲಾಮ ಧರ್ಮಗಳು ಮುಖ್ಯ ಧರ್ಮಗಳಾಗಿದ್ದವು. ಸಮುದ್ರತಟದಲ್ಲಿ ತುಸುಮಟ್ಟಿಗೆ ಯಹೂದಿ ಮತ್ತು ಈಸಾಯಿಗಳೂ ಇದ್ದರು. ಹಿಂದುಗಳಲ್ಲಿ ಬೌದ್ಧಮತದ ಲೋಪವು ಆಗಿ ಹೋಗಿತ್ತು. ಮತ್ತು ಜೈನಮತದ ಮೊದಲಿನ ಪ್ರಭಾವವು ಉಳಿದಿದ್ದಿಲ್ಲ. ಜೈನ ಮತದ ಸ್ಥಾನವನ್ನು ಪಶ್ಚಿಮೋತ್ತರಗಳಲ್ಲಿ ಲಿಂಗವಂತ ಮತವೂ ಮತ್ತು ದಕ್ಷಿಣ ಪೂರ್ವದಲ್ಲಿ ವೈಷ್ಣವ ಮತವೂ ಆಕ್ರಮಿಸಿದ್ದವು.

ವ್ಯಾಪಾರದ ಮೇಲೆ ಹಿಂದೂ ಅರಸರ ಪೂರ್ಣ ಅಧಿಕಾರವಿತ್ತು. ಹದಿನೈದನೇ ಶತಮಾನದ ಮೊದಲೇ ಸಮುದ್ರಮಾರ್ಗದಿಂದ ಅರಬಸ್ತಾನ ಮತ್ತು ಇರಾಣದ ವ್ಯಾಪಾರಸ್ಥರು ದಕ್ಷಿಣದಲ್ಲಿ ಮುಟ್ಟಿದ್ದರು. ಹಿಂದೂರಾಜರು ಅವರ ಸಂಗಡ ಚಲೋ ರೀತಿಯಿಂದ ಇರುತ್ತಿದ್ದರು. ಎಲ್ಲಿ ಬಂದರದ ಸಮೀಪದಲ್ಲಿ ಅವರ ವಾಸಸ್ಥಳವಿತ್ತೋ ಅಲ್ಲಿ ಅವರೇ ಮಾಡಿದ ಕಾಯಿದಾಯಿ ನಡಯುತ್ತಿತ್ತು. ಮತ್ತು ಅವರಲ್ಲಿಯೇ ಕಾಜಿ ಮೊದಲಾದವರನ್ನು ಮಾಡಿಕೊಳ್ಳುತ್ತಿದ್ದರು. ಒಂದು ರೀತಿಯಿಂದ ವ್ಯಾಪಾರದ ಎಲ್ಲ ಕಾರಭಾರವನ್ನು ಅವರ ಮೇಲೆಯೇ ಬಿಟ್ಟುಬಿಟ್ಟಿದ್ದರು. ಹದಿನೈದನೇ ಶತಮಾನದ ಮೊದಲೇ ಹಿಂದೂ ರಾಜರು ಮುಸಲ್ಮಾನರಿಗೆ ಮುಲೀ ಹಾಗು ದಂಡಿನ ವಿಭಾಗದಲ್ಲಿ ನೌಕರಿಯನ್ನು ಕೊಡಲು ಪ್ರಾರಂಭಿಸಿದ್ದರು. ವಿಜಯನಗರದ ಅರಸರು ತಮ್ಮ ಇಸ್ಲಾಮ ಪ್ರಜೆಗಳ ಹಾಗು ಇಸ್ಲಾಮ ನೌಕರರಿಗಾಗಿ ಸರಕಾರೀ ಖರ್ಚಿನಿಂದ ಒಂದು ಮಸೀದೆಯನ್ನು ಕಟ್ಟಿಸಿದ್ದರು. ಮತ್ತು ತಮ್ಮ ಮುಂದೆ ಅದರದೂಡನೆ ಒಂದು ಚಾಳಕನಲ್ಲಿ ಕುರಾಣವನ್ನು ನೋಡುವದಕ್ಕಾಗಿ ಇಟ್ಟಿದ್ದರು. ಅದರಿಂದ ಮುಸಲ್ಮಾನ ಧರ್ಮದ ಬಗ್ಗೆ ಅವರದು ಹಿಂದುಧರ್ಮಪಕ್ಷಪಾತೀ ಲಕ್ಷವಿರುವದೆಂಬದು ತಿಳಿಯುವದು. ಹದಿನೈದನೇ

ತಮಾನದ ದಕ್ಷಿಣ ಹಿಂದುಸ್ತಾನದ ಒಂದು ನೋಟವಿರುವದು. ಇದರ ವಿಷಯವಾಗಿ ಸತ್ತು ತುಸು ಹೆಚ್ಚುಕಡಿಮೆ ಹೇಳಬಹುದಾಗಿದೆ. ಆಯಾ ಕಾಲದ ಪರಿಸ್ಥಿತಿಯನ್ನು ಸದ್ಯದ ಸ್ಥಿತಿಗೆ ತುಲನೆಮಾಡುವದಕ್ಕಾಗಿ ಈ ಸಾಮಗ್ರಿಯು ಪರ್ಯಾಪ್ತವಾಗಬಹುದು.

# ಚಿಕ್ಕಮಕ್ಕಳಿಗೆ ಹೇಳುವ ಕಥೆಗಳು

( ಲೇಖಕ:—ಭೀಮಾಜಿ ಕೃಷ್ಣ ಕುಡೇವಾಡಕರ, ಬಿ. ಎಸ್ಸಿ. ಎಲ್ಎಲ್. ಬಿ. )

ಚಿಕ್ಕಮಕ್ಕಳಿಗೆ ಕಥೆ ಕೇಳುವದೆಂದರೆ, ತುಂಬಾ ಪ್ರೀತಿ. ಅವರು ಒಂದು ವೇಳೆ ಊಟವನ್ನಾದರೂ, ಬಿಡುವರು; ನಿದ್ದೆಯನ್ನಾದರೂ ಕೆಡುವರು; ಆದರೆ ಕಥೆ ಹೇಳುವ ಹೊಳದಿಂದ ಬಿಟ್ಟೇಳರು. ಮತ್ತು ಅವರಿಗೆ ಯಾರಾದರೂ ಕಥೆ ಹೇಳುತ್ತ ಅರ್ಧಕ್ಕೇ ನಿಲ್ಲಿಸಿಬಿಟ್ಟರೆ ಪೂರ್ಣವಾಗಿ ಹೇಳಬೇಕೆಂದು ಬೇಡುವರು ಇಲ್ಲದಿದ್ದರೆ ಕಾಡುವರು. ಕಡೆಗೆ ಜಗ್ಗುಬಿಡುವರು.

ಮನೆಯಲ್ಲಿ ಅಜ್ಜಿಯು ಸುಮ್ಮನೆ ಕುಳಿತಿದ್ದರೆ ಮನೆಯ ಮಕ್ಕಳು ಅವಳ ಬಳಿಗ ಎಂದು. "ಅಜ್ಜಿ, ಅಜ್ಜಿ" ನಮಗೊಂದು ಚಲೋ ಕಥೆ ಹೇಳುವಿಯಾ ? ಎಂದು ತುಂಬಾಲ ಬೀಳುವರು. ಆಗ ಅವಳು ಮಕ್ಕಳಿಗೆ ಕಥೆ ಹೇಳಲಾರಂಭಿಸಿದರೆ, ಅವರು ಆಲಿಸುವದನ್ನು ಮಾಡಿದ ಅವಳ ಮುಖವನ್ನೂ; ಹಾವಭಾವಗಳನ್ನೂ ನೋಡುತ್ತ ಕಥೆಯ ಸ್ವಾರಸ್ಯವನ್ನು ಕುಡಿಯುತ್ತಾ ಆನಂದಪರವಶರಾಗುವರು

ಇನ್ನು ಕಥೆಗಾರನು ಯಾವ ಕಥೆಯನ್ನಾದರೂ, ಗೊತ್ತು ಗುರಿ ಇಲ್ಲದೆ; ಅರ್ಥವಾ ಉದ್ದೇಶವಿಲ್ಲದೆ ಹೇಳಬಾರದು. ನಾವು ಹೇಳುವ ಕಥೆಗಳು ಮಕ್ಕಳ ವಯಸ್ಸಿಗೆ ಅನುಗುಣವಾಗಿರಬೇಕು. ಮತ್ತು ಆ ಕಥೆಗಳಲ್ಲಿ ಚಿಕ್ಕಮಕ್ಕಳ ಚಿಕ್ಕ ಪ್ರಪಂಚದಲ್ಲಿ ಅವರು ಪ್ರತಿನಿತ್ಯವೂ, ಉಪಯೋಗಿಸುವ ಶಬ್ದಗಳೂ ಮಾತುಗಳೂ ಇರತಕ್ಕದ್ದು. ಅಂದರೆ ಪುಟ್ಟಮಕ್ಕಳ ಚಿಕ್ಕ ವ್ಯವಹಾರದಲ್ಲಿ ಬರುವ ಮಾತುಗಳ ಜತೆಯಲ್ಲಿ ಕೆಲವು ಹೊಸ ಶಬ್ದಗಳನ್ನು ಇಟ್ಟು; ಚಿಕ್ಕ ವಾಕ್ಯಗಳ ಮೂಲಕ ಕಥೆಗಳನ್ನು ಹೇಳುವದರಿಂದ ಅವರಿಗೆ ಕಥೆಯಲ್ಲಿ ಬರುವ ಹೊಸಶಬ್ದಗಳೂ; ಪದ ಪ್ರಯೋಗಗಳೂ ತಿಳಿದು ಅವರು ಅವೇ ಕಥೆಗಳನ್ನು ತಿರುಗಿ ಹೇಳುವಾಗ ಅವೇ ವಾಕ್ಯಗಳನ್ನು ಇಟ್ಟು ಹೇಳುವದರಿಂದ ಅವರಿಗೆ ಭಾಷಾಭಿವೃದ್ಧಿಯಾಗುವದು.

ಹೀಗೆ ಕಥೆಯ ಪಾಠದಲ್ಲಿ ಅವರು ಹೆಚ್ಚು ಹೆಚ್ಚು ಹೊಸಶಬ್ದಗಳನ್ನೂ ಸುಲಭವಾದ ಪದಪ್ರಯೋಗಗಳನ್ನೂ ಕಲಿತುಕೊಳ್ಳುವದರಿಂದ ಅವರಿಗೆ ಶಬ್ದ ಪ್ರಯೋ

ಗಗಳ ಬಾಹುಲ್ಯ ಉಂಟಾಗಿ ತಮ್ಮ ಮನಸಿನ ಅಭಿಪ್ರಾಯಗಳನ್ನು ನಿರಾಯಾಸವಾಗಿ ಬೇರೆಯವರಿಗೆ ತಿಳಿಸಲು ಸಮರ್ಥರಾಗುವರು. ಶಿಕ್ಷಕನು ಕಥೆಯಲ್ಲಿ ಸಂದರ್ಭಾನುಸಾರವಾಗಿ ವರ್ಣನೆಯಿಟ್ಟು ಹೇಳುವದರಿಂದ ಅವರ ಜ್ಞಾಪಕ ಶಕ್ತಿಯೂ, ಕಲ್ಪನಾ ಶಕ್ತಿಯೂ, ಅರಳುವವು. ಇದಲ್ಲದೆ ಅದರಲ್ಲಿ ಅಡಗಿರುವ ಬುದ್ಧಿಯ ಮಾತುಗಳನ್ನು ತಾವಾಗಿಯೇ ತಿಳಿದುಕೊಳ್ಳುವರು.

ಮಕ್ಕಳ ಕಥೆಗಳಲ್ಲಿ ಹೆಚ್ಚು ಹೆಸರುಗಳಾಗಲಿ ಅವರು ತಿಳಕೊಳ್ಳಲಿಕ್ಕೆ ಕಷ್ಟವಾದ ಸಂಗತಿಗಳಾಗಲಿ, ಇರಬಾರದು. ಅಂದರೆ ಅವರ ಅನುಭವದೊಳಗಿರುವ ವಿಷಯಗಳೇ ಇರತಕ್ಕದ್ದು. ಮತ್ತು ಅನೇಕ ವಿಷಯಗಳನ್ನು ಒಳಕೊಂಡಿರಬಾರದು. ಮತ್ತು ಮಕ್ಕಳ ಪರಿಚಯದಲ್ಲಿರುವ ವಿಷಯಗಳಿರುವದು ಒಳ್ಳೇದು. "ರಾಮಣ್ಣಾ ರಾಮಣ್ಣಾ ಮಾತಾಡೊ" "ಹುಲಿಯಣ್ಣಾ ಹುಲಿಯಣ್ಣಾ ಎಲ್ಲಿಗೆ ಹೋಗಿದ್ದಿ" ಹೀಗೆ ಪುನರುಕ್ತಿಗಳು ಕಥೆಯಲ್ಲಿ ಬರುವದು ಉತ್ತಮವು. ಮತ್ತು ಅಲ್ಲಲ್ಲಿ ಸಂಭಾಷಣಾ ರೂಪ ತರತಕ್ಕದ್ದು.

"ಒಂದು ಊರಲ್ಲಿ ಒಬ್ಬ ಮುದಿಕಿ ಇದ್ದಳು ಅವಳಿಗೆ ಕಣ್ಣು ಕಟ್ಟುನ ವಿದ್ಯೆಯು ಬರುತ್ತಿತ್ತು. ಅವಳ ಹತ್ತರ ಒಂದು ಮಂತ್ರದ ಬಡಿಗೆ ಇತ್ತು. ಆ ಬಡಿಗೆಯಿಂದ ಇಲಿಯನ್ನು ಮುಟ್ಟಿದರೆ ಹುಲಿಯಾಗುತ್ತಿತ್ತು. ಹುಲಿಯನ್ನು ಮುಟ್ಟಿದರೆ ಇಲಿಯಾಗುತ್ತಿತ್ತು. ಅದನ್ನು ನಾಡಿನಲ್ಲಿ ಒಯ್ದರೆ ಕಾಡು ಆಗುವದು. ಕಾಡಿನಲ್ಲಿ ಒಯ್ದರೆ ನಾಡಾಗುವದು"— ಇದರಂತೆ "ಒಂದು ದೊಡ್ಡ ಗುಡ್ಡ; ಆ ಗುಡ್ಡದ ಮೇಲೆ ಒಂದು ದೊಡ್ಡಮನೆ. ಆ ಮನೆಯಲ್ಲಿ ಒಂದು ದೊಡ್ಡ ರಾಕ್ಷಸ ಇರುತ್ತಿತ್ತು. ಅದು ಒಂದು ದಿವಸ ಬಾಗಿಲಿಗೆ ಕೀಲೀ ಹಾಕಿಕೊಂಡು ಆಹಾರಕ್ಕಾಗಿ ಆಡವಿಯೊಳಗೆ ಹೋಗಿತ್ತು. ಬೇಟೆಯಾಡಿ ತಿರುಗಿ ಮನೆಯ ಬಾಗಿಲಿಗೆ ಬಂದು "ಬಾಗಿಲಾ! ಬಾಗಿಲಾ!! ಬಾಗಿಲಾ ತೆರಿ" ಎಂದು ಕೂಗಿತು; ಕೂಡಲೇ ಹಾಕಿದ ಕೀಲಿಯು ಕೆಳಕ್ಕೆ ಬಿದ್ದು ಬಾಗಿಲವು ಧಡಕ್ಕೆಂದು ತೆರೆಯಿತು." ಹೀಗೆ ಮಕ್ಕಳಿಗೆ ಹೇಳುವ ಕಥೆಗಳು ಆಶ್ಚರ್ಯ ಸೂಚಕವಾದ ಅದ್ಭುತ ರಸಗಳುಳ್ಳವಿರಬೇಕು. ಮತ್ತು ಕಥೆಗಳು ದುಃಖದಲ್ಲಿಯೇ ಮುಗಿಸಲ್ಪಡಬಾರದು. ಯಾಕಂದರೆ ಮಕ್ಕಳ ಮನಸ್ಸಿಗೆ ನೋವಾಗುವದು.

ಆರಿಸಿಕೊಂಡ ಕಥೆಯು ದೊಡ್ಡದಿರಬಾರದು. ಅದು ೨೦ ಮಿನಿಟುಗಳಲ್ಲಿ ಮುಗಿಯುವಂಥದಿರಬೇಕು. ಕಥೆಯು ದೊಡ್ಡದಿದ್ದರೆ ಅದು ಬೇಗ ಮುಗಿಯದೆ ಅಷ್ಟಕ್ಕೇ ಉಳಿಯುವದರಿಂದ ಹುಡುಗರ ಅಭಿರುಚಿಯು ಕೆಟ್ಟು ಹೋಗುವದು. ಮತ್ತು ಅವರಿಗೆ ಬೇಸರವಾಗಬಹುದು. ಕಥೆ ಹೇಳುವಾಗ ಹುಡುಗರಿಗೆ ನಡು ನಡುವೆ ಪ್ರಶ್ನೆಮಾಡಬಾರದು. ಕೇಳಿದರೆ ಕಥೆಯ ಸ್ವಾರಸ್ಯವೇ ಕೆಟ್ಟು ಹೋಗುವದು.

ಶಿಕ್ಷಕನು ಕಥೆ ಹೇಳುವಾಗ ಸ್ವರಪಲ್ಲಟ, ಮುಖಚರ್ಯದಲ್ಲಿ ಬದಲಾವಣೆ, ಚೇಷ್ಟೆ, ಅಂಗಸಂಜ್ಞೆ, ಹಾವಭಾವ, ಮೊದಲಾದವುಗಳನ್ನು ತಕ್ಕ ಸಮಯದಲ್ಲಿ ಉಪ

ೋಗಿಸುವದನ್ನು ಮಾತ್ರ ಮರಿಯಬಾರದು. ಮತ್ತು ಎಲ್ಲ ವಿದ್ಯಾರ್ಥಿಗಳನ್ನು ಸರಿ ಾಗಿ ಅರ್ಧ ವರ್ತುಲಾಕಾರವಾಗಿ ಕೆಳಗೆ ಕೂಡ್ರಿಸಿಕೊಂಡು ತಾನೂ ಕೆಳಗೆ ಕೂತು ಥೆ ಹೇಳಬೇಕು. ಅವರಂತೆ ಕಥೆ ಸುರುವು ಮಾಡುವಾಗ ಅತ್ತಿತ್ತ ಹರಿಬಿದ್ದ ಮಕ್ಕಳ ನಸ್ಸನ್ನು ತನ್ನ ಕಡೆಗ ಬರುವಂತೆ ಅವರಿಗೆ "ಮೇಲೆ ನೋಡಿರಿ. ಕೆಳಗೆ ನೋಡಿರಿ. ಣ್ಣುಮುಚ್ಚಿರಿ ಕಣ್ಣುತೆರೆಯಿರಿ" ಇತ್ಯಾದಿ ಸೂಚನೆಗಳಿಂದ ಚಿತ್ತವನ್ನು ದೃಢೀಕರಿಸಿ ಳ್ಳಬೇಕು.

ಶಿಕ್ಷಕನು ಕಥೆ ಹೇಳುವಾಗ ಕೂತ ಸ್ಥಳವನ್ನು ಬಿಟ್ಟು ಮೇಲೆ ಏಳಬಾರದು. ಮತ್ತು ತಿಳಿಯದ ಶಬ್ದಗಳಿಗಾಗಿ ತಾನು ನಟನೆ ಮಾಡಿಯೂ ಹೇಳಬಾರದು. ಕಥೆ ೀಳುವದು ತೀರಿದ ಮೇಲೆ ಕಥೆಗೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ತೋರಿಸುವದು ಾಹಳ ಒಳ್ಳೇದು. ಅದರಿಂದ ಮತ್ತಿಷ್ಟು ದೃಢೀಕರಣವಾಗುವದು. ಆ ಮೇಲೆ ಚಿತ್ರ ಗಳ ಮೇಲಿಂದ ೩-೪ ಪ್ರಶ್ನೆಗಳನ್ನು ಕೇಳಿ ನೀತಿಯನ್ನು ಹೊರಡಿಸಬಹುದು.

ಮೇಲಿನ ಯಾವತ್ತೂ ತತ್ವಗಳನ್ನು ಮನನಮಾಡಿಕೊಂಡು ನನ್ನ ವ್ಯವಸಾಯ ಎಂಥಾಗಳು ಚಿಕ್ಕಮಕ್ಕಳಿಗೆ ಕಥೆ ಹೇಳುವದರಿಂದ ಸಾಲೆ ತಪ್ಪಿಸುವ ಹುಡುಗರೂ ಕೂಡ ನಾಳೆ ಕಥೆಯುಂಟೆಂದು ಸಾಲೆಗೆ ಜಿಗಿಯುತ್ತಾ ಬರುವರು. ಮುಂಜಾನೆ ೮ ಘಂಟೆಗೂ, ಮಧ್ಯಾಹ್ನ ೩ ಘಂಟೆಗೂ, ಕಥೆ ಇಟ್ಟುಗೊಂಡಲ್ಲಿ ತಡಮಾಡಿ ಬರುವ ವಿದ್ಯಾರ್ಥಿಗಳು ಕೂಡ ಬೇಗಬರುವರು. ಮತ್ತು ನೀರಿನಂತೆ ಚಲ್ಲಿಹೋಗುವ ಮುದ್ದು ಮಕ್ಕಳ ಮನಸ್ಸು ಕಥೆ ಕೇಳುವದರಿಂದ ಸ್ಥಿರವಾಗುವದು. ಮತ್ತು ಶಿಕ್ಷಕನ ವ್ಯವ ಸಾಯವು ಸುಸೂತ್ರವಾಗಿ ಸಾಗುವದು.

---

## ವ್ಹ. ಫಾ. ಪರೀಕ್ಷೆಯ ಪರಿಣಾಮವು

### ಧಾರವಾಡ ಸೆಂಟರ

೧೯೨೭

( ಕಳೆದ ಸೂಚಿಕೆಯಿಂದ ಮುಂದೆ ಸಾಗಿದ್ದು. )

| ನಂ. | ಹೆಸರು. | ಗುಣಗಳು. |
|---|---|---|
| ೧೪೮ | ಬಸಲಿಂಗಯ್ಯಾ ರುದ್ರಯ್ಯಾ ಸ್ಥಾವರಮಠ | ೨೬೭ |
| ೧೪೯ | ಬಶ್ಯಾ ಮಲ್ಲಪ್ಪಾ ಬೆಣ್ಣಿ | ೨೬೭ |
| ೧೫೦ | ಕೃಷ್ಣಾಜಿ ತ್ರಿಮಲರಾವ ದೇಶಪಾಂಡೆ | ೨೬೭ |
| ೧೫೧ | ಲಿಂಗೋ ಕೃಷ್ಣ ಕುಲಕರ್ಣಿ | ೨೬೭ |

| | | |
|---|---|---|
| ೧೪೮ | ನಾರಾಯಣ ಪಾಂಡುರಂಗ ಗೋಕಾಕ | ೨೬೭ |
| ೧೪೮ | ಸಹದೇವ ಫಕ್ಕೀರಪ್ಪ ಹೂಗಾರ | ೨೬೭ |
| ೧೪೮ | ವೆಂಕಟೇಶ ಕೃಷ್ಣಾಚಾರ್ಯ ಸಿದ್ದಾಪೂರ | ೨೬೭ |
| ೧೫೫ | ರುದ್ರಗೌಡಾ ಬಸನಗೌಡಾ ಪಾಟೀಲ | ೨೬೮ |
| ೧೫೬ | ದತ್ತಾತ್ರಯ ಕೃಷ್ಣ ಶೇಕದಾರ | ೨೬೮ |
| ೧೫೭ | ಗಣೇಶ ನಾಗೇಶ ಸದರ ಜೊಯಿಸಿ | ೨೬೯ |
| ೧೫೭ | ಹಾಲಪ್ಪಾ ರಂಗಪ್ಪಾ ಕೊಪ್ಪದ | ೨೬೯ |
| ೧೫೭ | ಮುನಿಯಪ್ಪಾ ನಾರಪ್ಪಾ ಕನ್ನಾಪ್ಪಾನವರ | ೨೬೯ |
| ೧೬೦ | ಬಸವಣ್ಣೆಪ್ಪಾ ಭೀಮಪ್ಪಾ ಬೆಟಗೇರಿ | ೨೭೩ |
| ೧೬೦ | ಭೀಮರಾಯ ಜಿನ್ನಪ್ಪಾ ಪಾಸಣ್ಣವರ | ೨೭೩ |
| ೧೬೦ | ಹೊಳಲಪ್ಪಗವಡಾ ಪರ್ವತಗವಡಾ ಲಕ್ಷ್ಮೇಶ್ವರ | ೨೭೩ |
| ೧೬೦ | ಮುರಾರಿ ಜಗನ್ನಾಥ ಬಾಪಟ | ೨೭೩ |
| ೧೬೪ | ಮಿಯಾಸಾ ಫಕ್ಕೀರಸಾಹೇಬ ಸವನೂರ | ೨೭೭ |
| ೧೬೪ | ರಾಮಚಂದ್ರ ದತ್ತಾತ್ರಯ ಸೂಗೂರ | ೨೭೭ |
| ೧೬೬ | ಬಸಯ್ಯಾ ರುದ್ರಯ್ಯಾ ಹಿರೇಮಠ | ೨೭೧ |
| ೧೬೬ | ಛಾಯನಗವಡಾ ಯಲ್ಲಪ್ಪಗವಡಾ ಪಾಟೀಲ | ೨೭೧ |
| ೧೬೬ | ಕೊಟ್ರಬಸಪ್ಪಾ ಚನ್ನಬಸಪ್ಪಾ ಕರ್ಜಗಿ | ೨೭೧ |
| ೧೬೬ | ರಾಮಪ್ಪಾ ಅಡಿವೆಪ್ಪಾ ದಡ್ಡಿ | ೨೭೧ |
| ೧೬೬ | ಶಾಂತಪ್ಪಾ ಹುಚ್ಚಪ್ಪಾ ಹಳ್ಳಿ | ೨೭೧ |
| ೧೬೬ | ತ್ರಿಯಂಬಕ ವೆಂಕಟೇಶ ದೇಸಾಯಿ | ೨೭೧ |
| ೧೬೭ | ಬಸಪ್ಪಾ ಕೊಟ್ರಪ್ಪಾ ಹೂಸಮನಿ | ೨೭೦ |
| ೧೬೭ | ಮಡಿವಾಳಯ್ಯಾ ಬಸಯ್ಯಾ ಚಕ್ರಮಠ | ೨೭೦ |
| ೧೬೭ | ಎಲ್ಲರಡ್ಡಿ ಕೆಂಚರಡ್ಡಿ ರಡ್ಡೇರ | ೨೭೦ |
| ೧೬೮ | ಹಣಮಂತ ಭೀಮಪ್ಪಾ ನಾವಳ್ಳಿ | ೨೭೯ |
| ೧೬೮ | ರಾಮಚಂದ್ರ ಭಯಿರಪ್ಪಾ ದೇವಾಂಗ | ೨೭೯ |
| ೧೬೮ | ೀರಭದ್ರ ಬಸಪ್ಪಾ ಹಾದೀಮನಿ | ೨೭೯ |
| ೧೬೮ | ಬಸಪ್ಪಾ ರಾಮಪ್ಪಾ ಭೂಮಣ್ಣವರ | ೨೭೮ |
| ೧೬೮ | ಬಸವಣ್ಣೆ ಯಲ್ಲಪ್ಪಾ ಡೊಂಬರಮತ್ತೂರ | ೨೭೮ |
| ೧೬೮ | ಇವಾಮ ಕರೀಮಸಾಬ ರನ್ನರ | ೨೭೮ |
| ೧೬೮ | ಕೃಷ್ಣಾಜಿ ಫಕ್ಕೀರಪ್ಪಾ ತಿಂಡಿ | ೨೭೮ |